
ಕಸ್ತೂರಿ

ಮೇ 1991 ಬೆಲೆ: ರೂ. 3.00



ದಿಲ್ಲಿ: ಖುಷ್ವಂ

ಸಿಂಗ್ ಕಂಡಂತ



ಪೂರೆ ನೋಟಕ್ಕೆತೆರೆ !

ಲೋಕ ಶಿಕ್ಷಣ ಟ್ರಸ್ಟ್
ಗ್ರಂಥಮಾಲೆಯ ಪ್ರಕಟಣೆಗಳು
ಹುಬ್ಬಳ್ಳಿ-ಬೆಂಗಳೂರು

			ಬೆಲೆ
1.	ಶ್ರೀ ರಾಮದಾಸರು ಹೇಳಿದ ಕಥೆಗಳು	ಶ್ರೀ ಬಸಪ್ಪ ದಾನಪ್ಪ ಜತ್ತಿ	ರೂ. 12-00
2.	ಅಂತರಾತ್ಮನಿಗೆ	ಶ್ರೀ ರಂಗನಾಥ ದಿವಾಕರ	ರೂ. 5-00
3.	ಗೀತೆಯ ಗುಟ್ಟು	ಶ್ರೀ ರಂಗನಾಥ ದಿವಾಕರ	ರೂ. 15-00
4.	ಪುಟಾಣಿಗೆ ಶರಣರ ಕಥೆಗಳು	ಶ್ರೀಮತಿ ಜೆ.ವಿ.ಜಯಾ ರಾಜಶೇಖರ	ರೂ. 3-50
5.	ಮರಳಿ ಬಂದ ಮಧುರ ಮಾಸ	ಶ್ರೀಮತಿ ಜೆ.ವಿ.ಜಯಾ ರಾಜಶೇಖರ	ರೂ. 12-00
6.	ವಿಚಾರ ಜ್ಯೋತಿ	ಶ್ರೀ ಕೆ.ಟಿ.ಪಾಂಡುರಂಗಿ	ರೂ. 10-00
7.	ವಚನಗಳಲ್ಲಿ ಪ್ರತಿಮೆಗಳು	ಶ್ರೀಮತಿ ಉಷಾಕಿರಣ್	ರೂ. 25-00
8.	ಶಿಶುನಾಳ ಶರೀಫ ಸಾಹೇಬರು	ಶ್ರೀ ಶಿವಾನಂದ ಗುಬ್ಬಣ್ಣವರ	ರೂ. 15-00
9.	ನನಗೆ ನಾನೇ ಮಾದರಿ (ಆತ್ಮಕಥನ)	ಶ್ರೀ ಬಿ.ಡಿ.ಜತ್ತಿ	ರೂ. 40-00
10.	ಕೋಟ್ಯಧೀಶ್ವರರ ಪ್ರಪಂಚದಲ್ಲಿ 60 ದಿನ	ಶ್ರೀ ಎಸ್.ಪಿ.ಭಟ್ಟ	ರೂ. 20-00

ಪುಸ್ತಕ ದೊರೆಯುವ ಸ್ಥಳ:

ಸಂಯುಕ್ತ ಕರ್ನಾಟಕ ಪ್ರೆಸ್,

ಕೊಪ್ಪಿಕರ ರೋಡ್, ಹುಬ್ಬಳ್ಳಿ

ವಿ.ಸೂ:- ಒಂದೊಂದು ಪುಸ್ತಕದ ಕನಿಷ್ಟ 10 ಪ್ರತಿ, ಅದಕ್ಕಿಂತಲೂ ಹೆಚ್ಚು ಖರೀದಿಸಿದಲ್ಲಿ ಶೇ. 15ರಂತೆ ಕಮೀಶನ್ ಕೊಡಲಾಗುವುದು. ಅಂಚೆ ವೆಚ್ಚ ಪ್ರತ್ಯೇಕ.

ಕಸ್ತೂರಿ

ಕನ್ನಡ ಡೈಜೆಸ್ಟ್

ವರ್ಷ: 35

ಸಂಚಿಕೆ: 9

ಮೇ 1991

ವ್ಯವಸ್ಥಾಪಕ ಸಂಪಾದಕ

ಕೆ.ಶಾಮರಾವ್

ಸಂಪಾದಕ

ಆರ್.ಎ.ಉಪಾಧ್ಯ

ನಿರ್ವಹಣೆ

ರವಿ ಬೆಳಗೆರೆ

ಮುಖಪುಟ ಚಿತ್ರ:

ದೇಬಬ್ರತ ಬ್ಯಾನರ್ಜಿ

ಕಸ್ತೂರಿ ಕಾರ್ಯಾಲಯ

ಕೊಪ್ಪೀಕರ ರಸ್ತೆ

ಹುಬ್ಬಳ್ಳಿ - 580 020

ಬೆಳಕಿಂಡಿ

★ ನಿನ್ನೆಯು ಇಂದಿನ ನೆನಪು, ನಾಳೆಯು ಇಂದಿನ ಕನಸು.

- ಜಿಬ್ರಾನ್

★ ದುಷ್ಟ ಹೆಂಡತಿಯನ್ನು ಪಡೆದ ಮನುಷ್ಯನು ಇದೇ ಜನ್ಮದಲ್ಲಿಯೇ ನರಕದ ದುಃಖವನ್ನು ಅನುಭವಿಸುತ್ತಾನೆ.

- ಸುಭಾಷಿತ

★ ಪಿಸುಮಾತು ಬಹುದೂರ ಕೇಳಿಸುತ್ತದೆ.

- ಚೀನಾ ಗಾದೆ

★ ನಿಗರ್ವಿಯು ಸ್ವರ್ಗದ ಸದಸ್ಯನಾದರೆ, ಗರ್ವಿಯು ನರಕದ ಚಕ್ರವರ್ತಿ.

- ಡಾ. ರಾಧಾಕೃಷ್ಣನ್

★ ಶಿಖರಗಳು ನಮ್ಮನ್ನು ಆಕರ್ಷಿಸುವವೇ ಹೊರತು, ಅದಕ್ಕೇರಿ ಹೋಗಬಲ್ಲ ಮೆಟ್ಟಿಲುಗಳು ಆಕರ್ಷಿಸುವುದು ವಿರಳ.

- ಗಯಟೆ

ಚಂದಾ ದರಗಳು

ಬಿಡಿ ಸಂಚಿಕೆ	.....	ರೂ.3-00
1 ವರ್ಷಕ್ಕೆ	ಅಂಚೆ ಸೇರಿ	ರೂ.34-00
2 ವರ್ಷಕ್ಕೆ	ಅಂಚೆ ಸೇರಿ	ರೂ.65-00
3 ವರ್ಷಕ್ಕೆ	ಅಂಚೆ ಸೇರಿ	ರೂ.100-00

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾತರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

KASTURI

MAY 1991

ಸಹಚಿಂತನ

ಕಾಡಲೆದವರೀಗ ನಾಡಿಗೆ

ಏಪ್ರಿಲ್ ತಿಂಗಳ 'ಕಸ್ತೂರಿ'ಯಲ್ಲಿ ಪ್ರಕಟವಾದ ಡಿ.ವಿ.ಬಡಿಗೇರ ಅವರ ಲೇಖನ ಬಂಜಾರ ಜನಾಂಗದ ಅನೇಕ ಕುತೂಹಲಕರವಾದ ವಿಷಯಗಳನ್ನು ತಿಳಿಸಿಕೊಟ್ಟಿತು.ಡಾ.ಪಿ.ಕೆ.ಖಂಡೋಬಾ ಅವರು ನಾನು ಅವರ ವಿದ್ಯಾರ್ಥಿಯಾಗಿದ್ದಾಗಲೇ ಬಂಜಾರ ಜನಾಂಗದ ಬಗ್ಗೆ ಅಧ್ಯಯನ ಮಾಡುತ್ತಿದ್ದುದು ಗೊತ್ತಿತ್ತು. ಅವರ ಅಧ್ಯಯನ ಅರ್ಥಪೂರ್ಣ.

ನರಗುಂದ ಪ್ರಭು ಶ್ರೀ ಬಡಿಗೇರ

ನಾವು ಚಿಕ್ಕವರಿದ್ದಾಗ ಲಂಬಾಣಿ ಹೆಂಗಸು ರಂಗುರಂಗಿನ ವೇಷದಲ್ಲಿ ಮುಡಿದು ಬರುತ್ತಿದ್ದ ನೂರಾರು ಸೂರ್ಯರನ್ನು ಕಂಡು 'ಲಮಾಣಿ ಛಿಲ್ ಛಿಲ್, ನಾವೂ ಬರ್ತೀವಿ ನಿಲ್ ನಿಲ್' ಎಂದು ಹಿಂಬಾಲಿಸುತ್ತಿದ್ದೆವು. ಈ ಜನಾಂಗದ ಬಗ್ಗೆ ಸಂಪೂರ್ಣ ಅಧ್ಯಯನ ಆಗಿಲ್ಲವೆಂಬುದು ನಿಜ.

ಬೆಂಗಳೂರು ಶ್ರೀಪಾದ ವಿ. ದೇಶಪಾಂಡೆ

ನಮಗಷ್ಟು ಪರಿಚಿತವಲ್ಲದ ಲಮಾಣಿಗಳ ಸಂಸ್ಕೃತಿ, ಆಚಾರ, ವಿಚಾರಗಳನ್ನು ಲೇಖನದಿಂದ ತಿಳಿಯುವಂತಾಯಿತು.

ಬೆಳಗಾವಿ ಜಯಶ್ರೀ ಹೇಮಾದ್ರಿ

ಸದ್ದಾಂ ರೂಪುಗೊಂಡ ರೋಚಕ ಕಥೆ

ಸದ್ದಾಂ ರೂಪುಗೊಂಡ ರೋಚಕ ಕಥೆಯನ್ನು ರವಿ ಬೆಳಗೆರೆಯವರು ಸ್ವಾರಸ್ಯಕರವಾದ ಶೈಲಿಯಲ್ಲಿ ಮನಮುಟ್ಟುವಂತೆ ಹೇಳಿದ್ದಾರೆ. ನಮಗೆ ಗೊತ್ತಿಲ್ಲದ ಸದ್ದಾಂನ ಹಿನ್ನೆಲೆಯನ್ನು ಈ ಲೇಖನದಿಂದ ತಿಳಿಯುವಂತಾಯಿತು.

ರಾಮನಾಥಪುರ ಆರ್.ಎಸ್.ಸುಬ್ರಹ್ಮಣ್ಯ

ಕೆಲವು ದಿನಗಳ ಮಟ್ಟಿಗಾದರೂ ಜಗತ್ತನ್ನು ಉಸಿರು ಬಿಗಿಹಿಡಿಯುವಂತೆ ಮಾಡಿದ ಸದ್ದಾಂನ ಹಿನ್ನೆಲೆಯನ್ನು ಲೇಖಕರು ಕೆಲವೇ ಪುಟಗಳಲ್ಲಿ ಸ್ವಾರಸ್ಯಕರವಾದ ಭಾಷೆಯಲ್ಲಿ ಹಿಡಿದಿಟ್ಟಿದ್ದಾರೆ.

ತೋರಣಗಲ್ಲು ಖಾಜಾ ಹುಸೇನ್

ಸದ್ದಾಂನ ಸಮಗ್ರ ಜೀವನ ವೃತ್ತಾಂತವನ್ನು ಮತ್ತು ಆತನ ಕಾರ್ಯಗಳನ್ನು ಅರಿಯಲು ಲೇಖನ ಸಹಕಾರಿಯಾಗಿತ್ತು.

ಮಾಗಡಿ ಶಿವಾನಂದ ಕುಂದಿ

ಪರೀಕ್ಷೆಗಾಗಿ ಅಷ್ಟ ನಿಯಮಗಳು

ಲೇಖನ ಸಕಾಲಿಕವಾಗಿತ್ತು. ಹಲವಾರು ಉಪಯುಕ್ತ ವಿಚಾರಪೂರ್ಣ ವಿಷಯಗಳನ್ನು ಡಾ. ಕೆ.ಸಿ. ಮರಿಯಪ್ಪನವರು ವಿದ್ಯಾರ್ಥಿಗಳಿಗಾಗಿ ನೀಡಿದ್ದಾರೆ. ವಿದ್ಯಾರ್ಥಿಗಳ ಮಾನಸಿಕ ಸ್ಥೈರ್ಯ ಹೆಚ್ಚಿಸಲು ಲೇಖನ ಸಹಕಾರಿ.

ಕಾಣಾಕುಶನೂರ ಮೂಲಿಮನಿ ಎಸ್.ವಿ.

"ಯುವರ್ ಸಿನ್ಸಿಯರ್ ಫ್ರೆಂಡ್"

ಜರ್ಮನಿಯಿಂದ ಹಿಟ್ಲರ್ ಬರೆದ ಪತ್ರ ಸೆನ್ಸಾರ್ ಇಲ್ಲದೇ ಗಾಂಧೀಜಿಯವರಿಗೆ ತಲುಪಿರುವಾಗ ಅದೇ ಗಾಂಧೀಜಿಯವರು ಅದಕ್ಕೆ ಉತ್ತರವಾಗಿ ಬರೆದ ಪತ್ರ ಹೇಗೆ ಸೆನ್ಸಾರ್ ಆಯಿತು ?

ಕಾತೂರ ಅರುಣ ಜಿ. ಮಾತಿಬೇಟ

ಹೊನ್ನಶೂಲ

ಇತ್ತೀಚಿನ ದಿನಗಳಲ್ಲಿ ಲಲಿತ ಪ್ರಬಂಧಗಳು ಬೆಳಕು ಕಾಣುವುದು ಕಡಿಮೆ. ಆದರೆ ನೀವು ಪ್ರಕಟಿಸುವ ಲಲಿತ ಪ್ರಬಂಧಗಳು ಮನಸ್ಸಿಗೆ ಮುದಕೊಡುತ್ತವೆ. ಡಾ. ತಿಪ್ಪೇಸ್ವಾಮಿಯವರ 'ಹೊನ್ನಶೂಲ' (ಮಾರ್ಚ್ ೧೯೯೧) ನನಗೆ ತುಂಬಾ ಹಿಡಿಸಿತು.

ಮೈಸೂರು ಟಿ. ಕಾವೇರಿ

'ಕಂಬ್ಳೀವುಳ'

ಏಪ್ರಿಲ್ ಸಂಚಿಕೆಯ ಹಣ ಮೂರು ರೂಪಾಯಿಗಳನ್ನು 'ಕಂಬ್ಳೀವುಳ'ಕ್ಕೆ ಕೊಟ್ಟಂಗಾಯಿತು. ಪ್ರಹಸನ ಪಿತಾಮಹರಾದ ಕೈಲಾಸಂ ಅವರ ಸಹವಾಸವನ್ನು ಅಯ್ಯರ ಅಂದವಾಗಿ ಮೂಡಿಸಿದ್ದಾರೆ.

ಮಳಗಿ ಕೂರಾಡಿ ಮೂರ್ತಿ ಕಲ್ಲೂರ

ಎಕ್ಯೂಪ್ರೆಶರ್ ಚಿಕಿತ್ಸೆ

ನಿಮ್ಮ ಈ ತಿಂಗಳ 'ಕಸ್ತೂರಿ'ಯಲ್ಲಿ ಎಕ್ಯುಪ್ರೆಶರ್ ಚಿಕಿತ್ಸೆಯ ಬಗ್ಗೆ ಲೇಖನ (ಎಚ್.ಎಂ. ಕೋಳಿವಾಡ) ಪ್ರಕಟಿಸಿ ಜನಸಾಮಾನ್ಯರಿಗೆ ಮಹದುಪಕಾರ ಮಾಡಿದ್ದೀರಿ.

ಧಾರವಾಡ ಎಸ್.ವಿ. ಅಣವೇಕರ

ಪಿರಾಮಿಡ್

ಏಪ್ರಿಲ್ ಸಂಚಿಕೆಯ ಮುಖಪುಟ ಮುದನೀಡಿತು. ಬಿಡಿಸಲಾಗದ ಒಗಟು ಈ ಪಿರಾಮಿಡ್ (ಎಸ್.ಡಿ. ಸುಜಾತ) ಲೇಖನ ಚೆನ್ನಾಗಿತ್ತು.

ನಿರ್ನಾ ಕೆ.ಎಸ್. ಅಮೃತ

ರಾಜಕುಟುಂಬದ ಅಂತಿಮಯಾತ್ರೆ

ಲೇಖನ ಮನಕಲಕುವಂತಿತ್ತು. ನಿಕೋಲಸ್ ಮತ್ತು ಅವನ ಕುಟುಂಬವನ್ನು ನಡೆಸಿಕೊಂಡ ರೀತಿ ಯಾವ ಮಾನವನಿಗೂ ಸಲ್ಲುವಂತಹುದಲ್ಲ! ಅರುಣ ಅವರ ಈ ಲೇಖನ ಸಂಗ್ರಹಯೋಗ್ಯವಾಗಿತ್ತು.

ಸುಳ್ಯ ರವಿರಾಜ್ ವಳ್ಳಂಬೆ

ಆತ್ಮದ ವಿವಿಧ ನೆಲೆಗಳು

ಹಾಲುಮತ್ತೂರು ಶ್ರೀಪತಿರಾವ್ ಅವರು ಭೌತಿಕ ಪ್ರಗತಿ, ಐಶ್ವರ್ಯ, ಸ್ಥಾನಮಾನಗಳು, ಆತ್ಮದ ಸ್ಥಿತಿಯನ್ನು ಉತ್ತಮಪಡಿಸಲಾರದೆಂದು ತಿಳಿಸಿ 'ನಾನು' ಎಂಬ ಅನಿಸಿಕೆಗೂ ಆತ್ಮ ಅನುಭವಕ್ಕೂ ಇರುವ ವ್ಯತ್ಯಾಸವನ್ನು ಅವರದೇ ಆದ ಅರ್ಥಗರ್ಭಿತ ಶೈಲಿಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು ಎಸ್.ವಾಸುದೇವ್

'ಶೂನ್ಯ'ವು ನಿಜವಾದ ಅರ್ಥದಲ್ಲಿ ಶೂನ್ಯವಲ್ಲವೆಂಬುದನ್ನು ಹೇಳಲು ಲೇಖಕರು ಪ್ರಯತ್ನಿಸಿದ್ದಾರೆ. ಇನ್ನಷ್ಟು, ಸ್ಪಷ್ಟೀಕರಣದ ಅಗತ್ಯವಿತ್ತು.

ಬೆಂಗಳೂರು ಎಂ.ಎಲ್. ಸುಧಾರಾವ್

ಇದು ಯಾವ ಹೊಸ ವಿಷಯವನ್ನೂ ತಿಳಿಸದ ಒಂದು ಲೇಖನ. ಇದನ್ನು ಯೋಗಿಯೊಂದಿಗೆ ನಡೆದ ಸಂದರ್ಶನ ಎಂದಿದ್ದಾರೆ ಲೇಖಕರು. ಅವನಾರೋ ಢೋಂಗಿ ಯೋಗಿಯಿರಬೇಕೆನಿಸುತ್ತದೆ. ಕಾರಣ ಇಷ್ಟೆ: ದರ್ಶನಗಳಲ್ಲಿ ಬೌದ್ಧ ದರ್ಶನ ಬಿಟ್ಟು ಇನ್ನಾರೂ ಆತ್ಮವನ್ನು ಶೂನ್ಯವೆಂದಿಲ್ಲ. ಕೇವಲ ಹೆಸರಿನ ವಿಷಯಕ ವಿವಾದವಲ್ಲ ಇದು. ಎಲ್ಲ ಸೃಷ್ಟಿಗೂ ಕಾರಣವೆಂಬ 'ಶಕ್ತಿ'ಯನ್ನು ಶೂನ್ಯವೆನ್ನುವುದು ಸರಿಯೇ ? ಶೂನ್ಯದಿಂದ ವಸ್ತು ಸೃಷ್ಟಿಸಲು ಸಾಧ್ಯವಿಲ್ಲ ಎಂಬುದು ವೈಜ್ಞಾನಿಕವಾಗಿಯೂ ಸಾಬೀತಾದ ವಿಷಯ. ಇನ್ನೂ ಮುಂದುವರಿದು ಹೇಳುವುದಾದರೆ, ಆತ್ಮ ವಿಭುವಾದರೂ ಅದು ಹೃದಯದಲ್ಲಿ ಅಭಿವ್ಯಕ್ತ ಎಂಬುದು ಸಿದ್ಧಾಂತ (ಹೃದಿಸ್ಥಿತಂ.... ಸರ್ವಸ್ಯ ಜಾಹಂ ಹೃದಿ ಇತ್ಯಾದಿ) ವಾಸ್ತವವಾಗಿ ಇದು ತೀರಾ ಅಸಂಬದ್ಧ ವಿಚಾರ.

ಆರಳ ಸುರಳಿ ಬಿ.ಎಸ್. ಶ್ರೀನಿವಾಸಾಚಾರ್ಯ

ಕತೆ ಎಂದ ಮೇಲೆ ಕಾಲ್ಪನಿಕ ಹಂದರದಲ್ಲೇ ರೂಪುತಾಳುತ್ತದೆ. ಹಾಗೆಂದೊಡನೆ ಬರಿ ಕಾಲ್ಪನಿಕತೆಯು ಅದರ ಜೀವಾಳವಲ್ಲ. ಅಥವಾ ಜೀವಾಳ ಆಗಬಾರದು. 'ಕಾಡು ಕಡಿದು ಊರು ಮಾಡಿದರು'' ಕತೆಯಲ್ಲಿ ನಾನು ಪರಿಸರಕ್ಕೆ ಪ್ರಾಧಾನ್ಯತೆ ಕೊಟ್ಟಿದ್ದೇನೆಯೇ ಹೊರತು ಕಾಡಿನ ರೋಮಾಂಚನಕಾರಿ ಅನುಭವಗಳ ಕಡೆಗಲ್ಲ. ಆದಾಗ್ಯೂ ಚಿರತೆ, ಹಾವು, ಕಾಡುಕೋಣ, ಕಾಡುಬೆಕ್ಕುಗಳ ಬಗ್ಗೆ ಹೇಳಿಯೇ ಇದ್ದೇವೆ. ಅದನ್ನು ಶ್ರೀಯುತ ರಮಾನಂದರು ಗಮನಿಸಿದಂತೆ ಇಲ್ಲ. ದಟ್ಟವಾದ ಕಾಡಿನಲ್ಲಿ ಕಾಡು ಕುರುಬರು ವಾಸಿಸುವುದನ್ನು ಕೇಳಿದ್ದೇನೆ, ಓದಿದ್ದೇನೆ, 'ಬಿಸಿಲೆ' ಯಲ್ಲಿ ಕಾಡು ಕುರುಬರು ಇಲ್ಲದೆ ಇರಬಹುದು, ಕತೆಯ ಓಟಕ್ಕೆ ಕೆಲವೊಂದು ಪಾತ್ರಗಳನ್ನು ಕಾಲ್ಪನಿಕವಾಗಿ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಹಾಗೆ 'ಬಿಸಿಲೆ'ಯಲ್ಲಿಲ್ಲದ ಕೆಲವು ಮರ-ಗಿಡಗಳು ನನ್ನ ಕಾಲ್ಪನಿಕ ಸೃಷ್ಟಿ ಎಂದು ಓದುಗರು ಭಾವಿಸಬಹುದು.

ಪ್ರೇಮಾ ಭಟ್

'ಕೊಲೆ ಸ್ಟೆರಾಲ್ ಹತೋಟಿಗೆ ಸೂರ್ಯಕಾಂತಿ ಎಣ್ಣೆ' (ಏಪ್ರಿಲ್ ೧೯೯೧) ಲೇಖನ ಬರೆದವರು ಬಿ.ಆರ್. ಶ್ರೀನಿವಾಸ. ಕಣ್ತಪ್ಪಿನಿಂದ ಲೇಖಕರ ಹೆಸರು ಬಿ.ಎಸ್. ಶ್ರೀನಿವಾಸ್ ಎಂದು ತಪ್ಪಾಗಿ ಪ್ರಕಟವಾದುದಕ್ಕೆ ವಿಷಾದಿಸುತ್ತೇವೆ. —ಸಂ

ಈ ಸಂಚಿಕೆಯಲ್ಲಿ

ದಿಲ್ಲಿ: ಖುಷ್ವಂತ್ ಸಿಂಗ್ ಕಂಡಂತೆ

"ನನ್ನ ಆತ್ಮವನ್ನು ಕೇಳಿದೆ:
ದಿಲ್ಲಿ ಎಂದರೇನು?
ಅದು ಉತ್ತರಿಸಿತು:
ಜಗತ್ತೆಂಬುದು ದೇಹ, ದಿಲ್ಲಿ ಅದರ ಜೀವ!"
- ಮಿರ್ಜಾ ಅಸಾದುಲ್ಲಾ ಖಾನ್ ಗಾಲಿಬ್

ರವಿ ಬೆಳಗೆರೆ

'ವಿಶ್ಲೇಷಣೆ' ಎಂಬ ಶಬ್ದಕ್ಕೆ ಬಹುಶಃ ಭಾರತದ ಆಂಗ್ಲ ಪತ್ರಿಕೋದ್ಯಮದಲ್ಲಿ ಸರಿಯಾದ ಅರ್ಥ ಕಲ್ಪಿಸಿದ ವ್ಯಕ್ತಿ ಖುಷ್ವಂತ್ ಸಿಂಗ್. ಪತ್ರಿಕೆಗಳ ಸಂಪಾದಕರಾಗಿ, ಅಂಕಣಕಾರರಾಗಿ ಅವರು ಇಂಡಿಯಾದ ಬದುಕಿನ ಸಾವಿರಾರು ಓರೆಕೋರೆಗಳನ್ನು ಕೆದಕಿ ತೋರಿಸಿದ್ದಾರೆ. ತಮ್ಮ ಖದೀಮತನದ ಮಧ್ಯೆಯೂ ಶ್ರೀಮದ್ಗಾಂಭೀರ್ಯದ ಮುಸುಕು ಧರಿಸಿ ತಿರುಗುವ ನಮ್ಮ ದೇಶದ ರಾಜಕಾರಣಿಗಳನ್ನು ಗೇಲಿ ಮಾಡಿದ್ದಾರೆ. ಸ್ವಾತಂತ್ರ್ಯ ಸಮರದ ಹಳೆಯ ನಾಣ್ಯವನ್ನೇ ಇಂದೂ ಚಲಾಯಿಸುತ್ತ, ಅದರ ಫಲಿತವಾಗಿ ಪಿಂಚಣಿ ಉಣ್ಣುವ ಪಿಂಜರಾಪೋಲು ಯೋಧರನ್ನು ನಮ್ಮ ಪತಾಕೆಗೆ ಸಂದ ಅವಮಾನಗಳೆಂಬಂತೆ ವಿವರಿಸಿದ್ದಾರೆ. ಇದೆಲ್ಲ ಒಬ್ಬ ಪ್ರಾಂಜಲ ಮನಸ್ಸಿನ ಪತ್ರಕರ್ತ ಮಾಡಬಹುದಾದ ಕೆಲಸಗಳು.

ಆದರೆ ಒಂದು ಕ್ರಿಯಾಶೀಲ ಮನಸ್ಸು ದಿಲ್ಲಿ



ಮೊಮ್ಮಗಳು ನೈನಾಳೊಂದಿಗೆ ಖುಷವಂತ್ ಸಿಂಗ್

ಯಂತಹ ಮಾಯಾನಗರಿಯ ಸುತ್ತ, ಅದರ ಇತಿಹಾಸದ ಸುತ್ತ ನಿರಂತರವಾಗಿ ಇಪ್ಪತ್ತು ವರ್ಷ ಗಳ ಕಾಲ ಗಿರಕಿ ಹೊಡೆಯುತ್ತದೆ. ಅದರ ಫಲಿತಾಂಶವೇ ಖುಷ್‌ವಂತ ಸಿಂಗ್‌ರ 'ಡೆಲ್ಲಿ' ಕಾದಂಬರಿ. ಇದನ್ನು ಬರೆಯಲು ಇಪ್ಪತ್ತು ವರ್ಷ ಹಿಡಿಯಿತು. ಪುಸ್ತಕದ ರೂಪದಲ್ಲಿ ಪ್ರಕಟಗೊಳ್ಳುವುದಕ್ಕೆ ಮುಂಚೆ ಇದರ ಕೆಲ ಅಧ್ಯಾಯಗಳು ಭಾರತದ ಮತ್ತು ವಿದೇಶದ ಪತ್ರಿಕೆಗಳಲ್ಲಿ ಪ್ರಕಟವಾದವು. ಪುಸ್ತಕವಾಗಿ ಬಂದಾಗ ನಿಜಕ್ಕೂ ಪವಾಡ ನಡೆದುಹೋಯಿತು. ಬುಕ್‌ಸ್ಟಾಲುಗಳಿಗೆ ಅದು ಬರುವ ಮುಂಚೆಯೇ ಸಾವಿರಾರು ಪ್ರತಿಗಳು ಖರ್ಚಾದವು. 1990ನೇ ಇಸವಿಯೊಂದರಲ್ಲೇ 'ಡೆಲ್ಲಿ' ಕಾದಂಬರಿಯು ಆರು ಬಾರಿ ಮುದ್ರಣಗೊಂಡಿತು. 'ಪೆಂಗ್ವಿನ್ ಇಂಡಿಯಾ' ಪ್ರಕಟಿಸಿದ ಈ ಕೃತಿ ಒಂದು ಲೆಕ್ಕದ ಪ್ರಕಾರ ಒಂದೂವರೆ ಲಕ್ಷ ಪ್ರತಿಗಳಷ್ಟು ಮಾರಾಟವಾಯಿತು.

ಏನಿದೆ ಇದರಲ್ಲಿ?

ಏನಿಲ್ಲ ಹೇಳಿ? ಅದು ಮಾಯಾನಗರಿಗೊಂದು ಕೈಗನ್ನಡಿ. ಅದು ದಿಲ್ಲಿಯ ಇತಿಹಾಸಕ್ಕೆ ಭಾಷ್ಯ. ಅದು ಸತ್ಯಗಳ ಸಂಕಲನ. ಪೀಡಕ ಪ್ರಭುಗಳ ಇತಿಹಾಸದ ಖನನ. ಅದು ಸಾಗಿಹೋಗುವ ಸರಾಗ ಕಾವ್ಯ. ಮನುಕುಲದ ಕೆನ್ನೆಯ ಮೇಲೆ ಜಾರಿ ಘನೀಭವಿಸಿದ ಕಣ್ಣ ಹನಿ! ಖುಷ್ವಂತರ ಮಾನವೀಯತೆ, ಕಣ್ಣೀರು, ಚಿಂತನೆ, ಶ್ರಮ, ತುಂಟಾಟ, ಪೋಲಿತನ ಮತ್ತು ಗಾಂಭೀರ್ಯಗಳೆಲ್ಲ ಬೆರೆತು ಓದುಗರ ಕೈಗೆ ಬಂದಿರುವ ಪುಸ್ತಕ ರೂಪದ ವರ್ಣಚಿತ್ರ. 'ಡೆಲ್ಲಿ' ಕಾದಂಬರಿಯ ಸಾರಾಂಶವನ್ನು ಕನ್ನಡದ ಓದುಗರಿಗೆ ಒದಗಿಸುವ ಯತ್ನ 'ಕಸ್ತೂರಿ'ಯದು.

ಸುವಿಶಾಲ ಭಾರತ ದೇಶದ ಎಲ್ಲ ಅಧಿಕಾರ, ಸತ್ತೆ, ಸಾಮರ್ಥ್ಯಗಳೆಲ್ಲ ಕೇಂದ್ರೀಕೃತವಾಗಿರುವ ಮಹಾನ್ ನಗರಿ ದಿಲ್ಲಿಯನ್ನು ಖುಷ್ವಂತ್ ಹೋಲಿಸುವುದು 'ಭಾಗಮತಿ'ಗೆ. ಈ ಭಾಗಮತಿ ಅತ್ತ ಗಂಡೂ ಅಲ್ಲದ, ಇತ್ತ ಹೆಣ್ಣೂ ಅಲ್ಲದ ಹಿಜಡಾ! ಲೇಖಕ ತನ್ನ ಒಬ್ಬಂಟಿತನ, ಹಸಿವು ಮತ್ತು ಹಿಂಜರಿಕೆಗಳನ್ನು ಕಳೆದುಕೊಳ್ಳಲು ಈ ಭಾಗಮತಿಯ ಮೇಲೆ ವಾಲುತ್ತಾನೆ. ದಿಲ್ಲಿಗೂ-ಭಾಗಮತಿಗೂ ಹೋಲಿಕೆಗಳಿವೆ. ಇಬ್ಬರೂ ಕುರೂಪಿಗಳೇ. ದಿಲ್ಲಿಯ ಹೊಲಸು ರಸ್ತೆಗಳು, ಹಗಲುಗಳ ವಿಕಾರ ಸದ್ದು, ಊರಿನ ಯಾವ ದಿಕ್ಕಿಗೆ ನಡೆದರೂ ನಾರುವ ವಾಸನೆ, ಒಂದು ಸತ್ತ ಹಾವಿನಂತಹ ನದಿ ...... ಇನ್ನು ಇಲ್ಲಿಯ ಜನರೋ .... ಪರಮ ಕೊಳಕರು! ಎಲ್ಲೆಂದರಲ್ಲಿ ಉಗುಳುತ್ತಾರೆ, ಧೂಳು ತುಂಬಿದ ಬಟ್ಟೆಗಳಲ್ಲಿ ಹುಗಿದುಕೊಂಡು ದೊಡ್ಡ ದನಿಯಲ್ಲಿ ಅಶ್ಲೀಲವಾಗಿ ಮಾತನಾಡುತ್ತ, ವಿನಾಕಾರಣ ತಮ್ಮ ರಹಸ್ಯ ಜಾಗಗಳನ್ನು ಸಾರ್ವಜನಿಕವಾಗಿ ಕೆರೆದುಕೊಂಡು ಓಡಾಡುತ್ತಾರೆ. ಭಾಗಮತಿಯೂ ಅಷ್ಟೇ. ಒಂದಿಷ್ಟೂ ಆಕರ್ಷಕವಲ್ಲದ, ಕಪ್ಪನೆಯ, ಮೂತಿ ತುಂಬ ಸಿಡುಬಿನ ತೂತುಗಳನ್ನು ತುಂಬಿಕೊಂಡ, ಗಿಡ್ಡನೆಯ, ಗಂಡೂ ಅಲ್ಲದ ಹೆಣ್ಣೂ ಅಲ್ಲದ ..... ಅದು! ಅದರ ಹಲ್ಲು ವಕ್ರವಾಗಿವೆ, ಹಳದಿಯಾಗಿವೆ. ಒಂದೇ ಸವನೆ ಬೀಡಿ ಸೇದುತ್ತದೆ. ಸದಾ ಎಲೆಯಡಿಕೆ ಜಗಿಯುತ್ತ ರಕ್ತ ಕೆಂಪಿನ ತಾಂಬೂಲವುಗುಳುತ್ತದೆ. ಆದರೆ ಅದು ಧರಿಸುವ ಅಗ್ಗದ ಸೀರೆ, ರವಿಕೆ, ಹರಿಬಿಟ್ಟ ಜಡೆಗೂದಲುಗಳಿಂದಾಗಿ ಅದನ್ನು ಲೇಖಕ 'ಅವಳು' ಎಂದೇ ಕರೆಯುತ್ತಾರೆ. ಹಾಗೆಯೇ ಬಳಸುತ್ತಾರೆ ಕೂಡ!

'ಆದರೆ ನೀವೂ ನನ್ನ ಹಾಗೆ ದಿಲ್ಲಿ ನಗರಕ್ಕೂ ಭಾಗಮತಿಯಂತಹ ವ್ಯಕ್ತಿಗೂ ಹೊಂದಿಕೊಂಡಿರಾದರೆ ಅದರ ಆನಂದವೇ ಬೇರೆ! ಅವೆರಡನ್ನೂ ವಿವಿಧ ಕಾಲ ಘಟ್ಟಗಳಲ್ಲಿ, ವಿವಿಧ ಜಾತಿಯ, ದೇಶದ ಶಕ್ತಿಶಾಲಿ ಜನರು ದುರುಪಯೋಗಪಡಿಸಿಕೊಂಡಿದ್ದಾರೆ. ಹೀಗಾಗಿ ಅವೆರಡೂ ಹೊಲಸಾಗಿ ಕಾಣುತ್ತವೆ. ಒಮ್ಮೆ ಅವುಗಳಿಗೆ ನೀವು ಪ್ರಾಮಾಣಿಕರಾಗಿ ಅಂಟಿಕೊಂಡಿರೋ, ಅವು ತಮ್ಮ ಹೊಲಸು ಮುಖವಾಡ ಸರಿಸಿ ಸುಂದರವಾಗಿ ನಿಮ್ಮೆಡೆಗೆ ನಗುತ್ತವೆ,' ಎಂಬ ಪೀಠಿಕೆಯೊಂದಿಗೆ ಕಾದಂಬರಿಯನ್ನು ಪ್ರಾರಂಭಿಸುವ ಖುಷ್ವಂತ್ ಪ್ರತಿಯೊಂದು ಪುಟದಲ್ಲೂ ಒಂದು ಬೆಡಗಿನ ಲೋಕವನ್ನೇ ಓದುಗರೆದುರಿಗಿಡುತ್ತಾರೆ' ಭಾಗ

ಮತಿಯೊಂದಿಗೆ ವ್ಯವಹರಿಸುವಾಗ ಕೇವಲ ಹೃದಯವನ್ನು ಬಳಸು; ಬುದ್ಧಿಯನ್ನಲ್ಲ. ಅಲ್ಲಿ ನಿನ್ನ ಆವೇಶಕ್ಕೆ ಜಾಗವಿದೆಯೇ ಹೊರತು ತರ್ಕಕ್ಕಲ್ಲ' ಎನ್ನುವ ಖುಷ್ವಂತ್ ಒಂದು ಸೃಜನಶೀಲ ಮನಸ್ಸಿಗೆ ದೆಹಲಿಯೊಂದಿಗಿರಬಹುದಾದ 'ಲವ್-ಹೇಟ್' ಸಂಬಂಧ ಎಂಥದೆಂಬುದನ್ನು ವಿವರಿಸುತ್ತಾರೆ. ದಿಲ್ಲಿ ಮತ್ತು ಭಾಗಮತಿಗಳೆರಡನ್ನೂ ನಾನು ದ್ವೇಷಿಸುತ್ತೇನೆ. ಆದರೆ ಹೆಚ್ಚು ಕಾಲ ನಾನು ಅವೆರಡನ್ನೂ ಬಿಟ್ಟಿರಲಾರೆ ಎಂಬುದು ಲೇಖಕನ ಪ್ರಾಮಾಣಿಕ ಮೊರೆ.

ವಿದೇಶಯಾತ್ರೆ ಮುಗಿಸಿ ದಿಲ್ಲಿಗೆ ಮರಳುವ ಖುಷ್ವಂತ್ ದಿಲ್ಲಿಯ ವಿಮಾನ ನಿಲ್ದಾಣದಲ್ಲೇ ಎದಿರಾಗುವ ಕಸ್ಟಮ್ಸ್‌ನವರ ಕಿರಿಕಿರಿಗಳೂ, ಅವರ ಅರ್ಥವಿಲ್ಲದ ಪ್ರಶ್ನೆಗಳೂ, ಏರ್‌ಪೋರ್ಟಿನಿಂದ ಮನೆಗೆ ಬರುವಷ್ಟರಲ್ಲಿ ಟ್ಯಾಕ್ಸಿಯವನಿಂದ ಆಗುವ ವಂಚನೆ, ಮನೆಯಲ್ಲಿ ಸತ್ತು ಬಿದ್ದ ಟೆಲಿಫೋನು, ಕಣ್ಮುಚ್ಚುವ ವಿದ್ಯುತ್ತು ಮುಂತಾದ ಎಲ್ಲವುಗಳನ್ನು ವಿವರಿಸುತ್ತಲೇ ದಿಲ್ಲಿಯ ಬದುಕಿನ ಸ್ಥೂಲ ಚಿತ್ರಣ ನೀಡುತ್ತಾರೆ. ಅವರು ವಾಸಿಸುವ ಅಪಾರ್ಟ್‌ಮೆಂಟಿನ ಕಾವಲುಗಾರ ಬುಧ್ ಸಿಂಗ್ ಮಾಜಿ ಸೈನಿಕ, ಅರೆ ಹುಚ್ಚ. ನಿಜವಾದ ಅರ್ಥದಲ್ಲಿ ಬುದ್ಧೂ ಸಿಂಗ್! ವಿದೇಶದಿಂದ ಮರಳಿ ಬಂದ ಖುಷ್ವಂತರನ್ನು ಇಂಗ್ಲೆಂಡಿನ ರಾಣಿ ಹೇಗಿದ್ದಾಳೆಂದು ಕೇಳುವ ಬುಧ್‌ಸಿಂಗ್ ತಾನಿನ್ನೂ ಬ್ರಿಟಿಷರು ಆಳುವ ಭಾರತದಲ್ಲೇ ಇದ್ದೇನೆಂಬ ಭ್ರಮೆ. ಸುಮ್ಮಸುಮ್ಮನೆ ಡ್ರಿಲ್ಲು ಮಾಡುವ, ಸೆಲ್ಯೂಟ್ ಬಾರಿಸುವ ಬುಧ್‌ಸಿಂಗ್ ಖುಷ್ವಂತರ ಗೆಳತಿಯಾದ ಭಾಗಮತಿಯ ಪರಮ ವೈರಿ! ಗಂಡೂ ಅಲ್ಲದ, ಹೆಣ್ಣೂ ಅಲ್ಲದ ಇದರ ಸಹವಾಸ ನಿಮಗೇಕೆ ಎನ್ನುತ್ತಾನೆ. ಮೇಲ್ನೋಟಕ್ಕೆ ಬುಧ್ ಸಿಂಗ್ ಒಬ್ಬ ವಿಕ್ಷಿಪ್ತನಂತೆ ಕಂಡರೂ ಆತನನ್ನು ಇಡೀ ಸಿಖ್ ಸಮೂಹದ ಪ್ರತಿನಿಧಿಯಂತೆ ಚಿತ್ರಿಸಿರುವುದು ಖುಷ್ವಂತರ ಜಾಣ್ಮೆ ಹಾಗೂ ಯಶಸ್ಸು ಕೂಡ. ಸಿಖ್ಖರ ಧೈರ್ಯ, ಸಮರೋತ್ಸಾಹ, ಹುಚ್ಚು ಪ್ರೇಮ, ಅದರ ಇನ್ನೊಂದು ಮುಖವಾದ ಹುಚ್ಚು ದ್ವೇಷ, ದೇಶಭಕ್ತಿ, ಸ್ತ್ರೀಗೌರವ, ಹುಂಬತನ, ಧನದಾಹ ಮುಂತಾದ ಎಲ್ಲ ಅಂಶಗಳ ಪ್ರತಿನಿಧಿತ್ವವೇ ಬುಧ್‌ಸಿಂಗ್‌ನ ಪಾತ್ರ.

ವಿದೇಶದಿಂದ ಮರಳಿದ ರಾತ್ರಿ, ಮನೆಯಲ್ಲಿ ಕರೆಂಟಿಲ್ಲದೆ, ಫೋನಿಲ್ಲದೆ, ತಿನ್ನಲು ಬ್ರೆಡ್ಡೂ ಇಲ್ಲದೆ ಬೇಸರಿಸಿ ಬಿದ್ದುಕೊಂಡ ಖುಷ್ವಂತ್ ದಿಲ್ಲಿಯ ಬೆಳಗಿನ ಜಾವದ ಮೊದಲ ತಂಗಾಳಿ ಅಲೆಗೆ ಎದೆಯೊಡ್ಡಿ ಆ ನಗರದ ರಾತ್ರಿಯ ಅನಾಹುತಗಳನ್ನೆಲ್ಲ ಕ್ಷಮಿಸಿ ಮೀಸೆಯಡಿಯಲ್ಲಿ ನಗುತ್ತಾರೆ. ತಮ್ಮ ಖಟಾರಾ ಕಾರಿನಲ್ಲಿ ಕೂತು ಜನಜಂಗುಳಿಯಡೆಗೆ ಓಡಿ ನಾನಾ ಜಾತಿಯ ನ್ಯೂಸ್ ಪೇಪರುಗಳನ್ನು ತಿರುವಿ ಹಾಕಿ, ಕಡೆಗೆ ದೆಹಲಿಯ ಅಂಡರ್‌ವರ್ಲ್ಡ್ ಹೆಸರಿನ ನಾಲ್ಕನೇ ದರ್ಜೆಯ ಪತ್ರಿಕೆಯನ್ನೂ, ಅದರ ಸುಳ್ಳು ಸುದ್ದಿಗಳನ್ನು ಸವಿಯುತ್ತ ತಮ್ಮ ನೆಚ್ಚಿನ ಕಾಫಿ ಹೌಸಿನಲ್ಲಿ ಕೂಡುತ್ತಾರೆ. ಅವರಿಗಲ್ಲಿ ಮೂವರು ಗೆಳೆಯರು. ಜೇನುಗೂಡಿನಂತಹ ದಾಡಿ ಇಳಿಬಿಟ್ಟ ಪತ್ರಕರ್ತ, ಹೆಣ್ಣುಗಳ ಬೆನ್ನಟ್ಟಿ ಓಡುವ ಛಾಯಾಚಿತ್ರಕಾರ, 'ಫಾಲ್ತೂ' ಸಂಗತಿಗಳಿಗೆ ಜೋತುಬೀಳುವ ರಾಜಕಾರಣಿ ಮತ್ತು ಒಬ್ಬ ಸರ್ಕಾರಿ ನೌಕರ! ಈ ನಾಲ್ವರೂ ಕೂತು ದೆಹಲಿಯ ವೇಶ್ಯೆಯರ ಬಗ್ಗೆ, ಅವರ ಖಾಯಿಲೆಗಳ ಬಗ್ಗೆ, ಮೊಘಲರ ನ್ಯಾಯದ ಬಗ್ಗೆ, ಔರಂಗಜೇಬನ ಧರ್ಮದ ಬಗ್ಗೆ, ಸಿಖ್ಖರ ಭೋಳೆತನದ ಬಗ್ಗೆ, ತಮ್ಮ ಶ್ಯಾಣೆತನದ ಬಗ್ಗೆ ಮಾತನಾಡುತ್ತ ಆಡುತ್ತ ಒಬ್ಬರ ಮೇಲೊಬ್ಬರು ರೇಗುತ್ತಾರೆ, ಬೈದಾಡುತ್ತಾರೆ. ಕ್ಷಮೆ ಕೇಳಿ ಎದ್ದು ಹೋಗುತ್ತಾರೆ. ಒಟ್ಟಿನಲ್ಲಿ ದಿಲ್ಲಿಯ ಮಧ್ಯಮ ವರ್ಗದ ಬದುಕಿನ ಈ ಕಾಫಿ ಹೌಸಿನ ಚರ್ಚೆ ಒಂದು ಕನ್ನಡಿ.

ಇದೆಲ್ಲ ಬೇಸರವಾಗಿ ಬದುಕು ನೀರಸವೆನ್ನಿಸಿ ಮತ್ತೆಲ್ಲೂ ಶಾಂತಿ ಸಿಗದೆನ್ನಿಸಿದಾಗ ಖುಷ್ವಂತ್ ದಿಲ್ಲಿಯ ನಿಗಮ್‌ಬೋಧ್ ಘಾಟಿಗೆ ನಡೆಯುತ್ತಾರೆ. ಅಲ್ಲೊಂದು ಹುಡುಗಿ, ಸತ್ತು ಮಲಗಿದ್ದಾಳೆ. ಅವಳ ತಂದೆ ನೆತ್ತಿಗೆ ಮಣ್ಣು ಸುರಿದುಕೊಂಡು ಎದೆ ಎದೆ ಬಡಿದುಕೊಂಡು ಅಳುತ್ತಾನೆ. ತಾಯಿ ಮಣ್ಣಲ್ಲಿ ಹೊರಳುತ್ತಾಳೆ. ಖುಷ್ವಂತ್

ನೋಡುತ್ತ ನಿಲ್ಲುತ್ತಾರೆ. ''ನನಗೆ ಗೊತ್ತು. ನನ್ನ ಅಂಬಾಸಿಡರ್ ಕಾರಿನಲ್ಲಿ ಮನೆಗೆ ಹೋದ ಕೂಡಲೇ ನನಗೆ ಮನೆಯಲ್ಲಿ ವಿಸ್ಕಿ ಸಿಗುತ್ತದೆ. ಆ ತಂದೆಗೇನಿದೆ? ಮಗಳನ್ನು ಕಳೆದುಕೊಂಡ ಖಾಲಿ ಮನೆ!'' ಎಂದು ಕೊಳ್ಳುತ್ತಲೇ ಮನೆಗೆ ಬಂದು ಎರಡು ಗುಟುಕು ವಿಸ್ಕಿ ಹೀರಿ ''In Delhi, Death and drink make life worth living'' ಎಂದು ಬರೆದು ಅದನ್ನಲ್ಲಿಗೆ ನಿಲ್ಲಿಸುತ್ತಾರೆ.

ಖ್ಯಾತ ಪತ್ರಕರ್ತರಾದ ಖುಷ್ವಂತರಿಗೆ ವಿದೇಶಿ ಗೆಳತಿಯರಿಗೆಂಥ ಕೊರತೆ? ಎಂಬೆಸಿಗಳ ಹುಡುಗಿಯರು, ದೇಶದ ಪ್ರತಿಷ್ಠಿತ ಅತಿಥಿಗಳು, ಅತಿಥಿಗಳ ಗೆಳತಿಯರು ...... ಹೀಗೆ ನಾನಾ ತರಹದವರಿಗೆ ಖುಷ್ವಂತ್ ಬೇಕು. ಅವರಿಗೆ ದಿಲ್ಲಿಯನ್ನು ತೋರಿಸಿ, ವಿವರಿಸುವ 'ಗೈಡ್' ಖುಷ್ವಂತ್. ಒಬ್ಬೊಬ್ಬ ಗೆಳತಿಯನ್ನು ಕರೆದೊಯ್ದಾಗಲೂ ಅವಳೊಂದಿಗೆ ಆಡುತ್ತ, ನಗುತ್ತ, ಕಲೆಯುತ್ತ, ಅವಳ ದೇಶದ ರೀತಿ-ನೀತಿ-ಭಾಷೆಗಳ ಅಣಕವಾಡುತ್ತಲೇ ದಿಲ್ಲಿಯ ಇತಿಹಾಸದ ಕಾಲಗರ್ಭದೊಳಕ್ಕೆ ಓದುಗರನ್ನಿಳಿಸಿಬಿಡುವ ಖುಷ್ವಂತ್ ನಿಜಕ್ಕೂ ಗಾರುಡಿಗನೆನಿಸಿಕೊಳ್ಳುವುದು ಪಾತ್ರ ಮತ್ತು ಸನ್ನಿವೇಶಗಳ ಸೃಷ್ಟಿಯಿಂದ. ಮೊದಮೊದಲಿಗೆ ವಿಲಾಸಿ ಶ್ರೀಮಂತ ಲಂಪಟನೊಬ್ಬನ ಕೊಳಕು ದಿನಚರಿಯಂತೆ ಕಾಣುವ ಪುಟಗಳು ತಿರುವಿದಂತೆಲ್ಲಾ ಗಂಭೀರಗೊಂಡು ದಿಡಗ್ಗನೆ ನಮ್ಮನ್ನು ಎಂಟು ಶತಮಾನಗಳಷ್ಟು ಹಿಂದ ಕ್ಕೊಯ್ದು ನಿಲ್ಲಿಸಿದಾಗ ನಿಜಕ್ಕೂ ಒಂದು ಅನೂಹ್ಯ ಕಂಪನಕ್ಕೊಳಗಾಗುತ್ತೇವೆ.

ಹಿಜರಿ ಶಕೆ 633

''ನಾನು ಮುಸದ್ದಿಲಾಲ್ ಕಾಯಸ್ಥ. ನನ್ನ ತಂದೆ ಲಾಲಾಚಗನ್ ಲಾಲ್ ಕಾಯಸ್ಥ. ಘಿಯಾಸುದ್ದೀನ್ ಬಲ್ಬನ್‌ನ ಕಾಲದಲ್ಲಿ ಅಂದರೆ ಇಂಗ್ಲೀಷ್ ಕ್ಯಾಲೆಂಡರಿನ 1265ನೆಯ ಇಸವಿಯಲ್ಲಿ ದಿಲ್ಲಿಯ ಕೊತವಾಲಿಯೊಂದರಲ್ಲಿ ಗುಮಾಸ್ತನಾಗಿದ್ದವ. ನಾನು ನನ್ನ ಕೊನೆಗಾಲದಲ್ಲಿ ಹೇಳಿಕೊಳ್ಳುವ



ಆತ್ಮ ಕಥನವೇನೆಂದರೆ .....''

ಎಂಬ ಮಾತುಗಳಿಂದ ಪ್ರಾರಂಭವಾಗುವ ಅಧ್ಯಾಯ ನಿಧಾನವಾಗಿ, ಒಂದೊಂದಾಗಿ ದಿಲ್ಲಿಯ ಇತಿಹಾಸದ ಪುಟಗಳನ್ನು ತೆರೆದಿಡುತ್ತ ಹೋಗುತ್ತದೆ. ಇತಿಹಾಸದ ಅನುಕ್ರಮಣಿಕೆ ಕ್ರಿ.ಶ. 1265ರಿಂದ ಪ್ರಾರಂಭವಾಗುತ್ತದೆ ಯಾದರೂ ಬಲ್ಬನ್ ರಾಜ್ಯದ ಹಿಂದೂ ಪ್ರಜೆಗಳ ಬಾಯಿಂದ ಹಿಂದಿನ ಹಿಂದೂ ರಾಜರುಗಳಾದ ಅನಂಗ ಪಾಲ, ತೋಮರ ರಾಜಪುತ ಮತ್ತು ಪೃಥ್ವಿರಾಜ ಚೌಹ್ವಾಣ ಮುಂತಾದವರ ಹಿರಿಮೆ ಗಳನ್ನು 'ನಾಸ್ಟಾಲ್ಜಿಯಾ'ದ ರೂಪದಲ್ಲಿ ಎದು ರಿಸಿ ಕಾದಂಬರಿಯ ಆರಂಭಕ್ಕೊಂದು ಸಂದರ್ಭ ವನ್ನು ಸಿಂಗ್ ಸೃಷ್ಟಿಸುತ್ತಾರೆ.

''ಅಯ್ಯಾ, ಮಹ್ಮದ್ ಘೋರಿಯು ಹಾಗೆ ರಜಪೂತರ ದೊರೆ ಪಥ್ವಿರಾಜನನ್ನು ಸೋಲಿಸಿ ಸಿಗಿದು ಹಾಕಿದ ನಂತರ ಕಾಯಸ್ಥರ ಕುಲದವ ರಾದ ನನ್ನ ತಾತ ಮುತ್ತಾತಂದಿರು ತುರ್ಕಿ, ಅರಬ್ಬಿ ಹಾಗೂ ಪರ್ಶಿಯನ್ ಭಾಷೆಗಳನ್ನು ಕಲಿತರು. ಮುಂದೆ ಖುತ್ಬುದ್ದೀನ್ ಐಬಕ್‌ನ ಹಿಂದೂ ವಿರೋಧಿ ನಿಲುವು, ಆ ಭವ್ಯಮಂದಿರಗಳ ನಾಶ, ಜೈನ ಬಸದಿಗಳ ನೆಲಸಮ, ಹಿಂದುಗಳ ಮೇಲಿನ ಅತ್ಯಾಚಾರ ..... ಒಂದೇ ಎರಡೇ ನಾವು ನೋಡಿದ್ದು? ಅದಾದ ಮೇಲೆ ಕುತುಬ್ ಮಿನಾರು ಕಟ್ಟಿದ್ದೂ, ಅಲ್ತಮಶ್ ಆಳಿದ್ದು, ಅವನ ಮಗಳು ಮೂರೂವರೆ ವರ್ಷಗಳ ಕಾಲ ಆಳಿ ಸೋತದ್ದು ..... ಇದೆಲ್ಲ ಮುಗಿದು 1265 ರಲ್ಲಿ ಈ ಬಲ್ಬನ್ ಮಹಾಶಯ ಪಟ್ಟಕ್ಕೆ ಬರುವ ಹೊತ್ತಿಗೆ ನಾನು ಆಳೆತ್ತರದವನಾಗಿದ್ದೆ.''

''ಎಲ್ಲರಂತೆ ತುರ್ಕಿ, ಪರ್ಶಿಯನ್, ಅರಬ್ಬಿ ಕಲಿತೆ. ಅಷ್ಟೇ ಅಲ್ಲ, ಮುಸದ್ದಿಲಾಲನೆಂಬ ಹಿಂದೂ ಹೆಸರಿನಿಂದಾಗಿ ಮುಸಲರ ಹುಡುಗರ ಕೀಟಲೆಗೆ ಬಲಿಯಾಗುತ್ತಿದ್ದ ನನಗೆ 'ಅಬ್ದುಲ್ಲಾ' ಎಂಬ ಮತ್ತೊಂದು ಹೆಸರನ್ನೂ ಇಡಲಾಗಿತ್ತು. ಗಡ್ಡ ಬಿಟ್ಟೆ, ಮೀಸೆ ಇಳಿಯಿತು, ಕುರ್ತಾ ಪೈಜಾಮಾ ಧರಿಸಿ ಅಪ್ಪಟ ತುರುಕನಂತೆ ಕಾಣು ತ್ತಿದ್ದೆ. ಅಪ್ಪ ಬದುಕಿದ್ದಾಗ ಮಥುರಾದ ರಾಮ್ ದುಲಾರಿಯನ್ನು ಲಗ್ನವಾಗಿದ್ದನಲ್ಲ, ಅಪ್ಪನ ಮರಣದ ನಂತರ ಅವಳನ್ನು ನನ್ನ ಮನೆಗೆ ಕಳಿ ಸಲು ಅವಳ ತವರಿನವರು ಒಪ್ಪಲೇ ಇಲ್ಲ. ನಮ್ಮ ಹುಡುಗೀನೂ ಮುಸ್ಲಿಮರವಳಾಗಿ, ಅವಳ ಮೇಲೆ ಇವನು ಸವತಿಯರನ್ನು ತಂದರೆ? ಎಂಬ ಭಯ ನನ್ನತ್ತೆ ಮಾವನದು. ಕಡೆಗೊಮ್ಮೆ ನನ್ನ ಕೊತವಾಲನಿಂದ ಬೆದರಿಕೆ ಹಾಕಿಸಿ ಅವಳನ್ನು ದಿಲ್ಲಿಗೆ ಕರೆಸಿದೆ ಅನ್ನಿ.''

''ಎಲ್ಲ ಸರಿ, ಅಡುಗೆ, ತಿಂಡಿ ಬಟ್ಟೆ ಎಲ್ಲ ನೋಡಿಕೊಂಡಳು ರಾಮ್‌ದುಲಾರಿ. ಆದರೆ ಮುಖ ಮಾತ್ರ ತೋರಿಸಲಿಲ್ಲ. ಸದಾ ಪರದೆಯ ಹಿಂದೆಯೇ! ರಾತ್ರಿ ಬೇರೆ ಮಂಚದಲ್ಲಿ ಇನ್ನು ಮಕ್ಕಳೆಲ್ಲಿಂದ ಆಗಬೇಕು? ಮನೆಯಲ್ಲಿ ಈ ಹಿಂಸೆಯಾದರೆ ಹೊರಗೆ ಮತ್ತೊಂದು ಹಿಂಸೆ. ನಾನು ಜಾತಿಗೆಟ್ಟವನೆಂದು ಹಿಂದುಗಳು ಬೈದರು. ನಮ್ಮೊಳಗೆ ಸೇರಲಿಲ್ಲವೆಂದು ಮುಸ ಲರು ಹೀಯಾಳಿಸಿದರು. ಎಷ್ಟೋ ಬಾರಿ ಹಿಂದೂ ಗಳೆಯರಿಗೆ ತಿಳಿ ಹೇಳಿದೆ,' ಅವರು ನಮ್ಮ ದೊರೆ ಗಳು ಕಣ್ರೋ ..... ನಮಗಿಂತ ಶಕ್ತಿವಂತರು, ಅವರನ್ನು ಸುಮ್ಮನೆ ಅನುಸರಿಸಿ' ಅಂತ. ಆದರೆ ಕೇಳಬೇಕಲ್ಲ? ಇಡೀ ನಾಲ್ಕು ವೇದಗಳನ್ನು ಮತ್ತು ಲೋಕಜ್ಞಾನವನ್ನು ತಕ್ಕಡಿಯ ತಟ್ಟೆಗಳ ಲ್ಲಿಟ್ಟು ತೂಗಿದರ ಲೋಕಜ್ಞಾನದ್ದೇ ತೂಕ ಹೆಚ್ಚು. ಅದು ನಮ್ಮ ಪಂಡಿತರಿಗೆ ತಿಳಿಯ ಬೇಕಲ್ಲ?''

''ಹೀಗೆ ಒಂದೆಡೆ ಜಾತಿ ದ್ವೇಷಿಗಳಿಂದ ಮತ್ತೊಂದೆಡೆ ಮುನಿದು ಮಲಗುವ ಹೆಂಡತಿ ಯಿಂದ ನೊಂದ ನಾನು ಕಟ್ಟಕಡೆಯದಾಗಿ ಶರ ಣಾದದ್ದು ಘಿಯಾಸ್‌ಪುರದ ಸೂಫಿ ಸಂತನಾದ ನಿಜಾಮುದ್ದೀನ್ ಔಲಿಯಾ ಅವರಿಗೆ! ಹಿಂದೂ-ಮುಸ್ಲಿಂ ಧರ್ಮ ಭ್ರಾಂತರ ನಡುವೆ ಸಿಕ್ಕಿ ಹಾಕಿ ಕೊಂಡ ನನ್ನಂತಹ ಅನೇಕರಿಗೆ ನಿಜಾಮುದ್ದೀ ನರು ರಕ್ಷಾಕವಚವಾಗಿದ್ದರು.

ನಿಜಾಮುದ್ದೀನರ ಕಾಲದಲ್ಲಿಯೇ ಅಲ್ಲವೆ ದಿಲ್ಲಿಯಲ್ಲಿ ಏನೆಲ್ಲ ಆಗಿ ಹೋದದ್ದು? ಅವರ ರಕ್ಷಣೆಯಿದ್ದಷ್ಟು ಕಾಲ ಮಳೆ ಬೆಳೆಯಿತ್ತು. ನೆಮ್ಮ

ದಿಯಿತ್ತು. ನಿಜಾಮುದ್ದೀನರು ಮುನಿದ ಮರುಘಳಿಗೆಯೇ ದಿಲ್ಲಿ ಬೆಂಕಿ ಬಿದ್ದ ಮನೆಯಾಯಿತು. ಅವರು ದಿಲ್ಲಿಯನ್ನು ಬಿಟ್ಟು ಪಂಜಾಬಕ್ಕೆ ಹೋದ ಕೆಲ ದಿನಗಳಲ್ಲೇ ದಿಲ್ಲಿಯ ಸುಲ್ತಾನನ ಮಗ ಯುವರಾಜ ಮಹ್ಮದ್ ಕೊಲೆಗೀಡಾದ. ಇಡೀ ಹಿಂದೂಸ್ತಾನವನ್ನೇ ನಡುಗಿಸಿದ ಆ ಮುಸಲ ದೊರೆ ಮಗನ ಹೆಣ ಕಂಡು ನೆಲ ಹಿಡಿದು ಮಲಗಿಬಿಟ್ಟ. ಸತ್ತೂ ಹೋದ. ದಿಲ್ಲಿಯ ಸಿಂಹಾಸನದ ಮೇಲೆ ನೆತ್ತರು ಪುಟಿಯಿತು. ಖಿಲ್ಜಿ ಕುಟುಂಬದ ಜಲಾಲುದ್ದೀನ್ ಫಿರೋಜ್ ಪಟ್ಟಕ್ಕೆ ಬಂದ. ಅವನೂ ಟಿಕಾಯಿಸಲಿಲ್ಲ. ಅವನ ಹತ್ತಿರದ ಸಂಬಂಧಿಯಾದ ಅಲ್ಲಾವುದ್ದೀನ್ ಖಿಲ್ಜಿ ಅವನನ್ನು ಕೊಂದು ಹಾಕಿದ. ಆಗ ಬಿತ್ತು ನೋಡಿ, ಎಂಥಾ ಭೀಕರ ಬರ! ದಿಲ್ಲಿ ಕನಲಿ ಹೋಯಿತು. ಊರಿಗೆ ಊರೇ ನೀರಡಿಸಿತು. ಜನ ಪಂಜಾಬದ ಕಡೆಗೆ ತಿರುಗಿ ಮೊಳಕಾಲೂರಿ ಪ್ರಾರ್ಥನೆ ಮಾಡಿದರು. ನಿಜಾಮುದ್ದೀನ್ ಅಲಿಯಾರನ್ನು ಕೈಚಾಚಿ ಕರೆದರು.

ಎಂಥ ಕರುಣಾಮಯಿ ಮುದುಕ ಆತ! ನಸುನಗುತ್ತ ನೂರಾರು ಮೈಲಿ ನಡೆದುಕೊಂಡೇ ಬಂದ. ದಿಲ್ಲಿಗೆ ಬಂದವನೇ ಜನರನ್ನು ದೂರದಿಂದ ಆಶೀರ್ವದಿಸಿ ಮಸೀದಿ ಹೊಕ್ಕು ಕೂತು ಬಿಟ್ಟ. ಅದೇನು ಪ್ರಾರ್ಥನೆ ಸಲ್ಲಿಸಿದನೋ, ಆಕಾಶ ಧೋ ಧೋ ಮಳೆ ಸುರಿಸಿತು. ಆದರೆ ದಿಲ್ಲಿಯ ಪಾಪ ಅಲ್ಲಿಗೆ ಮುಗಿಯಲಿಲ್ಲ. ಸುಲ್ತಾನನಾದ ಅಲ್ಲಾವುದ್ದೀನ್ ಮತ್ತು ಮಲ್ಲಿಕ್‌ಕಾಫರರ ಹಿಂದೂ ವಿರೋಧಿ ದುಷ್ಕೃತ್ಯಗಳಿಗೆ ನಾಡಿಗೆ ನಾಡೇ ತತ್ತರಿಸಿತು. ನಾನು ನನ್ನ ಮಗನಿಗೆ 'ಕಮಲ್' ಎಂದು ಹೆಸರಿಟ್ಟೆ. ತುರುಕರ ಎದುರಿಗೆ ಕಮಾಲ್ ಎಂದೇ ಕರೆಯುತ್ತಿದ್ದೆ. ಆದರೂ ಸುಲ್ತಾನರ ಅಟ್ಟಹಾಸಕ್ಕೆ ಕೊನೆಯಿರಲಿಲ್ಲ. ಅಲ್ಲಾವುದ್ದೀನನ ಕೊಲೆಯಾಯಿತು. ಮಲಿಕ್‌ಕಾಫರ್ ರಾಜ್ಯವಾಳತೊಡಗಿದ. ಸುಲ್ತಾನನ ಮಕ್ಕಳಿಬ್ಬರ ಕಣ್ಣುಗಳಿಗೆ ಕಾಯಿಸಿದ ದಬ್ಬಣಗಳನ್ನು ಹಟ್ಟಲಾಯಿತು. ಇದೆಲ್ಲ ಕೇಳಿ ನಿಜಾಮುದ್ದೀನರು ಕಣ್ಮುಚ್ಚಿಕೊಂಡು ''ತೋಬಾ ತೋಬಾ'' ಅಂದರು. ಶಾಪ ಫಲಿಸಿತು. ಮಲಿಕ್ ಕಾಫರ್ ಕೂಡ ಕೊಲೆಯಾದ. 'ಸದ್ಯ' ಎಂದು ನಿಟ್ಟುಸಿರಿಟ್ಟೆವಾದರೂ ಮುಂದೆ ಅಧಿಕಾರಕ್ಕೆ ಬಂದ ಖುತ್ಬುದ್ದೀನ್ ಮುಬಾರಕ್ ಶಾಹನ ಆಳ್ವಿಕೆ, ಆತನ ವಿಕೃತಿ, ಹುಚ್ಚಾಟಗಳನ್ನು ಕಂಡು ದಂಗುಬಡಿದು ಹೋದೆವು. ಈ ಸುಲ್ತಾನನಿಗೆ ನಮ್ಮ ನಿಜಾಮುದ್ದೀನರನ್ನು ಕಂಡರಾಗುತ್ತಿರಲಿಲ್ಲ. ಏನೆಲ್ಲ ತರಲೆ ಮಾಡಿದ. ಆದ್ರೆ, ಮುಂದೆ, ಗುಜರಾತಿನಿಂದ ಹಿಡಿದು ತಂದ ಖುಸ್ರೋಖಾನ್ (ಮುಂಚೆ ಈತ ಹಿಂದೂ ಯುವಕ) ನೊಂದಿಗೆ ಸಲಿಂಗ ಸಂಬಂಧವನ್ನು ಇಟ್ಟುಕೊಂಡು ಸುಲ್ತಾನಪಡಬಾರದ ಕಷ್ಟಪಟ್ಟ. ಲೈಂಗಿಕ ರೋಗ ಹತ್ತಿಕೊಂಡಿತು. ಇದ್ದಕ್ಕಿದ್ದಂತೆ ಮೂತ್ರ ಬಂದಾಯಿತು. ದಿನಗಟ್ಟಲೆ ನರಳಿದ ಸುಲ್ತಾನ ಇನ್ನೇನು ಕಡೆಯ ಕ್ಷಣಗಳಿಗೆ ಬಂದನೆನಿಸಿದಾಗ ಅವನ ತಾಯಿ ಎದೆ ಎದೆ ಬಡಿದುಕೊಂಡು ನಮ್ಮ ನಿಜಾಮುದ್ದೀನರ ಬಳಿಗೆ ಬಂದಳು. 'ನಿನ್ನ ಮಗ ತನ್ನ ರಾಜ್ಯವನ್ನು ನಮಗೆ ಬರೆದುಕೊಡಲಿ. ಅವನಿಗೆ ರೋಗವಾಸಿಯಾಗುತ್ತದೆ' ಅಂದರು ನಿಜಾಮುದ್ದೀನರು. ಸುಲ್ತಾನ ಮೂತ್ರ ಹೋದರೆ ಸಾಕು ಜೀವ ಉಳಿದೀತೆನ್ನಿಸಿ ಕಾಗದದ ಮೇಲೆ ಚರಚರನೆ ಸಹಿ ಮಾಡಿದ. ತಡೆದಿದ್ದ ಮೂತ್ರ ಚಿಮ್ಮಿ ಬಂತು. ಅದನ್ನು ಹೂಜಿಯೊಂದರಲ್ಲಿ ಹಿಡಿದು ತಂದಳು ಸುಲ್ತಾನನ ತಾಯಿ. ರಾಜ್ಯತ್ಯಾಗದ ಪತ್ರವನ್ನು ನಿಜಾಮುದ್ದೀನರ ಕಾಲ ಮೇಲಿಟ್ಟಳು. ನಮ್ಮ ನಿಜಾಮುದ್ದೀನರು ನಕ್ಕರು. ರಾಜ್ಯಾಧಿಕಾರದ ಪತ್ರ ಹರಿದು ಚೂರುಮಾಡಿ ಆ ಮೂತ್ರದ ಹೂಜಿಯೊಳಕ್ಕೆ ಹಾಕಿ ಎದ್ದು ಹೋದರು! ಅಷ್ಟೇ ಅವರು ರಾಜ್ಯಕ್ಕೆ ಕೊಟ್ಟ ಕಿಮ್ಮತ್ತು.

ಮುಂದೆ ಅದೇ ಗುಜರಾತಿನ ಖುಸ್ರೋ ಖಾನ್ ಸುಲ್ತಾನನನ್ನು ಕೊಲೆ ಮಾಡಿದ. ತಾನೇ ಪಟ್ಟಕ್ಕೆ ಬಂದ. ರಕ್ತ ರಕ್ತವನ್ನೇ ಬಯಸುತ್ತದೆ ನೋಡಿ, ಖುಸ್ರೋಖಾನನ್ನು ಘಿಯಾಸುದ್ದೀನ್ ತುಘಲಕ ಸಂಬಾತ 1320ರಲ್ಲಿ ಕೊಂದ. ಇವನಾದರೂ ಕಡಿಮೆ ತಲೆ ತಿರುಕನಿದ್ದನೇನು? ಹಿಂದೂಗಳ ಮನೆ ಮನೆಗಳೂ ಲೂಟಿಯಾದವು. ನಾನಂತೂ

ತಲೆ ಬಾಗಿಲ ಮೇಲೆ '786' ಎಂಬ ಇಸ್ಲಾಮಿ ಚಿಹ್ನೆ ಬರೆದಿರಿಸಿಕೊಂಡು ಬಚಾವಾದೆ. ಆಗಿನ ಪ್ರಸಿದ್ಧ ಕವಿ, ಇತಿಹಾಸಕಾರನಾಗಿದ್ದ ಅಮೀರ್ ಖುಸ್ರುವಿನ ಗೆಳೆತನ ಸಂಪಾದಿಸಿ, ನಿಜಾಮುದ್ದೀನ್ ಆಲಿಯಾರ ನೆರಳಲ್ಲಿ ನನ್ನ ಬದುಕಿನ ಕಡೆಯ ದಿನಗಳನ್ನು ಕಳೆದೆ.

ಹೀಗೆ ಒಬ್ಬ ಭಯಸ್ಥ ಹಿಂದೂ ಗುಮಾಸ್ತೆಯೊಬ್ಬನ ಬಾಯಿಂದ ದಿಲ್ಲಿಯ ಇತಿಹಾಸದ ಒಂದು ಪರ್ವವನ್ನು ಹೇಳಿಸುವ ಖುಷ್ವಂತ್‌ಸಿಂಗ್ ಓದುಗರನ್ನು ದಂಗುಬಡಿಸುವುದು ಕೇವಲ ತಮ್ಮ ಭಾಷೆಯ ಹೊಳಪಿನಿಂದಲ್ಲ. ಆ ಕಾಲಮಾನದ ರೀತಿ-ರಿವಾಜು, ಉಡಿಗೆ, ನಂಬಿಕೆಗಳು, ಕಲ್ಪನೆಗಳು, ಜಾತಿ-ಜಾತಿಗಳ ನಡುವಣ ಘರ್ಷಣೆ, ಓಂದುಗಳ ಪುಕ್ಕತನ, ಮುಸ್ಲಿಮರ ಕ್ರೌರ್ಯ, ಎರಡೂ ಬಣಗಳ ಜನರ ಒಣ ಜಂಭ ಇತ್ಯಾದಿಗಳನ್ನೆಲ್ಲ ನಮ್ಮೆದುರಿಗೆ ಮಂಡಿಸುತ್ತಾರೆ.

ಮುಂದೆ ಭಾರತದ ಮೇಲೆ ದಂಡೆತ್ತಿ ಬಂದ ಕುಂಟ ತೈಮೂರನ ಆತ್ಮಕಥನದೊಂದಿಗೆ ಇತಿಹಾಸ 1398ಕ್ಕೆ ನೆಗೆಯುತ್ತದೆ. ತೈಮೂರನ ನಿರ್ದಯಿ ಖಡ್ಗಗಳಿಗೆ ಸಿಕ್ಕು ಸತ್ತ ದಿಲ್ಲಿಗರ ಹೆಣಗಳನ್ನು ಹೂಳುವವರೂ ಇಲ್ಲದೆ ಇಡೀ ನಗರ ಹದ್ದು, ನರಿಗಳ ಪಾಲಾದಾಗ ಇತಿಹಾಸದ ಕಣ್ಣಿಂದ ಅಸಹಾಯಕತೆಯ ನೀರು ತೊಟ್ಟಿಕ್ಕುತ್ತದೆ. ಪ್ರತಿಬಾರಿಯಂತೆ ಈಗಲೂ ದಿಲ್ಲಿ ಏನೂ ಮಾಡಲಾಗದ ಶಿಖಂಡಿಯಂತೆ ನಿಲ್ಲುತ್ತದೆ.

ಫಕ್ಕನೆ ವಾಸ್ತವಕ್ಕೆ ಬರುತ್ತಾರೆ ಖುಷ್ವಂತ್ ಸಿಂಗ್. ತಮ್ಮ ಪಿಜಡಾ ಜೊತೆಗಾರ್ತಿಯಾದ ಭಾಗಮತಿಯನ್ನು 1960ರ ಜನವರಿ 26ರಂದು ದಿಲ್ಲಿಯ ಸುತ್ತಾಟಕ್ಕೆ ಕರೆದೊಯ್ಯುತ್ತಾರೆ. ದಿಲ್ಲಿಯ ಕೋಟೆ ಕೊತ್ತಲಗಳಲ್ಲಿ ಅಲೆಯುವಾಗ ಹಠಾತ್ತನೆ ಮೆಟ್ಟಿಲುಗಳ ಮೇಲೆ ಕಾಲು ಜಾರುತ್ತಾರೆ. ಭಾಗಮತಿ ಗಾಬರಿಯಾಗುತ್ತಾಳೆ. "ನೋಡು ಭಾಗಮತೀ, ಇವತ್ತಿಗೆ ನಾನ್ನೂರ ಮೂವತ್ತು ವರ್ಷಗಳ ಹಿಂದೆ 26 ಜನವರಿ 1530ರಂದು ಇವೇ ಮೆಟ್ಟಿಲುಗಳ ಮೇಲೆ ಮೊಘಲರ ರಾಜನೊಬ್ಬ ಇದೇ ರೀತಿ ಕಾಲು ಜಾರಿ ಬಿದ್ದು



ನಿಮ್ಮ ಮೂರು ಮಕ್ಕಳು ಎಕ್ಸಿಬಿಷನ್‌ನಲ್ಲೇ ಕಳೆದು ಹೋದರು ಅಂತ ಹೇಳಿದ್ರಲ್ಲಾ ..... ಈಗ ಹೆಂಡತಿ ಜೊತೆಗೆ ಎಲ್ಲಿಗೆ?

ಎಕ್ಸಿಬಿಷನ್ನಿಗೆ!

ಸತ್ತ! ಆತನ ಹೆಸರು ಹುಮಾಯೂನ್ ಎಂದು ಅವಳಿಗೆ ವಿವರಿಸುತ್ತಾ ಓದುಗನನ್ನು ಮತ್ತೆ ಮೊಘಲರ ಇತಿಹಾಸಕ್ಕೆ ಕೊಂಡೊಯ್ಯುತ್ತಾರೆ. ಭಾಗಮತಿ ಎಂಥಾ ಮುಗ್ಧೆಯೆಂದರೆ ಸತ್ತ ಮೊಘಲ ದೊರೆಯ ಆತ್ಮಕ್ಕೆ ಶಾಂತಿ ಕೋರಿ ಪ್ರಾರ್ಥನೆ ಮಾಡುತ್ತಾಳೆ. ಕಥೆಯ ಓಟ ಮತ್ತೊಂದು ತಿರುವು ಪಡೆಯುತ್ತದೆ. ಸಿಖ್ಖ ಧರ್ಮೀಯರಾದ ಖುಷ್ವಂತ್‌ರನ್ನು ಬೆಳಗಿನ ಜಾವದ ನಿರ್ಜನ ಬೀದಿಗಳಲ್ಲಿ ತನ್ನ ಟಾಂಗಾ ಹತ್ತಿಸಿಕೊಂಡು ಹೋಗಲು ಅನುಮಾನಿಸುವ ಮುಸಲ್ಮಾನ ಟಾಂಗಾವಾಲಾನನ್ನೂ, ಅವನ ಬಡತನವನ್ನೂ ವರ್ಣಿಸುತ್ತ ಖುಷ್ವಂತ್, ಎಂದೋ ನೂರಾರು ವರ್ಷಗಳ ಹಿಂದೆ ಔರಂಗಜೇಬನಿಂದ ಹತನಾದ ಸಿಖ್‌ಗುರುವಿನ ಜನ್ಮದಿನದಂದು ದಿಲ್ಲಿಯ ಸಿಖ್ಖರೆಲ್ಲ ಆವೇಶಗೊಂಡು ರಸ್ತೆಗಳಲ್ಲಿ ಮೆರವಣಿಗೆ ಹೊರಡುವ ಮೂರ್ಖತನವನ್ನು ಖಂಡಿಸುತ್ತಾರೆ. ಹಾಗೆಯೇ ಬರೆಯುತ್ತ ಬರೆಯುತ್ತ ಮೊಘಲರ ಕಾಲದ ಅಸ್ಪೃಶ್ಯರ ಬದುಕು-ಬವಣೆಗಳನ್ನು ವಿವರಿಸುತ್ತಾರೆ. ಅದೊಂದು

ರೋಚಕ ಕಥೆ.

ದಿಲ್ಲಿಯ ರಿಕಬ್‌ಗಂಜ್‌ನ ಅಸ್ಪೃಶ್ಯನಾದ ಜೈತ ರಂಗ್ರೇತ, ಜಹಾಂಗೀರನ ಅಂತ್ಯದ ಹೊತ್ತಿಗೆ ಪ್ರಪಂಚಜ್ಞಾನ ಪಡೆದುಕೊಂಡ ಹುಡುಗ. ಆ ಹೊತ್ತಿಗೆ ಸಿಖ್ಖರ ಐದನೆಯ ಗುರುವಾದ ಅರ್ಜುನ್ ಸಿಂಗ್‌ರನ್ನು ಜಹಾಂಗೀರ ಕೊಲೆ ಮಾಡಿಸಿದ್ದ. ಮತ್ತು ಹರಗೋವಿಂದ ಸಿಂಗರನ್ನು ಬಂಧಿಸಿದ್ದ. ಈ ಅಸ್ಪೃಶ್ಯನಾದ ಜೈತನಿಗೆ ಅದೇಕೋ ಮೊಘಲರ ಮೇಲೆ ಅಸಹನೆ, ಸಿಟ್ಟು. ಆತ ತನ್ನನ್ನು ತಾನು ಸಿಖ್ಖರ ಅನುಯಾಯಿ ಯೆಂದು ಘೋಷಿಸಿಕೊಳ್ಳುತ್ತಾನೆ. ದುಡಿದ ನಾಲ್ಕು ಕಾಸಿನಲ್ಲೇ ಒಂದು ಪಾಲನ್ನು ಸಿಖ್ಖರ ಧರ್ಮಗುರುವಿನ ಏಜೆಂಟನಿಗೆ ಕಾಣಿಕೆಯಾಗಿ ನೀಡಿ ಧನ್ಯನಾದೆ ಎಂದುಕೊಳ್ಳುತ್ತಾನೆ. ಆದರೆ ಶಹಜಹಾನ ಆಗ್ರಾ ಬಿಟ್ಟು ದಿಲ್ಲಿಗೆ ತನ್ನ ಠಿಕಾಣಿ ಬದಲಿಸಿದಾಗ ಜೈತ ತನ್ನೆಲ್ಲ ಅಸಹನೆ, ದ್ವೇಷ ಮರೆತು ಮೊಘಲರನ್ನು ಹೊಗಳತೊಡಗುತ್ತಾನೆ. ಅದಕ್ಕೆ ಕಾರಣ ಇಷ್ಟೇ, ದಿಲ್ಲಿಯಲ್ಲಿ ಹೊಸ ಬಂಗಲೆ, ಮಹಲುಗಳನ್ನು ಕಟ್ಟುತ್ತಿದ್ದಾರೆ. ಅವನಿಗೆ ಕೈತುಂಬ ಕೆಲಸ, ಕೂಲಿ ಸಿಗುತ್ತದೆ. ಅಸ್ಪೃಶ್ಯರೀಗ ಹೊಲಸು ಬಳಿಯುವ ಜನರಲ್ಲ, ಅವರು ಕೂಲಿಗಳು! ಆದರೆ ಶಹಜಹಾನನ ದಿಲ್ಲಿಯ ಐಲು ಮುಗಿದು ಹೋಗಿ ಬಂಗಲೆಗಳ ಕೆಲಸ ನಿಂತು ಹೋಗುತ್ತದೆ. ರಾಜ ಆಗ್ರಾಕ್ಕೆ ಹೋಗಿಬಿಡುತ್ತಾನೆ. ಜೈತ ಮತ್ತೆ ಅಸ್ಪೃಶ್ಯನಾಗಿ ವಧಾ ಸ್ಥಳದಲ್ಲಿ ಆಳಾಗಿ ಸೇರಿ ದುಡಿಯತೊಡಗುತ್ತಾನೆ. ಮರಣ ದಂಡನೆಗೊಳಗಾದವರ ದೇಹದ ಭಾಗಗಳನ್ನು ಆಯಿಸಿಕೊಂಡೊಯ್ದು ಚೆಲ್ಲಿ ಬರುವ ಕೆಲಸ! ಅವನಿಗೆ ಅದೇನೋ ಕೀಳರಿಮೆ. ಮುಂದೆ ಔರಂಗಜೇಬನ ಕಾಲದಲ್ಲಿ ಮತ್ತೊಬ್ಬ ಸಿಖ್ ಗುರುವಿನ ವಧೆಯಾಗುತ್ತದೆ. ಆ ರಾತ್ರಿ, ಗುರುವಿನ ಶವವನ್ನು ಜೈತ ತನ್ನ ಶ್ರೀಮಂತ ಒಡೆಯನೊಬ್ಬನೊಂದಿಗೆ ಹೋಗಿ ವಧಾ ಸ್ಥಾನದಿಂದ ಕದ್ದು ತರುತ್ತಾನೆ. ಮರುದಿನ ಗುರುವಿನ ಶವವನ್ನು ನಗ್ನವಾಗಿ ನಗರದ ಮಧ್ಯೆ ನೇತು ಹಾಕುವ ಹೀನ ಕೆಲಸ ತಪ್ಪಿಸುವ ಉದ್ದೇಶ ಅವನದು. ಗುರುವಿನ ದೇಹವನ್ನು ರಹಸ್ಯವಾಗಿ ಸುಟ್ಟ ನಂತರ ಅದರ ರುಂಡವನ್ನು ತನ್ನೆರಡೂ ಕೈಗಳಿಂದ ಹೊತ್ತುಕೊಂಡು ಪಂಜಾಬಕ್ಕೆ ಓಡುತ್ತಾನೆ. ಗುರುವಿನ ಮಗನಿಗೆ ಅದನ್ನು ತಲುಪಿಸುವಾಗ ಅಂದುಕೊಳ್ಳುತ್ತಾನೆ. ''ಇಷ್ಟು ದಿನ ನನ್ನನ್ನು ಅಸ್ಪೃಶ್ಯ, ಹೆಣ ಹೊಲಸು ಹೊರುವವ ಅಂದುಕೊಳ್ಳುತ್ತಿದ್ದರು ಜನ, ಈಗ? ಸ್ವತಃ ಗುರುವಿನ ತಲೆಯೇ ನನ್ನ ನೆತ್ತಿಯ ಮೇಲಿದೆ. ಈಗನ್ನಲ್ಲಿ ಅಸ್ಪೃಶ್ಯ ಅಂತ?''

★ ★ ★

ಮತ್ತೆ ಶುರುವಾಗುತ್ತದೆ ಖುಷ್ವಂತರ ಯಥಾ ಪ್ರಕಾರದ ತುಂಟಾಟ. ಮಿಲಿಟರಿ ಅಧಿಕಾರಿಯೊಬ್ಬರ ಮಡದಿಯೊಂದಿಗೆ 'ಫ್ಲರ್ಟ್' ಮಾಡುವ ಸಿಂಗ್ ಅವಳಿಗೆ ಇತಿಹಾಸದ ಕೆಲವು ಸತ್ಯಗಳನ್ನು ಅರುಹುತ್ತಾರೆ. ಔರಂಗಜೇಬನ ಬಗೆಗಿನ ತಪ್ಪು ತಿಳುವಳಿಕೆಗಳನ್ನು ಸರಿಪಡಿಸುತ್ತಲೇ ಅವನ ಕಥೆ ಹೇಳುತ್ತಾರೆ. ಅದೂ ಆತ್ಮಕಥನದ ರೂಪದಲ್ಲಿ. ಔರಂಗಜೇಬನ ಆತ್ಮಕಥನದಷ್ಟೇ ಸ್ವಾರಸ್ಯಕರವಾದದ್ದು ದಿಲ್ಲಿಯ ಮೇಲೆ ದಂಡೆತ್ತಿ ಬಂದ ನಾದಿರ್ ಷಾನದು. 1739ರಲ್ಲಿ ದಂಡೆತ್ತಿ ಬಂದ ನಾದಿರ್ ಷಾ ದಿಲ್ಲಿಯ ಎದೆಯ ತುಂಬ ಗಾಯ ಮಾಡುತ್ತಾನೆ. ನಿರ್ದಯಿಯಾಗಿ ಜನರ ಕೊಲೆಗೆ ಕಾರಣನಾಗುತ್ತಾನೆ. ಆದರೆ ದಿಲ್ಲಿಯ ಜನ ಎಂಥ ತಾಯಿಗ್ಗಂಡರು, ವಿಶ್ವಾಸಘಾತುಕರು ಮತ್ತು ಸಮಯಸಾಧಕರು ಎಂಬುದನ್ನು ಆತನ ಬಾಯಿಂದಲೇ ಹೇಳಿಸುತ್ತಾರೆ. ''ದಿಲ್ಲಿಯ ಅರ್ಧಕ್ಕಿಂತ ಹೆಚ್ಚು ಜನರನ್ನು ನಾವು ಕೊಂದ ಹದಿನೈದು ದಿನಗಳ ನಂತರ ಆ ದೊರೆಯ ಮಗಳಿಗೂ, ನನ್ನ ಮಗನಿಗೂ ಮದುವೆ ಏರ್ಪಡಿಸಿದೆವು. ಕೇವಲ ಹದಿನೈದು ದಿನಗಳ ಹಿಂದೆ ನಡೆದ ಕೊಲೆಗಳನ್ನು ಮರೆತ ಈ ದಿಲ್ಲಿಯ ಜನ ರಾಶಿ ರಾಶಿ ಹೂವು ತಂದು ನಮ್ಮ ಕಾಲ ಮೇಲೆ ಸುರಿದು, ಕುಣಿದು ಕಿಸಿದದ್ದನ್ನು ನೋಡಿದಾಗಲೇ ಗೊತ್ತಾಯಿತು. ಇವರೆಂಥ ಕೃತಘ್ನರು ಎಂದು.'' ನಾದಿರ್‌ಷಾನ ಈ ಮಾತುಗಳಿಂದ ಕೇವಲ ದಿಲ್ಲಿಯೊಂದೇ ಅಲ್ಲ, ಇಡೀ ಭಾರತದ ಜನರ ಬೂಟಾಟಿಕೆ, ಹಿಪಾಕ್ರಸಿಗಳ ಪರಿಚಯವಾಗುತ್ತದೆ.

ದಿಲ್ಲಿ ಅಭೀ ದೂರ್ ಹೈ !

ಘಿಯಾಸುದ್ದೀನ್ ತುಘಲಕ್ ಎಂಥ ತಲೆ ತಿರುಕನೆಂಬುದು ಇತಿಹಾಸ ಓದಿದವರಿಗೆಲ್ಲ ಗೊತ್ತು. ಆತ ಸೂಫಿ ಸಂತ ಖ್ವಾಜಾ ನಿಜಾಮುದ್ದೀನ್ ಆಲಿಯಾರಂಥ ಸಂತರನ್ನೂ ಹಿಂಸಿಸಿದ. ದಿಲ್ಲಿಯ ಸನಿಹದ ಮೆಹ್ರೌಲಿ ಮತ್ತು ಘಿಯಾಸಪುರಗಳ ನಡವೆ ಒಂದು ಹೊಸನಗರವನ್ನು ಕಟ್ಟಿಸಿದ ಈ ದೊರೆ ಅದೊಂದು ದಿನ ತನ್ನ ಸೇವಕನನ್ನು ನಿಜಾಮುದ್ದೀನರ ಬಳಿಗೆ ಕಳಿಸಿದ.

'ನಮ್ಮ ಸುಲ್ತಾನರು ದೂರದೇಶಕ್ಕೆ ಹೋಗಿ ದಂಡಯಾತ್ರೆಯಲ್ಲಿ ವಿಜಯ ಸಾಧಿಸಿ ಬಂದಿದ್ದಾರೆ. ಅವರು ಕಟ್ಟಿಸಿದ ಹೊಸ ನಗರಕ್ಕೆ ಇಷ್ಟರಲ್ಲೇ ಆಗಮಿಸಲಿದ್ದಾರೆ. ಅವರು ಬರುವುದರೊಳಗಾಗಿ ನೀವು ಆ ನಗರದಲ್ಲಿದ್ದು ಅವರನ್ನು ಸ್ವಾಗತಿಸಬೇಕು.......ಇಲ್ಲದಿದ್ದರೆ ನಿಮಗೆ ಮರಣದಂಡನೆ ತಪ್ಪದು.' ಎಂದು ರಾಜಾಜ್ಞೆಯನ್ನು ಓದಿ ಹೇಳಿದ ಸೇವಕ ನಿಜಾಮುದ್ದೀನರ ಕಾಲಿಗೆ ಬಿದ್ದು ಅಳತೊಡಗಿದ. ಅವನು ನಿಜಾಮುದ್ದೀನರ ಆರಾಧಕ. ಆದರೆ ಸುಲ್ತಾನರ ಆಜ್ಞೆ ಪಾಲಿಸಲೇ ಬೇಕಲ್ಲ ?

'ಹೆದರಬೇಡ ಮಗೂ.....ದಿಲ್ಲಿ ಇನ್ನೂ ದೂರವಿದೆ. ನಿನ್ನ ಸುಲ್ತಾನ ಅಲ್ಲಿಯ ತನಕ ಬರಲಿ ನೋಡೋಣ.' ಎಂದರು ನಿಜಾಮುದ್ದೀನ್. ಅವರಂದಹಾಗೇ ಆಯಿತು. ಸುಲ್ತಾನ ೧೩೨೫ ರಲ್ಲಿ ದಿಲ್ಲಿಗೆ ತಲುಪುವ ಮೊದಲೇ ಅಪಘಾತಕ್ಕೀಡಾಗಿ ಸತ್ತ. ಇಡೀ ದೇಶ ಉದ್ಗರಿಸಿತು....ದಿಲ್ಲಿ ಅಭೀ ದೂರ್ ಹೈ.... !

ಮಗನ ಮದುವೆಯ ಜೊತೆಜೊತೆಯಲ್ಲೇ ನಾದಿರ್ ಷಾ ದಿಲ್ಲಿಯ ಹದಿನಾರು ವರ್ಷದ ಸುಂದರಿ ನೂರ್‌ಬಾಯಿಯೊಂದಿಗೆ ತನ್ನ ಪ್ರಸ್ತವನ್ನೂ ಮುಗಿಸಿಕೊಳ್ಳುತ್ತಾನೆ. ದಿಲ್ಲಿಯ ವೈದ್ಯನೊಬ್ಬ ಕೊಡುವ ಕಾಮೋತ್ತೇಜಕ ಔಷಧಿಗಳ ನೆರವಿನಿಂದ ಆನಂದಪಡುತ್ತಾನೆ. ಮಗನ ಮದುವೆಯ ಕಾಲದಲ್ಲಿ ಮೊಘಲ ಹೆಂಗಸರು ಮದುಮಗನನ್ನು ನಿನ್ನ ಏಳು ತಲೆಮಾರಿನ ಪೂರ್ವಜರ ಹೆಸರುಗಳನ್ನು ಹೇಳು ನೋಡೋಣ ಎಂದು ಪ್ರಶ್ನಿಸಿ ಗೇಲಿ ಮಾಡಲೆತ್ನಿಸಿದಾಗ, ''ಮಗನೇ, ಅವರಿಗೆ ಹೇಳು. ನನ್ನ ತಂದೆ ನಾದಿರ್ ಷಾ. ಅವನು ಖಡ್ಗದ ಮಗ, ಖಡ್ಗದ ಮೊಮ್ಮಗ. ಖಡ್ಗದ ಮರಿಮೊಮ್ಮಗ .... ಏಳು ತಲೆಮಾರುಗಳೂ ಖಡ್ಗಗಳೇ ....'' ಎಂದು ಉತ್ತರಿಸಿ ಗಂಭೀರನಾಗುತ್ತಾನೆ. ಇವೆಲ್ಲಾ ಖುಷ್ವಂತರ ಪಾತ್ರಗಳ ಝಲಕ್‌ಗಳು!

ಖುಷ್ವಂತ್ ಸಿಂಗರ ಭಾಷೆ ಕಾವ್ಯವಾಗುತ್ತದೆ. ಅರಬ್ಬಿ ಮತ್ತು ಪರ್ಷಿಯನ್ ಗೀತೆಗಳು ಸುಲಲಿತವಾಗಿ ಇಂಗ್ಲಿಷಿಗೆ ಹರಿದು ಬರುತ್ತದೆ. ಅವರು ಭಾವೋದ್ವೇಗಕ್ಕೆ ಒಳಗಾಗುತ್ತಾರೆ. ಒಂದು ಇಡೀ ಪಾತ್ರವನ್ನು ತಾವೇ ಅನುಭವಿಸಿ, ಅಭಿನಯಿಸಿ ಓದುಗರೆದುರಿಗೆ ನಿಲ್ಲುತ್ತಾರೆ. ಅದು ಪ್ರಖ್ಯಾತ ಕವಿ 'ಮೀರ್ ತಕಿ ಮೀರ್'ನ ಪಾತ್ರ ! ಆಗ್ರಾದಲ್ಲಿ ಜನಿಸಿದ ಹೊಳಪುಗಣ್ಣಿನ ಮೀರ್ ತನ್ನ ಹದಿನಾರನೇ ವಯಸ್ಸಿಗೆ ಆಗ್ರಾದ ಭಾರೀ ಕವಿಗಳನ್ನೆಲ್ಲ ಸದೆಬಡಿದು ಕೇಳುಗರ ಕಣ್ಮಣಿಯಾಗಿ ನಿಲ್ಲುತ್ತಾನೆ. ಅಲ್ಲಿನ ಮುಷಾಯಿರಾಗಳು ಅವನ ಆಳ್ವಿಕೆಗೊಳಪಡುತ್ತವೆ. ಆದರೆ ಕವಿ ಮೀರ್ ಶ್ರೀಮಂತ ಸರದಾರನೊಬ್ಬನ ಹೆಂಡತಿಯೊಂದಿಗೆ ಕಣ್ಣು ಬೆರೆಸುತ್ತಾನೆ. ಅವನ ಮೇಲೆ ಅವಳ ಆಳ್ವಿಕೆ ಪ್ರಾರಂಭವಾಗುತ್ತದೆ ! ಬೇಗಂ

ಕಮುರುನ್ನೀಸಾ ಈ ಪುಟ್ಟ ಕವಿಯ ಯೌವನವನ್ನೆಲ್ಲ ಹೀರಿ ಹಿಪ್ಪೆ ಮಾಡುತ್ತಾಳೆ. ಸರಿ, ತನ್ನ ತೃಷೆ ಮುಗಿಯಿತು. ಕವಿಯನ್ನು ತನ್ನ ಬಂಗಲೆಯಿಂದಾಚೆಗೆ ನೂಕುತ್ತಾಳೆ. ಕವಿ ಮೀರ್, ಒಡೆದ ಹೃದಯ ಹೊತ್ತು ದಿಲ್ಲಿಗೆ ಬರುತ್ತಾನೆ.

ಅಲ್ಲಿ ಅವನ ಕಾವ್ಯಕ್ಕೆ ಜನ, ದೊರೆ, ಪಂಡಿತರು ಎಲ್ಲರೂ ಬೆರಗಾಗುತ್ತಾರೆ. ಶುರುವಾಗುತ್ತದೆ ಕನಕ ವೃಷ್ಟಿ. ದಿಲ್ಲಿಯ ಅತ್ಯಂತ ರುಚಿಯಾದ ತಾಂಬೂಲದಿಂದ ಹಿಡಿದು ಅತ್ಯಂತ ಕಿರಿಯ ವಯಸ್ಸಿನ ಬೆಲೆ ವೆಣ್ಣಿನ ತನಕ ಎಲ್ಲವನ್ನೂ ಸವಿಯುತ್ತಾನೆ ಮೀರ್. ಆದರೆ ನಿಜವಾದ ಸಂತಸ ಎಂದೋ ಸತ್ತು ಹೋಗಿದೆ. ಕಮುರುನ್ನೀಸಾಳ ನೆನಪಿನಲ್ಲಿ ಕಾವ್ಯ ಬರೆಯುತ್ತಾನೆ. ಅವಳನ್ನು ಮರೆಯಲು ದಿಲ್ಲಿಯನ್ನು ಪ್ರೀತಿಸುತ್ತಾನೆ.

ಆದರೆ ದಿಲ್ಲಿ, ಅಫಘಾನರ ದಾಳಿಗೆ ತುತ್ತಾಗುತ್ತದೆ. ಊರು ಕಾಡಾಗುತ್ತದೆ. ಕವಿ ಮೀರ್ ದಿಲ್ಲಿಯಿಂದ ಲಖನೌಗೆ ವಲಸೆ ಬರುತ್ತಾನೆ. ತನ್ನದಲ್ಲದ ಊರು, ತನ್ನವರಿಲ್ಲದ ಊರು.... ಅಲ್ಲಿ ಕಾವ್ಯ ಚಿಮ್ಮುವುದಿಲ್ಲ. ಅವನ ವೇದನೆ ಲಖನೌದ ಬೀದಿಗಳಿಗೆ ಅರ್ಥವಾಗುವುದಿಲ್ಲ. ಪ್ರತಿ ಗುಟುಕಿಗೂ ಎದೆ ಸುಡುವ ಶರಾಬನ್ನು ದಿನರಾತ್ರಿ ಸುರಿದುಕೊಳ್ಳುತ್ತ, ನಾಶವಾಗುತ್ತಾನೆ ಮೀರ್. ಅವನ ಕೊನೆಯ ಉದ್ಗಾರ ಇಂತಿದೆ:-

ನನಗಿದ್ದ ಪ್ರೀತಿಗಳೆಂದರೆ ಎರಡು! ಒಂದು ಕಮುರುನ್ನೀಸಾ.... ಮತ್ತೊಂದು ದಿಲ್ಲಿ! ಒಂದು ನನ್ನನ್ನು ತಾಳಿಗೆಡಿಸಿತು.... ಮತ್ತೊಂದು ನನ್ನ ಪಾಲಿಗಿಲ್ಲದಾಯಿತು!

ದಿಲ್ಲಿಯ ಸಾಂಸ್ಕೃತಿಕ ರಾಜಕೀಯ ಹಾಗೂ ಸಾಮಾಜಿಕ ಪತನಗಳ ವಿವರಣೆಯನ್ನು ಕವಿಯೊಬ್ಬನ ದೃಷ್ಟಿಯಿಂದ ದಾಖಲಿಸುತ್ತ ಹೋಗುವ ಖುಷ್ವಂತ್ ಪ್ರತಿಯೊಂದು ಸಾಲಿನಲ್ಲೂ ಶ್ರೇಷ್ಠ ಕವಿಯಾಗಿ ಮೆರೆದಿದ್ದಾರೆ.

ಮುಂದಿನ ಪುಟಗಳಲ್ಲಿ ಮೊಘಲರ ಕೊನೆಯ ದೊರೆ ಜಫರ್, ಸಿಪಾಯಿದಂಗೆ ಹಾಗೂ ಇಂಗ್ಲಿಷರ ಆಡಳಿತಗಳ ವಿವರಣೆಗೆ ಬಳಸಲಾಗುತ್ತವೆ. ಎಷ್ಟೇ ಕ್ರೂರಿಗಳಿರಲಿ ಹುದು ಆದರೆ ಬ್ರಿಟಿಷರು ಭಾರತೀಯರಂತೆ ವಂಚಕರಲ್ಲ, ಹಿಪಾಕ್ರಸಿಗೆ ಬಿದ್ದವರಲ್ಲ ಎಂಬ ತಮ್ಮ ವಾದವನ್ನು ಸಿಂಗ್ ಇಲ್ಲಿ ಮಂಡಿಸುತ್ತಾರೆ. ಇಡೀ ರಾಜ್ಯಕ್ಕೆ ಬೆಂಕಿ ಬಿದ್ದಾಗ ಜಫರ್‌ನಂತಹ ದೊರೆ ಮಾವಿನ ಹಣ್ಣು ತಿನ್ನುತ್ತಾ, ಆ ವಯಸ್ಸಿನಲ್ಲೂ ಮೈಥುನ ಸುಖಕ್ಕಾಗಿ ಔಷಧಿ ಪಡೆಯುತ್ತಾ, ಜೊತೆಯಲ್ಲೆ ದೈವ ಸ್ಮರಣೆಯನ್ನೂ ಮಾಡುತ್ತ ರಾಜ್ಯ ಕಳೆದುಕೊಳ್ಳುವ ಪರಿಯನ್ನು ವಿವರಿಸಲು ಖುಷ್ವಂತರಿಗೆ ಮಾತ್ರ ಸಾಧ್ಯ.

ಇಂಗ್ಲಿಷರ ತಂತ್ರಗಳು, ಭಾರತದ ಒಂದು ಜಾತಿಯನ್ನು ಮತ್ತೊಂದು ಜಾತಿಯ ವಿರುದ್ಧ ಎತ್ತಿ ಕಟ್ಟಿದ ಕುತಂತ್ರಗಳು, ಅವರ [illegible]-ಸಾಹಸ, ಪ್ರಾಮಾಣಿಕತೆ ಇತ್ಯಾದಿಗಳನ್ನು ವಿವರಿಸುತ್ತಲೇ ಸಿಂಗ್, ವೈಸ್‌ರಾಯ್‌ಗಳ ಆಡಳಿತ ಕಾಲಕ್ಕೆ ನಮ್ಮನ್ನು ಕರೆದೊಯ್ಯುತ್ತಾರೆ. ಇಂಗ್ಲಿಷರಂಥಾ ಇಂಗ್ಲಿಷರನ್ನೇ ಲಂಚಕೋರರನ್ನಾಗಿ ಮಾಡಿ ತಮ್ಮ ಬೇಳೆ ಬೇಯಿಸಿಕೊಂಡ ಸಿಖ್ ಕಂಟ್ರಾಕ್ಟರುಗಳ ಬಣ್ಣ ಬಯಲು ಮಾಡುತ್ತಾರೆ.

ಕಡೆಗೆ ಭಾರತಕ್ಕೆ ಸ್ವಾತಂತ್ರ್ಯ ಬಂದು, ದೇಶ ಇಬ್ಭಾಗವಾಗಿ, ಹಿಂದೂ-ಮುಸ್ಲಿಂ ದಂಗೆಗಳು ನಡೆದ ಕಾಲದ ವರ್ಣನೆ ನೀಡುತ್ತ ಸಿಂಗ್ ತಮ್ಮ ಕಳೆದ ನೆನಪುಗಳ ಪುಟಕ್ಕೆ ಕೈಯಿಡುತ್ತಾರೆ. ಅವರ Train to Pakistan ಕೃತಿ ಮತ್ತೆ ಇಲ್ಲಿನ ಪುಟಗಳಿಗೆ ಹರಿದು ಬರುತ್ತದೆ. ಪಾಕಿಸ್ತಾನದಿಂದ ಗುಳೇ ಎದ್ದು ಬರುವ ಹಿಂದೂ ಹುಡುಗ ರಾಮ್ ರಖಾ, ಹೊಟ್ಟೆ ಪಾಡಿಗಾಗಿ ರಾಷ್ಟ್ರೀಯ ಸ್ವಯಂ

... ಬಾಪುವಿನ ಉಪವಾಸ, ಸತ್ಯಾಗ್ರಹ, ಹಿಂದೂ-ಮುಸ್ಲಿಂ ಮೈತ್ರಿ ಯತ್ನ ಇತ್ಯಾದಿಗಳನ್ನು ಗೇಲಿ ಮಾಡಿದ್ದು, ಕಡೆಗೆ ಬಾಪುವಿನ ಕೊಲೆ ಕಂಡು ಎದೆ ಎದೆ ಬಡಿದುಕೊಂಡು ಅತ್ತದ್ದು... ಇದೆಲ್ಲ ವಿವರಣೆಯಲ್ಲಿ ಸಿಂಗ್ ಅಪ್ಪಟ ಚಿತ್ರಕಾರನಂತೆ ಮೆರೆಯುತ್ತಾರೆ. ಕೊನೆ ಕೊನೆಯ ಪುಟಗಳಂತೂ ಓದುಗನ ಕಣ್ಣುಗಳಿಗೆ ಉಪ್ಪು ತುಂಬುತ್ತವೆ.

ಆದರೆ ಎದೆಗೆ ಬೆಂಕಿ ಹತ್ತಿಸಿಕೊಂಡು ಬರೆಯಲಾದ ಅಧ್ಯಾಯವೆಂದರೆ ಇಂದಿರಾ ಗಾಂಧಿಯ ಹತ್ಯೆಯ ನಂತರ ನಡೆದ ದಿಲ್ಲಿಯ ಸಿಖ್ ನರಮೇಧಕ್ಕೆ ಸಂಬಂಧಿಸಿದುದು. ಅಲ್ಲಿ ಖುಷ್ವಂತ್ ಒಮ್ಮೆ ಪ್ರಾಮಾಣಿಕ ಸಿಖ್ಖನಾಗಿ, ಕವಿಯಾಗಿ, ಪತ್ರಕರ್ತನಾಗಿ, ನಿಸ್ಸಹಾಯಕ ಮುದುಕನಾಗಿ, ದೇಶಭಕ್ತನಾಗಿ ಕಂಗೊಳಿಸುತ್ತಾರೆ. ಅಷ್ಟಾದರೂ ಸಿಂಗ್ ಸಿನಿಕರಾಗುವುದಿಲ್ಲ. ತಮ್ಮ ನಂಬುಗೆಯ ಬಂಟ ಬುಧಸಿಂಗನನ್ನು ಹಿಂದೂ ಗೂಂಡಾಗಳು ಬೆಂಕಿ ಹಚ್ಚಿ ಕೊಂದಾಗ ನಿಂತಲ್ಲೇ ಉಚ್ಚೆ ಹುಯ್ದುಕೊಂಡು ಕುಸಿದು ಬೀಳುವ ಖುಷ್ವಂತರನ್ನು ಸಂತೈಸಲು ಅವರಿಗಿರುವ ಏಕೈಕ ಗೆಳತಿಯೆಂದರೆ ಭಾಗಮತಿ! ಅವಳು ಈಗ ಮುದುಕಿಯಾಗಿದ್ದಾಳೆ. ಯೌವನದ ಉನ್ಮಾದವೆಲ್ಲ ಇಳಿದು ಹೋಗಿದೆ. ಅಂತೆಯೇ ಪ್ರೇಯಸಿಯ ಸ್ಥಾನದಿಂದ ತಾಯಿಯ ಸ್ಥಾನಕ್ಕೆ ಸರಿಯುತ್ತಾಳೆ. ಅಸಹಾಯಕರಾದ ಖುಷ್ವಂತರನ್ನು ರಕ್ಷಿಸುವವಳಂತೆ ಒಡಲಿಗೆಳೆದುಕೊಂಡು ಚುಕ್ಕು ತಟ್ಟುತ್ತಾಳೆ. ಏಕೆಂದರೆ ಭಾಗಮತಿ ಕೇವಲ ಒಂದು ಪಾತ್ರವಲ್ಲ...ಒಂದು ವ್ಯಕ್ತಿತ್ವವಲ್ಲ. ಅದು ದಿಲ್ಲಿಯ ಪ್ರತಿರೂಪ! ಸಿಖ್ಖರ ಎಲ್ಲ ನೋವಿಗೂ ಅವಳಕೆಯ ಮಡಿಲು ನೀಡಿದ ವೃದ್ಧ ಗೆಳತಿ.

ಇದಿಷ್ಟೇ "ದಿಲ್ಲಿ" ಕಾದಂಬರಿಯ ಸುದ್ದಿಯಾಯಿತು. ಖುಷ್ವಂತ ಸಿಂಗರನ್ನು ಪರಿಚಯಿಸುವ ಯತ್ನ ಹಾಸ್ಯಾಸ್ಪದವಾದೀತು. ಈ ತನಕ ಬಂದ ನೂರಾರು ಇತಿಹಾಸದ ಪುಸ್ತಕಗಳೂ, ದಿಲ್ಲಿಯ ಪರಿಚಯಗಳೂ ಹೇಳ ಹೆಸರಿಲ್ಲದೆ ನೇಪಥ್ಯಕ್ಕೆ ಸರಿದಿವೆ. ಖುಷ್ವಂತರ 'ದಿಲ್ಲಿ' ಇತಿಹಾಸದ ಅತಿಸ್ಪಷ್ಟ 'ಛಾಯೆ'ಯಾಗಿ ಬೆಳೆದು ನಿಂತಿದೆ. ಸಾಕಲ್ಲವೆ ಒಂದು ಕೃತಿಗೆ ಇಷ್ಟು ಮಾತ್ರದ ಸಾರ್ಥಕತೆ? ★

ಗಡ್ಡದ ಕುರಿತು

ಗಡ್ಡಕ್ಕೆ ಅತಿ ಪ್ರಾಚೀನ ಇತಿಹಾಸವಿದೆ. ಗಡ್ಡ ಬಿಡುವ ಚಟ ಪ್ರತಿ ಯುಗದಲ್ಲೂ ಇತ್ತು. ಎಲ್ಲಾ ಯುಗಗಳಲ್ಲೂ ಋಷಿ ಮುನಿಗಳು ನೂರಕ್ಕೆ ನೂರು ಗಡ್ಡ ಬಿಡುತ್ತಿದ್ದರು. ಹಾಗೂ ಸಾಮಾನ್ಯ ಗಂಡಸರು ನೂರರಲ್ಲಿ ಎಂಭತ್ತು ಜನ ಗಡ್ಡ ಬಿಡುತ್ತಿದ್ದರು.

ಈ ಗಡ್ಡವನ್ನು ಬೋಳಿಸಿ ಬಿಸಾಕಿದ ನಿಜವಾದ ದಿನ ಇತಿಹಾಸಕ್ಕೆ ಗೊತ್ತಿಲ್ಲ. ಆದರೆ ಪುರಾತತ್ವ ವಿಶೇಷಜ್ಞರ ಹಾಗು ಇತಿಹಾಸಕಾರರ ಪ್ರಕಾರ ಇದರ ಪ್ರಾರಂಭ ಸುಮಾರು ಐದು ಸಾವಿರ ವರ್ಷಗಳ ಹಿಂದೆ ಆಯಿತು.

ಒಬ್ಬ ಸಾಮಾನ್ಯ ಗಂಡಸು ಪ್ರತಿದಿನ ಅವನ ಗಡ್ಡದ 25,000 ಕೂದಲನ್ನು ಬೋಳಿಸುತ್ತಾನೆ. ಒಂದೊಂದು ಗಡ್ಡದ ಕೂದಲು 24 ಗಂಟೆಗಳಲ್ಲಿ ಒಂದು ಇಂಚಿನಲ್ಲಿ ನೂರನೇ ಒಂದು ಭಾಗದಷ್ಟು ಬೆಳೆಯುತ್ತೆ. ಈ ತರಹ ಪ್ರತಿದಿನ 250 ಇಂಚಿನ ಗಡ್ಡದ ಕೂದಲನ್ನು ಬೋಳಿಸಬೇಕಾಗುತ್ತೆ. ಅಂದರೆ ಜೀವನದ 3,500 ಗಂಟೆಗಳು ಅಂದರೆ 150 ದಿನ ಗಡ್ಡ ಬೋಳಿಸುವುದರಲ್ಲಿ ವ್ಯಯವಾಗುತ್ತೆ.

ಭಾರತದಲ್ಲಿ ಪ್ರತಿವರ್ಷ ಸುಮಾರು 125 ಕೋಟಿ ಬ್ಲೇಡ್‌ಗಳು ತಯಾರಾಗುತ್ತವೆ ಆದರೆ ಜನಸಂಖ್ಯೆಯ ಲೆಕ್ಕದ ಪ್ರಕಾರ ಪ್ರತಿ ವ್ಯಕ್ತಿಗೆ ಒಂದು ವರ್ಷದಲ್ಲಿ ಕೇವಲ ಎರಡು ಬ್ಲೇಡ್ ದೊರೆಯುತ್ತವೆ. ●

ಟೇಕಲ್ ಗೋಪಾಲಕೃಷ್ಣ

- 147 -

ನೆಲಬಿಟ್ಟು ಏಳಬಲ್ಲ ಗಾಳಿಪಟ

“ನಾತೆ” ಎಂಬ ಶಬ್ದವೊಂದು ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿದೆ. ಈಚೆಗೆ ಅದರ ಉಪಯೋಗ ಸ್ವಲ್ಪ ಕಡಿಮೆಯಾಗಿದ್ದರೂ ಮೊನ್ನೆ ನರಗುಂದದ ಜಿಲ್ಲಾ ಸಮ್ಮೇಳನಾಧ್ಯಕ್ಷತೆ ವಹಿಸಿದ್ದ ಶ್ರೀ ಎನ್ಕೆಯವರ ಭಾಷಣದಲ್ಲಿ ಅದು ತಲೆ ಹಾಕದೆ ಇರಲಿಲ್ಲ. “ಹಿರಿಯನ ನಾತೇದಲ್ಲಿ” ಎಂದು ಅವರು ಕೆಲ ಸಲಹೆಗಳನ್ನು ಕೊಟ್ಟರು. ಈ ಶಬ್ದ ಸಹಜವಾಗಿ ಮರಾಠಿಯಿಂದ ನಮಗೆ ಬಂದದ್ದೆಂಬುದು ಎನ್ಕೆಯವರ ಪ್ರಯೋಗದಿಂದಲೇ ತರ್ಕಿಸಬರುವಂತಿದೆ. ಮರಾಠಿಯಲ್ಲಿ “ನಾತೇಂ” ಎಂದರೆ (ರಕ್ತ) ಸಂಬಂಧ; “ನಾತೇದಾರ್”-ಸಂಬಂಧಿಕ; “ನಾತೂ” ಎಂದರೆ ಮೊಮ್ಮಗ. ಹಿಂದಿಯಲ್ಲಿ ಕೂಡ “ನಾತಾ” ರಕ್ತ ಸಂಬಂಧ, “ನಾತೀ”, “ನಾತಿನ್” ಎಂದರೆ ಕ್ರಮವಾಗಿ ಮಗಳ ಮಗ, ಮೊಮ್ಮಗಳು. ಬಂಗಾಲಿಯಲ್ಲಿ ಕೂಡ “ನಾತೀ” ಮೊಮ್ಮಗ

ಈ ಶಬ್ದವನ್ನು ಎತ್ತಿಕೊಳ್ಳಲು ಕಾರಣ ಅದರ ಪುರಾತನ 'ನಾತೆಯೇ'. ಇದಕ್ಕೆ ಮೂಲವಾದ ಸಂಸ್ಕೃತದ “ನಪ್ತಾ”, “ನಪಾತ್” ಪದಗಳು ಋಗ್ವೇದವಷ್ಟು ಹಿಂದೆ ಹೋಗುತ್ತವೆ. ಮಾತ್ರವಲ್ಲ, ಭಾರೋಪ್ಯ ಭಾಷಾ ಕುಲದಲ್ಲಿ ಹಳೆಯ ಫಾರಸೀಕ (ನಪಾತ್), (ಆಧುನಿಕ ಪಾರಸೀಕದಲ್ಲಿ 'ನವಾಸಃ), ಲ್ಯಾಟಿನ್ (nepot) ಇತ್ಯಾದಿ ಭಾಷೆಗಳಲ್ಲಿ ಅಲ್ಲದೆ ಪ್ರಾಚೀನ ಅವೆಸ್ತನ್, ಗ್ರೀಕ್, ಆಂಗ್ಲೋ ಸ್ಯಾಕ್ಸನ್, ಜರ್ಮನ್ ಮೊದಲಾದವುಗಳಲ್ಲಿ ಕೂಡ ಇದರಿಂದ ಜನಿಸಿದ ಪದಗಳುಂಟು. ಮಕ್ಕಳು, ಸೋದರಳಿಯಂದಿರು, ಮೊಮ್ಮಕ್ಕಳಾದಿಯಾಗಿ ರಕ್ತ ಸಂಬಂಧಿ ವಂಶೋದ್ಭೂತರನ್ನು ಅದು ಒಳಗೊಳ್ಳುತ್ತದೆ. ಇಂಗ್ಲೀಷಿನ nephew (ಸೋದರಳಿಯ ಅಥವಾ ಅಣ್ಣ-ತಮ್ಮಂದಿರ ಮಕ್ಕಳು) ಇದರ ಪರಿಧಿಯಲ್ಲಿ ಸೇರಿದ್ದಾರೆ. ಹೀಗೆ ಅದು ಆರ್ಯ ಪ್ರಪಂಚದ ಪ್ರಾಚೀನತಮ ಸಂಬಂಧ ವಾಚಕಗಳಲ್ಲೊಂದಾಗಿದೆ.

ಈ ಪದದ ಯೌರೋಪ್ಯ ಶಾಖೆ ಆಧುನಿಕ ರಾಜಕೀಯಕ್ಕೆ nepotism ಎಂಬ ಪದವನ್ನು ಪ್ರದಾನ ಮಾಡಿದ್ದು ಕುತೂಹಲದಾಯಕ ವಿಷಯ. ತಮ್ಮ ಬಂಧುಬಾಂಧವರಿಗೆ ನೌಕರಿ, ಅಧಿಕಾರ ಮೊದಲಾದವುಗಳನ್ನು ಕೊಡುವ ಪ್ರವೃತ್ತಿ “ನೆಪಾಟಿಸಂ”. ಹೀಗೆ, ಅದು ಸರಿಯಾಗಿ ಇಂಗ್ಲೀಷ್ ಬಾರದವರೂ “ಕೇಳಬಲ್ಲ” ಎನ್ನಬಹುದಾದ ಶಬ್ದ. ಅದರ ಕತೆಯೂ ಸ್ವಾರಸ್ಯ. ಕ್ರೈಸ್ತ ಧರ್ಮದ ಪರಮೋಚ್ಚ ಪುರೋಹಿತರಾದ ಪೋಪರು ಈಗಿನಷ್ಟು ಶುದ್ಧ ಚರಿತ್ರರಾಗಿಲ್ಲದಿದ್ದ ಮಧ್ಯಯುಗದಲ್ಲಿ ಅವರು ತಮಗೆ ಹುಟ್ಟಿದ ಅವೈಧ ಪುತ್ರರಿಗೆ ಪದಾಧಿಕಾರಗಳನ್ನು ದಯಪಾಲಿಸುತ್ತಿದ್ದರು. ಸೌಜನ್ಯದ ಸಲುವಾಗಿ ಇಂಥ ಮಕ್ಕಳಿಗೆ “ನಪ್ತರು” nephews ಎನ್ನುತ್ತಿದ್ದರಂತೆ. ಹೀಗಾಗಿ ಈ ಪ್ರವೃತ್ತಿಗೆ nepotism ಎಂಬ ಹೆಸರು ಬಿತ್ತು. ಹೀಗೆ nepotism ಸುಮಾರು ಐನೂರು ವರ್ಷಗಳ ಚರಿತ್ರೆಗೆ ಭಾಗಿಯಾಗಿದೆ! ಈಗಿನ ಕಲಿಯುಗದವರು ಅದನ್ನು ಆಚರಿಸಿದರೇನು ಪಾಪ!

★

ಸಂಸ್ಕೃತದಲ್ಲಿ ಉತ್ತ ಗದ್ದೆಗೆ “ಕೇದಾರ” ಎಂಬ ಹೆಸರಿದೆ. ಮನು, ಮಹಾಭಾರತಗಳಲ್ಲಿ ಈ ಪದ ಪ್ರಯೋಗವಾಗಿರುವುದರಿಂದ ಸಾಕಷ್ಟು ಹಳೆಯದು. ಆದರೆ ಮೋನಿಯರ್ ವಿಲಿಯಮ್ಸ್ ಕೋಶ ಇದಕ್ಕೆ ನಿಷ್ಪತ್ತಿ ಕೊಡುವುದಿಲ್ಲ. ಇದು ಹೇಗೆ ಹುಟ್ಟಿರಬಹುದು? ಕನ್ನಡದಲ್ಲಿ (ಭತ್ತದ) ಗದ್ದೆಗೆ “ಕೆಯ್” ಎಂಬ ಶಬ್ದ ಇತ್ತು. ಈಗ ಇದು ಹೆಚ್ಚು ಬಳಕೆಯಲ್ಲಿ ಇಲ್ಲವಾದರೂ ತುಳುವಿನಲ್ಲಿ ಬೆಳೆದು ನಿಂತ ಭತ್ತದ ಪೈರಿಗೆ ಆ ಹೆಸರಿದೆ. ತಮಿಳು ಆದಿಯಾಗಿ ಅನೇಕ ದಕ್ಷಿಣೋತ್ತರ ದ್ರಾವಿಡ ಭಾಷೆಗಳಲ್ಲಿ

ಇದಕ್ಕೆ ಸಂವಾದಿ ಪದಗಳಿವೆ. ಅತ್ತ ಸಂಸ್ಕೃತದಲ್ಲಿ ''ದಾರ'' ಎಂಬ ಪದ ಕೂಡ ಉತ್ತ ಗದ್ದೆ ಎಂಬರ್ಥ ಕೊಡುತ್ತದೆಂದು ಆಪಟೆ ಸಂಸ್ಕೃತ-ಇಂಗ್ಲೀಷ್ ಕೋಶ ಹೇಳುತ್ತದೆ. ನಮ್ಮ ನೆರೆಯ ಪಾರಸೀಕ ಭಾಷೆಯಲ್ಲಿ ''ಜಾರ್'' ಎಂದರೆ ಕೃಷಿ ಮಾಡಿದ ಭೂಮಿ, ತೋಟ, ಮೈದಾನ. (ಉದಾ: ಗುಲ್‌ಜಾರ್ ಎಂದರೆ ಹೂದೋಟ). ನನಗನಿಸುವುದೆಂದರೆ, ಕೇದಾ ಎಂಬುದು ಒಂದೇ ಅರ್ಥದ ದ್ರಾವಿಡ ''ಕೆಯ್'' ಮತ್ತು ಸಂಸ್ಕೃತ ''ದಾರ'' ಸೇರಿದ ದ್ವಂದ್ವ ಪದ ಇರಬೇಕು. ಇಂಥ ಜೋಡಿ ಪದಗಳು ಭಾಷೆಗಳಲ್ಲಿ ಸಾಮಾನ್ಯ. ಕಿಟ್ಟೆಲ್ ದ್ರಾವಿಡ ಜನ್ಯ ಸಂಸ್ಕೃತ ಪದಗಳೆಂದು ಕೊಟ್ಟ ಪಟ್ಟಿಯಲ್ಲಿ ಈ ಶಬ್ದ ಸೇರಿಲ್ಲವೆಂದು ನಾ ಬಲ್ಲೆ. ಇದೊಂದು ಗಾಳಿ ಪಟ ಮಾತ್ರ; ಆದರೆ ನೆಲ ಬಿಟ್ಟು ಏಳಬಲ್ಲ ಗಾಳಿಪಟ.

★

ಸಂಗೀತ ವಾದ್ಯಗಳು ಅನಾದಿ ಕಾಲದಿಂದಲೂ ದೇಶದಿಂದ ದೇಶಕ್ಕೆ ವಲಸೆ ಹೋಗಿವೆ. ನಮ್ಮದೇ ನೆನಪಿನೊಳಗಿನ ಕಾಲದಲ್ಲಿ ಪಾಶ್ಚಾತ್ಯ ''ಗಿತಾರ್'' (guitar) ನಮ್ಮ ತರುಣರಲ್ಲಿ ಜನಪ್ರಿಯವಾಗುತ್ತಿದೆ. 19ನೇ ಶತಮಾನದ ಆದಿಯಲ್ಲಿ ಬಾಲು ಸ್ವಾಮಿ ದೀಕ್ಷಿತರು ಪಾಶ್ಚಾತ್ಯ ಪಿಟೀಲನ್ನು ಕರ್ನಾಟಕ ಸಂಗೀತಕ್ಕೆ ಪಳಗಿಸಿದರು. ಈಗ ಗಿತಾರಿನ ಮಾತು ಬಂದಾಗ ನಮ್ಮದೇ ''ಸಿತಾರ್'' ಎಲ್ಲಿಂದ ಬಂತು? ಎಂಬ ಪ್ರಶ್ನೆ ತಲೆ ಕೊರೆಯತೊಡಗಿತು. ಹಾಗೆಯೆ ಗಿತಾರಿಗೂ ಸಿತಾರಿಗೂ ಏನಾದರೂ ಸಂಬಂಧ ವುಂಟೆ? ಎಂಬ ಪೃಚ್ಛೆ ಕೂಡ ಎದ್ದಿತು. ಸಂಗೀತವಾದ್ಯದ ಇತಿಹಾಸಜ್ಞರ ಪ್ರಕಾರ ಸಿತಾರಿನ ಪೂರ್ವ ರೂಪ ಮಧ್ಯ ಏಶಿಯದಲ್ಲಿ ತಲೆದೋರಿರಬೇಕು. ಕಾಶ್ಮೀರದಲ್ಲಿ ಅದನ್ನು ಹೋಲುವ ಸೆಯ್‌ತಾರ್ (Saitar) ಇಂದಿಗೂ ಜನಪದ ಸಂಗೀತದಲ್ಲಿ ಬಳಕೆಯಾಗುತ್ತಿದೆಯಂತೆ. ಆದರೆ ಸಿತಾರ್ ಇಂದಿನ ರೂಪಕ್ಕೆ ಬಂದದ್ದು ಅಕಬರನ ಕಾಲದಲ್ಲಿ, ಕವಿ ಅಮೀರ್ ಖುಸ್ರುವಿನ ಕೈಯಲ್ಲಿ, 16ನೇ ಶತಮಾನದಲ್ಲಿ. ಹೆಸರು ಪಾರಸೀಕ - ''ಸೆಹ್-ತಾರ್'' ಈ ಪದಕ್ಕೆ ಮೂರು ತಂತಿ ಎಂದರ್ಥವೆಂದು ಕೆಲವರೂ, ಏಳು ತಂತಿಯೆಂದು ಕೆಲವರೂ ವ್ಯುತ್ಪತ್ತಿ ಹೇಳುತ್ತಾರೆ. ಮೂಲತಃ ಮೂರೇ ತಂತಿಯಿದ್ದ ಈ ವಾದ್ಯ ಕಡೆಗೆ ಏಳು ತಂತಿಗಳನ್ನು ಪಡೆಯಿತು. ಪದ ಪಾರಸೀಕವಾದರೂ ವಾದ್ಯ ರೂಪುಗೊಂಡದ್ದು ಭಾರತದಲ್ಲಿ. (ಮುಸ್ಲಿಂ ಅರಸುಗಳು ಪಾರಸೀಕವನ್ನೇ ಅಧಿಕೃತ ಭಾಷೆಯಾಗಿ ಉಪಯೋಗಿಸಿದರು). ಆದರೆ ಗಿತಾರ್ ಆದರೋ ಗ್ರೀಕ್ Kithara ಶಬ್ದದಿಂದ ಹೊರಟು ಅರಬರ ಮೂಲಕ ಸ್ಪೇನಿಗೆ ಬಂದು ಅಲ್ಲಿ guitara ಎನಿಸಿ, ಫ್ರೆಂಚ ಮೂಲಕ ಇಂಗ್ಲೀಷಿಗೆ 17ನೇ ಶತಮಾನದಲ್ಲಿ ಬಂತು. ಹೀಗೆ ಗಿತಾರ್, ಸಿತಾರ್ ಶಬ್ದಗಳ ಹೋಲಿಕೆ ಮೇಲು ನೋಟದ್ದು ಮಾತ್ರ.

ಇಂದು ಭಾರತದಲ್ಲಿ ''ಪಿಟೀಲು'' ಅಥವಾ ''ವಯೋಲಿನ್'' ದಕ್ಷಿಣೋತ್ತರ ಎರಡೂ ಸಂಗೀತ ಪದ್ಧತಿಗಳಲ್ಲಿ ಬೇರೂರಿದೆ. ಅದರ ಮೂಲ ಕಲ್ಪನೆ ಭಾರತೀಯವೇ. ''ರಾವಣ ಹಸ್ತ ವೀಣಾ'' ಎಂಬ ಪ್ರಾಚೀನ ಭಾರತೀಯ ತಂತ್ರೀವಾದ್ಯದ ಒಂದು ರೂಪಾಂತರ ಇದು; ಇರಾಣ, ಅರೇಬಿಯಗಳ ಮೂಲಕ ಪಾಶ್ಚಾತ್ಯ ದೇಶಗಳನ್ನು ಅದು ತಲುಪಿತೆಂದೂ ಅರೇಬಿಯದಲ್ಲಿ ಅದೇ ''ರಬಾಬ್'' ಎನಿಸಿದ್ದೆಂದೂ ಹೇಳಲಾಗಿದೆ. ಆದರೆ ''ವಾಯೊಲಿನ್'' ಎಂಬುದು ಭಾರತೀಯ ಶಬ್ದವಲ್ಲ. ಇದೇ ವರ್ಗದ ''ವಯೋಲಾ''ದ ಸಂಕ್ಷಿಪ್ತ ರೂಪ ಇದೆಂದೂ ಆ ಶಬ್ದಕ್ಕೆ ಮೂಲತಃ ಲ್ಯಾಟಿನ್ನಿನ Vitulari ಆನಂದಿಸು ಎಂಬ ಧಾತುವೇ ಆಧಾರವಿರಬೇಕೆಂದೂ ಶಬ್ದ ಶಾಸ್ತ್ರಜ್ಞರ ನಂಬಿಕೆ. ಬಲು ಸುಂದರ. ''ಫಿಡ್ಲ್'' (fiddle-ಪಿಟೀಲು) ಎಂಬ ವಾಯೋಲಿನ್ನಿನ ಇನ್ನೊಂದು ಹೆಸರಿಗೆ ಈಗ ನೀಚಾರ್ಥ ಗಂಟು ಬಿದ್ದಿದೆ. ಆದರೆ ಆ ಶಬ್ದವೂ ಮೂಲತಃ vitulaದ್ದೇ ಅಪಭ್ರಂಶ. ಅದರ ಪ್ರಯಾಣ ಮಾತ್ರ ಜರ್ಮಾನಿಕ್ ಭಾಷೆಗಳ ಮೂಲಕ ಆಗಿದ್ದು, ಲಾಟಿನ್ನಿನ V ಅಲ್ಲಿ f ಆದದ್ದಷ್ಟೇ ಈ ರೂಪಭೇದಕ್ಕೆ ಕಾರಣ. ''ಭೋಜ(ನ)'' ಎಂಬ ಪದ ತುಳುವಿನಲ್ಲಿ ''ಬೊಜ್ಜ'' ಆದಾಗ ಅದಕ್ಕೆ ಕೀಳು ಅರ್ಥ ಬಂದ ಹಾಗೆ. ಬೊಜ್ಜ ಎಂದರೆ ಉತ್ತರ ಕ್ರಿಯೆಯ ಊಟ!

– ಪಾವೆಂ.

ನಿಮ್ಮ ಕಣ್ಣಿನ ಪೊರೆಯ ವಿಚಾರವಾಗಿ ಅರಿಯಿರಿ

ಡಾ| ಎಸ್.ಜಿ.ನಾಡಗೌಡ

ಮಾನವನ ಕಣ್ಣು ಬಾಹ್ಯವಸ್ತುಗಳನ್ನು ಸ್ಫುಟವಾಗಿ ನೋಡಬೇಕಾದರೆ, ಅದಕ್ಕೆ ದೃಷ್ಟಿಯನ್ನು ಕೇಂದ್ರೀಕರಿಸುವ ಶಕ್ತಿ (Focussing Mechanism) ಬೇಕು. ಈ ಶಕ್ತಿ ಇರಬೇಕಾದರೆ ಅದಕ್ಕೆ ಆರೋಗ್ಯಕರವಾದ ಅಕ್ಷಿಪಟ (Retina) ಇರಬೇಕು (ಕಣ್ಣುಗುಡ್ಡೆಯ ಹಿಂಭಾಗದಲ್ಲಿರುವ ಪ್ರಕಾಶಗ್ರಾಹಿಯಾದ ಪೊರೆ). ಈ ಅಕ್ಷಿಪಟ ಅಥವಾ ರೆಟೀನಾ, ವಸ್ತುವಿನ ಪ್ರತಿಬಿಂಬವನ್ನು ಗ್ರಹಿಸಿ ಅದರ ವಿಚಾರವನ್ನು ಮೆದುಳಿಗೆ ಕಳುಹಿಸುವುದು. ಆದುದರಿಂದ ಮೆದುಳಿನೊಡನೆ, ದೃಷ್ಟಿನರದ ಮೂಲಕ ಇದರ ಸಂಬಂಧ, ಯಾವ ವಿಧವಾದ ಕುಂದೂ ಇಲ್ಲದಂತಿರಬೇಕು. ಯಾವಾಗ ಕಣ್ಣಿಗೆ ಈ ಕೇಂದ್ರೀಕರಿಸುವ (Focussing Mechanism) ರಚನೆ ಅಥವಾ ಶಕ್ತಿ ದುರ್ಬಲವಾಗಿರುವುದೋ, ಆಗ ಅದಕ್ಕೆ ''ದೂರದ ನೋಟ (long sight)'' ಎಂದು ಕರೆಯುತ್ತಾರೆ. ಅಂಥವರಿಗೆ ಅಕ್ಷಿಪಟದ ಮೇಲೆ, ಬಿಂಬವು ಸ್ಫುಟವಾಗಿ ಬೀಳುವಂತೆ ಮಾಡಲು, ಮತ್ತೊಂದು ಹೊರಉಬ್ಬಿದ ಲೆನ್ಸ್ (convex lens) ಅಥವಾ ಗಾಜಿನ ಸಹಾಯ ಅಗತ್ಯವಿದೆ. ಯಾರಿಗೆ ಈ ಕೇಂದ್ರೀಕರಿಸುವ ಶಕ್ತಿ ಅಥವಾ ರಚನೆ ನಿಯಮಿತಕ್ಕಿಂತಲೂ ಹೆಚ್ಚಿಗೆ ಇರುವುದೊ, ಅಂಥವರಿಗೆ ''ಸಮೀಪದ ನೋಟದವರು (short- sighted)'' ಎಂದೆನ್ನುತ್ತಾರೆ. ಅಂಥವರಿಗೆ ಅಕ್ಷಿಪಟದ ಮೇಲೆ ಬಿಂಬವು ಸ್ಫುಟವಾಗಿ ಬೀಳಬೇಕಾದರೆ, ಒಳಬಾಗಿರುವ ಗಾಜಿನ (Concave lens) ಅಥವಾ ಲೆನ್ಸ್‌ನ ಅಗತ್ಯ ಇದೆ. ಮನುಷ್ಯನು 40 ವರ್ಷಗಳ ಗಡಿಯನ್ನು ಮುಟ್ಟಿದಾಗ, ಅವನಲ್ಲಿ ಲೆನ್ಸ್‌ನ ಆಕಾರವನ್ನು ಬದಲಾಯಿಸುವ ಮಾಂಸಖಂಡಗಳು ದುರ್ಬಲಗೊಳ್ಳುತ್ತವೆ. ಮತ್ತು ಅವು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸಲಾರವು. ಆಗ ಓದಲು ಅನುಕೂಲವಾಗಲು, ಚಾಳೀಸನ್ನು ಸರಿಪಡಿಸಿಕೊಳ್ಳಬೇಕಾದ ಅಗತ್ಯ ಬೀಳುತ್ತದೆ (Presbyopic correction).



ದೃಷ್ಟಿಯನ್ನು ಕೇಂದ್ರೀಕರಿಸುವ ರಚನೆಯಲ್ಲಿ (Focusssing Mechanism) ಎರಡು ಮುಖ್ಯವಾದ ಭಾಗಗಳಿವೆ. (1) ಕಣ್ಣಿನ ಮುಂಭಾಗದ

ಸ್ಪಷ್ಟವಾದ ಪಾರದರ್ಶಕ ಪಟಲ (Cornea) (2) ಕಣ್ಣಿನ ಒಳಭಾಗದಲ್ಲಿರುವ ಲೆನ್ಸ್. ಈ ಲೆನ್ಸ್‌ಗೆ ದೂರದ ತಾರತಮ್ಯಗಳಿಗೆ ದೃಷ್ಟಿಯನ್ನು ಹೊಂದಾಣಿಸುವ ಶಕ್ತಿ ಇದೆ. ವಯಸ್ಸಾದಂತೆಲ್ಲಾ ಮನುಷ್ಯನ ಲೆನ್ಸ್ ಮಂದವಾಗುತ್ತಾ ಬಂದು ಕಡೆಗೆ ಹೆಚ್ಚು ಸಾಂದ್ರತೆ ಮತ್ತು ಅಸ್ಪಷ್ಟತೆ (ಮಸಕು) ಯನ್ನು ಹೊಂದುತ್ತದೆ. ಕೆಲವು ವೇಳೆ ಲೆನ್ಸ್‌ಗೆ ಗಾಯವಾದರೆ ಅಥವಾ ಮಧುಮೂತ್ರ ವ್ಯಾಧಿ (Diabetes) ಯ ಕಾರಣದಿಂದಾಗಿಯೋ ಮತ್ತೆ ಕೆಲವು ವೇಳೆ ವಂಶಗತವಾಗಿ ಬಂದ ದುರ್ಬಲತೆಗಳಿಂದಲೋ, ಈ ಲೆನ್ಸ್ ಇನ್ನೂ ಮುಂಚೆಯೇ ಮೊಬ್ಬನ್ನು ಪಡೆಯುತ್ತದೆ. ಬೆಳಕು ಅಕ್ಷಿಪಟದ ಮೇಲೆ ಬೀಳದಂತೆ ತಡೆಯುವ ಈ ಮೊಬ್ಬಾದ ಲೆನ್ಸ್‌ಗೆ (Lens) ''ಕಣ್ಣಿನ ಪೊರೆ'' (Cataract) ಎಂದು ಕರೆಯುತ್ತಾರೆ.

ಈ ಕಣ್ಣಿನ ಪೊರೆ ಮಕ್ಕಳಲ್ಲಿ ಅಥವಾ ಆಗ ತಾನೇ ಜನಿಸಿದ ಶಿಶುವಿನಲ್ಲಿ ಕಾಣಿಸಿಕೊಂಡರೆ ಅದಕ್ಕೆ ಹುಟ್ಟಿನಿಂದ ಬಂದ ಪೊರೆ (Congenital cataract) ಎಂದು ಹೇಳುತ್ತಾರೆ. ಈ ತರಹ ಪೊರೆ ತಾಯಿಯ ಗರ್ಭದಲ್ಲಿರುವಾಗಲೇ ಆದ ಜಾಡ್ಯದಿಂದಲೋ ಅಥವಾ ಮತ್ಯಾವ ಕಾರಣದಿಂದಲೋ ಮಗುವಿನ ಕಣ್ಣಿನ ಲೆನ್ಸ್‌ಗೆ (lens) ಒದಗಿದ ಹಾನಿಯಿಂದ ಬರುತ್ತದೆ. ಆದ್ದರಿಂದ ಈ ಕಣ್ಣಿನ ಪೊರೆ (cataract) ಯಾವಾಗ ಬರುವುದು ಎಂದು ನಿರ್ಧಾರವಾಗಿ ಹೇಳುವುದಕ್ಕಾಗುವುದಿಲ್ಲ. ಜನಿಸಿದಂದಿನಿಂದ ಹಿಡಿದು ವೃದ್ಧಾಪ್ಯದವರೆಗೆ ಯಾವಾಗ ಬೇಕಾದರೂ ಬರಬಹುದು.

ಕಣ್ಣಿನ ಪೊರೆಯನ್ನು ತಡೆಗಟ್ಟುವ ವಿಧಾನ :

ಈ ಕಣ್ಣಿನ ಪೊರೆಯ ಬೆಳವಣಿಗೆಯನ್ನು ತಡೆಗಟ್ಟುವಂತಹ ಔಷಧಿಯನ್ನು ಇದುವರೆಗೆ ಯಾರೂ ಕಂಡುಹಿಡಿದಿಲ್ಲ. ಕಣ್ಣಿನ ಪೊರೆಗೆ ವೈದ್ಯಕೀಯ ಚಿಕಿತ್ಸೆ ಇಲ್ಲ. ಭವಿಷ್ಯದಲ್ಲಿ ಇದನ್ನು ನಿವಾರಿಸುವ ಔಷಧಿಯನ್ನು ಕಂಡುಹಿಡಿಯಬಹುದು. ಆದರೆ ಈಗ ಸದ್ಯಕ್ಕೆ ಇದಕ್ಕೆ ಇರುವ ಚಿಕಿತ್ಸೆ ಒಂದೇ - ಅದೆಂದರೆ - ಕಣ್ಣಿನ ಪೊರೆಯನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದುಹಾಕುವುದು.

ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಗೆ ಸಕಾಲ ಯಾವುದು?

ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ ಇಂಥಾ ಕಾಲದಲ್ಲೇ ಆಗಬೇಕೆಂಬ ನಿರ್ದಿಷ್ಟ ನಿಯಮವೇನೂ ಇಲ್ಲ. ಸಾಧಾರಣವಾಗಿ ಪೊರೆಯುಳ್ಳ ರೋಗಿಯು, ದೃಷ್ಟಿಮಾಂದ್ಯದ ಫಲವಾಗಿ, ಯಾವಾಗ ತನ್ನ ದೈನಂದಿನ ಕೆಲಸಗಳನ್ನು ನಿರ್ವಹಿಸಲು ಅಸಮರ್ಥನಾಗುವನೋ ಆಗ ಶಸ್ತ್ರಚಿಕಿತ್ಸೆಗೆ ಸಕಾಲ ಎಂದು ನಿರ್ಧರಿಸಬಹುದು. ಆದರೆ ಮಕ್ಕಳಿಗೆ, ದೃಷ್ಟಿಯು, ಬೆಳವಣಿಗೆಯ ಘಟ್ಟದಲ್ಲೇ ಇರುವುದರಿಂದ, ಶಸ್ತ್ರಚಿಕಿತ್ಸೆ ಮುಂಚಿತವಾಗಿ ಆಗುವುದು ಒಳ್ಳೆಯದು. ಹಾಗೆ ಮಾಡುವುದರಿಂದ, ಅವರ ದೃಷ್ಟಿಯು ಸ್ವಾಭಾವಿಕವಾಗಿ ವಿಕಸಿಸಲು ಅನುಕೂಲವಾಗುತ್ತದೆ. ಕಣ್ಣಿನ ಪೊರೆ, ಒಂದು ಕಣ್ಣಿನಲ್ಲಿ ಮಾತ್ರ ಇದ್ದು ಮತ್ತೊಂದು ಕಣ್ಣಿನಲ್ಲಿ ಕಂಡುಬರದೇ ಇದ್ದರೆ, ರೋಗಿಯ ಅವಶ್ಯಕತೆಗೆ ತಕ್ಕಂತೆ ಅವನಿಗೆ ಕ್ಷಿಪ್ರವಾಗಿ ಅಥವಾ ತಡೆದು ಶಸ್ತ್ರಚಿಕಿತ್ಸೆ ಮಾಡಬಹುದು. ಉದಾಹರಣೆಗೆ ಬ್ಯಾಂಕಿನ ಉದ್ಯೋಗಿಗೆ ಕ್ಷಿಪ್ರ ಶಸ್ತ್ರಚಿಕಿತ್ಸೆ ಅಗತ್ಯ. ಏಕೆಂದರೆ ಅವನು ಮಾಡುತ್ತಿರುವ ಜವಾಬ್ದಾರಿಯುತವಾದ ಕೆಲಸಕ್ಕೆ ಅವನ ದೃಷ್ಟಿಯಲ್ಲಿ ಕುಂದಿಲ್ಲದೇ ಇರುವುದು ಬಹಳ ಮುಖ್ಯ. ಆದರೆ ದೃಷ್ಟಿಯಲ್ಲಿ ಸ್ಪಷ್ಟತೆ ಅಷ್ಟು ಅಗತ್ಯವಿಲ್ಲದೇ ಇರುವ ಕೆಲಸಗಳಲ್ಲಿರುವ ಉದ್ಯೋಗಿಗಳಿಗೆ, ಅವನ ಕಣ್ಣಿನಪರೆ ಚೆನ್ನಾಗಿ ಬಲಿಯುವವರೆಗೆ ಮುಂದೂಡಬಹುದು. ಆದರೆ ಆಧುನಿಕ ವಿಜ್ಞಾನದ ಫಲವಾಗಿ ಶಸ್ತ್ರಚಿಕಿತ್ಸೆಯನ್ನು ಕಣ್ಣಿಗೆ ಯಾವ ತರಹ ಅಪಾಯವೂ ತಟ್ಟದಂತೆ ಯಾವ ಕಾಲದಲ್ಲಿ ಬೇಕಾದರೂ ಮಾಡಬಹುದು. ಪರೆ ಬಲಿಯಲೇಬೇಕೆಂಬ ಕಡ್ಡಾಯವೇನಿಲ್ಲ. ಒಮ್ಮೊಮ್ಮೆ ಅತಿ ಬಲಿಯಬಿಟ್ಟರೆ ಅಪಾಯವೇ ಆಗಬಹುದು. ಆದ್ದರಿಂದ ಕಣ್ಣಿನ ಪರೆ ಪೂರ್ಣ ಬಲಿತೊಡನೆ ಶಸ್ತ್ರಚಿಕಿತ್ಸೆ ಮಾಡುವುದು ಉತ್ತಮ.

ಶಸ್ತ್ರಚಿಕಿತ್ಸೆಗೆ ಮುನ್ನ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳು :

ಕಣ್ಣಿನ ಪರೆಯ ಶಸ್ತ್ರಚಿಕಿತ್ಸೆಗೆ ಮೊದಲು

ಅವನ ದೇಹಾರೋಗ್ಯದ ಸ್ಥಿತಿಯನ್ನು ಪರೀಕ್ಷೆಗೆ ಒಳಪಡಿಸಬೇಕು. ಮಧುಮೂತ್ರ ವ್ಯಾಧಿ, ಉಬ್ಬಸ ಇವುಗಳು ಕಂಡುಬಂದಲ್ಲಿ, ಶಸ್ತ್ರಚಿಕಿತ್ಸೆ ಸ್ಥಗಿತಗೊಳಿಸಿ, ಅವುಗಳನ್ನು ಹತೋಟಿಗೆ ತಂದ ನಂತರ ಮಾಡಬೇಕು. ಕಣ್ಣನ್ನು ಬಹಳ ಎಚ್ಚರಿಕೆಯಿಂದ ಸೀಳುದೀಪದ ಸೂಕ್ಷ್ಮದರ್ಶನ ಯಂತ್ರದ (Slit lamp Microscope) ಪರೀಕ್ಷೆಗೆ ಒಳಪಡಿಸಿ, ಶಸ್ತ್ರಚಿಕಿತ್ಸೆ ಮಾಡುವುದರಿಂದ, ಯಾವ ತರಹ ತೊಂದರೆಯೂ ಉಂಟಾಗಲಾರದೆಂದು ಸ್ಥಿರಪಡಿಸಿಕೊಳ್ಳಬೇಕು. ಹಲ್ಲು ನೋವು, ಮೂತ್ರನಾಳದ ಜಾಡ್ಯ ಇವುಗಳು ಯಾವುದೂ ಇಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ರೋಗಿಯು ಸಹ, ರಕ್ತದ ಒತ್ತಡ ಅಥವಾ ಮಧು



ಮೂತ್ರ ವ್ಯಾಧಿಗೆ ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದಲ್ಲಿ, ಶಸ್ತ್ರಚಿಕಿತ್ಸೆಗೆ ಮೊದಲೇ ವೈದ್ಯನಿಗೆ ಆ ವಿಷಯವನ್ನು ತಿಳಿಸಬೇಕು. ರೋಗಿಗೆ ಯಾವ ಬಗೆಯ ಅಲರ್ಜಿ ಇದ್ದರೂ, ಅದನ್ನೂ ಶಸ್ತ್ರವೈದ್ಯನಿಗೆ ತಪ್ಪದೆ ತಿಳಿಸಬೇಕು.

ಶಸ್ತ್ರಚಿಕಿತ್ಸೆಗೆ ಒಳಪಡುವಿಕೆ ಎಂದರೇನು? :

ಈ ಶಸ್ತ್ರಚಿಕಿತ್ಸೆಯನ್ನು ಎರಡು ವಿಧದಲ್ಲಿ ಮಾಡಬಹುದು. (1) ಪ್ರಜ್ಞೆಯನ್ನು ತಪ್ಪಿಸಿಯೋ ಅಥವಾ ಪ್ರಜ್ಞೆಯನ್ನು ತಪ್ಪಿಸದೆ ಬರೀ ಸ್ಪರ್ಶಜ್ಞಾನ ಇಲ್ಲದಂತೆ ಮಾಡಿಯೋ ಮಾಡಬಹುದು. ಕಣ್ಣಿನ ಪರೆ ಹೆಚ್ಚಾಗಿ ವಯಸ್ಸಾದವರಿಗೇ ಬರುತ್ತದೆ. ಅಲ್ಲದೆ ಅವರುಗಳಿಗೆ ಮಧುಮೂತ್ರ, ವ್ಯಾಧಿಯಂತಹ ರೋಗಗಳೇ ಇರುತ್ತವೆ. ಅಂಥವರಿಗೆ ಬರೀ ಸ್ಪರ್ಶಜ್ಞಾನ ಹೋಗಿಸಿ ಶಸ್ತ್ರಚಿಕಿತ್ಸೆ ಮಾಡುವುದು ಕ್ಷೇಮಕರ. ಆದರೆ ರೋಗಿಯು ಭಯ ಅಥವಾ ಗಾಬರಿ ಸ್ವಭಾವದವರು ಎಂದು ಕಂಡುಬಂದರೆ, ಅದರಲ್ಲೂ ಮಕ್ಕಳಿಗೆ, ಸ್ವಲ್ಪಮಟ್ಟಿನ ಅಪಾಯ ಇದ್ದರೂ ಕೂಡ ಪ್ರಜ್ಞೆಯನ್ನು ತಪ್ಪಿಸಿ ಉಪಚಾರ ಮಾಡುವುದೇ ಸುರಕ್ಷಿತ.

ಸಾಮಾನ್ಯವಾಗಿ, ಶಸ್ತ್ರಚಿಕಿತ್ಸೆಗೆ ಕೆಲವು ದಿನಗಳು ಮುಂಚಿತವಾಗಿಯೇ, ಕಣ್ಣನ್ನು ಶುಭ್ರವಾಗಿ ಇಡಲೆಂದು, ಐದು ದಿನಗಳು ಕಣ್ಣಿಗೆ, ರೋಗಾಣುಗಳನ್ನು ತಡೆಗಟ್ಟುವ (Antibiotic) ಔಷಧಿಯನ್ನು ಹಾಕಿಕೊಳ್ಳಬೇಕು. ಶಸ್ತ್ರಚಿಕಿತ್ಸೆಯನ್ನು ಮಾಡುವ ದಿನ, ಮತ್ತೊಮ್ಮೆ ಅವನ ಕಣ್ಣನ್ನು ಸೂಕ್ಷ್ಮದರ್ಶಕ ಯಂತ್ರದಿಂದ ಪರೀಕ್ಷಿಸುತ್ತಾರೆ. ಕಣ್ಣಿನ ರೆಪ್ಪೆಯ ಕೂದಲನ್ನು ಕತ್ತರಿಸಿ, ಕಣ್ಣನ್ನು ಸ್ವಚ್ಛವಾಗಿ ತೊಳೆದು ಇಟ್ಟಿರಬೇಕು. ಕ್ಷೌರದ ಅವಶ್ಯಕತೆ ಇದ್ದಲ್ಲಿ, ಶಸ್ತ್ರಚಿಕಿತ್ಸೆಗೆ ಮುನ್ನವೇ ಮಾಡಿಸಿಕೊಳ್ಳಬೇಕು.

ಶಸ್ತ್ರಚಿಕಿತ್ಸೆಯ ದಿನ, ಸುಮಾರು 3 ಗಂಟೆ ಮೊದಲು ರೋಗಿಗೆ ಸಮಾಧಾನ ಸ್ಥಿತಿಯಲ್ಲಿಡಲು, ಸ್ವಲ್ಪ ನಿದ್ದೆ ಬರುವಂತೆ ಮಾತ್ರೆಗಳನ್ನು ಕೊಡುತ್ತಾರೆ. ಶಸ್ತ್ರಚಿಕಿತ್ಸೆ ಸರಾಗವಾಗಿ ಆಗಲು ಅನುಕೂಲಿಸುವಂತೆ ಕಣ್ಣನ್ನು ಮೃದುವಾಗಿ ಮಾಡಲು ಔಷಧಿಗಳನ್ನು ಕೊಡುತ್ತಾರೆ. ಶಸ್ತ್ರಚಿಕಿತ್ಸೆಯ ಮೇಜಿನ ಮೇಲೆ ಮಲಗಿಸಿದ ಮೇಲೆ ಕಣ್ಣಿನ ಒಳಗೆ ಮತ್ತು ಸುತ್ತಲೂ 4 ಸೂಜಿ ಮದ್ದನ್ನು (Injections) ಕೊಡುತ್ತಾರೆ. ಇದರಿಂದ ರೋಗಿಗೆ ಶಸ್ತ್ರಚಿಕಿತ್ಸೆ ಮಾಡುತ್ತಿರುವಾಗ ಯಾವ ತರಹದ ನೋವೂ ಅರಿವಿಗೆ ಬರುವುದಿಲ್ಲ. ಏಕೆಂದರೆ ಆ ಇಂಜಕ್ಷನ್‌ಗಳು ಕಣ್ಣಿನ ಮಾಂಸಖಂಡಗಳನ್ನು ನಿಸ್ಸತ್ವಗೊಳಿಸಿ ಸ್ಪರ್ಶಹೀನವಾಗಿ ಮಾಡುತ್ತವೆ (Paralyse and Anaesthetise). ಈ ನಾಲ್ಕು ಸೂಜಿ ಮದ್ದುಗಳನ್ನು ಕೊಟ್ಟ ನಂತರ ರೋಗಿಗೆ ಯಾವ ತರಹ

ಬಾಧೆಯೂ ಇರುವುದಿಲ್ಲ. ಶಸ್ತ್ರಚಿಕಿತ್ಸೆಯನ್ನು ಕೇವಲ 30 ನಿಮಿಷಗಳಲ್ಲಿ ಮುಗಿಸುತ್ತಾರೆ.

ಈ ಶಸ್ತ್ರಚಿಕಿತ್ಸೆಯನ್ನು ಸೂಕ್ಷ್ಮದರ್ಶಕ ಯಂತ್ರದ (Operating Microsope) ಸಹಾಯದಿಂದಲೇ ಮಾಡುವುದೇ ಅತ್ಯುತ್ತಮ. ಇದರಿಂದ ಶಸ್ತ್ರವೈದ್ಯನು ಚಿಕಿತ್ಸೆಯನ್ನು, ಬಹಳ ಜಾಗರೂಕತೆಯಿಂದ ಪರಿಶೀಲಿಸಿ, ಅತ್ಯಂತ ಸೂಕ್ಷ್ಮ ಮತ್ತು ಸುರಕ್ಷಿತವಾಗಿ ಮಾಡಬಹುದು.

ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಇಡೀ ಲೆನ್ಸ್ (lens) ನ್ನೇ ಹೊರತೆಗೆದು ಮಾಡುವುದಕ್ಕೆ ''ಪೊರೆಯ ಸಹಿತ ಚಿಕಿತ್ಸೆ'' (Intra capsular extraction) ಎಂದು ಹೇಳುತ್ತಾರೆ. ಇನ್ನೊಂದು ತರಹ ಚಿಕಿತ್ಸೆಯಲ್ಲಿ, ಲೆನ್ಸ್‌ನ ಹಿಂಭಾಗದಲ್ಲಿರುವ ಪೊರೆಯನ್ನು ಅಲ್ಲಿಯೇ ಬಿಟ್ಟು ಬರೀ ಲೆನ್ಸ್‌ನ್ನು ಮಾತ್ರ ತೆಗೆಯುತ್ತಾರೆ. ಇದಕ್ಕೆ ಇಂಗ್ಲೀಷಿನಲ್ಲಿ (extra capsular extraction) ಎಂದು ಹೇಳುತ್ತಾರೆ. ಇವೆರಡರಲ್ಲಿ ರೋಗಿಗೆ ಯಾವುದರ ಅಗತ್ಯ ಇರುವುದು ಎಂಬುದನ್ನು ಶಸ್ತ್ರವೈದ್ಯನು ಶಸ್ತ್ರಚಿಕಿತ್ಸೆ ಮಾಡುತ್ತಿರುವಾಗಲೇ ನಿರ್ಧರಿಸುತ್ತಾನೆ. ಹಾಗೂ ರೋಗಿಗೆ ಯಾವುದು ಅತ್ಯಂತ ಸುರಕ್ಷಿತವೋ ಅದನ್ನು ಮಾಡುತ್ತಾನೆ. ಶಸ್ತ್ರಚಿಕಿತ್ಸೆಯಾದ ನಂತರ, ಚಿಕಿತ್ಸೆಯಾದ ಕಣ್ಣಿಗೆ ಮಾತ್ರ ಎರಡು ದಿನಗಳು ಬಟ್ಟೆಯ ಪಟ್ಟಿಯನ್ನು (bandage) ಕಟ್ಟುತ್ತಾರೆ. ಪಟ್ಟಿಯನ್ನು ಬಿಚ್ಚಿದ ನಂತರ ರೋಗಿಯನ್ನು ಮನೆಗೆ ಕಳುಹಿಸುತ್ತಾರೆ. ಮನೆಯಲ್ಲಿ 5 ಅಥವಾ 6 ವಾರಗಳವರೆಗೆ ಕೆಲವು ಔಷಧಿಗಳನ್ನು ಕಣ್ಣಿಗೆ ಹಾಕುತ್ತಿರಬೇಕೆಂಬುದನ್ನು ಹೇಳುತ್ತಾರೆ. ಕಣ್ಣಿಗೆ ಹಾಕಿರುವ ಹೊಲಿಗೆಗಳನ್ನು ಬಿಚ್ಚುವುದು ಅಥವಾ ಬಿಚ್ಚದೇ ಇರುವುದು - ಹೊಲಿಗೆಗೆ ಉಪಯೋಗಿಸಿರುವ ಪದಾರ್ಥ((Sutures) ಮತ್ತು ಒಳಕ್ಕೆ ಹಾಕಿರುವ ರೀತಿಯನ್ನು ಅವಲಂಬಿಸಿರುತ್ತದೆ. ಹೊಲಿಗೆಯನ್ನು ಬಿಚ್ಚಬೇಕಾದ ಪ್ರಸಂಗದಲ್ಲಿ, ಶಸ್ತ್ರವೈದ್ಯನು, ಸಾಧಾರಣವಾಗಿ 5 ವಾರಗಳ ನಂತರ, ಅದನ್ನು ತೆಗೆದು ಹಾಕುವನು. ಆರು ವಾರಗಳ ನಂತರ, ಕಣ್ಣಿಗೆ ಕನ್ನಡಕವನ್ನು ಕೊಡುತ್ತಾರೆ. ಆದರೆ ಪ್ರತಿವಾರವೂ, ವೈದ್ಯನು ಕಣ್ಣನ್ನು ಅದು ಎಷ್ಟರ ಮಟ್ಟಿಗೆ ಉತ್ತಮಗೊಳ್ಳುವುದರಲ್ಲಿ ಮುಂದುವರಿಯುತ್ತಿದೆ ಎಂಬುದನ್ನು ಪರೀಕ್ಷಿಸುತ್ತಿರುತ್ತಾನೆ.

ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಯ ತರುವಾಯ ಕನ್ನಡಕವನ್ನು ಬಳಸುವುದರಿಂದ ಕಾಣುವ ದೃಷ್ಟಿ (Vision) :

ಪೊರೆಯನ್ನು ತೆಗೆದ ಮೇಲೆ ಬರುವ ದೃಷ್ಟಿಗೆ ಏಪಾಕಿಕ್ (Apakic) ದೃಷ್ಟಿ ಎಂದು ಹೇಳುತ್ತಾರೆ. ಇದು ಪೊರೆ ಬೆಳೆಯುವ ಮುನ್ನ ಇದ್ದ ದೃಷ್ಟಿಯಂತಿರುವುದಿಲ್ಲ. ಮುಖ್ಯವಾದ ವ್ಯತ್ಯಾಸವೇನೆಂದರೆ, ಎಲ್ಲಾ ಹಂತದ ದೂರಗಳನ್ನು ಅಳವಡಿಸಿಕೊಂಡು ನೋಡಲು, ಕಣ್ಣಿಗೆ ಶಕ್ಯವಾಗುವುದಿಲ್ಲ. ಏಕೆಂದರೆ ಈ ಕೃತಕ ಲೆನ್ಸ್‌ಗೆ (lens) ಎಲ್ಲಾ ವಿಧದ ದೂರಕ್ಕೆ ಸರಿಯಾಗಿ ನೋಟವನ್ನು ಅಳವಡಿಸಿಕೊಳ್ಳುವ ಶಕ್ತಿ ಇರುವುದಿಲ್ಲ. ಕನ್ನಡಕದ ಮಧ್ಯಭಾಗದ ಮೂಲಕ 20 ಅಡಿ ಮತ್ತು ಅದರಿಂದಾಚೆಯ ದೃಶ್ಯವನ್ನು ಮಾತ್ರ ಸ್ಪಷ್ಟವಾಗಿ ನೋಡಬಲ್ಲದು. ಓದಲು ಸಹ, ಸ್ಪಷ್ಟವಾದ ದೃಷ್ಟಿ ಇರುತ್ತದೆ.

ಎರಡನೆಯದಾಗಿ, ಪೊರೆಯನ್ನು ತೆಗೆದ ಮೇಲೆ ಕೊಡುವ ಕನ್ನಡಕವು ಮಂದವಾಗಿರುತ್ತದೆ. ಆದ್ದರಿಂದ ಅದರ ಮೂಲಕ ಪಾರ್ಶ್ವಭಾಗಗಳನ್ನು ನೋಡಿದರೆ, ವಸ್ತುಗಳು ವಕ್ರವಾಗಿ ಗೋಚರಿಸುತ್ತವೆ. ಏಕೆಂದರೆ, ಕನ್ನಡಕದ ಹೊರ ಅಂಚಿನಲ್ಲಿರುವ ಲೆನ್ಸ್‌ನ ಶಕ್ತಿ ಕನ್ನಡಕದ ಮಧ್ಯದಲ್ಲಿರುವಷ್ಟು ಇರುವುದಿಲ್ಲ. ಎದುರಿಗೆ ದೃಷ್ಟಿಯು ಸ್ಪಷ್ಟವಾಗಿರುತ್ತದೆ. ಆದರೆ ಪಾರ್ಶ್ವಗಳಲ್ಲಿ ಸ್ವಲ್ಪ ಭಾಗವನ್ನು ನೋಡಲು ಆಗುವುದಿಲ್ಲ. ಏಕೆಂದರೆ ಪಾರ್ಶ್ವದಿಂದ ಬರುವ ಬೆಳಕು ಕಣ್ಣನ್ನು ಮುಟ್ಟಲಾರದು. ಕನ್ನಡದ ಅಂಚು ಮತ್ತು ಚೌಕಟ್ಟು ಬೆಳಕನ್ನು ತಡೆದುಬಿಡುತ್ತದೆ.

ಮೂರನೆಯದಾಗಿ, ಕನ್ನಡಕದ ಚೌಕಟ್ಟಿನ ಮೇಲೆ ಲೆನ್ಸ್‌ನ್ನು ಕೂರಿಸಿರುವುದರಿಂದ, ಪಾರ್ಶ್ವಗಳಲ್ಲಿ ನೋಡಿದಾಗ, ತಲೆಯನ್ನು ಅಲುಗಿಸದೆ, ಕಣ್ಣು ಮಾತ್ರ ಚಲಿಸಿದರೆ, ಕೂಡಡಿಯೇ ಸುತ್ತುತ್ತಿ

ರುವಂತೆ ಭಾಸವಾಗುತ್ತದೆ. ಇದು ಸ್ವಲ್ಪ ಮಟ್ಟಿಗೆ ತಲೆ ಸುತ್ತಿದರೆ ಆಗುವ ಅನುಭವವನ್ನು ಹೋಲುತ್ತದೆ. ಈ ಅನುಭವದಿಂದ ಪಾರಾಗಬೇಕಾದರೆ, ಎಡಭಾಗದ ಅಥವಾ ಬಲ ಪಾರ್ಶ್ವಗಳಲ್ಲಿರುವ ವಸ್ತುಗಳನ್ನು ನೋಡಬೇಕಾದರೆ, ತಲೆಯನ್ನೇ ತಿರುಗಿಸಬೇಕೇ ಹೊರತು ಕಣ್ಣನ್ನು ತಿರುಗಿಸಬಾರದು. ಆಗ, ಲೆನ್ಸ್ ಕಣ್ಣಿಗೆ ಬೇಕಾದ ನಿರ್ದಿಷ್ಟವಾದ ಸ್ಥಾನದಲ್ಲೇ ಇರುವುದರಿಂದ, ಸಪ [illegible] ಸುತ್ತುತ್ತಿದೆ ಎಂಬ ಭಾವನೆ ಆಗು[illegible]. ಹಾಗೆಯೇ ಕೆಳಗೆ ನೋಡುವಾಗ, ಕತ್ತನ್ನ[illegible] ತಗ್ಗಿಸಿ ನೋಡಬೇಕೇ ಹೊರತು, ಕಣ್ಣನ್ನ[illegible] ದೃಷ್ಟಿ ಮಾಡಬಾರದು. ಆಗ ಮೆಟ್ಟಿಲುಗಳೇ ಮೇಲೆ ಬರುತ್ತಿವೆಯೋ ಎಂಬ ಭಾವನೆ ಉಂಟಾಗುವುದಿಲ್ಲ.



ಏಪಾಕಿಕ್ ದೃಷ್ಟಿಯ (Apakic) ಇನ್ನೊಂದು ತೊಡಕೇನೆಂದರೆ, ಈ ಲೆನ್ಸ್‌ಗಳು, ವಸ್ತುಗಳು ವಾಸ್ತವವಾಗಿ ಇರುವುದಕ್ಕಿಂತ ದೊಡ್ಡದಾಗಿ ಕಾಣುವಂತೆ ಮಾಡುತ್ತವೆ. ಸಾಧಾರಣವಾಗಿ ವಸ್ತುಗಳು ಅವುಗಳು ಇರುವುದಕ್ಕಿಂತ 25 % ಹೆಚ್ಚಿಗೆ ದೊಡ್ಡದಾಗಿ ಕಾಣಿಸುತ್ತವೆ. ವಸ್ತುವಿನ ಆಕಾರವು ದೊಡ್ಡದಾಗಿ ಕಾಣುವುದರಿಂದ, ಅವು ನಮಗೆ ಸಮೀಪದಲ್ಲೇ ಇರುವಂತೆ ಭಾಸವಾಗುತ್ತದೆ. ಈ ಹೊಸ ಸ್ಥಿತಿಗೆ ಹೊಂದಿಕೊಳ್ಳುವವರೆಗೆ ದೂರದ ಅಂತರವನ್ನು ನಿರ್ಣಯಿಸಲು ಕಷ್ಟವಾಗುತ್ತದೆ. ನಾವು ಒಂದು ವಸ್ತುವನ್ನು ಸ್ಪರ್ಶಿಸಲು ಹೊರಟಾಗ, ಅದು ದೂರದಲ್ಲಿರುವುದು ಗೊತ್ತಾಗುತ್ತದೆ.

ಸಾಧಾರಣವಾಗಿ ರೋಗಿಗಳು ಒಂದೆರಡು ತಿಂಗಳ ಅನುಭವದಿಂದ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಾರೆ. ಒಂದೇ ಕಣ್ಣಿಗೆ ಶಸ್ತ್ರಚಿಕಿತ್ಸೆಯಾಗಿ, ಮತ್ತೊಂದು ಕಣ್ಣು ಸರಿಯಾಗಿದ್ದಲ್ಲಿ, ಕನ್ನಡಕವನ್ನು ಎರಡು ಕಣ್ಣುಗಳಿಗೂ ಕೊಡಲಾಗುವುದಿಲ್ಲ. ಏಕೆಂದರೆ ಶಸ್ತ್ರಚಿಕಿತ್ಸೆ ಆಗಿರುವ ಕಣ್ಣಿಗೆ, ಶಸ್ತ್ರಚಿಕಿತ್ಸೆ ಆಗಿರದ ಕಣ್ಣಿಗಿಂತ, ವಸ್ತುಗಳ ಬಾಹ್ಯ ಆಕಾರ 25 % ಹೆಚ್ಚಿಗೆ ದೊಡ್ಡದಾಗಿ ಕಾಣಿಸುವುದರಿಂದ, ವಸ್ತುಗಳು ಎರಡೆರಡಾಗಿ ಕಾಣಿಸುತ್ತವೆ (diplopia or double vision) ಈ ಬಗೆಯ ಸಂದರ್ಭಗಳಲ್ಲಿ ಸಂಸ್ಪರ್ಶದ ಲೆನ್ಸ್ (Contact lens) ನ್ನೇ ಆಗಲಿ ಅಥವಾ ಶಸ್ತ್ರಚಿಕಿತ್ಸೆ ಮಾಡುವಾಗಲೇ ಹಾಕುವ "Intra ocular lens" ನ್ನೇ ಆಗಲಿ ಉಪಯೋಗಿಸಿದರೆ ಎರಡೆರಡು ಕಾಣಿಸುವುದನ್ನು ತಪ್ಪಿಸಬಹುದು. ಸಂಸ್ಪರ್ಶದ ಲೆನ್ಸ್ (Contact lens) ಮತ್ತು intra ocular lens - ಒಂದೇ ಕಣ್ಣಿಗೆ ಚಿಕಿತ್ಸೆ (Uniocular) ಆಗಿರುವ ರೋಗಿಗಳಿಗೆ ಬಹಳ ಉತ್ತಮ.

ಸಂಸ್ಪರ್ಶಕ ಲೆನ್ಸ್‌ಗಳ ಅನುಕೂಲತೆಗಳೇನು? (Contact lens) :

ಸಂಸ್ಪರ್ಶಕ ಲೆನ್ಸ್‌ಗಳನ್ನು ಕಣ್ಣಿನ ಹೊರಮುಖಕ್ಕೆ ಅಥವಾ ಮೇಲು ಮೈಗೆ ಅಳವಡಿಸುತ್ತಾರೆ. ಆದ್ದರಿಂದ ಅದೂ ಕಣ್ಣಿನೊಡನೆಯೇ ಚಲಿಸುತ್ತದೆ. ಕನ್ನಡಕವನ್ನು ಉಪಯೋಗಿಸುವುದರಿಂದ ನೋಟದ ವಿಸ್ತಾರ ಕಡಿಮೆ ಆಗುತ್ತಿತ್ತು. ಈ ಅನಾನುಕೂಲತೆ ಸಂಸ್ಪರ್ಶಕ ಲೆನ್ಸ್‌ನ್ನು ಉಪಯೋಗಿಸುವುದರಿಂದ ನಿವಾರಣೆಯಾಗಿ ನೈಜಸ್ಥಿತಿಗೆ ಬರುತ್ತದೆ. ಎರಡನೆಯದಾಗಿ ಪ್ರತಿಬಿಂಬವು ಕನ್ನಡಕದ ಬಳಕೆಯಿಂದ ಆಗುತ್ತಿದ್ದ 25 % ಬದಲಾಗಿ ಕೇವಲ 7.2 % ರಷ್ಟು ಮಾತ್ರ ದೊಡ್ಡದಾಗಿ ಗೋಚರಿಸುವುದು. ಇದರಿಂದ ದೂರದ ಅಂತರ ನಿರ್ಧರಿಸುವುದರಲ್ಲಿ ಹೆಚ್ಚು ಅನುಕೂಲವಾಗುತ್ತದೆ ಪಾರ್ಶ್ವದೃಷ್ಟಿಯು ಕೂಡ ಸಹಾ ಬಹಳ ಮಟ್ಟಿಗೆ ಉತ್ತಮವಾಗುತ್ತದೆ. ಮತ್ತು ಪಾರ್ಶ್ವಗಳಲ್ಲಿ ಕಾಣಿಸದೇ ಇರುವ ಭಾಗವೇ ಇರುವುದಿಲ್ಲ

(blind area) ಆದರೂ ಪ್ರತಿಬಿಂಬವು ವಾಸ್ತವಕ್ಕಿಂತ 7 % ದೊಡ್ಡದಾಗಿಯೇ ಇರುತ್ತದೆ. ಅಲ್ಲದೆ ಕೆಲವರಿಗೆ, ಒಂದೇ ಕಣ್ಣಿಗೆ ಶಸ್ತ್ರಚಿಕಿತ್ಸೆ ಆದಾಗ, ವಸ್ತುಗಳು ಎರಡೆರಡಾಗಿ ಕಾಣಿಸುವುದನ್ನು ತಪ್ಪಿಸಲು ಆಗುವುದಿಲ್ಲ. ಇದಲ್ಲದೆ ಸಂಸ್ಪರ್ಶಕ ಲೆನ್ಸನ್ನು (Contact lens) ಬಹಳ ಎಚ್ಚರಿಕೆಯಿಂದ ಮತ್ತು ಸರಿಯಾಗಿ ಉಪಯೋಗಿಸಬೇಕಾಗುತ್ತದೆ. ಆದ್ದರಿಂದ ಎಲ್ಲಾ ರೋಗಿಗಳೂ ಇದಕ್ಕೆ ತಕ್ಕವರಲ್ಲ. ವೃದ್ಧರಿಗೆ ಕೈಗಳ ನಡುಗುವಿಕೆಯಿಂದಾಗಿ, ಸಂಸ್ಪರ್ಶಕ ಲೆನ್ಸನ್ನು ಕಣ್ಣಿಗೆ ಸರಿಯಾಗಿ ಅಳವಡಿಸಿಕೊಳ್ಳಲು ಅಸಾಧ್ಯವಾಗುತ್ತದೆ. ಎರಡು ಕಣ್ಣುಗಳಿಗೂ ಶಸ್ತ್ರ ಚಿಕಿತ್ಸೆ ಆದಾಗ, ಸಂಸ್ಪರ್ಶಕ ಲೆನ್ಸನ್ನು ಕಣ್ಣುಗಳಿಗೆ ಅಳವಡಿಸಿಕೊಳ್ಳುವುದು ಬಹಳ ಕಷ್ಟ. ಏಕೆಂದರೆ ಅದನ್ನು ಕಣ್ಣಿಗೆ ಹಾಕಿಕೊಳ್ಳುವವರೆಗೆ ಅವರಿಗೆ ಆ ಲೆನ್ಸನ್ನು ಇರುವ ಜಾಗದಿಂದ ಎತ್ತಿಕೊಂಡು ಹಾಕಿಕೊಳ್ಳುವಷ್ಟು ಸ್ಪಷ್ಟ ದೃಷ್ಟಿ ಇರುವುದಿಲ್ಲ.

ಸಂಸ್ಪರ್ಶಕ ಲೆನ್ಸ್‌ಗಳಿಂದ ಮತ್ತೆ ಕೆಲವು ಸಮಸ್ಯೆಗಳು ಉದ್ಭವಿಸಬಹುದು. ಸಂಸ್ಪರ್ಶಕ ಲೆನ್ಸ್‌ಗಳು ಹೊರವಸ್ತು (foreign) ಆಗಿರುವುದರಿಂದ, ಅದನ್ನು ಕಣ್ಣಿಗೆ ಅಳವಡಿಸಿಕೊಂಡಾಗ ಉರಿ ಮತ್ತು ಕಡಿತವುಂಟಾಗಬಹುದು. ಇದು ಅಭ್ಯಾಸವಾಗುವವರೆಗೂ ರೋಗಿಯು ಸ್ವಲ್ಪಮಟ್ಟಿಗೆ ತೊಂದರೆ ಅನುಭವಿಸಬೇಕಾಗಬಹುದು. ಕೆಲವು ರೋಗಿಗಳು ಈ ಲೆನ್ಸ್‌ಗೆ Allergic ಆಗಿದ್ದರೆ, ಅವರಿಗೆ ಇದನ್ನು ಉಪಯೋಗಿಸಲು ಆಗುವುದೇ ಇಲ್ಲ.

ಕಣ್ಣಿನ ಒಳಗಡೆಗೆ ಅಳವಡಿಸುವ ಲೆನ್ಸ್ ಎಂದರೇನು? :

(Intra ocular lens) :

Intra ocular lensನ್ನು Polemethyl Methacrylates ಎಂಬ ವಿಶೇಷ ವಸ್ತುವಿನಿಂದ ತಯಾರಿಸುತ್ತಾರೆ. ಇವುಗಳನ್ನು ಅತ್ಯಂತ ಉತ್ಕೃಷ್ಟವಾಗಿ ನಯವಾಗಿ ಉಜ್ಜಿ ಶುಭ್ರಗೊಳಿಸುತ್ತಾರೆ. ಕಣ್ಣಿನ ಪೊರೆಯನ್ನು ತೆಗೆದಾದ ಮೇಲೆ ಅದರ ಸ್ಥಳದಲ್ಲಿ ಇದನ್ನು ಕಣ್ಣಿನ ಒಳಗೆ ಅಳವಡಿಸುತ್ತಾರೆ. ಈ ಲೆನ್ಸ್, ಮನುಷ್ಯನ ನೈಜ ದೃಷ್ಟಿಗೆ ಹೆಚ್ಚು ಕಮ್ಮಿ ಸರಿಸಮಾನವಾಗಿರುತ್ತದೆ. ಈ ಲೆನ್ಸನ್ನು ಉಪಯೋಗಿಸುವುದರಿಂದ ಕನ್ನಡಕ ಮತ್ತು ಸಂಸ್ಪರ್ಶಕ ಲೆನ್ಸ್‌ಗಳಿಂದ ಆಗುತ್ತಿದ್ದ ಅನಾನುಕೂಲತೆಗಳು ಇರುವುದಿಲ್ಲ. ವಸ್ತುಗಳು ಸ್ವಾಭಾವಿಕ ದೃಷ್ಟಿಗೆ ಗೋಚರಿಸುವಂತೆಯೇ ಗೋಚರಿಸುತ್ತವೆ. ವಸ್ತುಗಳು ದೊಡ್ಡದಾಗಿ ಕಾಣಿಸುವುದು ಅಥವಾ ಎರಡೆರಡಾಗಿ ಕಾಣಿಸುವುದು ಮುಂತಾದ ತೊಂದರೆಗಳು ಇರುವುದಿಲ್ಲ. ಲೆನ್ಸ್ ಕಣ್ಣಿನ ಒಳಗಡೆಯೇ ಇರುವುದರಿಂದ ಮತ್ತು ಕಣ್ಣಿನೊಡನೆಯೇ ಚಲಿಸುವುದರಿಂದ ದೃಷ್ಟಿಯ ವೈಶಾಲ್ಯ ಪೂರ್ಣವಾಗಿ ಇರುತ್ತದೆ. ಅಲ್ಲದೆ ಕತ್ತಲೆಯ ಭಾಗ (blind spot)ವೇ ಇರುವುದಿಲ್ಲ. ಪಾರ್ಶ್ವದ ದೃಷ್ಟಿ ಸಹ ನ್ಯೂನತೆ ಇಲ್ಲದೆ ಇರುತ್ತದೆ. ಕಣ್ಣಿನ ಪೊರೆ ಬಲಿಯುವ ಮುನ್ನ ಯಾವ ದೃಷ್ಟಿ ಶಕ್ತಿ ಇತ್ತೋ ಹೆಚ್ಚು ಕಮ್ಮಿ ಅದೇ ದೃಷ್ಟಿ ಇರುತ್ತದೆ. ಈ ಲೆನ್ಸ್‌ನ ಉಪಯೋಗದಿಂದ ಬರುವ ದೃಷ್ಟಿ ಅತ್ಯುತ್ತಮವಾಗಿರುತ್ತದೆ. ನಿದ್ದೆಯಿಂದ ಎದ್ದಾಗಲೂ ಸ್ವಾಭಾವಿಕ ದೃಷ್ಟಿಯೇ ಇರುತ್ತದೆ. ನೈಜ ದೃಷ್ಟಿಗೂ ಇದಕ್ಕೂ ಇರುವ ಒಂದೇ ಒಂದು ವ್ಯತ್ಯಾಸವೇನೆಂದರೆ, ಇದರಲ್ಲೂ ಕೂಡ ವಿವಿಧ ದೂರಗಳಿಗೆ ದೃಷ್ಟಿಯ ಶಕ್ತಿಯನ್ನು ಕೇಂದ್ರೀಕರಿಸಿಕೊಳ್ಳಲಾಗುವುದಿಲ್ಲ. ಓದಲು ಮತ್ತೊಂದು ಕನ್ನಡಕವನ್ನು ಉಪಯೋಗಿಸಬೇಕಾಗುತ್ತದೆ.

ಸಾಮಾನ್ಯ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ; ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಯಲ್ಲಿರುವ ಅಪಾಯಗಳು ಯಾವುವು? :

ಈ ಶಸ್ತ್ರಚಿಕಿತ್ಸೆಯಲ್ಲಿ ಬರುವ ತೊಡಕುಗಳನ್ನೆಲ್ಲಾ ಒಟ್ಟಿನಲ್ಲಿ ನೋಡಿದಾಗ ಶೇಕಡ ಕೇವಲ 1 ಅಥವಾ 2 ಅಂಶ ಅಪಾಯವುಂಟಾಗಬಹುದು. ಶಸ್ತ್ರಚಿಕಿತ್ಸೆಯ ಕಾಲದಲ್ಲಿ ಕೆಲವು ಬಾರಿ ರಕ್ತಸ್ರಾವ ಆಗಬಹುದು. ಲೆನ್ಸನ್ನು ತೆಗೆದು ಹಾಕಿದ ಮೇಲೆ ಒಮ್ಮೊಮ್ಮೆ ಲೆನ್ಸ್‌ನ ಹಿಂಭಾಗದಲ್ಲಿರುವ ಲೋಳೆಯಾಗಿರುವ ದ್ರವ (Vitreous Gel)ಗಾಯದ ಒಳಕ್ಕೆ ಪ್ರವೇಶಿಸಬಹುದು. ಆಗ ಅದಕ್ಕೆ ಸರಿಯಾದ ಚಿಕಿತ್ಸೆ ಮಾಡಬೇಕಾದ ಅವಶ್ಯಕತೆ ಬೀಳು

ಬಹುದು. ಶಸ್ತ್ರಚಿಕಿತ್ಸೆಯ ನಂತರ ಕೆಲವು ವೇಳೆ ಕಣ್ಣಿನ ಊದುವಿಕೆಯಿಂದಾಗಿ ಕಣ್ಣಿನಲ್ಲಿ ಉರಿ ಅಥವಾ ನವೆ ಸಂಭವಿಸಬಹುದು. ಅಲ್ಲದೆ ಕಣ್ಣಿನಲ್ಲಿ ಒತ್ತಡ ಹೆಚ್ಚಾಗಿ ಅದರಿಂದಲೂ ಸ್ವಲ್ಪಮಟ್ಟಿಗೆ ತೊಂದರೆ ಉಂಟಾಗಬಹುದು. ಆದರೆ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಯ ನಂತರ ಕೀತು ಕುಳ್ಳುವುದು ಬಹಳ ಅಪರೂಪ. ಎಲ್ಲೋ 2,000 ಅಥವಾ 3,000ಕ್ಕೆ ಒಬ್ಬರಿಗೆ ಹಾಗೆ ಆಗಬಹುದು.

ಶಸ್ತ್ರಚಿಕಿತ್ಸೆಯ ಅನಂತರದ ಕಾಲದಲ್ಲಿ ಅಪರೂಪವಾಗಿ ಕೆಲವು ಅಪಾಯಗಳುಂಟಾಗಬಹುದು. ಸಣ್ಣದಾಗಿ ರಕ್ತಸ್ರಾವವಾಗಬಹುದು. ಅಥವಾ ಏನೇನಾದರೂ ಪೆಟ್ಟು ತಗುಲಿಸಿಕೊಂಡರೆ ಗಾಯವು ಬಾಯಿಬಿಡಬಹುದು. ಮತ್ತೆ ಕೆಲವು ವೇಳೆ ಕಣ್ಣು ಗುಡ್ಡೆಯಲ್ಲಿ ಒತ್ತಡ ಹೆಚ್ಚಿ ದೃಷ್ಟಿ ನಾಶ ಮಾಡುವ (Glaucoma) ಒಂದು ತರಹ ಕಣ್ಣು ರೋಗವು ಸಂಭವಿಸಬಹುದು. ಇದನ್ನು ಕೆಲವು ವೇಳೆ ಬರೀ ಔಷಧಿಯಲ್ಲೇ ಗುಣಪಡಿಸಬಹುದು. ಆದರೆ ಕೆಲವು ವೇಳೆ ಶಸ್ತ್ರಚಿಕಿತ್ಸೆ ಮಾಡಿಯೇ ಸರಿಪಡಿಸಬೇಕಾಗುತ್ತೆ. ಪೊರೆಯ ಚಿಕಿತ್ಸೆಯಾದ ಬಹಳ ದಿನಗಳ ನಂತರ ಸಹ ಕಣ್ಣಿನ ಅಕ್ಷಿಪಟ (Retina) ಕಳಚಿಕೊಳ್ಳುವ ಸಂಭವ ಸಹ ಸ್ವಲ್ಪ ಮಟ್ಟಿಗೆ ಇದೆ. ಹೀಗೆ ಈ ರೀತಿಯ ತೊಂದರೆಗಳು ಬರುವ ಸಂಭವವಿದೆ ಎಂದು ಹೇಳಿದರೂ, ವಾಸ್ತವಿಕವಾಗಿ ನೋಡಿದರೆ ಈ ತರಹ ಸಂಭವಿಸಿರುವ ರೋಗಿಗಳ ಸಂಖ್ಯೆ ಅತಿ ಕಡಿಮೆ. ಎಲ್ಲಾ ತರಹ ಶಸ್ತ್ರಚಿಕಿತ್ಸೆಗಳ ಫಲಿತಾಂಶಗಳನ್ನು ವೀಕ್ಷಿಸಿದರೆ, ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಯ ಫಲಿತಾಂಶ ಅತ್ಯುತ್ತಮವಾಗಿರುವುದು.

ಕಣ್ಣಿನ ಒಳಗಡೆ ಅಳವಡಿಸುವ ಲೆನ್ಸ್‌ನಲ್ಲಿರುವ ಅಪಾಯಗಳೇನು?

(Intra ocular lens) :

ಈ ಲೆನ್ಸ್ ಎಷ್ಟಾದರೂ ಹೊರಗಡೆಯ ವಸ್ತುವಾಗಿರುವುದರಿಂದ ಕಣ್ಣಿನ ಒಳಗಡೆಗೆ ಅಳವಡಿಸಿದಾಗ ಕೆಲವು ಅಪಾಯಗಳಾಗುವ ಸಂಭವ ಇದ್ದೇ ಇರುತ್ತೆ. ಅಂದರೆ ಕಣ್ಣಿನ ಪೊರೆಯ ಸಾಧಾರಣ ಶಸ್ತ್ರಚಿಕಿತ್ಸೆಯಲ್ಲಿ ಶೇಕಡ 1 ಅಥವಾ 2 ಅಂಶಗಳಷ್ಟು ಅಪಾಯ ಸಂಭವಿಸುವ ಅವಕಾಶ ಇದ್ದರೆ ಇದರಲ್ಲಿ ಶೇಕಡ 3 ಅಥವಾ 4 ಅಂಶಗಳಷ್ಟು ಅಪಾಯ ಮತ್ತು ಸಮಸ್ಯೆಗಳು ಹೆಚ್ಚಿಗೆ ಇರಬಹುದು. ಆದರೆ ಫಲಿತಾಂಶದ ಪ್ರಕಾರ ಈ ತರಹ ಲೆನ್ಸಿನಿಂದ ನೂರಕ್ಕೆ 96ರಷ್ಟು ಅವಕಾಶ ಉತ್ತಮ ದೃಷ್ಟಿಯು ದೊರಕುವುದಕ್ಕೆ ಇದೆ. ಸಾಧಾರಣ ಶಸ್ತ್ರಚಿಕಿತ್ಸೆಯಾದ ಕಣ್ಣಿಗಿಂತ ಈ ಲೆನ್ಸ್‌ನ ಉಪಯೋಗದಿಂದ, ಕಣ್ಣಿಗೆ ಸ್ವಲ್ಪಮಟ್ಟಿಗೆ ಹೆಚ್ಚಿನ ನವೆ ಮತ್ತು ಉರಿವುಂಟಾಗಬಹುದು, ಒಮ್ಮೊಮ್ಮೆ ಈ ಲೆನ್ಸ್‌ಗಳು ಕಳಚಿಕೊಳ್ಳುವ ಸಂದರ್ಭಗಳೂ ಉಂಟು. ಹಾಗಾದ ಪಕ್ಷದಲ್ಲಿ ಅದನ್ನು ಸರಿಪಡಿಸಲು ಮತ್ತೊಮ್ಮೆ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಬೀಳಬಹುದು. ಲೆನ್ಸನ್ನು ಕಣ್ಣಿನ ಪಾಪೆಯ ಆವರಣದಲ್ಲಿಡದೆ, ಅದರ ಮುಂಭಾಗದಲ್ಲೋ ಅಥವಾ ಹಿಂಭಾಗದಲ್ಲೋ ಅಳವಡಿಸಿದರೆ ಈ ರೀತಿ ಆಗುವುದಿಲ್ಲ. ಮತ್ತೆ ಕೆಲವು ವೇಳೆ ಈ ಲೆನ್ಸ್‌ನ್ನು ಅಳವಡಿಸಿ ದೀರ್ಘಕಾಲದ ನಂತರ ಕೂಡ ಕಣ್ಣಿನ ಒಳಗಿನ ಒತ್ತಡ ಹೆಚ್ಚಾಗಿ ''ಗ್ಲಾಕೋಮ'' ಎಂಬ ಕಣ್ಣಿನ ರೋಗವುಂಟಾಗಬಹುದು. ಕೆಲವು ಬಗೆಯ ಲೆನ್ಸ್‌ಗಳನ್ನು ಉಪಯೋಗಿಸಿದಾಗ, ಕಣ್ಣನ್ನು ಪರೀಕ್ಷೆ ಮಾಡುವ ಸಂದರ್ಭದಲ್ಲಿ, ಕಣ್ಣಿನ ಪಾಪೆಯನ್ನು ಹಿಗ್ಗಿಸಲು ದ್ರವವನ್ನು ಹಾಕಬೇಕಾದಾಗ ಬಹಳ ಎಚ್ಚರಿಕೆಯನ್ನು ವಹಿಸಬೇಕು. ಇಲ್ಲದೇ ಹೋದರೆ ಈ ಲೆನ್ಸ್ ಕಳಚಿಕೊಳ್ಳುವ ಸಂಭವವಿದೆ. ಆದರೆ ಈ ಸಮಸ್ಯೆ ಕಣ್ಣಿನ ಪಾಪೆಯ ಮುಂದೆ ಅಥವಾ ಹಿಂದೆ ಅಳವಡಿಸುವ ಲೆನ್ಸ್‌ಗಳಲ್ಲಿ ಇರುವುದಿಲ್ಲ. ಒಟ್ಟಿನಲ್ಲಿ ಹೇಳಬೇಕೆಂದರೆ, ಈ ಎಲ್ಲಾ ತೊಂದರೆಗಳನ್ನೂ ಒಟ್ಟಾಗಿ ನೋಡಿದರೆ 100ಕ್ಕೆ ಕೇವಲ 4 ಅಂಶಗಳಷ್ಟು ಅಪಾಯವಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಲಕ್ಷೋಪಲಕ್ಷ ಜನರಿಗೆ ಕಣ್ಣಿನ ಒಳಗಡೆ ಈ ಲೆನ್ಸ್‌ನ್ನು ಅಳವಡಿಸಿದ್ದಾರೆ ಮತ್ತು ಸಾಮಾನ್ಯವಾಗಿ ನಿರಪಾಯಕಾರ ಎಂದೇ ಕಂಡು ಬಂದಿದೆ. ಕಣ್ಣಿನ ಒಳಗಡೆ ಲೆನ್ಸ್‌ನ್ನು ಅಳವಡಿಸಬೇಕೋ ಬೇಡವೋ ಎಂಬುದನ್ನು ಶಸ್ತ್ರವೈದ್ಯನು ನಿರ್ಧರಿ

ಸುತ್ತಾನೆ. ಸಕ್ಕರೆ, ರೋಗ, ಅಕ್ಷಿಪಟ ಕಳಚುವ ಸಂಭವಿರುವಿಕೆ, ಕಣ್ಣಿನ ಒತ್ತಡ ಇವು ಇರುವ ರೋಗಿಗಳಿಗೆ ಲೆನ್ಸ್‌ನ್ನು ಕಣ್ಣಿನ ಒಳಗಡೆ ಅಳವಡಿಸುವುದು ಎಷ್ಟರಮಟ್ಟಿಗೆ ಸುರಕ್ಷಿತ ಎಂಬುದನ್ನು ಶಸ್ತ್ರವೈದ್ಯನು ಶಸ್ತ್ರಚಿಕಿತ್ಸೆಯ ಕಾಲದಲ್ಲಿ ನಿರ್ಧರಿಸುತ್ತಾನೆ. ಈ ಲೆನ್ಸ್‌ನ್ನು ರೋಗಿಯ ಸ್ವಯಿಚ್ಛೆಯಿಂದ ಮಾತ್ರ ಅಳವಡಿಸುತ್ತಾರೆ ಅವನ ಇಚ್ಛೆಗೆ ವಿರುದ್ಧವಾಗಿ ಎಂದಿಗೂ ಅಳವಡಿಸುವುದಿಲ್ಲ.

ನಿಮ್ಮ ಕಣ್ಣಿನ ಒಳಗಡೆ ಲೆನ್ಸ್‌ನ್ನು ಅಳವಡಿಸಿಕೊಳ್ಳುವುದಕ್ಕೆ ಮೊದಲು ನಿಮ್ಮ ಶಸ್ತ್ರ ವೈದ್ಯರೊಡನೆ ಇದರ ವಿಚಾರವಾಗಿ ಕೂಲಂಕ ಷವಾಗಿ ಚರ್ಚಿಸಿ ನಂತರ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಸರ್ವೇಸಾಧಾರಣವಾಗಿ ಒಳಗಡೆ ಅಳವಡಿಸುವ ಈ ಲೆನ್ಸ್ ಕ್ಷೇಮಕರವೆಂದೇ ಕಂಡು ಬಂದಿದೆ. ಏಕೆಂದರೆ ಕಣ್ಣಿನ ಪೊರೆಯ ಆಪರೇಷನ್‌ನಿಂದ ಬರಬೇಕಾದ ದೃಷ್ಟಿಗಿಂತ ಇನ್ನೂ ಅತಿ ಹೆಚ್ಚಿನ ಮಟ್ಟದ ದೃಷ್ಟಿಯು ಬರುವುದು. ಈ ದೃಷ್ಟಿಯ ಮಟ್ಟವು ಪೊರೆ ಬಲಿಯುವುದಕ್ಕೆ ಮುನ್ನ ಇದ್ದ ನಿಮ್ಮ ದೃಷ್ಟಿಯ ಮಟ್ಟದಷ್ಟೇ ಸಾಮಾನ್ಯವಾಗಿ ಇರುವುದು.

ನೀವು ಕಣ್ಣಿನ ಒಳಗಡೆಗೆ, ಲೆನ್ಸ್‌ನ್ನು ಅಳವಡಿಸುವ ಶಸ್ತ್ರಚಿಕಿತ್ಸೆಯನ್ನು ಆರಿಸಿಕೊಂಡರೆ, ಶಸ್ತ್ರಚಿಕಿತ್ಸೆಯಾದ ನಂತರ 3 ತಿಂಗಳಿಗೊಮ್ಮೆ ಕನಿಷ್ಠ ಪಕ್ಷ ಒಂದು ವರ್ಷದವರೆಗೆ ವೈದ್ಯನನ್ನು ಬಂದು ನೋಡಿ ಸಲಹ ತೆಗೆದುಕೊಳ್ಳುತ್ತಿರಬೇಕು. ಇದರ ಅನುಕೂಲವೇನೆಂದರೆ ಕಣ್ಣಿನಲ್ಲಿ ಯಾವ ತರಹ ಸಮಸ್ಯೆಗಳೂ ಉಂಟಾಗದಂತೆ ಶಸ್ತ್ರವೈದ್ಯನು ನೋಡಿಕೊಳ್ಳಬಹುದು.

ಕಣ್ಣಿನ ಒಳಗಡೆ ಅಳವಡಿಸುವ ಲೆನ್ಸ್‌ಗಳಲ್ಲಿ (Intra ocular lens) ಅನೇಕ ವಿಧಗಳಿರುತ್ತವೆ. ಕೆಲವನ್ನು ಕಣ್ಣಿನ ಪಾಪೆಯ ಮುಂದುಗಡೆಯ ಕೋಶದಲ್ಲಿ ಅಳವಡಿಸುತ್ತಾರೆ. ಕೆಲವನ್ನು ಕಣ್ಣಿನ ಪಾಪೆಯ ಮೇಲೆ ಅಳವಡಿಸುತ್ತಾರೆ. ಇನ್ನು ಕೆಲವರಿಗೆ ಪಾಪೆಯ ಹಿಂಭಾಗದಲ್ಲಿ ಹಿಂದೆ ನೈಜ ಲೆನ್ಸ್ ಇದ್ದ ನಿರ್ದಿಷ್ಟವಾದ ಸ್ಥಳದಲ್ಲೇ ಅಳವಡಿಸುತ್ತಾರೆ.

ಈ ಬಗೆಯ ಲೆನ್ಸ್‌ಗಳನ್ನು ಸಾಧಾರಣವಾಗಿ ಶಸ್ತ್ರಚಿಕಿತ್ಸಾ ಕಾಲದಲ್ಲೇ ಅಳವಡಿಸುತ್ತಾರೆ. ಕೆಲವು ವೇಳೆ, ಕಣ್ಣಿನ ಪರೆ ಶಸ್ತ್ರಚಿಕಿತ್ಸೆಯಾಗಿ ಅನೇಕ ವರ್ಷಗಳು ಆಗಿದ್ದರೂ ಕೂಡ ಪುನಃ ಈ ಬಗೆಯ ಲೆನ್ಸ್‌ಗಳನ್ನು ಕಣ್ಣಿನ ಒಳಗಡೆ ಅಳವಡಿಸ ಬಹುದು. ಅವುಗಳ ವಿಚಾರವಾಗಿ ಶಸ್ತ್ರವೈದ್ಯನೊಡನೆ ಕೂಲಂಕ ಷವಾಗಿ ಚರ್ಚಿಸಿ ರೋಗಿಗಳು ಯುಕ್ತವಾದದ್ದನ್ನು ಮಾಡಬಹುದು. ●

• ದೇಸಾಯರ ವಿಶೇಷ :

ಭಾರತ ರತ್ನ, ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯರು 1917ರಲ್ಲಿ ಪದವೀಧರರಾದ ಮೇಲೆ ಪ್ರಾಂತೀಯ ನಾಗರಿಕ ಸೇವೆ ಕೆಲಸಕ್ಕೆ ಅರ್ಜಿ ಹಾಕಿದ್ದರು. ಬಡವರಾಗಿದ್ದ ಅವರ ಬಳಿ ಉತ್ತಮ ಬಟ್ಟೆಗಳಿರದ ಕಾರಣ ಬೇರೊಬ್ಬರ ವಸ್ತ್ರಗಳನ್ನು ಧರಿಸಿ ಸಂದರ್ಶನಕ್ಕೆ ಹೋದರು. ಸಂದರ್ಶನ ನಡೆಸಿದ ಆಂಗ್ಲ ಅಧಿಕಾರಿಗಳು 'ಈ ಕೆಲಸವು ದೊರಕದಿದ್ದರೆ ನಿನಗೆ ಏನು ಅನಿಸುತ್ತದೆ?' ಎಂದು ಕೇಳಿದರು. ಅದಕ್ಕೆ ದೇಸಾಯರು 'ಯಾರಿಗೆ ಗೊತ್ತು? ನನಗೆ ಇದಕ್ಕಿಂತ ಉತ್ತಮ ಅವಕಾಶ ದೊರಕಬಹುದಲ್ಲವೆ?' ಎಂದು ಮರುಪ್ರಶ್ನೆ ಮಾಡಿದರು. ದೇಸಾಯರ ಸ್ಪಷ್ಟ, ನಿರ್ಭೀತ, ಪ್ರಾಮಾಣಿಕ ಹಾಗೂ ಆತ್ಮ ವಿಶ್ವಾಸದ ನಡವಳಿಕೆ ಫಲಕೊಟ್ಟಿತು. ಇನ್ನೊಂದು ಸ್ಥಾನ ಸೃಷ್ಟಿಯಾಗಿ ಅದು ದೇಸಾಯರಿಗೆ ದಕ್ಕಿತು.

(ಸಂಗ್ರಹ) ಕೆ.ವೆಂಕಣ್ಣಾಚಾರ್

ನಮ್ಮ ಸಾಂಸ್ಕೃತಿಕ ರಿವಾಜುಗಳೊಂದಿಗೆ ಬೆಸೆದುಕೊಂಡ

ಹಸುರು ಹೊನ್ನು– ಕಲ್ಪವೃಕ್ಷ

ಡಾ/ ನಡಿಬೈಲು ಉದಯಶಂಕರ

ಹಿಂದೆ ಕೇರಳದಲ್ಲಿದ್ದ ಒಬ್ಬ ಮೀನ್ಗುಗಾರನಿಗೆ ನಿರಾಸೆ ಸದಾ ಕಟ್ಟಿಟ್ಟ ಬುತ್ತಿಯಾಗಿತ್ತು. ಮೀನುಗಳೂ ಕೂಡಾ ಅವನ ಗಾಳದಿಂದ ಬಹುದೂರ. ಬದುಕಿನಲ್ಲೇ ಹತಾಶನಾದ ಅವನು ಯಾವುದಾದರೂ ಮಾಯಾ ವಿದ್ಯೆಯನ್ನು ಕಲಿತು ಅದರ ಮೂಲಕ ಮೀನುಗಳನ್ನು ಹಿಡಿಯಲು ನಿರ್ಧರಿಸಿದ.

ತನ್ನ ತಲೆಯನ್ನು ದೇಹದಿಂದ ಪ್ರತ್ಯೇಕಿಸಿ, ಬಳಿಕ ಸಮಯ ಬಂದಾಗ ಅದನ್ನು ಪುನಃ ದೇಹಕ್ಕೆ ಜೋಡಿಸುವ ಕಲೆಯನ್ನು ಅವನು ಕರಗತಪಡಿಸಿಕೊಂಡು ಸಂಜೆಯ ಹೊತ್ತಿನಲ್ಲಿ ನದೀ ದಡದಲ್ಲಿ ತನ್ನ ತಲೆಯನ್ನು ಬೇರ್ಪಡಿಸಿ ಅವನು ನೀರಿನಲ್ಲಿ ಮುಳುಗತೊಡಗಿದ.

ಇಂತಹ ವಿಚಿತ್ರವನ್ನು ಅರಿತಿರದ ಮೀನುಗಳು ಅವನ ಕುತ್ತಿಗೆಯ ಮುಖಾಂತರ ದೇಹದೊಳಗೆ ನುಸುಳಿದವು. ಅನೇಕ ಮೀನುಗಳು ಅವನ ಶರೀರ ಹೊಕ್ಕೊಡನೇ ನೀರಿನಿಂದ ಹೊರಬಂದು ದಡದಲ್ಲಿ ತನ್ನ ತಲೆಯನ್ನು ಪುನಃ ಅಂಟಿಸಿಕೊಳ್ಳಲು ಸಿದ್ಧನಾಗಿ ಕುತ್ತಿಗೆ ಬಗ್ಗಿಸಿದಾಗ ಎಲ್ಲ ಮೀನುಗಳೂ ಇವನ ಬುಟ್ಟಿಗೇ ಬೀಳುತ್ತಿದ್ದವು. ಹೀಗೇ ಅನೇಕ ದಿನಗಳು ನಡೆದವು. ಗಾಳವಾಗಲೀ ಬಲೆಯಾಗಲೀ ಇರದೆ ಇವನು ಅಪಾರ ಮೀನುಗಳನ್ನು ಹಿಡಿಯತೊಡಗಿದ.

ಇವನು ಮೀನು ಹಿಡಿಯುವುದನ್ನು ನೋಡುವ ಕುತೂಹಲದಿಂದ ಒಬ್ಬ ಪುಟ್ಟ ಬಾಲಕ ಒಂದು ದಿನ ಇವನನ್ನು ಮೌನವಾಗಿ ಹಿಂಬಾಲಿಸಿದ. ಮೀನುಗಾರ ತಲೆಯನ್ನು ಬೇರ್ಪಡಿಸಿ ಪೊದೆಯ ಬದಿಯಲ್ಲಿ ಬಚ್ಚಿಟ್ಟಾಗ ಹುಡುಗ ಕುತೂಹಲದಿಂದ ಆ ತಲೆಯನ್ನು ಕೈಗೆತ್ತಿಕೊಂಡ. ಆದರೆ ಅದು ಕ್ಷಣ ಕ್ಷಣಕ್ಕೂ ಭಾರವಾಗತೊಡಗಿತು. ಹುಡುಗನ ಕೈಯಲ್ಲಿ ಹಿಡಿಯದಾಯಿತು. ಸ್ವಲ್ಪ ಮುಂದೆ ಓಡಿ ಅಲ್ಲಿನ ಇನ್ನೊಂದು ಪೊದೆಯಲ್ಲಿ ಅದನ್ನು ಬಚ್ಚಿಟ್ಟು ಹುಡುಗ ಊರೊಳಗೆ ಓಡಿದ.

ನೀರಿನಿಂದ ಹೊರಬಂದಾಗ ಮೀನುಗಾರನಿಗೆ ತನ್ನ ತಲೆ ಕಾಣಸಲಿಲ್ಲ. ಬೇರೆ ಉಪಾಯ ಕಾಣದೆ ಅವನು ಪುನಃ ನೀರಿಗೆ ಹೋಗಿ ಒಂದು ದೊಡ್ಡ ಮೀನಾಗಿ ಪರಿವರ್ತನೆಗೊಂಡ.

ಊರವರೆಲ್ಲ ನದೀ ತೀರಕ್ಕೆ ಬಂದಾಗ ಹುಡುಗ ಬಿಸಾಡಿದ ತಲೆ ಚಿಗುರಿ ಎತ್ತರದ ಮರವಾಗಿತ್ತು. ಮೀನುಗಾರನ ತಲೆ ಮರದ ತುದಿಯಲ್ಲಿತ್ತು. ತೆಂಗಿನ ಕಾಯಿ ಹುಟ್ಟಿದ್ದು ಹೀಗೆ ಎನ್ನುತ್ತದೆ ಕೇರಳದ ಒಂದು ಜಾನಪದ ಕತೆ.

ಆದ್ದರಿಂದಲೇ ತೆಂಗಿನಕಾಯಿಯನ್ನು ನರಬಲಿಗೆ ಬದಲಾಗಿ ಕಾಳಿಗೆ ಅರ್ಪಿಸುವ ಸಂಪ್ರದಾಯವಿದೆ. ಕೆಳಗಡೆ ತಿರುಗುವ ಮನುಷ್ಯರ ಅಥವಾ ಪ್ರಾಣಿಗಳ ಮೇಲೆ ತೆಂಗಿನಕಾಯಿ ಬೀಳುವುದಿಲ್ಲ. ಯಾರೂ ಇಲ್ಲದ ಹೊತ್ತಲ್ಲೇ ಅದು ಮರದಿಂದ ನೆಲಕ್ಕುಪ್ಪಳಿಸುತ್ತದೆ. ಏಕೆಂದರೆ ಅದಕ್ಕೂ ಕಣ್ಣುಗಳಿವೆ ಎಂಬುದು ಸಾಂಪ್ರದಾಯಿಕ ನಂಬಿಕೆ.

ತೆಂಗಿನಕಾಯಿ ನಮ್ಮ ಅಸಂಖ್ಯ ಸಾಂಸ್ಕೃತಿಕ ರಿವಾಜುಗಳೊಂದಿಗೆ ಬೆರೆತುಕೊಂಡಿದೆ. ಹೊಸ ವರ್ಷದ ಮುಂಜಾನೆ ತೆಂಗಿನಕಾಯಿ ಕಂಡರೆ ವರ್ಷಪೂರ್ತಿ ಸಮೃದ್ಧಿ ಇರುವುದೆಂಬುದು ದೇಶದ ಉದ್ದಗಲಕ್ಕೂ ಪ್ರಚಲಿತವಿರುವ ವಿಶ್ವಾಸ. ಮದುಮಗಳ ತಲೆಯ ಮೇಲೆ ಕೆಲವು ತೆಂಗಿನ ಚೂರುಗಳು ಮತ್ತು ನಿಂಬೆ ಹಣ್ಣನ್ನು

ಎರಚುವುದರಿಂದ ಎಲ್ಲ ಬಗೆಯ ಭೂತಪ್ರೇತಗಳು ನಿರ್ನಾಮವಾಗುತ್ತವೆ ಎನ್ನುತ್ತಾರೆ ದಕ್ಷಿಣದ ಮುಸಲ್ಮಾನರು. ಗುಜರಾತಿನ ಅನೇಕ ಕುಟುಂಬಗಳಿಗೆ ತೆಂಗಿನಕಾಯಿಯೇ ಕುಲದೇವತೆ. ಪಶ್ಚಿಮ ಭಾರತದ ಜನ ಮಳೆಗಾಲದ ಕೊನೆಯಲ್ಲಿ ಸಮುದ್ರಕ್ಕೆ ತೆಂಗಿನಕಾಯಿ ಅರ್ಪಿಸಿ ಜಲದೇವತೆಯ ಕೋಪ-ತಾಪಗಳನ್ನು 'ನಿಗ್ರಹಿಸುತ್ತಾರೆ'. ಶುಭಕಾರ್ಯಗಳಲ್ಲಿ, ಪೂಜೆಪುನಸ್ಕಾರಗಳಲ್ಲಿ ತೆಂಗಿನಕಾಯಿಗೆ ಅದ್ವಿತೀಯ ಸ್ಥಾನ. ಏಕೆಂದರೆ ಸ್ವರ್ಗದಿಂದಲೂ, ಭೂಮಿಯಿಂದಲೂ ಪರಿತ್ಯಕ್ತನಾದ ತ್ರಿಶಂಕು ಮಹಾರಾಜನಿಗೆ ಆಸರೆಯಾಗಿ ವಿಶ್ವಾಮಿತ್ರರು ತೆಂಗಿನಮರಗಳನ್ನು ಸೃಷ್ಟಿಸಿದರೆಂಬುದು ಪುರಾಣಗಳ ಅಂಬೋಣ.

'ಪಾಮೇ' ಎಂಬ ಸಸ್ಯ ಕುಟುಂಬಕ್ಕೆ ಸೇರಿದ ತೆಂಗಿನಮರದ ಸಸ್ಯಶಾಸ್ತ್ರೀಯ ಹೆಸರು ಕೊಕೊಸ್ ನ್ಯುಸಿಫೆರಾ. ನಾರಿಕೇಲ, ದೃಢಫಲ, ಸ್ಕಂದಫಲ, ತುಂಗ, ತೃಣರಾಜ, ಸದಾಫಲ, ದಾಕ್ಷಿಣಾತ್ಯಕ ಮೊದಲಾದ ಸಂಸ್ಕೃತ ಹೆಸರುಗಳಂತೆ ನಾರಿಯಲ್ (ಹಿಂದಿ) ನಾರಗೀಲ (ಫಾರ್ಸಿ) ತೆಂಗಾ (ಮಲಯಾಳ) ತೆನ್ನಾಮರಂ (ತಮಿಳು) ಕೋಕೊನಟ್ (ಇಂಗ್ಲೀಷ್) ಮೊದಲಾದ ಹೆಸರುಗಳೂ ಜನಪ್ರಿಯವಾಗಿವೆ.

ತೆಂಗಿನಮರದ ಎಲ್ಲ ಭಾಗಗಳೂ ಉಪಯುಕ್ತವಾದುದರಿಂದ ಇದಕ್ಕೆ ಕಲ್ಪವೃಕ್ಷ ಎನ್ನುವುದುಂಟು. ಎಲೆಗಳು ಮನೆಯ ಛಾವಣಿಯಾದರೆ, ಕಾಂಡವು ದೋಣಿಗಳಾಗಿ ಮಾರ್ಪಡುತ್ತದೆ. ತೆಂಗಿನ ನಾರಿನ ಉದ್ಯಮದಂತೆ ತೆಂಗಿನ ಚಿಪ್ಪನ್ನು ಸುಟ್ಟು ಕಪ್ಪುಬಣ್ಣವನ್ನು ತಯಾರಿಸುವ ಕಾರ್ಖಾನೆಗಳೂ ಇವೆ.

ತೆಂಗಿನಕಾಯಿಯಿಂದ ಬಗೆಬಗೆಯ ಭಕ್ಷ್ಯಭೋಜ್ಯಗಳನ್ನು ತಯಾರಿಸಿ ಆನಂದಿಸುವವರು ಒಂದೆಡೆಯಾದರೆ, ಅದರಿಂದ 'ನೀರಾ' ಎಂಬ ಪೋಷಕಾಂಶಭರಿತ ಪೇಯವನ್ನು ನಿರ್ಮಿಸುವವರು ಇನ್ನೊಂದೆಡೆ ಕಾಣಸಿಗುತ್ತಾರೆ. 'ನೀರಾ' ಸೂರ್ಯನ ಬಿಸಿಲು ಬಿದ್ದಾಗ ಮಾದಕಪೇಯವಾಗಿ ಮಾರ್ಪಡುತ್ತದೆ. ಇದಕ್ಕೆ 'ಹಸುರು ಹೊನ್ನು' ಎಂಬ ಹೆಸರು ಅನ್ವರ್ಥಕವಲ್ಲವೆ?

ತೆಂಗಿನ ಎಳೆನೀರಿನ ಔಷಧೀಯ ಮಹತ್ವ ಜಗಜ್ಜಾಹೀರಾದುದು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ. ಶರೀರದ ಜಲಾಂಶ ಕಡಿಮೆ ಆದಾಗ ಟ್ರಾನ್ಸ್‌ಫ್ಯೂಶನ್‌ಗಾಗಿ ಇದನ್ನೇ ರಕ್ತನಾಳಗಳ ಮೂಲಕ ನೀಡಿ, ಅನೇಕರ ಜೀವಗಳನ್ನು ರಕ್ಷಿಸಿದ್ದಿದೆ. ಇದು ಪ್ರೋಟೀನ್ (0.62 %) ಗ್ಲೂಕೋಸ್ (5.5 %) ಕ್ಲೋರ್ರ್ಯಾಡ್‌ಗಳು (0.55 %) ಆಮ್ಲಗಳು (0.5 %) ಫಾಸ್ಫೇಟ್‌ಗಳು, ಪೊಟ್ಯಾಶಿಯಂ ... ಇತ್ಯಾದಿ ಅಸಂಖ್ಯ ಸಾರಗಳ ಆಗರ. ಎಳೆನೀರಿನಲ್ಲಿ 92.32 % ಪಾಲು ಬರಿಯ ನೀರು ಇರುತ್ತದೆ.

ಶತಶತಮಾನಗಳಿಂದ ಆಯುರ್ವೇದ ವೈದ್ಯರು ತೆಂಗಿನ ಎಳನೀರನ್ನು ಪಥ್ಯವಾಗಿ ಆದೇಶಿಸುತ್ತಿದ್ದಾರೆ. ಇದು ಶಕ್ತಿಯನ್ನು ವರ್ಧಿಸಿ ಮಾಂಸಗಳನ್ನು ಹೆಚ್ಚಿಸುತ್ತದೆ. ಮೂತ್ರಶೋಧಕವಾಗಿದೆ, ಪಿತ್ತ ನಿವಾರಕವಾಗಿದೆ ಎನ್ನುತ್ತದೆ ಕ್ರಿಸ್ತಪೂರ್ವದ ಗ್ರಂಥವೆನ್ನಲಾದ ಸುಶ್ರುತ ಸಂಹಿತೆ. ಹದಿನೈದನೇ ಶತಮಾನದ ಭಾವಪ್ರಕಾಶ ನಿಘಂಟುವಿನಲ್ಲಿ ಎಳನೀರು ಹಸಿವನ್ನು ಹೆಚ್ಚಿಸುತ್ತದೆ, ಇದು ಪಿತ್ತ ಜ್ವರಕ್ಕೆ ಒಳ್ಳೆಯ ಮದ್ದು ಎನ್ನಲಾಗಿದೆ. ಆ ಬಳಿಕದ ಕಯ-ದೇವ ನಿಘಂಟು ಎಂಬ ಗ್ರಂಥವು ತೆಂಗಿನ ಹಾಲು ರಕ್ತಯುಕ್ತ ಮಲಪ್ರವೃತ್ತಿಯನ್ನು ತಡೆಹಿಡಿಯುತ್ತದೆ. ಅತಿ ಮೂತ್ರಪ್ರವೃತ್ತಿಗೆ ಕಡಿವಾಣ ಹಾಕುತ್ತದೆ ಎಂದು ಇದರ ಬಹುಮುಖ ಗುಣಧರ್ಮಗಳನ್ನು ವಿವರಿಸುತ್ತದೆ.

ತೆಂಗಿನ ಎಣ್ಣೆಯು ತಲೆ ಕೂದಲಿಗೆ ಪೋಷಕವಾಗಿದ್ದು ಕೂದಲಿನ ಬೆಳವಣಿಗೆಗೂ ಸಹಾಯಕವಾಗಿದೆ.

ಸಮುದ್ರತಟವರ್ತಿಯಾದ ದಕ್ಷಿಣಭಾರತ, ಪೂರ್ವಬಂಗಾಲ, ಓರಿಸ್ಸಾ, ಬರ್ಮಾ, ಶ್ರೀಲಂಕಾ ಮೊದಲಾದ ಪ್ರದೇಶಗಳಲ್ಲಿ ತೆಂಗಿನ ಮರವೇನೋ ವ್ಯಾಪಕವಾಗಿ ಬೆಳೆಯುತ್ತದೆ. ಆದರೆ ಅದರಂತೆ ಬಹು ಉಪಯೋಗಿ ಮನುಷ್ಯರನ್ನು ಎಲ್ಲಿ ಹುಡುಕೋಣ? ಹೇಳಿ. ●

ಕ್ರೈಸ್ತ ಧರ್ಮದ ಮೂಲ ಪುರುಷ ಭಾರತದ ಧಾರ್ಮಿಕ ಪರಂಪರೆಯಿಂದ ಪ್ರಭಾವಿತನಾಗಿದ್ದ.

ಯೇಸುಕ್ರಿಸ್ತ ಭಾರತಕ್ಕೆ ಬಂದಿದ್ದನೇ?

ಮೂಲ ಹಿಂದಿ : ಆಚಾರ್ಯ ನರದೇವ ಶಾಸ್ತ್ರಿ
ಅನುವಾದಕರು : ಸವ್ಯಸಾಚಿ

ಲೋಕಮಾನ್ಯ ತಿಲಕರ ಗೀತಾರಹಸ್ಯದಲ್ಲಿ ಹೀಗಿದೆ: ''ಯೇಸು ತನ್ನ 12ನೇ ವರ್ಷ ವಯಸ್ಸಿನಿಂದ ಎಲ್ಲಿ ಏನು ಮಾಡುತ್ತಲಿದ್ದ ಎಂಬುದರ ಬಗ್ಗೆ ಬೈಬಲ್ಲಿನಲ್ಲಿ ಯಾವ ಉಲ್ಲೇಖವೂ ದೊರೆಯುವುದಿಲ್ಲ. ಈ ವೇಳೆಯನ್ನವನು ಜ್ಞಾನಾರ್ಜನೆಯಲ್ಲೋ ಧರ್ಮಚಿಂತನೆಯಲ್ಲೋ ಅಥವಾ ಪ್ರವಾಸದಲ್ಲೋ ಕಳೆದಿರಬೇಕೆಂದು ಊಹಿಸಲೆಡೆಯಿದೆ. ಈ ಅವಧಿಯಲ್ಲಿ ಅವನು ಬೌದ್ಧ ಭಿಕ್ಷುಗಳೊಡನೆ ಸಂಪರ್ಕ ಬೆಳೆಸಿರಲಾರನೆಂದು ಅದೆಂತು ಹೇಳಲು ಸಾಧ್ಯ? ಏಕೆಂದರೆ ಆ ಹೊತ್ತಿಗಾಗಲೆ ಬೌದ್ಧ ಭಿಕ್ಷುಗಳು ಗ್ರೀಸ್‌ವರೆಗೂ ತಲುಪಿದ್ದರು. ನೇಪಾಳದ ಬೌದ್ಧಮಠವೊಂದರ



ಕಸ್ತೂರಿ ನಡೆದು ಬಂದ ದಾರಿ

ಜನವರಿ 1961ರ ಸಂಚಿಕೆಯಿಂದ

ಗ್ರಂಥಾಲಯದಲ್ಲಿ ದೊರೆತ ಪುಸ್ತಕದಲ್ಲಿ ಯೇಸು ಭಾರತಕ್ಕೆ ಬಂದಿದ್ದನೆಂದು ಸ್ಪಷ್ಟವಾಗಿ ಬರೆಯಲ್ಪಟ್ಟಿದೆ. ಈ ಗ್ರಂಥವನ್ನು ರಶ್ಯನ್ ಪ್ರವಾಸಿಯಾದ ನಿಕೋಲಸ್ ನೊಟೋವಿಶ್ ನೋಡಿದ್ದ. ಅವನು ಆ ಗ್ರಂಥವನ್ನು 1894ರಲ್ಲಿ ಫ್ರೆಂಚ್ ಭಾಷೆಯಲ್ಲಿ ಪ್ರಕಟಗೊಳಿಸಿದ್ದ.''

ನೊಟೋವಿಶ್ ಹೀಗೆಂದಿದ್ದಾನೆ: ನಾನು ಸುಂದರ ದೇಶಗಳನ್ನು ನೋಡಬೇಕೆಂಬ ಅಭಿಲಾಷೆಯೊಂದನ್ನೇ ಗುರಿಯಾಗಿಟ್ಟುಕೊಂಡು ನನ್ನ ನಾಡನ್ನು ತೊರೆದು ಹೊರಟಿದ್ದೆ. ನಾನು ಟಿಬೇಟಿಗೆ ತಲುಪಿದಾಗ ಅಲ್ಲಿಯ ಲಾಮಾರಿಗೆ ಯೇಸುವಿನ ಹೆಸರು ಗೊತ್ತಿರುವುದು ತಿಳಿಯಿತು. ಯೇಸು ಪಶ್ಚಿಮದಿಂದ ಬಂದಿದ್ದನೆಂಬುದೂ ಲಾಮಾರಲ್ಲಿ ಪರಂಪರಾಗತವಾದ ವಿಚಾರವಾಗಿತ್ತು. ಬಹಳ ಹುಡುಕಾಡಿದ ಬಳಿಕ 'ಹಿಮಿಸ್' ಎಂಬ ಬೌದ್ಧ ಮಠದಲ್ಲಿ ಯೇಸುವಿನ ಜೀವನ ಚರಿತ್ರೆಯಿದೆಯೆಂದು ತಿಳಿದುಬಂತು. ಅಲ್ಲಿ ಹೋಗಿ ನಾನು ನನ್ನ ಚಾತುರ್ಯವನ್ನೆಲ್ಲ ಉಪಯೋಗಿಸಿ ಆ ಚರಿತ್ರೆಯನ್ನೋದಿದೆ. ಅದರ ಸಾರಾಂಶ ಇಂತಿದೆ:

''ಯೇಸು ಇಸ್ರೇಲಿನ ಒಂದು ಬಡ ಧಾರ್ಮಿಕ ಕುಟುಂಬದಲ್ಲಿ ಜನ್ಮವೆತ್ತಿದ. ಬಾಲ್ಯದಿಂದಲೇ ಅವನ ಮನಸ್ಸು ಧಾರ್ಮಿಕ ಕಾರ್ಯಗಳತ್ತ ಒಲೆಯುತ್ತಿತ್ತು. ಆದ್ದರಿಂದ ಅವನು 13 ವರ್ಷ ಪ್ರಾಯದಲ್ಲಿ ಮನೆಯಿಂದ ಹೊರಬಿದ್ದು ಪ್ರವಾಸಿಕರೊಡನೆ ಸೇರಿ ಸಿಂಧು ದೇಶಕ್ಕೆ ಬಂದ. ಅವನು ಪುರಿ, ರಾಜಗೃಹ ಹಾಗೂ ಬನಾರಸ್‌ನಲ್ಲಿ ವಿದ್ಯಾಭ್ಯಾಸ ಮಾಡಿದ. ಬಳಿಕ ಅವನು ಬೌದ್ಧ ಭಿಕ್ಷುಗಳಿಂದ ಪಾಲೀ ಭಾಷೆಯನ್ನು ಕಲಿತು ಬೌದ್ಧ ಧರ್ಮದ ತತ್ವಗಳನ್ನು ಚೆನ್ನಾಗಿ ಅರಿತು, ಆಮೇಲೆ ಇರಾಣ ಮಾರ್ಗವಾಗಿ ಜೂಡಿಯಾಕ್ಕೆ ಹೋಗಿ ಅಲ್ಲಿ ಪ್ರವಚನಕ್ಕಾರಂಭಿಸಿದ. ಅಲ್ಲಿಯ ಗವರ್ನರ್ ವಾಯಲೆಟ್ ಅವನನ್ನು ಸೆರೆ ಹಿಡಿದು ಶೂಲಕ್ಕೇರಿಸಿದಾಗ ಅವನು ಸತ್ತು ಹೋದ. ಮೂರು ದಿನಗಳ ಮೇಲೆ ಅವನ ಗೋರಿ ತೆರೆದಿರುವುದೂ ಯೇಸು ಎಲ್ಲೆಲ್ಲೂ ಕಾಣಬರುವುದೂ ಎಲ್ಲರ ಗಮನಕ್ಕೆ ಬಂತು.'

ಈ ಗ್ರಂಥವು ಎಲ್ಲೆಲ್ಲೂ ಪ್ರಸಿದ್ಧವಾಗಿ ಚೆನ್ನಾಗಿ ಮಾರಾಟವಾಯಿತು. ನೊಟೋವಿಶ್‌ನು ಈ ಲೇಖನಕ್ಕೆ ಆಧಾರವಾಗಿ ಉಪಯೋಗಿಸಿದ ಗ್ರಂಥವೇ ಕೃತ್ರಿಮವೆಂದು ಕ್ರೈಸ್ತ ಪಂಡಿತರು ಹೇಳಿದರು. ಆದರೆ ಪ್ರಸಿದ್ಧ ರಶಿಯನ್ ಚಿತ್ರಕಾರನಾದ ನಿಕೋಲ್ಸ್ ರೋರಿಕನು 1929ರಲ್ಲಿ 'Hear of Asia' ಎಂಬ ಗ್ರಂಥವೊಂದನ್ನು ಪ್ರಕಟಿಸಿದ. ಅದರಲ್ಲಿ ಅವನು ಹೀಗೆ ಬರೆದಿದ್ದಾನೆ: ''ನಾನು ಕಾಶ್ಮೀರದಲ್ಲಿ ಮೊದಲ ಬಾರಿ ಈ ವಿಲಕ್ಷಣ ದಂತಕಥೆಯನ್ನು ಕೇಳಿದೆ. 'ಹೊಸ ಒಡಂಬಡಿಕೆ'ಯಲ್ಲಿ ಯೇಸು ಈ ನಡುವೆ ಎಲ್ಲೋ ಲುಪ್ತವಾಗಿದ್ದನೆಂದಿಷ್ಟು ಮಾತ್ರ ಬರೆಯಲ್ಪಟ್ಟಿದೆ. ಆ ಅವಧಿಯಲ್ಲಿ ಅವನು ಇತ್ತ ಬಂದಿದ್ದನೆಂಬುದೂ ಬಳಿಕೆಯಲ್ಲಿದೆ. ಯೇಸು ಶಿಲುಬೆಗೇರಿಸಲ್ಪಟ್ಟು ಸಾವಿಗೀಡಾಗಲಿಲ್ಲ ಎಂದು ಶ್ರೀನಗರದ ಮುಸಲ್ಮಾನರು ನನಗೆ ತಿಳಿಸಿದರು. ಅವನ ಶಿಷ್ಯರು ಅವನನ್ನು ಬೇರೆಡೆಗೆ ಒಯ್ದು ಶುಶ್ರೂಷೆ ನಡೆಸಿ ಅವನನ್ನು ಗುಣಪಡಿಸಿದರಂತೆ. ಅವನು ಅಲ್ಲಿಂದ ಶ್ರೀನಗರಕ್ಕೆ ಬಂದು ಮುಂದೆ ಸ್ವಾಭಾವಿಕ ಮರಣಕ್ಕೆ ತುತ್ತಾದನಂತೆ. ಇಲ್ಲೊಂದು ಮನೆಯಿದೆ. ಅಲ್ಲಿ ಯೂಸೂಫನ ಮಗನಾದ ಯೇಸುವಿನ ಸಮಾಧಿಯಿದೆ. ಅಲ್ಲಿ ಈ ಅಭಿಪ್ರಾಯ ಕೊಡುವಂತಹ ಶಿಲಾಲೇಖವೂ ಇದೆ.''

ನಿಕೋಲ್ಸ್ ರೋರಿಕ್ ಮತ್ತೊಂದೆಡೆ ಹೀಗೆ

ಬರೆಯುತ್ತಾನೆ: ''ನಾವು 'ಲೇಹ'ಕ್ಕೆ ಹೋದಾಗ ಅಲ್ಲಿಯ ಹಿಂದೂ ಪೋಸ್ಟ್‌ಮಾಸ್ಟರ್ ಹಾಗೂ ಕೆಲವು ಬೌದ್ಧರು ನಮಗೆ ಪೇಟೆಯ ಸಮೀಪದಲ್ಲಿರುವ ಒಂದು ಕೆರೆಯನ್ನು ತೋರಿಸಿ ಪೆಲೆಸ್ಟಾಯಿನಿಗೆ ಹೋಗುವ ಮೊದಲು ಯೇಸು ಇಲ್ಲಿ ಪ್ರವಚನ ಮಾಡಿದ್ದನೆಂಬ ದಂತಕಥೆಯಿದೆ ಯೆಂದು ತಿಳಿಸಿದರು. ಯೇಸು ಕೆಲ ವ್ಯಾಪಾರಿಗಳ ತಂಡದೊಂದಿಗೆ ಇತ್ತ ಬಂದಿದ್ದನಂತೆ. ಈ ರೀತಿಯ ಕಥೆಗಳನ್ನು ನಾವು ಲದ್ದಾಖ್, ಸಿಂಕಿಯಾಂಗ್, ಮಂಗೋಲಿಯಾ ಮೊದಲಾದ ಸ್ಥಳಗಳಲ್ಲೂ ಕೇಳಿದೆವು. ಪೆಲೆಸ್ಟಾಯಿನ್‌ನಲ್ಲಿ ಒಮ್ಮಿಂದೊಮ್ಮೆ ಕಾಣೆಯಾದ ಯೇಸು ನೇರವಾಗಿ ಭಾರತಕ್ಕೂ ಏಶಿಯಾದ ಇತರ ಕಡೆಗಳಿಗೂ ಬಂದಿದ್ದನೆಂಬುದೇ ಈ ಕಥೆಗಳಲ್ಲೂ ಕಂಡು ಬರುವ ಸಮಾನ ಅಂಶ.''

ಕಾಶ್ಮೀರ ಪ್ರವಾಸಿಗಳಿಗೆ ಹುಲ್ಲು ಛಾವಣಿಯ ಒಂದು ಸಮಾಧಿಯನ್ನು ತೋರಿಸಲಾಗುತ್ತದೆ. ಅಲ್ಲೊಂದು ಆವರಣವಿದೆ. ಅದರೊಳಗೆ 7 ಅಡಿ ಉದ್ದ, 2 ಅಡಿ ಅಗಲ ಹಾಗೂ 1 ಅಡಿ ಎತ್ತರವಾದ ಒಂದು ಕಟ್ಟೆ ಇದೆ. ಅದರ ಮೇಲೆ ಎರಡು ಹೆಜ್ಜೆಗಳಿವೆ. ಇದು ಯೇಸುವಿನ ಸಮಾಧಿ ಯೆಂದು ಜನರ ಹೇಳಿಕೆ.

ಬೈಬಲ್ಲಿನ ಹೇಳಿಕೆಯಂತೆ ಯೇಸು ಪೆಲೆಸ್ಟಾಯಿನಿನಲ್ಲಿ ಜನ್ಮ ತಾಳಿದ. ಅಲ್ಲಿಯೇ ಅವನು ಪ್ರಚಾರ ನಡೆಸಿದ. ಅವನು ಪರದೇಶಕ್ಕೆ ಹೋದ. ಅಲ್ಲಿ ಒಂದೇ ಒಂದು ಘಟನೆಯೂ ಬೈಬಲ್ಲಿನಲ್ಲಿ ಕಾಣಿಸುವುದಿಲ್ಲ.

'ಹೊಸ ಒಡಂಬಡಿಕೆ'ಯಲ್ಲಿ ಯೇಸುವಿನ ನಾಲ್ವರು ಶಿಷ್ಯರು ತಮ್ಮ ತಮ್ಮ ಶಬ್ದಗಳಲ್ಲಿ ಯೇಸುವಿನ ಕುರಿತು ಕೆಲವು ಮಾತು ಬರೆದಿದ್ದಾರೆ. ಆದರೆ ಯೇಸು ತನ್ನ 12ನೇ ವರ್ಷದಿಂದ 30ನೇ ವರ್ಷ ವಯಸ್ಸಿನವರೆಗೆ ಎಲ್ಲಿದ್ದ ಎಂಬುದರ ಬಗ್ಗೆ ಸ್ಪಷ್ಟವಾಗಿ ಏನೇನೂ ಬರೆದಿಲ್ಲ. ಈ ಅವಧಿಯಲ್ಲಿ ಅವನು ಎಲ್ಲೋ ಆಧ್ಯಾತ್ಮ ಚಿಂತನೆಯಲ್ಲಿದ್ದಿರಬಹುದೆಂದು ಅವರು ಬಹು ಅಸ್ಪಷ್ಟವಾಗಿ ಬರೆದಿದ್ದಾರೆ. ಯೇಸು ಭಾರತಕ್ಕೆ ಬಂದಿದ್ದನೆಂಬುದನ್ನು ನಿಕೋಲ್ಸ್ ನೊಟೋವಿಶ್‌ನೇ ಮೊತ್ತ ಮೊದಲು ಪ್ರತಿಪಾದಿಸಿದವನು.

17ನೇ ಶತಮಾನದ ಮಧ್ಯಭಾಗದಲ್ಲಿ ಫ್ರಾನ್ಸಿಸ್ ಬರ್ನೀಯರ್ ಎಂಬವನು 'ಮೊಗಲ ಸಾಮ್ರಾಜ್ಯದ ಪ್ರವಾಸ' ಎಂಬ ಪುಸ್ತಕವನ್ನು ಪ್ರಕಟಿಸಿದ. ಅದರಲ್ಲವನು ಹೀಗೆ ಬರೆಯುತ್ತಾನೆ: ''ಕಾಶ್ಮೀರವು ನನಗೆ ತುಂಬಾ ಸೊಗಸಾಗಿ ತೋರಿತು. ಅಲ್ಲಿ ಯಹೂದಿ ಧರ್ಮದ ಹಲವಾರು ಕುರುಹುಗಳು ದೊರೆತವು. ನಾನು 'ಪೀರ ಪಂಜಾಲ್' ಪರ್ವತ ಶಿಖರಕ್ಕೆ ತಲುಪಿದಾಗ ಅಲ್ಲಿಯ ಜನರ ಆಕಾರ-ಪ್ರಕಾರ, ರೀತಿ-ನೀತಿ ಎಲ್ಲವೂ ಯಹೂದಿಗಳ ಕ್ರಮವನ್ನೇ ಹೋಲುತ್ತಿದೆಯೆಂದು ತೋರಿತು. ದೇಶದೇಶಾಂತರಗಳ ಪ್ರವಾಸ ಕೈಕೊಳ್ಳುವ ಜನರಿಗೆ ಅಲ್ಲಿಯ ಜನರ ವೈಚಿತ್ರ್ಯ ಹಾಗೂ ವೈಶಿಷ್ಟ್ಯದ ವಿಚಾರ ಬಹುಬೇಗನೆ ತಿಳಿದುಹೋಗುತ್ತದೆ. ನನ್ನ ಈ ಅನುಭವವೇ ನನಗಿಂತ ಮೊದಲು ಬಂದ ಪ್ರವಾಸಿಗರಿಗೂ ಉಂಟಾಗಿತ್ತು. 'ಜೆಸು ಆರ್ಟರ್ ಫಾದರ್' ಕೂಡ ಹೀಗೆಯೇ ಬರೆದಿದ್ದಾರೆ. ಸಾಲೋಮನ್ ಕಾಶ್ಮೀರಕ್ಕೆ ಬಂದಿದ್ದನೆಂಬ ವದಂತಿಯಿದೆ. ಕಾಶ್ಮೀರದಲ್ಲಿ ಈಗಲೂ ಸಾಲೋಮನ್‌ನ ಸಿಂಹಾಸನವನ್ನು ತೋರಿಸುತ್ತಾರೆ.'' ಯೇಸು ಕೂಡ ಯಹೂದ್ಯನಾಗಿದ್ದನು ಮತ್ತು ಅವನ ಶಿಷ್ಯರೂ ಯಹೂದ್ಯರೇ ಇದ್ದರು.

ಶ್ರೀ ಎಫ್.ಡಬ್ಲ್ಯೂ. ಪೋಲಕರು ಕೆಲ ವರ್ಷಗಳ ಮೊದಲು ಮುಂಬಯಿಯಿಂದ 'ಇಂಡಿಯಾ ಎ್ಯಂಡ್ ಇಸರಾಯಿಲ್' ಎಂಬ ಇಂಗ್ಲೀಷ್ ಪತ್ರಿಕೆಯೊಂದನ್ನು ನಡೆಸುತ್ತಿದ್ದರು. ಈ ಮಾಸಪತ್ರಿಕೆಯ ಡಿಸೆಂಬರ 1951ರ ಸಂಚಿಕೆಯಲ್ಲಿ ಎಲಿಸ್ ಈ.ಬಿಶಾರ್ಟ್ ಎಂಬ ಆಂಗ್ಲ ಮಹಿಳೆಯೊಬ್ಬಳ ಪತ್ರವೊಂದು ಅಚ್ಚಾಗಿತ್ತು. ಅವಳು ಕಾಶ್ಮೀರದಲ್ಲಿ ಇಪ್ಪತ್ತು ವರ್ಷಗಳಿಂದ ಇದ್ದಳು. ಅವಳು ಹೀಗೆ ಬರೆಯುತ್ತಾಳೆ: ''ಕಾಶ್ಮೀರದಲ್ಲಿ ಆಡುಕುರಿಗಳನ್ನು ಸಾಕಿ ಜೀವನ ನಡೆಸುವ 'ಗುಜ್ಜರ' ಎಂಬ ಜಾತಿಯೊಂದಿದೆ. ಅವರು ತಮ್ಮನ್ನು 'ಬಾನೀ ಇಸ್ಮಾಯಿಲ್ ಎಂದು ಕರೆದುಕೊಳ್ಳುತ್ತಾರೆ.

ಅವರು ರುಬೇನ್ ಹಾಗೂ ಗ್ಯಡ್ ಜಾತಿಯ (ಯಹೂದಿ) ವಂಶಜರಾಗಲೀ ಯಹೂದಿಯ ಉಪಜಾತಿಯವರಾಗಲೀ ಆಗಿರಬಹುದೆಂದು ತೋರುತ್ತದೆ. ಮೊಗಲರ ಆಳ್ವಿಕೆಯ ವೇಳೆ ಬಲಾತ್ಕಾರದಿಂದ ಮುಸಲ್ಮಾನರಾದ ಹಲವಾರು ಜನರು ಇಂದು ಕಾಶ್ಮೀರದಲ್ಲಿ ಇದ್ದಾರೆ. ಅವರಲ್ಲಿ ಹಲವರು ತಮ್ಮ ಹೆಸರಿನ ಕೊನೆಗೆ 'ಜೂ' ಎಂಬ ಉಪಪದವನ್ನು ಸೇರಿಸುತ್ತಾರೆ. ಇವರೆಲ್ಲ ಶ್ರೀನಗರದಲ್ಲಿ ವ್ಯಾಪಾರಿಗಳಾಗಿದ್ದಾರೆ. ಇವರ ಮುಖಚರ್ಯೆ ಮೈಕಟ್ಟು ಎಲ್ಲವೂ ಜ್ಯೂ (ಯಹೂದಿ) ಯಂತೆಯೇ ಇದೆ.''

'ಹಳೆ ಒಡಂಬಡಿಕೆ'ಯಲ್ಲಿ ಉಲ್ಲೇಖಿಸಲ್ಪಟ್ಟ ಅನೇಕ ಹೆಸರುಗಳು ಕಾಶ್ಮೀರದಲ್ಲೂ ಬಳಕೆಯಲ್ಲಿವೆ. ಕಾಶ್ಮೀರದ ಒಂದು ಪರ್ವತೀಯ ಪ್ರದೇಶದಲ್ಲಿ ಅರಾಬಾ ಹಾಗೂ ಹೆಬ್ರಾನ್ ಎಂಬ ಹಿಬ್ರೂ ಹೆಸರುಗಳು ಬಳಕೆಯಲ್ಲಿವೆಯೆಂದೂ ಆ ಆಂಗ್ಲ ಮಹಿಳೆ ತನ್ನ ಪತ್ರದಲ್ಲಿ ಬರೆದಿದ್ದಾಳೆ. ''ಕಾಶ್ಮೀರಿ ಬ್ರಾಹ್ಮಣರ ಮುಖಾಕೃತಿ ಯಹೂದಿಯರ ಮುಖಾಕೃತಿಯನ್ನೇ ಹೋಲುತ್ತದೆ. ಮತ್ತು ಅವರ ಹೆಸರುಗಳು ಹಾಗೂ ಯಹೂದಿಯರ ಜಾತಿ, ಉಪಜಾತಿಗಳ ಹೆಸರುಗಳು ಹಳೇ ಒಡಂಬಡಿಕೆಯಲ್ಲಿ ವರ್ಣಿಸಲ್ಪಟ್ಟ ಹೆಸರುಗಳಂತೆಯೇ ಇವೆ. ಉದಾಹರಣೆಗಾಗಿ 'ಹಶಿಯಾ' ಎಂಬುದು ಜ್ಯೂ 'ಹೋಸಿಯಾ'ದಿಂದಲೂ 'ಕೌಲ್' ಎಂಬುದು 'ಕೌಲಿಯಾಹ್'ದಿಂದಲೂ ಬಂದಿರಬಹುದು. ಖಿಸ್ತ ಅರ್ಥಾತ್ ಯೇಸುವು ಸ್ವತಃ ಯಹೂದಿಯಾಗಿದ್ದು ಯಹೂದೀ ವ್ಯಾಪಾರಿಗಳೊಂದಿಗೆ ಭಾರತಕ್ಕೆ ಬಂದಿದ್ದನೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಯೇಸು ಭಾರತಕ್ಕೆ ಎರಡು ಬಾರಿ ಬಂದಿದ್ದ ಎಂಬುದಕ್ಕೆ ಅಹಮದಿಯಾ ಮತವೇ ದೊಡ್ಡ ಪ್ರಮಾಣ. 1908ರಲ್ಲಿ ಸರ್ ಫ್ರಾನ್ಸಿಸ್‌ಯಂಗ್ ಹಸಬಂಡರು ತಮ್ಮ ಕಾಶ್ಮೀರಿ ಯಾತ್ರೆ, ಎಂಬ ಪುಸ್ತಕವನ್ನು ಪ್ರಕಟಿಸಿದರು. ಅದರಲ್ಲಿ ಅವರು ಹೀಗೆ ಬರೆದಿದ್ದಾರೆ.

''ಈ ವರ್ಷ (1908) ಸಪ್ಟೆಂಬರ್ ತಿಂಗಳಲ್ಲಿ



★ಗೊರವರ ಯಲ್ಲಪ್ಪಾ★

''ನಾನು ಚಿಕ್ಕವನಿದ್ದಾಗ ನಮ್ಮ ಮೇಷ್ಟ್ರು 'ಕತ್ತೇ ಕಾಯೋಕೆ ಹೋಗು' ಅಂತಿದ್ರು..... ಅವರು ಅಂದದ್ದು ಒಂದು ರೀತೀಲಿ ನಿಜವಾಯ್ತು ಅನ್ನಿ!''

ಪಂಜಾಬಿನ ಒಂದು ವಿಚಿತ್ರ ಮತದ ಸಂಸ್ಥಾಪಕನು ಸತ್ತು ಹೋದ. ತಾನು ಯಹೂದಿಗಳ 'ಮಸೀಹಾ ಮತ್ತು ಮುಸಲ್ಮಾನರ 'ಮೆಹದಿ' ಎಂದು ಆ ಸಂಸ್ಥಾಪಕನ ಹೇಳಿಕೆಯಾಗಿತ್ತು. ಅವನ ಅಭಿಪ್ರಾಯದಂತೆ ಯೇಸು ಶಿಲುಬೆಯ ಮೇಲೆ ಸಾಯಲಿಲ್ಲ. ಅಲ್ಲಿ ಅವನು ಬದುಕಿ ಉಳಿದ ಶ್ರೀನಗರದಲ್ಲಿ ಯೇಸುವಿನ ಗೋರಿಯಿದೆ.''

ಮೌಲಾನಾ ಮಹಮ್ಮದ್ ಆಲಿಯವರು ಲಂಡನ್ನಿನ ಅಹಮದಿಯಾ ಮತದ ಕುರಾನಿನ ಇಂಗ್ಲೀಷ್ ಅನುವಾದವನ್ನು ಪ್ರಕಟಪಡಿಸಿದರು. ಅದರ ಮುನ್ನುಡಿಯ ಆರನೇ ಭಾಗದಲ್ಲಿ ಕುರಾನಿನಲ್ಲಿ ಯೇಸುವಿನ ಉಲ್ಲೇಖಿದ ಕುರಿತು ಹೀಗೆ ಬರೆಯಲಾಗಿದೆ - ಜೀಸಸ್ ಕ್ರಾಯಿಸ್ಟ್,

(ಯೇಸು) ಶಿಲುಬೆಯನ್ನೇರಲೇ ಇಲ್ಲ. ಆದರೆ ಅವನು ಶಿಲುಬೆಯನ್ನೇರಿದಂತೆ ತೋರಿಸುವ ವ್ಯವಸ್ಥೆಯನ್ನು ಕೈಗೊಳ್ಳಲಾಗಿತ್ತು. ಅವನಿಗೂ ಅವನ ತಾಯಿಗೂ ಒಂದು ಎತ್ತರವಾದ ಜಲಪಾತವಿರುವ ಸ್ಥಳದಲ್ಲಿ ಆಶ್ರಯ ಕೊಡಲಾಗಿತ್ತು.

ಬೈಬಲ್ಲಿ (ಗಾಸ್ಪೆಲ್ಸ್)ನ ಈ ವಿಷಯಗಳತ್ತ ಗಮನ ಕೊಡಿರಿ: (1) ಯೇಸು ಶಿಲುಬೆಯ ಮೇಲೆ ಕೆಲ ಗಂಟೆಗಳವರೆಗೆ ಮಾತ್ರ ಇದ್ದ. ಶಿಲುಬೆಯ ಮೇಲೆ ಮನುಷ್ಯ ಒಮ್ಮೆಲೇ ಸಾಯಲಾರ. ಸಾಯಲು ಸಾಕಷ್ಟು ವೇಳೆ ತಗಲುತ್ತದೆ (2) ಕಳ್ಳರನ್ನು ಶಿಲುಬೆಗೇರಿಸಿದಾಗ ಅವರು ಬಹು ಹೊತ್ತು ಬದುಕಿ ಉಳಿದಿದ್ದರು. (3) ಕಳ್ಳರ ಕಾಲುಗಳನ್ನು ಕಡಿಯಲಾಗಿತ್ತು; ಆದರೆ ಯೇಸುವಿನ ಕಾಲುಗಳನ್ನು ಕಡಿದಿರಲಿಲ್ಲ. (4) ಯೇಸುವನ್ನು ಶಿಲುಬೆಯಿಂದ ಕೆಳಗಿರಿಸಿದಾಗ ಸಿಪಾಯಿಗಳು ಅವನ ದೇಹಕ್ಕೆ ಏನನ್ನೋ ಚುಚ್ಚಿದರು. ಅದರಿಂದ ರಕ್ತ ಹೊರಟಿತು. ಅವನು ಆಗಲೂ ಬದುಕಿದ್ದನೆಂಬುದರ ಸಂಕೇತವದು. (5) ಇಷ್ಟು ಕಡಿಮೆ ಸಮಯದಲ್ಲಿ ಅವನು ಸತ್ತಿರಬಹುದೆಂದು ಪಾಯಲೆಟ್‌ನಿಗೂ ನಂಬಿಕೆಯಿರಲಿಲ್ಲ. (6) ಶಿಲುಬೆಗೇರಿಸಿದ ಇತರ ಇಬ್ಬರು ಕಳ್ಳರನ್ನು ಅವರು ಸತ್ತ ಬಳಿಕ ಸಮಾಧಿಗೊಳಿಸಲಾಯಿತು. ಆದರೆ ಯೇಸುವಿನ ದೇಹವನ್ನು ಅವನ ಶಿಷ್ಯನೊಬ್ಬನಿಗೆ ಒಪ್ಪಿಸಲಾಯಿತು. ಆ ಶಿಷ್ಯನು ಅದನ್ನು ಬಹು ಜಾಗರೂಕತೆಯಿಂದ ಒಯ್ದು ಬೆಟ್ಟದ ಗುಹೆಯೊಂದರಲ್ಲಿ ಇರಿಸಿದ. (7) ಮೂರನೇ ದಿನ ಆ ಗುಹೆಯ ಕಲ್ಲನ್ನು ಸರಿಸಲಾಯಿತು. (8) ಮೇರಿಯು ಯೇಸುವನ್ನು ಕಂಡಾಗ ಅವನೊಬ್ಬ ತೋಟಗಾರನಂತೆ ತೋರಿದ. ಅಂದರೆ ಆಗ ಯೇಸು ತೋಟಗಾರನ ವೇಷದಲ್ಲಿದ್ದನೆಂದು ಅರ್ಥವಾಗುವುದು (ಇತ್ಯಾದಿ).''

1929ರಲ್ಲಿ ಡಾಕ್ಟರ್ ಸ್ಪೆನ್ಸರರು 'ಮಿಸ್ಟಿಕಲ್ ಲಾಯಿಫ್ ಆಫ್ ಜೀಸಸ್' (ಯೇಸುವಿನ ಗುಪ್ತ ಜೀವನ ಕ್ರಮ) ಎಂಬ ಪುಸ್ತಕ ಬರೆದರು. ಅದರಲ್ಲಿವರು ಹೀಗೆ ಬರೆದಿದ್ದಾರೆ: ''ಯೇಸು ಶಿಲುಬೆಯ ಮೇಲೆ ಸಾಯಲಿಲ್ಲ. ಅವನು ತನ್ನ ವಯಸ್ಸಿನ 60-70 ವರ್ಷಗಳ ತನಕ ಬದುಕಿ ಉಳಿದ.'' (ಪುಟ 28). ಅವನು ತನ್ನ 13ನೇ ವರ್ಷದಿಂದ 30ರ ತನಕ ಎಲ್ಲೆಲ್ಲಿದ್ದ ಎಂಬುದೂ ಈ ರೀತಿ ಉಲ್ಲೇಖಿಸಲ್ಪಟ್ಟಿದೆ: ''ಧಾರ್ಮಿಕ ಶಿಕ್ಷಣಕ್ಕಾಗಿ ಅವನು ಜಗನ್ನಾಥಪುರಿ ಹಾಗೂ ಕಾಶಿಗೆ ಹೋಗಿದ್ದನು. ಅವನು ವ್ಯಾಪಾರಿಗಳೊಂದಿಗೆ ಭಾರತಕ್ಕೆ ಬಂದು ವೈದಿಕ ಧರ್ಮ ಹಾಗೂ ಯೋಗ ಶಾಸ್ತ್ರದ ಜ್ಞಾನವನ್ನು ಸಂಪಾದಿಸಿದ.''

ಯೇಸು ಜನ್ಮ ತಾಳಿದಾಗ ಮೂವರು ಜ್ಞಾನಿಗಳು ಅವನ ಜನ್ಮ ಸ್ಥಾನಕ್ಕೆ ಬಂದರು. ಇಂತಹ ಅವತಾರವಾಗುವುದೆಂಬುದು ಅವರಿಗೆ ತಿಳಿದಿತ್ತು. ಅವರೇ ಯೇಸುವಿನ ಶಿಕ್ಷಣಕ್ಕೆ ತಕ್ಕ ವ್ಯವಸ್ಥೆ ಮಾಡಿದರು. ಯೇಸು ಹಾಗೂ ಬುದ್ಧನ ಉಪದೇಶಗಳಲ್ಲಿ ಅತಿ ಹೆಚ್ಚು ಸಮಾನತೆಯಿದೆ. ಆ ಕಾಲದ ಪದ್ಧತಿಯಂತೆ ಧಾರ್ಮಿಕ ಶಿಕ್ಷಣವನ್ನು ಪಡೆಯಬಯಸುವ ಮನುಷ್ಯ ಆ ಧರ್ಮಕ್ಕೆ ಸಂಬಂಧಿಸಿದ ವಿದ್ಯಾ ಪೀಠದಲ್ಲೇ ಹೋಗಿ ಕಲಿಯುತ್ತಿದ್ದ. ಆದ್ದರಿಂದ ನಡುವಿನ ಗುಪ್ತ ಅವಧಿಯಲ್ಲೂ ಆ ಬಳಿಕವೂ ಯೇಸು ಭಾರತಕ್ಕೆ ಬಂದಿದ್ದನೆಂದು ಸಹಜವಾಗಿಯೇ ಊಹಿಸಬಹುದು.

''ಆರ್ಯಮಿತ್ರ'' ಪತ್ರಿಕೆಯಿಂದ

ತಾರುಣ್ಯಕ್ಕಿಂತ ವೃದ್ಧಾಪ್ಯದಲ್ಲಿಯೇ ಪತ್ನಿಯ ಅವಶ್ಯಕತೆ ಹೆಚ್ಚು ಇರುತ್ತದೆ.

– ರತ್ನಾಕರ

ಮನೆಯಲ್ಲಿ ಒಂದು ತೊಟ್ಟಿಲು ತೂಗುವವರೆಗೂ ಗಂಡು ಹೆಣ್ಣಿನ ವೈವಾಹಿಕ ಜೀವನ ಒಂದು ಮಕ್ಕಳ ಆಟದಂತೆ!

– ಟ್ಯಾಗೋರ್

ಸಂಗ್ರಹ : ಭೀಮಸೇನ ಪದಕಿ

ದೇವಾಂಶ ಸಂಭೂತ ಬಿಳಿ ಆನೆ

ಆರ್.ಜೆ.ಶ್ಯಾನಭಾಗ

ನಿಸರ್ಗದ ಗರ್ಭ ರಹಸ್ಯಮಯ. ಅದು ಹಲವಾರು ಸೃಷ್ಟಿ ವೈಚಿತ್ರ್ಯಗಳನ್ನು ತನ್ನ ಒಡಲೊಳಗೆ ಅಡಗಿಸಿಕೊಂಡಿದೆ. ಅಪರೂಪದ ಪ್ರಾಣಿಗಳಾದ, ಬಿಳಿ ಹುಲಿ, ಬಿಳಿ ಹೆಬ್ಬಾವು, ಕಪ್ಪು ಹಂಸ, ಬಿಳಿ ಕಾಗೆ ಹಾಗೂ ಬಿಳಿ ಆನೆಗಳು ಸೃಷ್ಟಿ ವೈಚಿತ್ರ್ಯಗಳೇ ಆಗಿವೆ. ಅವು ಒಂದೆರಡರಂತೆ ಅಲ್ಲಿಯೋ ಇಲ್ಲಿಯೋ ಆಗೊಮ್ಮೆ ಈಗೊಮ್ಮೆ ಗೋಚರವಾಗಿ ಪುನಃ ನಿಸರ್ಗದ ಮುಸುಕಿನಲ್ಲಿ ಮರೆಯಾಗುತ್ತಿವೆ.

ಶ್ವೇತ ವರ್ಣೀಯ ಆನೆ ಅಂತಹ ಸೃಷ್ಟಿ ವೈಚಿತ್ರ್ಯಗಳಲ್ಲಿ ಒಂದಾಗಿದೆ. ಬಿಳಿಯ ಆನೆ ಪರಿಪೂರ್ಣ ಬಿಳಿ ಬಣ್ಣದ್ದಾಗಿರದೆ ತುಸು ನಸುಗೆಂಪು ವರ್ಣದ್ದಾಗಿರುತ್ತದೆ. ಗಜಲೋಕದಲ್ಲಿ ಸಾರ್ವಭೌಮ ಎನಿಸಿಕೊಂಡಿರುವ ಬಿಳಿ ಆನೆಗೆ ಶ್ವೇತ ಹಾಗೂ ಸಲಗ ಎಂದೆನ್ನುವರು.

ಸಾಹಿತ್ಯ ಮಿನುಗಿಸಿದ ಶ್ವೇತ

ಜಾತಕ ಕಥೆ, ಪಂಚತಂತ್ರ ಕಥೆ ಹಾಗೂ ಜಾನಪದ ಕಥೆಗಳು ಗಜಲೋಕದಲ್ಲಿಯ ಬಿಳಿ ಆನೆಯ ಕುರಿತಾಗಿ ವಿಪುಲ ಸಾಹಿತ್ಯವನ್ನು ನೀಡುತ್ತವೆ. ಕ್ರಿ.ಪೂ. ಎರಡನೇ ಶತಮಾನದ ಬಹೂರ್ತನ ಸ್ತೂಪದ ಮೇಲೆ ಬಿಳಿ ಆನೆಯ ಉಲ್ಲೇಖ ಇದೆ. ಮುನಿ ವಾಲ್ಮೀಕಿ ತನ್ನ ಕೃತಿಗಳಲ್ಲಿ ಶ್ವೇತವನ್ನು ಉಲ್ಲೇಖಿಸಿದ್ದಾನೆ. ಬಿಳಿ ಆನೆ ಕೈಲಾಸ ಪರ್ವತದಷ್ಟೇ ಮಹತ್ತರವಾದದ್ದು ಎಂದು ಹೇಳಿರುವನು. ಬಿಳಿ ಮೋಡಗಳಿಗೆ ಹೋಲುವ ಬಿಳಿ ಆನೆಗಳು ರಾವಣನ ಗಜಶಾಲೆಯಲ್ಲಿ ಇದ್ದವು ಎಂದು ಇನ್ನೊಂದೆಡೆಗೆ ವಾಲ್ಮೀಕಿ ಮಾಡಿರುವ ಉಲ್ಲೇಖ ಇದೆ. ಇಂದ್ರನ ವಾಹನವಾದ ಐರಾವತವು ಬಿಳಿ ಆನೆ ಎಂದು ಹಿಂದೂ ಧರ್ಮೀಯರ ನಂಬುಗೆ, ಹಿಂದೂಗಳು ಬಿಳಿ ಆನೆಗೆ ಪೂಜ್ಯ ಸ್ಥಾನ ನೀಡುತ್ತಾರೆ. ಏಶಿಯನ್ನರು ಪ್ರಾಣಿಗಳಿಗೆ ಗೌರವಾನ್ವಿತ ಸ್ಥಾನವನ್ನು ನೀಡಿರುವರು.

ನ್ಯಾಶನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾದ ಪುಸ್ತಕ ಮಾಲೆಯಲ್ಲಿಯ ವನರಾಜ ಆನೆ ಎಂಬ ಕಿರು ಪುಸ್ತಕ ಬಿಳಿ ಆನೆಯ ಕುರಿತಾಗಿರುವ ಪರಿಚಯಾತ್ಮಕ ಅಧ್ಯಾಯವನ್ನು ಹೊಂದಿದೆ. ಬಹೂರ್ತ ಹಾಗೂ ಸಾಂಚಿಯ ಸ್ತೂಪಗಳಲ್ಲಿ ಪಡಿ ಮೂಡಿರುವ ಬಿಳಿ ಆನೆಯ ಶಿಲ್ಪಗಳು ಕಥಾರೂಪಕಗಳೇ ಆಗಿವೆ. ಅಜಂತಾ ಭಿತ್ತಿ ಚಿತ್ರಗಳಲ್ಲಿ



ನೃತ್ಯ ಭಂಗಿಯಲ್ಲಿ ಬಿಳಿಯಾನೆ

ಹೆಣ್ಣಾನೆಯ ಜೊತೆಗೆ ಎರಡು ಬಿಳಿ ಆನೆ ಮರಿಗಳಿವೆ. ಇನ್ನೊಂದು ಗುಡ್ಡೆಯಲ್ಲಿರುವ ಆರು ಕೊಂಬಿನ ಬಿಳಿ ಆನೆ ಮರಿಯ ಚಿತ್ರ ಚಿತ್ತಾಕರ್ಷಕ. ಇತ್ತೀಚಿನ ದಿನಗಳಲ್ಲಿ ಬಿಳಿ ಆನೆಯ ಸಂಖ್ಯೆ ವಿರಳವಾಗುತ್ತಿದೆ. ಅವುಗಳ ಸಂಖ್ಯೆಯನ್ನು ಸೂಕ್ಷ್ಮದರ್ಶಕ ಮುಖೇನ ವೀಕ್ಷಿಸುವಂತಾಗಲು ನಶಿಸುತ್ತಿರುವ ತಳಿಯೇ ಕಾರಣ.

ಬೊಕ್ಕಸಕ್ಕೆ ಹೊರೆ

ಬಿಳಿ ಆನೆ ದೇವಾಂಶ ಸಂಭೂತ ಹಾಗೂ ಅತುಲೈಶ್ವರ್ಯದ ಸಂಕೇತ ಎಂಬೀ ಕಾರಣಗಳಿಂದ

ಅವುಗಳನ್ನು ಸಾಕಿ ತಮ್ಮ ರಾಜವೈಭವದ ಶ್ರೀಮಂತಿಕೆಯನ್ನು ಮೆರೆಸಿಕೊಳ್ಳುತ್ತಿದ್ದರು ಹಿಂದಿನ ಆಳರಸರು. ಪ್ರಾಚೀನ ದೊರೆಗಳ ಹಾಗೂ ಶ್ರೀಮಂತರ ಶ್ರೀಮಂತಿಕೆಯನ್ನು ಹಿಂದಿನ ಕಾಲದ ಜನರು ಅವರು ಹೊಂದಿರುವ ಬಿಳಿ ಆನೆಗಳ ಸಂಖ್ಯೆಯನ್ನೇ ಮಾನದಂಡವನ್ನಾಗಿ ಹಿಡಿದುಕೊಂಡು ಅಳೆಯುತ್ತಿದ್ದರು.

ಬಿಳಿ ಆನೆ ದೇವಾಂಶ ಸಂಭೂತವಾಗಿರುವುದರಿಂದ ಕಾಮಗಾರಿಗಾಗಲೀ ಹಾಗೂ ಸವಾರಿಗೆ ನಿಷಿದ್ಧವಾಗಿದೆ. ಅದರಿಂದ ಆದಾಯ ನೀಡದ ಇಂತಹ ಆನೆಗಳನ್ನು ಸಾಕುವುದೆಂದರೆ ಮಾಲಿಕರಾದವರ ಪಾಲಿಗೆ ಹೊರೆಯೇ ಆಗಿದೆ. ಈ ಕಾರಣದಿಂದಲೇ ನಷ್ಟದಲ್ಲಿರುವ ಹಾಗೂ ಸಾರ್ವಜನಿಕ ಬೊಕ್ಕಸಕ್ಕೆ ಹೊರೆಯಾದ ಕಾರ್ಖಾನೆ ಅಥವಾ ಸಂಸ್ಥೆಗೆ ನಮ್ಮ ಆಡಳಿತಗಾರರು ಬಿಳಿ ಆನೆ ಎಂದು ಸಂಬೋಧಿಸುವರು. ನಿಷ್ಪ್ರಯೋಜಕ ವಸ್ತುವೂ ಕೂಡ ಬಿಳಿ ಆನೆ ಎಂಬ ವಿಶೇಷಣಕ್ಕೆ ಅನ್ವಯಿಕವಾಗಿದೆ. ಆಂಗ್ಲ ಸಾಹಿತ್ಯದಲ್ಲಿ ಒಡಮೂಡಿ ಬಂದಿರುವ 'ವೈಟ್ ಎಲಿಫೆಂಟ್' ಎಂಬ ಪಡೆನುಡಿಗೆ ಈ ಹಿನ್ನೆಲೆಯೇ ಕಾರಣವಾಗಿದೆ.

ಸಾರ್ವಜನಿಕ ಬೊಕ್ಕಸದ ಮೇಲೆ ಹೊರೆಯಾಗದ ಬಿಳಿ ಆನೆಯೊಂದು ಮೈಸೂರು ಮೃಗಾಲಯದಲ್ಲಿತ್ತು. ವಿಶ್ವವಿಖ್ಯಾತ ದಸರಾ ಮೆರವಣಿಗೆಯ ಹೆಗ್ಗಳಿಕೆಯನ್ನು ಮೆರೆಯಿಸಿರುವ ಖ್ಯಾತಿ 53 ವರ್ಷದ ಈ ಶ್ವೇತಕ್ಕೆ ಸಂದಿರುವುದು. ಮೊಹಲ್ಲಾ ದೇವರ ಮೆರವಣಿಗೆ ಹಾಗೂ ಕಾರಖಾನೆ ಉತ್ಪನ್ನ ಪ್ರಚಾರಗಳಿಗೆ ಬಳಸಲಾಗುತ್ತಿರುವ ಈ ಬಿಳಿ ಆನೆ ಉತ್ತಮ ಆದಾಯವನ್ನು ತರುತ್ತಿತ್ತು. ಇದರ ಸರಾಸರಿ ಬಾಡಿಗೆ ದರ ರೂ.500-00 ಆಗಿತ್ತು. 1948ರಲ್ಲಿ ಕೊಡಗಿನ ದುಬಾರೆ ಕಾನಿನಲ್ಲಿ ಆಗ ಗೇಮರೇಂಜ ಅಧಿಕಾರಿಯಾಗಿದ್ದ ಕೇರಿ ಅಚ್ಚಯ್ಯನವರು ಖೆಡ್ಡಾ ಜಾಲದಲ್ಲಿ ಈ ಬಿಳಿ ಆನೆಯನ್ನು ಸೆರೆಹಿಡಿದಿದ್ದರು. ನಾಡಿನಲ್ಲಿಯೇ ಅಪರೂಪದ ಬಿಳಿ ಆನೆಯನ್ನು ಹೊಂದಿರುವ ಏಕೈಕ ಕೀರ್ತಿ ಮೈಸೂರು ಮೃಗಾಲಯದಾಗಿತ್ತು.

ಥೈಲ್ಯಾಂಡ್ ಸರಕಾರ 1966ರಲ್ಲಿ ಅಧ್ಯಕ್ಷ ಜಾನ್‌ಸನ್ನರಿಗೆ ಬಿಳಿ ಆನೆಯನ್ನು ಕೊಡುಗೆಯಾಗಿ ನೀಡಿತು. ಪಯಣಿಸುತ್ತಿದ್ದ ಹಡಗಿನಲ್ಲಿ ತನ್ನ ಬಂಧನವನ್ನು ತಪ್ಪಿಸಿಕೊಳ್ಳುವಾಗ ಅದು ನೀರು ಪಾಲಾಯಿತು.

ಅರಕಾನ ದೊರೆಯನ್ನು ಸೋಲಿಸಿ ಅವನಲ್ಲಿರುವ ಬಿಳಿ ಆನೆಯನ್ನು ಅಕಬರನ ಚರಣಕಮಲಗಳಿಗೆ ತಂದು ಅರ್ಪಿಸುವೆನೆಂದು ರಾಜಾ ಮಾನಸಿಂಗನು ತನ್ನ ಪೌರುಷವನ್ನು ಕೊಚ್ಚಿಕೊಂಡಿದ್ದನು.

ಬರ್ಮಾ ಮತ್ತು ಥೈಲ್ಯಾಂಡ್ ಕಾಡುಗಳಲ್ಲಿ ಅಪರೂಪವಾಗಿ ದೊರೆಯುತ್ತಿದ್ದ ಶ್ವೇತವನ್ನು ರಾಜವೈಭವದ ಸಂಭ್ರಮೋಲ್ಲಾಸದಿಂದ ನಗರದಲ್ಲಿ ಕರೆದು ತಂದಾಗ ರಾಜಕುಮಾರ ಹಾಗೂ ಆಸ್ಥಾನಿಕರು ಅದಕ್ಕೆ ರಾಜೋಪಚಾರ ಹಾಗೂ ಆದರೋಪಚಾರದಿಂದ ಸ್ವಾಗತಿಸುತ್ತಿದ್ದರು. ಕೆಂಪು ರೇಷ್ಮೆ ಹಗ್ಗದಿಂದ ಅದನ್ನು ಕಂಬಕ್ಕೆ ಬಿಗಿದು ಚಿನ್ನ ಮತ್ತು ಬೆಳ್ಳಿ ತಾಟುಗಳಲ್ಲಿ ಉಣಬಡಿಸುತ್ತಿದ್ದರು.

ಮೈಸೂರು ಮಹಾರಾಜರ ಆಸ್ಥಾನದಲ್ಲಿದ್ದ ಬಿಳಿ ಆನೆಯೊಂದು ಮಹಾರಾಜರು ಪಡೆಯುವಷ್ಟೇ ರಾಜೋಪಚಾರವನ್ನು ಪಡೆಯುತ್ತಿತ್ತು.

ಉತ್ತರ ಸಯಾಮಿನಲ್ಲಿ ಸೆರೆಹಿಡಿದ ಬಿಳಿ ಆನೆಯನ್ನು ರಾಜನು ಗಜಶಾಲೆಯಲ್ಲಿ ಬರಮಾಡಿಕೊಂಡಿರುವ ವೃತ್ತಾಂತ ಹೀಗಿದೆ. ಕಾನಿನಲ್ಲಿ ವಿಶಾಲ ರಸ್ತೆಯನ್ನು ನಿರ್ಮಿಸಿ ತನ್ಮೂಲಕವಾಗಿ ಆನೆಯನ್ನು ನದಿಯ ತೀರಕ್ಕೆ ಕರೆದು ತಂದರು. ಬಳಲಿ ಬೆಂಡಾದ ಶ್ವೇತಕ್ಕೆ ವಿಶ್ರಮಿಸಲೋಸುಗ ಸಂಗೀತ ನೃತ್ಯಾದಿ ಮನರಂಜನೆಯನ್ನು ಒದಗಿಸಿದರು. ಬಿಳಿ ಆನೆಯ ನಡೆದಾಟಕ್ಕಾಗಿ ಚಿನ್ನದೆಳೆಯ ರತ್ನಗಂಬಳಿಯನ್ನು ಹಾಸಲಾಗಿತ್ತು. ಬ್ಯಾಂಕಾಕಿನಲ್ಲಿ ಸರ್ವಾಲಂಕೃತ ಚಪ್ಪರದೊಳಗೆ ಅದನ್ನು ನಿಲ್ಲಿಸಿ ತೈಲವನ್ನು ಲೇಪಿಸಿ ಹೊನ್ನಿನ ಸರಪಳಿಯಿಂದ ಶ್ವೇತವನ್ನು ಅಲಂಕರಿಸಿದರು.

ಪುರಾಣದಲ್ಲಿ ಶ್ವೇತ

ಗೌತಮನ ತಾಯಿ ರಾಣಿ, ಮಹಾಮಾಯ

ತನ್ನ ಒಡಲೊಳಗೆ ಬಿಳಿ ಆನೆಯೊಂದು ಪ್ರವೇಶಿಸಿರುವುದನ್ನು ಸ್ವಪ್ನದಲ್ಲಿ ಕಂಡಳು. ಇದೊಂದು ದುಃಸ್ವಪ್ನ ಎಂದು ಧೃತಿಗೆಟ್ಟ ರಾಣಿ, ಸ್ವಪ್ನ ದೃಷ್ಟಾಂತದ ಅರ್ಥವನ್ನರಿಯಲು ಆಸ್ಥಾನದ ಜ್ಯೋತಿಷಿಯನ್ನು ವಿಚಾರಿಸಿದಳು. ರಾಣಿಯ ಉದರದಲ್ಲಿ ಶಾಂತಿದೂತನಾದ ವಿಭೂತಿ ಪುರುಷನೋರ್ವನು ಜನಿಸುವನೆಂದು ಜ್ಯೋತಿಷಿಯು ಭವಿಷ್ಯವನ್ನು ನುಡಿದನು. ಬಹೂರ್ತನ ಸ್ತೂಪದ ಮೇಲೆ ಇದು ಸಚಿತ್ರ ಕಥಾರೂಪಕವಾಗಿ ಪಡಿಮೂಡಿದೆ.

ತನ್ನೊಂದು ಅವತಾರದಲ್ಲಿ ಬೋಧಿಸತ್ವ ವಿಶ್ವಂತರ ಎಂಬ ರಾಜಕುಮಾರನಾಗಿದ್ದನು. ಹಿಮಾಲಯ ವರ್ಣ ಸದೃಶ ಗಂಧಹಸ್ತಿ ಎಂಬ ಬಿಳಿ ಆನೆಯೊಂದು ಅವನಲ್ಲಿತ್ತು. ಬಿಳಿ ಆನೆಯ ಮೇಲೆ ಕುಳಿತು ರಾಜಕುಮಾರ ಸದಾ ಧರ್ಮಸತ್ರಗಳನ್ನು ವೀಕ್ಷಿಸುತ್ತಿದ್ದನು. ರಾಜಕುಮಾರನ ದಾನಶೀಲತೆ ಜಗದಗಲದಲ್ಲಿ ಪಸರಿಸುತ್ತಿದ್ದನ್ನು ಕಂಡ ನೆರೆಯ ದೊರೆಯೊಬ್ಬನು ವಿಶ್ವಂತರನ ಮೇಲೆ ದ್ವೇಷಾಸೂಯೆಯನ್ನು ಕಾರಲು ಆರಂಭಿಸಿದನು.

ರಾಜನು ವಿಶ್ವಂತರನಿಗೆ ವಿಘ್ನ ಉಂಟು ಮಾಡಲು ಕೆಲ ಬ್ರಾಹ್ಮಣರನ್ನು ಒಡಂಬಡಿಸಿದನು. ಆ ಬ್ರಾಹ್ಮಣರೆಲ್ಲರೂ ರಾಜಕುಮಾರನೆಡೆಗೆ ಬಂದಾಗ ರಾಜಕುಮಾರ ಅವರೆಲ್ಲರನ್ನೂ ರಾಜ ಮರ್ಯಾದದಿಂದ ಸ್ವಾಗತಗೈದನು. ಅಸೂಯೆ ಪರನಾದ ದೊರೆಯೊಬ್ಬನು ತನ್ನನ್ನು ವಂಚಿಸಲು ಬ್ರಾಹ್ಮಣರನ್ನು ಕಳುಹಿಸಿರುವ ವಿಷಯ ರಾಜಕುಮಾರನಿಗೆ ಮೊದಲೇ ತಿಳಿದಿತ್ತು. ರಾಜಕುಮಾರ ಕೊಡುಗೈ ದೊರೆಯೆಂದು ಕೊಂಡಾಡಿ ಅವನಿಂದ ಬಿಳಿ ಆನೆಯನ್ನು ಯಾಚಿಸುತ್ತಾ ತಮ್ಮ ಉಪಾಯದ ಜಾಲವನ್ನು ಬ್ರಾಹ್ಮಣರು ಬೀಸಿದರು.

ಅವರ ಉಪಾಯದ ಅಪಾಯವನ್ನು ಅರಿತರೂ ಸ್ವಲ್ಪವೂ ಮರುಗದೇ ಅಂಬಾರಿಯಿಂದ ರಾಜಕುಮಾರ ಕೆಳಗಿಳಿದನು. ನೀರು ತುಂಬಿದ ಚಿನ್ನದ ತಂಬಿಗೆಯನ್ನು ಒಂದು ಕೈಯಲ್ಲಿ ಹಿಡಿದು ಇನ್ನೊಂದು ಕೈಯಲ್ಲಿ ಬಿಳಿ ಆನೆಯ ಸೊಂಡಿಲನ್ನು ಹಿಡಿದು ಶ್ವೇತವನ್ನು ಬ್ರಾಹ್ಮಣರಿಗೆ ಧಾರೆ ಎರೆದು ಕೊಟ್ಟನು.

ಅತುಲೈಶ್ವರ್ಯದ ಸಂಕೇತವಾಗಿರುವ ಬಿಳಿ ಆನೆಯನ್ನು ಬ್ರಾಹ್ಮಣರಿಗೆ ದಾನಗೈಯದ ರಾಜಕುಮಾರನನ್ನು ಪ್ರಜಾಕೋಟಿ ಪ್ರತಿಭಟಿಸಿತು. ದಾನಗೈಯದಿರಲು ಅವನು ಒಪ್ಪಲಿಲ್ಲ. ಪ್ರಜೆಗಳಿಗೆ ನಿಷ್ಠುರನಾದ ರಾಜಕುಮಾರ ವಿಶ್ವಂತರ ಕೊನೆಗೆ ದೇಶಭ್ರಷ್ಟನಾಗಬೇಕಾಯಿತು. ಬಹೂರ್ತ ಸ್ತೂಪದ ಮೇಲೆ ಇದು ಕಥಾ ರೂಪಕವಾಗಿ ಪಡಿಮೂಡಿರುವುದು.

ದೊರೆ ಬ್ರಹ್ಮದತ್ತ ವಾರಣಾಸಿಯನ್ನು ಆಳುತ್ತಿರುವಾಗ ಬೋಧಿಸತ್ವನು ಬಿಳಿ ಆನೆಯಾಗಿ ಜನಿಸಿದನು. ಅದರ ತಾಯಿ ದೃಷ್ಟಿಹೀನಳಾಗಿದ್ದಳು. ಒಂದು ದಿನ ಬಿಳಿ ಆನೆ ಬೋಧಿಸತ್ವ ಕಾನಿನಲ್ಲಿ ಸಂಚರಿಸುತ್ತಿರುವಾಗ ದಾರಿ ತಪ್ಪಿದಾತನನ್ನು ತನ್ನ ಬೆನ್ನ ಮೇಲೆ ಕೂರಿಸಿಕೊಂಡು ಅವನು ಮುಟ್ಟ ಬಯಸಿದ ತಾಣಕ್ಕೆ ಸುರಕ್ಷಿತವಾಗಿ ತಲುಪಿಸಿತು. ಇದೇ ಸಮಯದಲ್ಲಿ ದೊರೆ ಬ್ರಹ್ಮದತ್ತನ ಆನೆಯೊಂದು ಕೊನೆಯುಸಿರು ಎಳೆದಿದ್ದರಿಂದ ಅವನಿಗೆ ಆನೆಯೊಂದರ ಅವಶ್ಯಕತೆ ಇದ್ದಿತು. ಆ ದಾರಿ ತಪ್ಪಿದವನು ತನಗೆ ಆಪತ್ತಿನಲ್ಲಿ ನೆರವು ನೀಡಿರುವ ಬಿಳಿ ಆನೆಯ ಕುರಿತು ಅರಸನಿಗೆ ಹೇಳಿದನು. ಬಿಳಿ ಆನೆಗಾಗಿ ಮೋಹಿತನಾದ ದೊರೆ ಅದನ್ನು ಹಿಡಿದು ತರಲು ತನ್ನ ಸೇನೆಯ ತಂಡವನ್ನು ಕಳುಹಿಸಿದನು. ಬಿಳಿ ಆನೆ ಪ್ರತಿರೋಧ ಇಲ್ಲದೆ ತಾನು ಸೇನೆಗೆ ಶರಣಾಗತವಾಯಿತು. ಗಜಶಾಲೆಯಲ್ಲಿ ಬಂಧಿಸಲ್ಪಟ್ಟ ಶ್ವೇತ ತನಗೆ ಆಹಾರ ನೀಡಿದಾಗಲೆಲ್ಲ ತಿರಸ್ಕರಿಸುತ್ತ ಕಣ್ಣೀರನ್ನು ಸುರಿಸುತ್ತಲೇ ಇತ್ತು. ನೊಂದ ಆನೆಗೆ ರಾಜ ಕುತೂಹಲದಿಂದ ಕಾರಣವನ್ನು ಕೇಳಿದನು.

ತನ್ನ ಕುರುಡಿಯಾದ ತಾಯಿ ಅಸಹಾಯಕಳಾಗಿರುವುದರಿಂದ ತಾನು ಅವಳ ಬಳಿ ಹೋಗುತ್ತೇನೆ ಎಂದು ಶ್ವೇತ ಹೇಳಿದಾಗ ಅನುಕಂಪಗೊಂಡ ಅರಸ ಬಿಳಿ ಆನೆಯನ್ನು ಬಿಡುಗಡೆ ಮಾಡಿದನು.



ಅಪಭ್ರಂಶ


ಕುಂ. ವೀರಭದ್ರಪ್ಪ

ಹೀಗಾಗಬಹುದೆಂತ ಯಾರೂ ತಿಳಿದುಕೊಂಡಿರಲಿಲ್ಲ! ಒಳಗುಂದಿಯ ದೊಡ್ಡ ಮನೆ ಸಿದ್ದಪ್ಪನ ಮಗಳು ಪಾರ್ವತಿಯನ್ನು ಕರೂರಿನ ದಮ್ಮಡಿ ಜಾತಪ್ಪನ ಮಗ ರಮೇಶಗೆ ಕೊಟ್ಟಿತ್ತಲ್ಲ!

ನಿನ್ನೆ ತಾನೆ ವೈಶಾಖ ಶುದ್ಧ ಚೌತಿ ಶುಕ್ರವಾರದಂದು ಸಂದ ಅಭಿಜಿನ್ ಮುಹೂರ್ತದ ಪುಷ್ಕರಾಂಶದಲ್ಲಿ ಮಾಂಗಲ್ಯಧಾರಣೆಯಾಗಿತ್ತಲ್ಲ!

ಅವತ್ತೇ ಸಂಜೆ ಟ್ರ್ಯಾಕ್ಟರನ್ನು ಬಳ್ಳಾರಿಯ ಧನಲಕ್ಷ್ಮಿಯ ಬಣ್ಣ ಬಣ್ಣದ ಸೀನರಿಗಳಿಂದಲೂ, ಝುಗಝುಗಿಸುವ ಬಲ್ಬುಗಳಿಂದಲೂ ಅಲಂಕರಿಸಿ ಮಂಟಪದೊಳಗೆ ಮದುಮಕ್ಕಳನ್ನು ಕುಂಡ್ರಿಸಿ ಊರು ತುಂಬ ಮೆರವಣಿಗೆ ಮಾಡಿತ್ತಲ್ಲವೆ!

ತವರು ಮನೆ ನೀರಿಗಾಗಿ ಮದುಮಕ್ಕಳಿಬ್ಬ



ರನ್ನು ಸವಾರಿ ಬಂಡಿಯೊಳಗೆ ಕುಳ್ಳಿರಿಸಿ, ಜೂಲು ಹಾಕಿದ ಮೂಡಲೋರಿಗಳನ್ನೂಡಿ, ಬಾಳೆ ತೆಂಗಿನ ತೋಟಗಳ ನಡುವೆ ಇದ್ದ ಹಾದಿಯಲ್ಲಿ ಕೆಂಧೂಳನ್ನು ಕೆಮ್ಮುಗಿಲಿಗೆ ಎಬ್ಬಿಸಿ ಒಳಗುಂದಿಗೆ ಮುಖ ಮಾಡಿದ್ದರು ಮರುದಿನ. 'ಕಳಸಾ ತಕ್ಕೊಳ್ಳೆ ಕಳೆಯುಳ್ಳ ಮುತ್ತೈದೆ ವರುಷಕೆ ನೂರು ಮದುವೆಯಾಗಲೆಂದು ಹರಸಿ ತಕ್ಕೊಳ್ಳೆ ಕಳಸಾವಾ ...' ನಿಲುವಂಜಿ ನಾಗವ್ವ ಆ ಬಂಡಿಯಲ್ಲಿದ್ದು ಸ್ವರ ತೆರೆದಳೆಂದ ಮೇಲೆ ದಾರಿ ಸವೆದದ್ದೇ ತಿಳಿಯಲಿಲ್ಲ. ಪ್ರಯಾಣದ ಹಸೂವಿಕೆಯಾಗಲೀ ಬಳಲಿಕೆಯಾಗಲೀ ದಿಬ್ಬಣವನ್ನು ಕಾಡಿರಲಿಲ್ಲ. ನಿನ್ನೆ ಮೊನ್ನೆ ಕಲಶ ನೀರಲ್ಲಿ ಮಿಂದು ಎಲ್ಲರೂ ಘಮ ಘಮ ಅಂತಿದ್ದರು.

ತುಂಬಿದ ಕೆರೆಯಲ್ಲಿ ಚಂದ್ರಾಮ ಮೂಡಿದಂತೆ ಬಂಡಿ ಹೈ ಲೆವೆಲ್ ಕಾಲುವೆಯ ದಿಬ್ಬ ಏರುತ್ತಲೆ ಮುತ್ತಿನ ಕೆರೆಯಲ್ಲಿ ಶುಕ್ರ ಹೊಳೆದಂತೆ ಊರು ಕಂಡಿತು.

ಮನಸು ಮಲ್ಲಿಗೆಯಾಗಿ ಮಂಚವು ಎರಡಾಗಿ ಹಾಲ್ನಿಂಥಾ ಪುರುಷ ರಮೇಶ .... ಎಂದು ನಾಗವ್ವ ಹಾಡುತ್ತಲೇ ಪಾರ್ವತಿಯ ಅರಿಷಿಣ ಗಲ್ಲದ ನಡುವೆ ಕೆಂಪು ಕಾಣಿಸಿಕೊಂಡಿರಬಹುದು!!

ಸೋದರತ್ತೆಯ ಮಗಳು ಕಮಲೆ ಮದುಮಗನ ಪಾಲಿಸ್ಟರ್ ಪಂಚೆಗೂ ಮದುಮಗಳು ಪಾರ್ವತಿಯುಟ್ಟಿದ್ದ ರೇಶಿಮೆ ಸೀರೆಗೂ ಗಂಟು ಹಾಕಿ ಮುಗಿಸಿರಬಹುದು!

ಸಾರಥ್ಯ ವಹಿಸಿದ್ದ ಸಿದ್ಲಿಂಗ ಕತ್ತರಿ ಪೆಟ್ಟಿಕೊಂಡು ಕಡ್ಡಿ ಆಚೆ ಎಸೆದಿರಬಹುದು!

ಹಿಂದೆ ಹಿಂದೆ ಇದ್ದ ಅರ್ಜುನ ಮುಂದೆ ಮುಂದೆ ಕುಕ್ಕಲೋಟ ಆದೇ ತಾನೆ ಆರಂಭಿಸಿರಬಹುದು!

ಜೇರ್ರ ತೋಟದ ಬೇಲಿಯಲ್ಲಿದ್ದ ಎರಡು ಜೇನ್ನೊಣಗಳು ಧಾವಿಸಿ ಬಂದು ಪಾರ್ವತಿಯ ಮುಡಿಯಲ್ಲಿ ಆಗ ತಾನೆ ಬಾಡಲಾರಂಭಿಸಿದ್ದ ಹೂವು ದಂಡೆಯ ಸುತ್ತ ಎರಡನೇ ಪ್ರದಕ್ಷಿಣೆಗೆ ತೊಡಗಿರಬಹುದು!

ತಮ್ಮ ಕೊರಳ ಗೆಜ್ಜೆ ಭಾರಕ್ಕೆ ಸುಸ್ತಾಗಿರುವಂತೆ; ಸದ್ದಿಗೆ ಬೆರಗಾದವುಗಳಂತೆ ಮೂಡಲೋರಿಗಳು ಮುಗಿಲ ಶಾಮಲವರ್ಣಕ್ಕೆ ತಿರುಗಿದ್ದ ಎರಡಾಳೆತ್ತರ ನೀರಿದ್ದ ಕಾಲುವೆ ಕಡೆ ವೇಗವಾಗಿ ಮುನ್ನುಗ್ಗಿದವು. ಹಿಂದೆ ನಡೆದು ಬರುತ್ತಿದ್ದ ಸಿದ್ಧಪ್ಪ; ಮೂಗ; ವಿರುಪಾಕ್ಷಿ ಮತ್ತಿತರರು ಹೋ ಅಂತ ಅಡಿಗೆ ಹಿಡಿದುಕೊಳ್ಳಲು ಧಾವಿಸಿರಬಹುದು. ಸಿದ್ಲಿಂಗ ಹೌಹಾರಿ ಜಗ್ಗಿಸಿ ಹಿಡಿದ ಮೂಗುದಾಣ ಹರಿದು ಕೈಗೆ ಬಂತು. ಹ್ವಾ .... ಹ್ವಾ .... ಎನ್ನುವಷ್ಟರಲ್ಲಿ ಇಡೀ ಬಂಡಿ ನೀರಿಗುರುಳಿ ಬಿಟ್ಟಿತು.

ದಡದ ಹಸಿರಿಗೆ ಎಮ್ಮೆಗಳನ್ನು ಬಿಟ್ಟು ನಿಂತಿದ್ದ ಪಾಲಾಚಿ ಬಂಡಿಯ ಸವಾರಿ ಗರಗರ ತಿರುಗುತ್ತ ತೇಲುತ್ತಿರುವುದನ್ನು ನೋಡಿ ಕೇಕೆ ಹಾಕಿದ.

ತಾಳೆಮರದ ಹಿಡಿ ನೆರಳಲ್ಲಿ ಕಕ್ಕಸಿಗೆ ಕೂತಿದ್ದ ಬಿಕ್ಕಿ ಮರಡಿ ಜಾತ್ರೆಯಲ್ಲಿ ಎರಡನೇದಾಗಿ ಉಡುಕೆ ಮಾಡಿಕೊಂಡಿರೋ ಸೀತಿ ಹಲವಾರು ಜೀವಗಳು ಮುಳುಗುತ್ತ ಏಳುತ್ತ ಹುಲ್ಲು ಕಡ್ಡಿಗೂ ತಡಕಾಡುತ್ತಿರುವುದನ್ನು ನೋಡಿ ಕ್ಷಣ ಹೊತ್ತು ಮೂರ್ಛೆ ಹೋದಂತೆ ಬಾಯಿ ಕಳೆದುಕೊಂಡು ಮರುಕ್ಷಣ ಎಚ್ಚೆತ್ತು ಅಯ್ಯಯ್ಯಪ್ಪೋ ಅಂತ ಬೊಬ್ಬೆ ಹಾಕಿದಳು.

ತೊಡೆಸಂದುಗಳಲ್ಲಿ ಕಿಮುಟಿಟ್ಟಿದ್ದ ಬಾನಗಡಿಯನ್ನು ತೊಳೆದುಕೊಳ್ಳಲೆಂದು ಶಿವಶಿವಾಂತ ಸೊಂಟದ ಮಟ ನೀರೊಳಗೆ ಮುಳುಗಿದ್ದ ಶೀಲವಂತರ ಸೇಕರಯ್ಯ ಆಗಲೇ ಬೋರಲು ತೇಲುತ್ತಿದ್ದ ಹೆಣ್ಣಿನ ಕಳೇಬರ ನೋಡಿದ್ದೆ ದಡಕ್ಕೆ ಕುಪ್ಪಳಿಸಿ ಮೂಕನಾದ ಕಾರಣಕ್ಕೆ ಅವನ ಬಲು ಪ್ರೀತಿಯ ಲಂಗೋಟಿ ತೇಲಿ ಹೋಯಿತು.

ಬಲದಡದುದ್ದಕ್ಕೂ ಬೊಬ್ಬೆ ಹಾಕುತ್ತ ಬಂದ ಹಲವು ನಿಬ್ಬಣದ ಮಂದಿಯನ್ನು ಕಂಡಿದ್ದೆ ಅಗಸರ ಸಾಂಬ ದಣೇರ ಸೊಸೆ ಶರಣಮ್ಮ ಮತ್ತೊಮ್ಮೆ ಮುಟ್ಟಾದ ಸೀರೆಯನ್ನು ಸವುಳೊಳಗೆ ಕುಕ್ಕಿ ಓಡಿದ ಅವರ ಕಡೆ.

ಮಂಡಾಳು ಭಟ್ಟಿಯಲ್ಲಿ ದುಡಿದು ಸ್ನಾನಕ್ಕೆಂದು ಬಂದಿದ್ದ ರುದ್ರ; ಪರಮೇಶಿ, ಜಾಫರು ರಕ್ಷಿಸಲೆಂದು ಸುರುಗಿದರು ನೀರಿಗೆ. ದೊಡ್ಡ ಮೀನುಗಳಂತೆ ಈಜಿದರು.

ಅಬ್ಬರಿಸಿ ಅಳುತ್ತ ನೀರ ಕಡೆ ಧಾವಿಸಿ ಬಂದ ಸಿದ್ಧಪ್ಪನ ಟೊಂಕಕ್ಕೆ ಧೋತರ ಬಿಗಿದೆಳೆದರು ಒಂದಿಬ್ಬರು, ಆತಗೆ ಈಜು ಬಾರದ ಕಾರಣಕ್ಕೆ. ಕಾಲುವೆಗೆ ನಾ ಮುಂದು ತಾ ಮುಂದು ಅಂತ ಹಾರುತ್ತಿರುವ ಜನ. ಎರಡು ದಡದುದ್ದಕ್ಕೂ ಜನ ಇರುವೆಗಳಂತೆ ಜಮಾಯಿಸುತ್ತಿರುವರು .. ಪ್ರತಿಯೊಬ್ಬರ ಬಾಯಲ್ಲೂ ಮಾತುಗಳು ... ಎಲ್ಲೆಲ್ಲೂ ಗದ್ದಲ. ತೆಂಗಿನ ಮರಗಳ ಗರಿಗಳಲ್ಲಿ ಸೂರ್ಯನ ಕಿರಣಗಳು ಅಟೆದು ನಿಂತಿರುವ ಪರಿಣಾಮವೇ ಕಾಲುವೆ ತುಂಬ ನೆರಳು ....!

ಬಂಡಿ ಸಹಿತ ಮೂಡಲೋರಿಗಳು ನೀರಿಗೆ ನಡೆದವೆಂದರೆ ಅವು ಎಷ್ಟು ನೀರಡಿಸಿರಬೇಡ..? ಮದುವೆ ಸಂಭ್ರಮದಲ್ಲಿ ಮೂಕ ಪ್ರಾಣಿಗಳ ಬೇಕುಬೇಡಗಳನ್ನು ಅಲಕ್ಷಿಸಿದರೆ ಹೀಗೇ ಆಗುವುದು ....

ದೊಡ್ಮನೆ ಸಿದ್ಧಪ್ಪ ಬೋರಾಡಿ ಅಳುವುದು; ಎಚ್ಚರದಪ್ಪುವುದು; ಎಚ್ಚರಾಗುವುದು .. ಮಣ್ಣೊಳಗೆ ಉರುಳಾಡುವುದು .. ಈ ಕಡೆ ಆತ ಆ ಕಡೆ ಆತನ ಧೋತರ .... ಇದನ್ನೆಲ್ಲ ನೋಡಿದ ಕೆಲವರಿಗೆ ಮೋಜು! ಕಾಸಿಗೆ ಕಾಸು ಗಂಟು ಹಾಕಿದಷ್ಟು ಸುಲಭವಲ್ಲ ಸಾವಿನ ದವಡೆಯಲ್ಲಿರುವವರನ್ನು ಬದುಕಿಸುವುದು .. ಎಷ್ಟು ರಿಯುತ್ತಿದ್ದ ..? ಏನು ಕಥೆ! ಬದುಕಿನುದ್ದಕ್ಕೂ ಉಪ್ಪು ತಿನ್ನುವದನ್ನೇ ಹವ್ಯಾಸ ಮಾಡಿಕೊಂಡಿದ್ದ. ಈಗ ನೀರು ಕುಡಿಯಬೇಕಾದ ಸಂಕಟ. ಕುಡಿದು ಕುಡಿದು ಕಕ್ಕಬೇಕು ... ಹ್ಹ ... ಹ್ಹ ... ಕೆಲವರ ಮಾತುಗಳಿಗೆ ಪೂರ್ಣವಿರಾಮವಿರಲಿಲ್ಲ.

ಎಂಥ ವ್ಯಕ್ತಿಗೆಂಥ ಗತಿ ಬಂತು ಅಂತ ಮತ್ತೆ ಕೆಲವರ ಮಾತುಗಳು. ತುಂಬಿದ ಕೊಡದಂಥಾ ಮನುಷ್ಯ! ಎಷ್ಟು ನಿಧಾನದ ವ್ಯಕ್ತಿ. ಹ್ವಾ ... ಹ್ವಾ ... ಸವತ್ತಿನಲ್ಲಿ ಹೋಗಿ ಅಣ್ಣಾ ಹೀಗೆ ಅಂತ ಪರಿಸ್ಥಿತಿ ವಿವರಿಸಿದರೆ ಸಾಕು .. ಇದ್ದಷ್ಟು ಕೊಟ್ಟು ಕಳಿಸದೆ ಇರುತ್ತಿರಲಿಲ್ಲ ... ಬಡ್ಡಿ ಜಾಸ್ತಿಯಾದ

ರೇನಂತೆ .. ಸಮಯಕ್ಕೊದಗುತ್ತಿತ್ತಲ್ಲ! ಅದೇ ಮುಖ್ಯ ... ಅಯ್ಯೋ ಪಾ ..... ಪಾ .....! ಕೆಲವರು ಬಿಡುತ್ತಿದ್ದ ನಿಟ್ಟುಸಿರುಗಳಿಗೆ ಲೆಕ್ಕವಿರಲಿಲ್ಲ.

ಅಯ್ಯೋ ಅನ್ನದವನೇ ಪಾಪಿ .....!

ಆದರೆ ಒಂದು ಮಾತು ಸತ್ಯ ....! ಬದುಕು ಎಂಬ ತಕ್ಕಡಿಯ ಒಂದು ಪಗಡಿಯಲ್ಲಿ ಹಣವನ್ನು ಮತ್ತೊಂದು ಪಗಡಿಯಲ್ಲಿ ಹೆಂಡತಿ ಮಗಳನ್ನಿಟ್ಟು ತೂಗುತ್ತಿದ್ದ ಎಂಬುದು ಎಲ್ಲರಿಗೂ ಗೊತ್ತು. ಆದರೆ ಹಣದ ಪಗಡೆ ನೆಲಬಿಟ್ಟು ಮೇಲೇಳುತ್ತಿರಲಿಲ್ಲ.

ಆತ ಹಿಂದೆ ಮಾಡುತ್ತಿದ್ದುದೆಲ್ಲ ಸುಳ್ಳು. ಈಗ ಆತ ಹೆಂಡತಿಗಾಗಿ .. ಮುಂದಿನ ವಾರ ಬೀಗರ ಮನೆಯ ತಲಬಾಗಿಲಲ್ಲಿ ಅಕ್ಕಿ ತುಂಬಿದ ಸೇರನ್ನು ಬಲಗಾಲಿಂದ ಒದೆಯಬೇಕಿದ್ದ ಮುದ್ದಿನ ಮಗಳು ಪಾರ್ವತಿಗಾಗಿ ಎದೆಎದೆ ಬಡಿದುಕೊಳ್ಳುತ್ತ ರೋಧಿಸುತ್ತಿರುವುದು ಮಾತ್ರ ಸತ್ಯ! ಹಣದ ಬಗ್ಗೆ ಎಷ್ಟೇ ಮೋಹ ಇದ್ದರೂ ಆತನೊಳಗೆ ಕಕ್ಕುಲಾತಿಯ ಪರ್ವತ ಇತ್ತು.

ಒಳಗುಂದಿಗೆ ಒಳಗುಂದಿಯೇ ಕಾಲುವೆ ಕಡೆ ಹರಿದು ಬರುತ್ತಿತ್ತು. ಎದೆ ನಡುಗಿಸುವಂಥ ದುರಂತ ನೋಡಲು ಬಂದವರಲ್ಲಿ ಹತ್ತಾರು ಮಂದಿ ತುಂಬು ಗರ್ಭಿಣಿಯರಿದ್ದರು. ಬಾಣಂತಿಯರಿದ್ದರು. ಹೊಸದಾಗಿ ಮದುವೆಯಾದ ಗಂಡುಹೆಣ್ಣುಗಳಿದ್ದವು.

ಈಚಲು ಮರಗಳಾಚೆ ಹೋರಿಗಳು ಬಂಡಿ ಸಹಿತ ದಡ ಸೇರಿದವು. ಅದೂ ಅತಿ ಪ್ರಯಾಸದಿಂದ.. ಸವಾರಿ ಕಿತ್ತು ಹೋಗಿತ್ತು. ಮುರಿದಿದ್ದ ಆಡಿಗೆ ಏರುಕೋಲುಗಳ ನಡುವೆ ಸಿದ್ಲಿಂಗನ ಹೆಣ ಇರುಕಿತ್ತು. ಮತ್ತೊಂದು ಹೆಣವಿರಲಿಲ್ಲ. ಗಂಡನ ಹೆಣ ಗ್ಯಾಸು ಲೈಟಿನಲ್ಲಿ ದಗ್ಗೆಂದು ಹೊಳೆಯುತ್ತಲೆ ನಿಂಗವ್ವ ಎದೆ ಎದೆ ಬಡಿದುಕೊಂಡಳು ....

ನೆಲಮುಗಿಲಿಗೇಕಾಗಿ ಅಳತೊಡಗಿದಳು ... ಹೆಣದ ಮೇಲೆ ಬಿದ್ದು ಹುಚ್ಚಿಯಂತೆ ಹೊರಳಾಡಿದಳು. ಸಿದ್ದಪ್ಪ ಹತ್ತಿರಾಗುತ್ತಲೇ ಆಕೆಯ

> ಬಣ್ಣನೆಯ ಬಿಡದಿಯಲೂ
> ಕಾವ್ಯದ ಕಿಡಿ ಸಿಡಿಯದು
>
> ತಣ್ಣನೆಯ ಮಡದಿಯಲೂ
> ಕಾಮನೆ ಕೊನರದು!
>
> ● ದೊಡ್ಡರಂಗೇಗೌಡ

ದುಃಖಕ್ಕೆ ರೆಕ್ಕೆಗಳು ಮೂಡಿದವು.

''ನಿನ್ ಮಗ್ಳ ಮದ್ವೆಗೆ ಕುಣ್ಕಂತ ಬಂದ್ನಲ್ಲೋ ನನ್ಗಂಡ. ಕೊಡೋ ನನ್ಗಂಡನ್ನ ... ನನ್ ಗಂಡನ್ನ ಕಿತ್ಕೊಂಡು ದಿಕ್ಕಿಲ್ದೋಳ್ನಾಗಿ ಮಾಡಿಬಿಟ್ಟೆಲ್ಲೋ ....'' ಸಿದ್ದಪ್ಪನೆದುರು ಹಣೆ ಚಚ್ಚಿಕೊಂಡಳು. ಆಕೆಯ ಕೈ ಬಳೆಗಳು ಪುಡಿ ಪುಡಿಯಾದವು. ಆಕೆಯ ಗಮನ ತನಗೆ ಮಕ್ಕಳನ್ನು ಕೊಡದೆ ಹೋದ ಗಂಡನ ಕಡೆ ಹೊರಳಿತು. ಕೊಡೋ .... ನನ್ಗೊಂದು ಮಗೂನ ಕೊಡೋ ...

ಮಾಲಿಂಗ ಎಲ್ಲಿದ್ದನೋ ಆ ಕ್ಷಣದವರೆಗೆ .. ಓಡಿ ಬಂದ... ಆತ ಆಕೆಗೆ ಸೋದರ ಮಾವನಾಗಬೇಕು. ಆಕೆಯನ್ನು ಆತನೇ ಮದುವೆಯಾಗಬೇಕಿತ್ತು. ಕಂಕಣಬಲ ಕೂಡಿ ಬಂದಿರಲಿಲ್ಲ. ಋಣ ಇರಲಿಲ್ಲ ಎಂದರೂ ಸರಿಯೇ .... ಮಿಡಿನಾಗರದಂತ ಸುರಗಿ ಆಕೆಯ ತೆಕ್ಕೆಯಿಂದ ಹೆಣ ಬೇರ್ಪಡಿಸಿದ. ಅದೂ ಬಲವಂತದಿಂದ ..... ''ಈ ವಯಸ್ನಾಗೆ ನೀನು ರಂಡೆ ಆಗಬೇಕೂಂತ ಬರ್ದಿತ್ತು ..... ಆಯ್ತು .... ನಿನ್ಗೇನಂಥ ವಯಸ್ಸಾಗೇತಿ ..... ನಾನಿಲ್ಲೇನು ಹುಲಿಯಂಗೆ ....'' ಉಸಿರುಗಟ್ಟಿದ್ದ ಆಕೆಯನ್ನು ಎದೆಗಪ್ಪಚಿಕೊಂಡ .... ಪುರುಷನೆದೆಯ ಬಿಸಿಗೆ ಎಷ್ಟೋ ಹಗುರಾದಳು ... ಆಕೆಗೆ ಹಾಗೆ ನಿದ್ದೆ ಬಂದಂಥ ಅನುಭವ!

ನಂತರ ಸಿಕ್ಕಿದ್ದು ನಾಗವ್ವನ ಹೆಣ ... ಬಡಕನೇ ಎಳೆದು ತಂದದ್ದು .... ಮೊದ ಮೊದಲು ಮದುಮಗಳು ಸಿಕ್ಕಳೆಂದೇ ಭ್ರ[illegible] ಎಲ್ಲಿರು ... ಹಾಡಿನ ರೀತಿಯಲ್ಲಿ [illegible]ತ್ತಿದ್ದ ಅಪರೂ

ಪದ ಮುದುಕಿ ... ಒಳಗುಂದಿಯಲ್ಲಿ ಯಾರದೇ ಮನೆಯಲ್ಲಿ ಮದುವೆ ಮುಂಜಿ ಏನೇ ಆಗಲಿ ... ಹಾಜರಿದ್ದು ಕಿವಿ ದಣಿಯುವಂತೆ ಹಾಡುತ್ತಿದ್ದ ಮುದುಕಿ ..... ಅದರ ಶರೀರದಲ್ಲಿ ರಕ್ತದ ಬದಲಿಗೆ ಜನಪದ ಹಾಡುಗಳಿದ್ದವೇನೋ ....! ಮಾಂಸಕ್ಕೆ ಬದಲು ಅಡುಗೂಲಜ್ಜಿ ಕಥೆಗಳಿದ್ದವೋ ಏನೋ? ಹಸಿವೆಯಾದಾಗ ಒಂದು ಪದ ಗುನುಗಿ ಹೊಟ್ಟೆ ತುಂಬಿಸಿಕೊಳ್ಳುತ್ತಿತ್ತು. ಬಾಯಾರಿದರೆ 'ಗಂಗೆ ಗೌರಿ ಜೂಜನಾಡಿದರು ....' ಆಕೆ ಊರಿಗೇ ಸೇರಿದ್ದವಳು .. ಊರೇ ಆಕೆಯ ಸ್ಥಿರಾಸ್ತಿ .... ಆಕೆಯ ಹೆಣ ಅನೇಕರ ಕಣ್ಣಲ್ಲಿ ಒರತೆ ತೋಡಿತು. ಉಪ್ಪುಪ್ಪು ನೀರು ಕಿತ್ತು ಬಂತು.

ಅದು ಇನ್ನೂ ತೊಟ್ಟಿಕ್ಕುತ್ತಿರುವಾಗಲೇ ಪರಮೇಶಿ ಮದುಮಗನ ದೇಹ ಹೊತ್ತು ತಂದು ಮಲಗಿಸಿದ. ನೀರು ತುಂಬಿಕೊಂಡು ಊದಿರುವ ಹೊಟ್ಟೆ, ಬದುಕಿರುವನೋ ಇಲ್ಲವೋ? ಮೂಗಿನ ಹೊಳ್ಳೆಗಳ ಅಡಿ ಬೆರಳಿಟ್ಟು ಉಸಿರಾಟ ಪರೀಕ್ಷಿಸಲು ನಾ ಮುಂದು ತಾ ಮುಂದು ಅಂತ ಮುಂದಾದರು. ತನ್ನ ವೈದ್ಯಕೀಯ ಪೆಟ್ಟಿಗೆಯೊಡನೆ ಸಂಜೆಯೇ ಬಂದಿದ್ದ ಕುರುಬರ ಸೋಮಣ್ಣ ಬ್ಯಾಟರಿ ಬೆಳಕಲ್ಲಿ ಅಲ್ಲಿಗೂ ಧಾವಿಸಿದ. ಸ್ಟೆತಸ್ಕೋಪಿಟ್ಟು ನೋಡಿ ಮದುಮಗ ಜೀವದಿಂದಿರುವನೆಂದು ಘೋಷಿಸಿದ. ದೇವ್ರೇ ನೀನು ದೊಡ್ಡವ ಸಿದ್ಧಪ್ಪ ಕೈ ಎತ್ತಿ ಮುಗಿಲಿಗೆ ಮುಗಿದ. ರಮೇಶನನ್ನು ಬೋರಲು ಮಲಗಿಸಿ ಸೋಮಣ್ಣ ಅದುಮುತ್ತಿದ್ದ. ಎರಡಿಂಚು ವ್ಯಾಸದ ಬಾಯಿಯಿಂದ ನೀರು 'ಹೊಯ್ಕ್' 'ಹೊಯ್ಕ್' ಅಂತ ಸುರಿಯಿತು. ನೋಡುತ್ತಿದ್ದವರ ಕಾಲ ಬುಡಕೆ ಹರಿಯಿತು. ಕ್ರಮೇಣ ಹೊಟ್ಟೆ ಇಳಿಯಿತು. ಅಂಗಾತ ಮಲಗಿಸಿ ಉಪ್ಪಾರ ಹುಲಿಗೆವ್ವ ಗಾಳಿ ಹಾಕತೊಡಗಿದಳು ಸೆರಗಿನಿಂದ. ಎಳೆ ನಿಂಬಿಕಾಯಿಯಂಥ ಮುಖ, ದೊಣ್ಣೆ ಮೂಗು; ಚಿಗುರು ಮೀಸೆ, ಹ್ಹಾ ಹ್ಹಾ ಅಂದಳು.

ಮದುಮಗಗೆ ನಿಧಾನವಾಗಿ ಪ್ರಜ್ಞೆ ಬರಲಾರಂಭಿಸಿತ್ತು. ಅದುರುತ್ತಿರುವ ಕಣ್ಣಾಲಿಗಳು; ಅದುರುತ್ತಿರುವ ತುಟಿಗಳು. 'ಮಾತಾಡೋ ಮಾತಾಡೋ' ಸಿದ್ಧಪ್ಪ ಮಿಸುಕಾಡಿಸಿದ. ಮುಲುಕುವುದರ ಜೊತೆಗೆ ಅಪ್ಪಾ ... ಅಮ್ಮಾ .... ಎಂದು ಕೇಳಿಸಿತು. ಓಹ್ ಮದುಮಗ ಬಾಯಿಬಿಟ್ಟ .... ಎಲ್ಲರ ನಾಲಗೆ ಮೇಲೆ ಮಾತು ಚಿಗುರಿತು.

ರಮೇಶ ಕಣ್ಣೂ ಬಿಟ್ಟ ... ತಾನು ಬದುಕಿರುವುದು ... ಕನಸೋ .... ನನಸೋ .... ಕಣ್ಣುಜ್ಜಿಕೊಂಡ; ಪ್ರಯಾಸದಿಂದ. ಹೌದು ತಾನು ಬದುಕಿರುವುದು ಕನಸಲ್ಲ.. ನನಸು ... ತನ್ನ ಕಡೆ ಬಾಗಿ ನಿಂತಿದ್ದ ಮುಖಗಳಲ್ಲಿ ಅದೇನನ್ನೋ ಹುಡುಕಾಡಿದ. ಓಹ್ ತನ್ನ ತಲೆ ಇರುವುದು ... ಮಾವನ ತೊಡೆ ಮೇಲೆಯೇ .... ಮಾವ ..... ರಮೇಶನ ಕಣ್ಣುಗಳು ಜಜ್ಜಲಾಗಿ ಅರಳಿದವು ... ರಮೇಶಾ ... ಸಿದ್ಧಪ್ಪ ಬಿಕ್ಕಳಿಸಿದ. ಅಳಿಯ ಮಾವ ಅಪ್ಪಿಕೊಂಡರು ಮನೋಜ್ಞವಾಗಿ ..

''ಮಾವಾ ...'' ರಮೇಶನ ಕಣ್ಣುಗಳು ಹುಡುಕಾಡಿದವು ಸುತ್ತ ..... ''ಮ ... ತ್ತೆ .... ಪಾರ್ವತಿ ..... ಪಾ .... ರ್ವ .... ತಿ ....''

ಸಿದ್ಧಪ್ಪನ ಕಂಠ ಕಟ್ಟಿತು. ಏನು ಉತ್ತರಿಸುವುದು? ತಡಕಾಡಿದ ...

''ಪಾರ್ವತೀನ ಗಂಗಮ್ಮ ಇನ್ನೂ ಬಿಟ್ಕೊಡುವಲ್ಲ ರಮೇಶಾss .....'' ಹೋ ಅಂತ ಅತ್ತರು ಇಬ್ಬರು ತಬ್ಬಿಕೊಂಡು. ರಮೇಶ ಮಾವನಿಂದ ಕಿತ್ತುಕೊಂಡು ಓಡಿದ ನೀರಿನ ಕಡೆ ... ಎಲ್ಲಿ ಮತ್ತೆ ಬಿದ್ದುಬಿಡುವನೋ ಎನ್ನಿಸಿ ಸಿದ್ಧಪ್ಪನು ತಾನೂ ಧಾವಿಸಿದ.

''ಪಾರ್ವತಿ ... ನನ್ ಬಿಟ್ಟು ನೀನೊಬ್ಳೇ ಇನ್ನೂ ನೀರೊಳ್ಗೆ ಹೊಕ್ಕಂಡಿದೀಯಲ್ಲೇ ... ಬಾರೆ ಹೊರಗೆ .... ಪಾರ್ವತೀsss .....'' ಇನ್ನೇನು ಮೂರ್ಛೆ ಹೋಗಿಬಿಟ್ಟನೋ ಎನ್ನುವಂತೆ ಹೊಯ್ಲಾಡಿದ. ಕದ್ದು ಮುಚ್ಚಿ ಎರಡೇ ಬಾರಿ ಚುಂಬಿಸಿದ್ದ ಅಷ್ಟೆ ...

ನಾಕು ಜನರೆದುರು ಹೆಂಡತಿ ಹೆಸರು ಹೇಳಲು ಹೆದರಿದ್ದ ನಿನ್ನೆ ... ಆದರೆ ... ಈಗ 'ಪಾರ್ವತೀ .... ಪಾರ್ವತೀ' ಅಂದು ಸುಸ್ತಾದ. ಹಸಿ ಮೈಗೆ

ದುಃಖ ಒಳ್ಳೆಯದಲ್ಲ ... ಒಂದಿಬ್ಬರು ಆತನನ್ನು ಕರೆದೊಯ್ದು ಪಣುವಿನ ಪಕ್ಕ ಕುಳ್ಳಿರಿಸಿದರು. ಆತ ಕುಕ್ಕರುಗಾಲಲ್ಲಿ ಮುಖ ಹುದುಗಿಸಿಕೊಂಡು ಕೂತ. ಮುಸು ಮುಸು .. ಅಳುವುದು ... ಚೀರುವುದು ಮಾಡುತ್ತಿದ್ದ ..

ಪೆಟ್ರೋಮ್ಯಾಕ್ಸ್‌ಗಳು ... ಬ್ಯಾಟರಿಗಳು ಎರಡು ದಡಗಳುದ್ದಕ್ಕೂ ಕೊಳ್ಳಿ ದೆವ್ವಗಳಂತೆ ...... ಜನ ಚೀರುವುದೇನು, ಕೂಗುವುದೇನು? ರೌರವ ಸೂರ ಮುಗಿಲಿಗೆ ತಲುಪುತ್ತಿತ್ತು.

ಖಿನ್ನತೆ ಸ್ವಲ್ಪ ಅಳಿಯಿತೆಂಬಂತೆ ರಮೇಶ ತಿಳಿಗೊಂಡ. ದುರಂತದ ನಡುವೆ ಒಂದು ತೆರನಾದ ಸುಖ ..'ಪಕ್ಕಾದ .. ವಿನಾಕಾರಣಕ್ಕಿರಬೇಕು. ಕೊರಳು ಮುಟ್ಟಿ ನೋಡಿಕೊಂಡ. ಚಿನ್ನದ ಚೈನಿರಲಿಲ್ಲ ... ಅದರಂತೆ ಜೇಬಿನಲ್ಲೂ 'ಫೈವ್ ಹಂಡ್ರಡ್ಸ್' ಇರಲಿಲ್ಲ ... ಕೈ ಬೆರಳಲ್ಲಿ ದೊಡ್ಡ ಹರಳಿನ ಉಂಗುರ ಮಾತ್ರ ಇತ್ತು ... ಯಾರೋ ಲಪಟಾಯಿಸಿರಬೇಕೆನ್ನಿಸಿ ಮೇಲೆದ್ದ.

ಆತ ತನ್ನ ಕಡೆ ಬರುವುದು ಕಂಡ ಒಡ್ಡೆ ದೇಹದ ಪರಮೇಶಿ ಹೀಗೆ ಯೋಚಿಸಿದ. ತನಗೆ ಕೃತಜ್ಞತೆ ಹೇಳಬಹುದು ಅಥವಾ ತನ್ನ ಮುದ್ದಿನ ಪತ್ನಿಯನ್ನು ಹುಡುಕಿ ತಾ ಅಂತ ಪ್ರಾರ್ಥಿಸಬಹುದು. ಆದರೆ! ಪರಮೇಶಿಯನ್ನು ಕೆಳಗೂ ಮೇಲೂ ನೋಡಿದ. ಹೌದು ಬದುಕಿಸಿದಾತ ಈತನೇ ಸರಿ.' 'ಕೊಳ್ಳಾಗ ಒಂದೂವರೆ ತೊಲೆ ತೂಕದ ಒಂಟೆಳೆ ಸರ ಇತ್ತು. ಜೇಬ್ನಲ್ಲಿ ಫೈವಂಡ್ರಡ್ಡಿದ್ದು'' ಒಂದು ವರ್ಷದ ಹಿಂದೆ ಇದೇ ವ್ಯಕ್ತಿ ಯಾವುದೋ ಅಪರಾಧಕ್ಕೆ ಆರು ತಿಂಗಳ ಜೈಲು ಶಿಕ್ಷೆ ಅನುಭವಿಸಿದ್ದ .. ರಮೇಶ ನೆನಪು ಮಾಡಿಕೊಂಡ.

''ನಾನೇನು ಮಾಡ್ಬೇಕೀಗ'' ದುರಂತದ ದವಡೆ ಹೊಕ್ಕು ಬಂದಿರುವ ಕಾರಣಕ್ಕೆ ಮದುಮಗನ ತಲೆ ಕೆಟ್ಟಿರಬೇಕೆಂದು ಊಹಿಸಿದ ಪರಮೇಶಿಗೆ ಉತ್ತರ ಕೊಡಬೇಕೆನ್ನಿಸಲಿಲ್ಲ ... ಮತ್ತೆ ನೀರಿಗೆ ಧುಮುಕಿದ.

ಜೋರಾಗಿ ಬೀಸುತ್ತಿದ್ದ ಗಾಳಿಗೆ ನಡುಗಿದ ರಮೇಶ. ನರಿಗಳು ಊಳಿಡುತ್ತಿದ್ದವು ತೀರಾ ಹತ್ತಿರದಲ್ಲಿಯೇ. ಅವು ತೋಳಗಳಿದ್ದರೂ ಇರಬಹುದು. ಮತ್ತಷ್ಟು ನಡುಗುತ್ತ ಜನರ ಕಡೆ ಜೀಕಿ ನಡೆದ. ''ಅಗೋ ... ಆತನೇ ಮದುಮಗ ... ಇಗೋ ಈತನೇ ಮದುಮಗ'' ಎಲ್ಲರೂ ತನ್ನ ಕಡೆ ಬೊಟ್ಟು ಮಾಡಿತೋರಿಸುವವರೆ! ಸಂಕೋಚದ ನಡುವೆ ನಾಚಿಕೆ ನಡುವೆ ಭಯದ ನಡುವೆ ತನಗೆ ಹೆಣ್ಣು ಕೊಟ್ಟ ಮಾವನ ಬಗೆಗೂ ಅನುಮಾನಿಸಿದ. ಉಪ್ಪಾರ ಹುಲಿಗೆವ್ವ ಕಳ್ಳಿಯಂತೆ ಕಂಡಳು ಮುರುಕು ಚಂದ್ರನ ಬೆಳಕಲ್ಲಿ..



''ಅಯ್ಯೋ ಸತ್ತೇ, ಈ ಸಿನೆಮಾ ನೋಡಲು ನನ್ನ ಹೆಂಡತಿಯೂ ಬರುತ್ತಿದ್ದಾಳೆ.''

ಕಮಲಳ ಹೆಣ ಸಿಕ್ಕ ಸುದ್ದಿಗೆ ಜನ ಪ್ರಚಂಡ ಸದ್ದು ಮಾಡಿತು. ಮದುಮಗಳಿರಬೇಕೆಂದೇ ಹೊಯ್ದಾಡಿತು. ಇದು ಕಮಲಳದು ... ತನ್ನ ತಂಗಿಯ ಮೂರನೆ ಮಗಳದು ... ಸಿದ್ದಪ್ಪ ಗುರುತಿಸಿದ. ಹಿಂದೆಯೇ ಆತನ ತಂಗಿಯೂ ಬಂದಳು. ಮಗ್ಳೇ ಕಮ್ಲೂ ಅಂತ, ಪ್ರಾಣ ಪಕ್ಷಿ ಕಮಲಳ ಮೈಮಾಟದೊಳಗಿದೆಯೋ .... ಇಲ್ಲವೋ ಪರೀಕ್ಷಿಸಲೆಂದು ಬಂದ ಕುರುಬರ ಸೋಮಣ್ಣ ಅವಕಾಶಕ್ಕಾಗಿ ತಡಕಾಡಿದ.

ಅಷ್ಟರಲ್ಲಿ ಒಳಗುಂದಿಯ ಹಾದಿಯಲ್ಲಿ ಗುರ್ರು ಗುಟ್ಟುತ್ತಿರುವ ಸದ್ದು ಎಲ್ಲರ ಗಮನ ತನ್ನ ಕಡೆ ಸೆಳೆಯಿತು. ತಿರುಗಿ ನೋಡುತ್ತಾರೆ.

ಜೋಡು ನಳಿಗೆಯ ಬ್ಯಾಟರಿ ಕಣ್ಣುಗಳ ಕಾಡು ಬೆಕ್ಕು ಗುರುಗುಟ್ಟುತ್ತ ಓಡಿ ಬರುತ್ತಿರುವಂತೆ ... ಪೋಲೀಸ್ ಜೀಪೊಂದು ಬಂದು ನಿಂತಿತು. ಎಸ್ಸೈ ಮಾದಪ್ಪ ಕೆಲವು ಪೇಸಿಗಳೊಂದಿಗಿಳಿದನು.

ಅವರ ಆಗಮನದಿಂದ ಸಿದ್ಧಪ್ಪ ವಿಚಲಿತನಾಗಲಿಲ್ಲ. ಇನ್ನೊಂದು ಸ್ವಲ್ಪೊತ್ತಿಗೆ ಬರಲಿರುವ ಗಂಡಿನ ಕಡೆ ಬೀಗರಂತೆ ಇವರೂ ಸಹ.

ಒಳಗುಂದಿಯ ಪೊಲೀಸರೆಂದರೆ ಸಿದ್ಧಪ್ಪನ ಅಂತರಂಗದ ಕಾಣದ ನೂರಾರು ಕೈಗಳು. ಪೋಲೀಸರಿಗೆ ಈತ ಬೇಕು. ಈತನಿಗೆ ಪೋಲೀಸರು ಬೇಕು. ಕಾರಣ ಸಿದ್ಧಪ್ಪ ಮೊದಲೇ ಲೇವಾದೇವಿ ಮನುಷ್ಯ. ಬಲಗೈಲಿ ಕೊಡುತ್ತಿದ್ದ; ಎಡಗೈಲಿ ಪಡೆಯುತ್ತಿದ್ದ. ಅದರಲ್ಲಿ ಪೋಲೀಸರಿಗೆಂದರೆ ಸ್ವಲ್ಪ ಧಾರಾಳತನ ಹೆಚ್ಚು. ಕನಸಿನಲ್ಲೂ ಕೇಳಿದರೆ ನೂರುಗಟ್ಟಲೆ ಕೊಡುತ್ತಿದ್ದ. ಬಡ್ಡಿಯೂ ಕಡಿಮೆ. ತಿಂಗಳು ಹೆಚ್ಚು ಕಡಿಮೆ ವಾಪಾಸು ಮಾಡಿದರೂ ನಡೆಯುತ್ತಿತ್ತು. ಆದ್ದರಿಂದ ಪೇಸಿಗಳೆಂದರೆ ಸಲಿಗೆ ಜಾಸ್ತಿ, ಆ ಭಾಗದಲ್ಲಿ ಪೇಸಿಗಳನ್ನು ಹೆಸರಿಡಿದು ಕರೆಯುತ್ತಿದ್ದ ಏಕಮಾತ್ರ ವ್ಯಕ್ತಿ ಆತನಾಗಿದ್ದ. ಪೊಲೀಸ್ ಠಾಣೆಯೊಳಗೆ ಅಧಿಕಾರ ಚಲಾಯಿಸುತ್ತಿದ್ದ ಇನ್ಸ್‌ಪೆಕ್ಟರ ನಂತರದ ಎರಡನೆಯ ವ್ಯಕ್ತಿಯಾಗಿದ್ದನಾತ. ಇಂಥಾತನ ಮನೆಯಲ್ಲಿ ಕಳ್ಳತನ ಆಗುವುದು ಹೇಗೆ ಸಾಧ್ಯ! ಕಳ್ಳಕಾಕರನ್ನು ಕಸ್ಟಡಿಗೆ ತೆಗೆದುಕೊಳ್ಳಬೇಕಾದ ತೀರಾ ಇಕ್ಕಟ್ಟಿನ ಸಂದರ್ಭಗಳಲ್ಲಿ ಪೇಸಿಗಳಿಗೆ ಸಿದ್ಧಪ್ಪ ಸಹಕರಿಸುತ್ತಿದ್ದ. ಈ ಋಣದ ಅರಿವು ಪೇಸಿಗಳಿಗೆ ಇಲ್ಲದಿಲ್ಲ. ಒಳಗುಂದಿಯಲ್ಲಿ ನೀರು ಮಾಡಿಕುಂಡಿಸಿದಾಗ ಪೇಸಿಗಳೆಲ್ಲ ನೆನಪಿನ ಕಾಣಿಕೆ ನೀಡಬೇಕೆಂದು ತಾವೆಲ್ಲ ತಲಾ ಇಷ್ಟಿಷ್ಟು ಹಾಕಿ ದೊಡ್ಡದೊಂದು ವಾಟರು ಟ್ಯಾಂಕ ಕೊಂಡಿಟ್ಟುಕೊಂಡಿದ್ದರು. ಅದರ ಮೇಲೆ ವಿಳಾಸವೂ ಸಹ ...! ಸಿದ್ಧಪ್ಪನೂ ಸಹ ಎಲ್ಲ ಪೇಸಿಗಳ ಕೈಗಳನ್ನು ವನಸ್ಪತಿಯಲ್ಲಿ ತೊಳೆಯಬೇಕೆಂದು ಯೋಚಿಸಿದ್ದ.

ಅದೆಲ್ಲ ನೆನಪಾಯಿತು. ಅಯ್ಯೋ ವಿಧಿಯೇ .. ತಲೆಗೆ ಕೈ ಹೊತ್ತು ರೋಧಿಸಿದ.

ಮುರುಕು ಬಂಡಿಯ ಬಳಿ ಸಾಲು ಮಲಗಿದ್ದವು ಹೆಣಗಳು. ಅವುಗಳನ್ನು ನೋಡುತ್ತಲೇ ಮಾದಪ್ಪ ತಲೆಯಿಂದ ಹ್ಯಾಟು ತೆಗೆದು ಗೌರವ ಸಲ್ಲಿಸಿದ. ಪೇಸಿಗಳೂ ... ಅದೇ ಹೊತ್ತಿಗೆ ಬಂದ ಟ್ರ್ಯಾಕ್ಟರಿಂದ ಬೀಗರಿಳಿದರು. ದಮ್ಮಡಿ ಜಾತಪ್ಪ ಅಬ್ಬರಿಸುತ್ತ ಬಂದ. ರಮೇಶ ಓಡಿ ಹೋಗಿ ತಂದೆಯನ್ನು ಅಪ್ಪಿಕೊಂಡ. ತಂದೆಯ ಕಣ್ಣೀರು ಮಗನ ಹೆಗಲ ಮೇಲೆ. ಮಗನ ಕಣ್ಣೀರು ತಂದೆಯ ಎದೆಯ ಮೇಲೆ ಹಳ್ಳವಾಗಿ ಹರಿದವು.

''ಎಲ್ಲಿ ನನ್ ಸೊಸೆ .. ನಂಮನಿ ಬೆಳಗಬೇಕಿದ್ದ ಪಾರ್ವತಿ ಎಲ್ಲಿ?'' ನೆಲಕ್ಕೆ ಒರಗಿದ್ದ ಹೆಣಗಳ ಪೈಕಿ ತನ್ನ ಸೊಸೆ ಕಾಣುತ್ತಿಲ್ಲ. ಜಾತಪ್ಪನ ದುಃಖ ಕಟ್ಟೆಯೊಡೆಯಿತು. ಹೆತ್ತ ತಂದೆಗಿಂತಲೂ ಮಾವ ಹೆಚ್ಚು ಎನ್ನುವಂತೆ ಸವಂಡು ಮಾಡಿದ. ಜನ ಹ್ಹಾಂ ಹ್ಹಾ ಅಂದರು. ಸಿದ್ಧಪ್ಪ ಎಸ್ಸೈಗೆ ಹೆಣಗಳನ್ನು ಪರಿಚಯಿಸಿದ, ಪಂಚನಾಮೆಗೆ ಅನುಕೂಲವಾಗಲೆಂದು. ಕರುಳುಗಳೆಲ್ಲ ಆತನ ನಾಲಿಗೆಗೆ ಬಂದಿದ್ದವು.

ತನ್ನ ತೊಡೆ ಮೇಲಿಂದ ಗಂಡನ ತಲೆ ಕೆಳಕ್ಕಿಳಿಸಿದ ನಿಂಗವ್ವ ಇನ್ಸ್‌ಪೆಕ್ಟರೆದುರಿಗೆ ಕುಪ್ಪಳಿಸಿದಳು.

''ಇಷ್ಟೇ ನನ್ ಗಂಡನ್ನ ನನ್ನಿಂದ ಕಸ್ಗೊಂಡ ಸಾರೂ'' ಕಳೆದ ವರ್ಷವೇ ಹೆಂಡತಿಯನ್ನು ಕಳೆದುಕೊಂಡಿದ್ದ ಸಿದ್ಧಪ್ಪನ ಕಡೆ ಬೊಟ್ಟು ಮಾಡಿ ತೋರಿಸಿದಳು. ''ಕೈಗೆ ಕೋಳ ತೊಡಿಸ್ರಿ ಅವ್ನೀಗೆ ... ನಾವು ಗಂಡಹೆಂಡ್ತು, ಸುಖವಾಗಿರೋದು ನೋಡಿ ಹೊಟ್ಟೆ ಉರುಕಂಡ .... ಅಗೋ .... ನೋಡಿ, ನನ್ ಗಂಡನ್ನ ... ಸಾಯ್ವಾಗ ಎಷ್ಟ್ ನೊಂದಿರಬೇಡ ನನ ಗಂಡ ... ಸಾಯೋ ಟೇಮಿನಾಗ ನಿಂಗೀ ನಿಂಗೀ ಅಂತ ಕೂಕ್ಕೊಂಡ್ನೋ ಏನೋ?... ನಾನಿದ್ರೆ, ಬಿಡ್ತಿದ್ನಾ ... ಜೊತೇಲೆ ಸಾಯ್ತಿದ್ದೆ ... ಲೋ ಸಿದ್ಧ ಹಾಲು ಕುಡ್ತಂಗಾಯ್ತನೋ ....'' ಇನ್ನೇನು ಆಕೆ ಸಿದ್ಧಪ್ಪನ ಕೊರಳ ಪಟ್ಟಿ ಹಿಡಿದಳೆಂದ ಕೂಡಲೆ ಮಾಲಿಂಗ ಒಮ್ಮೆಗೆ ಕುಪ್ಪಳಿಸಿ ತನ್ನ ಸೋದರ ಸೊಸೆಯನ್ನು ಹಿಡಿದುಕೊಂಡನು.

''ಸುಮ್ನಿರಬೇಕು, ಕೋರ್ಟ್ ಐತೆ,

ಕಾನೂನು ಅದಾವೆ.. ವಾದಿ ಮಾಡೋಕೆ ವಕೀಲ್ರು ದಾರೆ ಎಪ್ಪತ್ತಾಸ್ವತ್ರ ಪರಿಹಾರಕ್ಕೆ ದಾವೆ ಹೂಡೋಣ!'' ಒಳಗುಂದಿಯಲ್ಲಿ ಕಟ್ಟೆ ವಕೀಲ ನೆಂದೇ ಹೆಸರಾಗಿದ್ದ ಮಾಲಿಂಗ ಕೋರ್ಟಿನ ಕಟಕ ಟೆಯಲ್ಲಿ ತಾಯಿ ಗರ್ಭದೊಳಗಿದ್ದಾಗಲೇ ಹತ್ತಾರು ಬಾರಿ ನಿಂತು ಬಂದಿದ್ದ. ತನ್ನ ತೆಕ್ಕೆಯೊ ಳಗೆ ಹಾವಿನಂತೆ ಕೊಸರಾಡುತ್ತಿದ್ದ ಆಕೆಯನ್ನು ಆತ ಪರಿಪರಿಯಾಗಿ ರಮಿಸುತ್ತ ಏರಿ ಕೆಳಗಿದ್ದ ಕಬ್ಬಿನ ಗದ್ದೆ ಕಡೆ ಸರಿದು ಮರೆಯಾದ.

ಕೈ ಕೈ ಹಿಚುಕಿಕೊಂಡ ಸಿದ್ಧಪ್ಪ. ಸಿದ್ಲಿಂಗ ಮದುವೆ ಬಂಡಿಯ ಸಾರಥ್ಯ ವಹಿಸಿದ್ದು ಮೂಡ ಲೋರಿಗಳ ಮೇಲಿನ ಪ್ರೀತಿಯಿಂದಾಗಿಯೇ ಎಂಬ ಸತ್ಯ ಆತಗೆ ಗೊತ್ತು. ತನ್ನ ಮನಸ್ಸಿನಲ್ಲಿ ರೋದನ್ನು ಹೇಳಲೆಂದು ಜಾತಪ್ಪ ಎಸ್ಟೈ ಮುಂಪೆ ಉಗುಳು ನುಂಗುತ್ತ ಅಡ್ಡಾಡುತ್ತಿದ್ದ. ತನ್ನ ಮಗ ರಮೇಶನನ್ನು ಬದುಕಿಸುವ ನೆಪದಲ್ಲಿ ಪರಮೇ ಶಿಯೇ ಯಾಕೆ ಲಪಟಾಯಿಸಿರಬಾರದು ಒಂಟೆಳೆ ಚಿನ್ನದ ಸರವನ್ನು ಐನೂರು ನಗದನ್ನು ....!

ಹೆಣಗಳನ್ನು ಕಾಯುವ ಉಸ್ತುವಾರಿಗೆ ಪೋಸಿ ಗಳನ್ನು ನಿಯಮಿಸುವುದರ ಕಡೆ; ಇನ್ನೂ ಸಿಕ್ಕದೆ ನಿಗೂಢವಾಗಿ ಉಳಿದಿರುವ ಮದುಮಗಳ ಹೆಣ ಪತ್ತೆ ಮಾಡುವುದರ ಕಡೆ .... ಗಮನ ಹರಿಸಿದ್ದ ಮಾದಪ್ಪ.

ಜಲಪಾಲು ಆಗಿರುವ ಸೊಸೆಯ ಶವವನ್ನು ಹುಡುಕಲು ಇಷ್ಟೊಂದು ಜನರು ಯಾಕೆ ....? ಕೆಲವರನ್ನು ಅಲ್ಲಿಂದ ಓಡಿಸುವಷ್ಟು ಸಿಟ್ಟು ಬಂತು ಜಾತಪ್ಪಗೆ. ಇದನ್ನು ಹೆಣ್ಣು ಕೊಟ್ಟ ಬೀಗ ಹೇಳಬೇಕು! ಆದರೆ ಆತ ತಲೆಗೆ ಕೈ ಹೊತ್ತು ಕೂತಿ ರುವನು! ಸಿಟ್ಟು ಬಂತು. ಹೆಣಗಳನ್ನು ದಾಟ ಬಂದ ಶಂಭಯ್ಯನನ್ನು ನೋಡಿ, ಆತನೇ ಈ ಮದುವೆ ಮಾಡಿಸಿದವನು. ಪಾದಗಳ ಕೆಳಗೆ ಮೊಂಡಿಲಿ ನುಸುಳಬಹುದಾಗಿದ್ದ ಹುಡುಗಿ ಹೊಕ್ಕ ಮನೆ ಚಿನ್ನದ ಹೊಗೆಯಾಡುತ್ತದೆ ಎಂದು ತಾನೆ ಆತ ಪೂಸಿಯೊಡೆದಿದ್ದು .. ಕಂಕಣ ಬಲದ ಬುದಕ್ಕೆ ಗೊಬ್ಬರ ಹಾಕಿದ್ದ; ನೀರೆರೆದಿದ್ದ ಮಹಾ ಸುಭಾವ. ಆತ ತನ್ನ ಮಾಮೂಲಾದ ಕತ್ತರಿ ಗೆಂದು ಹತ್ತಿರ ಬರುತ್ತಲೆ ಈ ಕುರಿತು ಕೇಳಿಯೇ ಬಿಟ್ಟ. ಚಾಣಾಕ್ಷ ಶಂಭಯ್ಯ ವರದಕ್ಷಿಣೆ ನೂರರ ಎರಡೂವರೆ ಕಟ್ಟುಗಳನ್ನು ನೆನಪು ಮಾಡಿಕೊ ಡದೆ ಇರಲಿಲ್ಲ. ಅದು ಸಂದಾಯವಾಗದ ಹೊರತು ತಾಳಿ ಕಟ್ಟದಂತೆ ರಮೇಶನನ್ನು ತಾಕೀತು ಮಾಡಿದ್ದು ಆತನೇ. ಆದರೆ ಜಾತಪ್ಪನ ದೃಷ್ಟೀಲಿ ಅದು ಸುಟ್ಟರೆ ಇದ್ದಿಲಲ್ಲ; ಬೂದಿಯೂ ಅಲ್ಲ! ಈ ಮದುವೆ ಎಂಬುದು ಕೇವಲ ನೆಪವಷ್ಟೆ! ಈ ನೆಪದ ಮೂಲಕವೇ ತನ್ನ ಮಗ ರಮೇಶ ಸಿದ್ಧಪ್ಪನ ಚರಾಸ್ತಿ ಸ್ಥಿರಾಸ್ತಿಗೆಲ್ಲ ಏಕಮೇವ ಒಡೆಯನಾಗಬೇಕೆಂದು ಬಯಸಿದ್ದ. ಆದರೆ ವಿಧಿ ದಿಬ್ಬಣ ಹೊತ್ತ ಮೂಡಲೋರಿಗ ಳಿಗೆ ಬಾಯಾರಿಕೆಯಾಗುವಂತೆ ಮಾಡಿತ್ತು. ಥ್ಥ .... ಥ್ಥ .... ದಮ್ಮಡಿ ಜಾತಪ್ಪ ನಿಟ್ಟುಸಿರು ಬಿಟ್ಟನು, ಉದ್ವಿಗ್ನಗೊಂಡು ಅಡ್ಡಾಡುತ್ತಿರುವ ಮಗನನ್ನು ನೋಡಿ.

ಜೋಲು ಮೋರೆಯ ಬೀಗನನ್ನು ಮಾತಾಡಿ ಸುವುದು ವಾಸಿ ಎನ್ನಿಸಿತು. ಆತ ಕ್ರಿಯಸ್ಥನಾಗಿ ದ್ದಲ್ಲಿ ಮಗಳು ಗತಿಸಿದರೇನು! ಅಳಿಯನನ್ನು ಮಗ ಎಂದು ತಿಳಿದುಕೊಳ್ಳಬೇಕು ...! ಆರೂವರೆ ತಿಂಗಳಲ್ಲಿ ಹುಟ್ಟಿದ ಕಾರಣಕ್ಕೆ ದುರ್ಬಲ ಕಾಲುಗ ಳುಳ್ಳ ಜಾತಪ್ಪ ನಡೆದು ಸಿದ್ದಪ್ಪನನ್ನು ತಲುಪಿ ಕೂತ. ಸಮಾಧಾನದ ಮಾತುಗಳನ್ನಾಡಿದ. ಸಿದ್ದಪ್ಪ ಬೀಗನನ್ನು ತಬ್ಬಿಕೊಂಡು ಗಳಗಳನೆ ಅತ್ತ, ಸ್ವಲ್ಪ ಹೊತ್ತಿಗೆ ಯಥಾರೀತಿಯಾದ.

ಬೇಸರ

ಪ್ರತಿ ವರುಷ ಬೆಳೆ ಕೊಡುವ ಭೂಮಿಗೆ
ಬೇಸರವೆಲ್ಲಿಯದು
ಎಲೆಕಾಯಿ ಚಿಗುರು ಹೂ-ಹಣ್ಣು ಕೊಡುವ ಮರಕ್ಕೆ
ಬೇಸರವೆಲ್ಲಿಯದು
ಸಕಲ ಚರಾಚರಕ್ಕೆ ನೀರು ಕೊಡುವ ಹೊಳೆಹಳ್ಳ ನದಿಕೆರೆ
ಬಾಯಿ ಕಡಲಿಗೆ ಬೇಸರವೆಲ್ಲಿಯದು
ಹೀಗೆ ಬೇಸರಪಡದ ಸ್ಥಿತಿ ಪಡೆದಾಗ ನಿಜ ಮನುಷ್ಯ
ನಾಗುವಿಯೆಂದಾತ ನಮ್ಮ ವಾಲೀಕಾರ ಚೆನ್ನಣ್ಣ

● *ಚೆನ್ನಣ್ಣ ವಾಲೀಕಾರ*

ಅಷ್ಟು ದೂರದಲ್ಲಿ ಪದೇ ಪದೇ ತಾಕೀತುಗೊಳ
ಗಾಗುತ್ತಿದ್ದ ರಮೇಶ ಕೂತ. ಅದೂ ಇದೂ
ಮಾತಾಡುತ್ತಿದ್ದ ಜಾತಪ್ಪಗೆ ಮಗಳನ್ನು ಕಳೆದು
ಕೊಂಡ ದುಃಖ ಇಷ್ಟೇನಾ ಎನ್ನಿಸಿತು. ದಾರಿಯು
ದ್ದಕ್ಕೂ ತಾನು ಆತಂಕದಿಂದ ಬಂದದ್ದು ವ್ಯರ್ಥ
ಎನಿಸಿತು. ತಾನಾಗಿದ್ದರೆ ಖಂಡಿತ ಎದೆಯೊಡೆದು
ಸಾಯದೆ ಇರುತ್ತಿರಲಿಲ್ಲೆನಿಸಿತು.

ಹೀಗಾಯ್ತು ಅಂತ ಸುದ್ದಿ ತಿಳಿದಾಗ ರಮೇಶನ
ಹೆತ್ತ ತಾಯಿಯ ತಲೆ ಗರಗರ ತಿರುಗಿದಂತಾಗಿ
ಮೂರ್ಛೆ ಹೋಗಿಬಿಟ್ಟಳು. ಮೂರ್ಛೆ ಹೋದಾ
ಗೆಲ್ಲ ಆಕೆಯ ಬಾಯಿಂದ ನೊರೆ ನೊರೆ ಬಂತು.
ಆಕೆಯನ್ನು ಆಸ್ಪತ್ರೆ ಸೇರಿಸುವ ಏರ್ಪಾಡು
ಮಾಡಿದ ನಂತರ ತಾನೂ ಮೂರ್ಛೆ ಹೋಗಿ
ದುಃಖವನ್ನು ಸಾರ್ಥಕಗೊಳಿಸಬೇಕೆಂದು ಪ್ರಯ
ತ್ನಿಸಿದ್ದ. ಆದರೆ ಶಾಪಗ್ರಸ್ತ ಕಲ್ಲಿನಂತೆ ಕೂತಿರುವ
ಸಿದ್ಧಪ್ಪನನ್ನು ಕಂಡು ಆತಗೆ ಛೀ ಅನ್ನಿಸಿತು. ಇಂಥ
ಸಂದರ್ಭದಲ್ಲೂ ಮೂರ್ಛೆ ಹೋಗಲಿಲ್ಲೆಂದ
ಮೇಲೆ ಮದುಮಗಳ ಮೈಮೇಲೆ ಆಯಾಚಿತ
ವಾಗಿ ಹಾಕಿದ್ದ ಒಂಬತ್ತು ತೊಲೆ ಚಿನ್ನದ ಒಡವೆ
ಗಳ ಬಗ್ಗೆ ಅನುಮಾನಿಸಿದ. ಮಾವಿನ ಕಾಸರವೇ
ಮೂರೂ ಕಾಲು ತೊಲೆ ತೂಕದ್ದು. ಹಣಬೇಕಾ
ದಾಗೆಲ್ಲ ತಾನು ಅದನ್ನು ಗ್ರಾಮೀಣ ಬ್ಯಾಂಕಿನಲ್ಲಿ
ಅಡವಿಡುತ್ತಿದ್ದುದು ನೆನಪಾಯಿತು. ತನ್ನ ಬಗ್ಗೆ
ತಾನೇ ಸಿಟ್ಟು ಮಾಡಿಕೊಂಡ. ತನ್ನ ಶ್ರೀಮಂತಿ
ಕೆಯ ಒಂದು ಭಾಗವೇ ಜಲಪಾಲಾಗಿರುವ
ಸೊಸೆಯ ಮೈಮೇಲಿರುವುದು .... ಜಾತಪ್ಪ
ಯೋಚಿಸುತ್ತಿರುವುದೇ ಬೇರೆ.. ಮಾತಾಡುತ್ತಿರು
ವುದೇ ಬೇರೆ.

ಕಾಲುವೆಯ ಇಕ್ಕೆಲದಲ್ಲಿ ದಟ್ಟೈಸಿರುವರು
ಜನ. ಪೆಟ್ರೋಮ್ಯಾಕ್ಸುಗಳು ಕಳೆಗುಂದುತ್ತಿರು
ವವು, ಹಾಗೇ ಟಾರ್ಚುಗಳೂ ಸಹ. ಪಾರ್ವತಿಯ
ದೇಹ ಪತ್ತೆ ಹಚ್ಚಲು ಎಷ್ಟೊಂದು ಜನ ನಿರ್ವಿರಾ
ಮವಾಗಿ ಹುಡುಕಾಟ ನಡೆಸಿರುವರು.

ಸಮರ್ಥ ಈಜುಗಾರರೆಲ್ಲ ಒಳ್ಳೆಯವರಾ
ಗಲು ಹೇಗೆ ಸಾಧ್ಯ. ಪಾರ್ವತಿಯ ಮೈ ತುಂಬ
ಚಿನ್ನದ ಒಡವೆಗಳಿದ್ದವು ಎಂದು ಗೊತ್ತಿದ್ದರ

ಮುಗಿಯಿತು.

''ಈಜಿ ಹುಡುಕ್ತಿರೋರೆಲ್ಲ ಒಳ್ಳೆಯವ್ರೇ
ನು?'' ಜಾತಪ್ಪ ಉದ್ವಿಗ್ನಗೊಂಡಾಗೆಲ್ಲ ಬೆವರು
ವುದು ಹೆಚ್ಚು. ಈ ಕಾರಣಕ್ಕೆ ಆತ ಸೊಂಟದಲ್ಲಿ
ಸೊಂಟಿ ಪೆಪ್ಪರ್‌ಮಿಂಟುಗಳನ್ನಿಟ್ಟುಕೊಂಡಿರು
ತ್ತಾನೆ. ಒಂದು ತೆಗೆದು ಬಾಯಿಗೆ ಹಾಕಿಕೊಂಡ.

''ಯಾಕಂಗೆ ಕೇಳ್ತೀಯಾ!'' ಮಾತುಗಳ
ಹಿಂದೆ ರಸ ಕಂಡು ಹಿಡಿಯ ಬಲ್ಲ ಜಾಣ ಸಿದ್ಧಪ್ಪ
ಸುತ್ತಿ ಬಡ್ಡಿಯ ಬಾಕಿದಾರನನ್ನು ನೋಡುವಂತೆ
ನೋಡಿದ. ''ಒಳ್ಳೆಯವ್ರಾಗಿರೋದ್ರಿಂದ್ಲೆ ಅವ್ರು
ಇಷ್ಟೊಂದು ಕಷ್ಟ ಪಡ್ತಿರೋದು!''

''ಮದುಮಗ್ಳ ಮೈಮೇಲೆ ಚಿನ್ನದ ಒಡ್ವೆಗಳಿ
ದ್ವಲ್ಲ ಅದ್ಕೆ!'' ಎಳಸು ಹುಡುಗನ ತಂದೆ ಮರೆತು
ಪೆಪ್ಪರ್‌ಮೆಂಟು ನುಂಗಿ ಬಿಟ್ಟ. ಕೊಕ್ ಕೊಕ್
ಕೆಮ್ಮಿದ.

ಆದರೆ ಸಿದ್ಧಪ್ಪ ಪೂರ್ತಿ ನಿಚ್ಚಳಾದ. ಮಗಳ
ಮೈಮೇಲೆ ಬುಗುಡಿ; ಬೆಂಡೋಲೆ; ನಾಗರ;
ಒಂಬತ್ತು ಹರಳಿನ ಮೂಗುತಿ; ನೆಕ್ಲೆಸ್ಸು; ಕಾಲ್ಗ
ಡಗ; ಸುತ್ತುಂಗುರ; ತೋಳಬಂದಿ ಒಂದೇ
ಎರಡೇ, ಸುಮಾರು ಎಂಟು ತೊಲೆಯಾಗಬ
ಹುದು ...!'' ಬೆವರಿದ.

''ನಂ ಒಡ್ವೆಗಳು, ನಂ ಮಾತು, ಹೋದ್ರೆ
ಹೋಗ್ಲಿ. ಮಗ್ಳು ಜೀವ ಉಳಿದ್ರೆ ಸಾಕಂತ
ಕೂತಿದ್ದೀವಿ!'' ಇಷ್ಟೊತ್ತು ನೀರೊಳಗಿರುವ
ದೇಹದಲ್ಲಿ ಜೀವಪಕ್ಷಿ ಇರುವುದು ಸಾಧ್ಯವಿಲ್ಲ
ಎಂದಾತಗೆ ಗೊತ್ತಿಲ್ಲದಿಲ್ಲ. ಆದರೆ ಮಾತಿಗೆ
ಸುಂಕ ಎಲ್ಲಿಯದು!

ಜಾತಪ್ಪ ತಮ್ಮ ಮನೆಯ ಒಡವೆಗಳನ್ನು ಆತಂ
ಕದಿಂದ ವಿವರಿಸಿದ. ಅವು ವಂಶಪಾರಂಪರ್ಯವಾಗಿ
ಬಂದ ಪರಿಯನ್ನೂ ಸಹ. ಆದರೆ ಕೇಳಿಸಿಕೊಳ್ಳಲು
ತಯಾರಿರದ ಸಿದ್ಧಪ್ಪ ಮತ್ತೆ ಉಸ್ತುವಾರಿ ಕಡೆ
ಸೋತ ಹೆಜ್ಜೆ ಹಾಕಿದ. ಆತನನ್ನು ಜಾತಪ್ಪ;
ರಮೇಶ; ಶಂಭಯ್ಯ; ಮೈಲಾರಿ ಮತ್ತಿತರರು
ಹಿಂಬಾಲಿಸಿದರು.


ಮಗ್ಳೇ ಪಾರೂ .... ಪಾರತಿ .... ನನ್
ಬಿಟ್ಟೆಲ್ಲಿ ಹೋದೇ ..... ಆತನ ಧ್ವನಿ ನೂರಾರು

ಜನರ ಕರುಳು ಬೇಧಿಸುವಂತೆ ಚಲಿಸಿತು. ಆದರೆ ಆತನ ಅಂತರಂಗ ಬಾಳೆ ಎಲೆಯಂತೆ ನಿರೀಕ್ಷೆಯಲ್ಲಿತ್ತು. ಮದುಮಗ ಕುಜದೋಷದವನಿರಬೇಕೆಂದು ಮಲಕಜ್ಜ ಹೇಳಿದ್ದು ನೆನಪಾಯಿತು. ಹುಡುಗ ಸಂಭಾವಿತನಾಗಿದ್ದರಿಂದ ಉಪಾಯಾಂತರದಿಂದ ಮನೆತನಕ್ಕೆ ಸೆಳೆಯಲು ಅವಕಾಶ ಇತ್ತು. ದೋಷಗಳಿಗೆ ಹೆದರಿ ಬಿಟ್ಟುಕೊಡಲು ತಯಾರಿರಲಿಲ್ಲ. ನೆನೆಗುದಿಗೆ ಬಿದ್ದು ಉಜ್ಜನಿ ಮರುಳು ಸಿದ್ಧನ ಸನ್ನಿಧಿಗೆ ಹೋಗಿದ್ದು ಒಳ್ಳೆದಾಗುವಂತಿದ್ದರೆ ಬೆಸಕೊಡು ಇಲ್ಲಾಂದರೆ ಸರಿ ಕೊಡು ಅಂತ ಕೇಳಿಕೊಂಡು ಕೈ ಜೋಡಿಸಿ ನಿಂತಿದ್ದು. ದೇವರು ಬೆಸ ಕೊಟ್ಟು ಆಶೀರ್ವದಿಸಿದ್ದು .... ಛೆ ..... ಛೆ ..... ತನ್ನ ಬುದ್ಧಿಯೇ ....? ಬಿಕ್ಕಳಿಸಿದ.

ಟ್ರ್ಯಾಕ್ಟರ್‌ನ ಹೆಡ್‌ಲೈಟು ಬೆಳಕು ಕಾಲುವೆಯುದ್ದಕ್ಕೂ ಚಲಿಸುತ್ತಿತ್ತು. ನೂರಾರು ಜನ ಆ ಹರುಕುಮುರುಕು ಬೆಳಕಿನಲ್ಲಿ ಅಂತಃಕರಣದ ಮೂರ್ತಿಗಳಂತೆ ಅಡ್ಡಾಡುತ್ತಿದ್ದರು. ಆದರೆ ಅವರಿಗೆಲ್ಲಿ ಗೊತ್ತಾಯಿತೋ ಮದುಮಗಳ ಮೇಲೆ ಹತ್ತಾರು ತೊಲೆ ಚಿನ್ನವಿದ್ದುದು? ಅವರೆಲ್ಲ ಹೋಗಿಬಿಟ್ಟರೆ! ಅಥವಾ ಪಾರೊತಿಯನ್ನು ಯಾರೂ ಹುಡುಕುವುದು ಬೇಕಿಲ್ಲವೆಂದು ಖಡಾಖಂಡಿತ ಹೇಳಿದರೆ ....! ಹೇಗೆ ಹೇಳುವುದು! ಯಾರಿಗೆ ಹೇಳುವುದು! ಆದರೆ ಪ್ರೀತಿ ವಿಶ್ವಾಸ ಅವರೆಲ್ಲರ ಸ್ವತ್ತು ಆಗಿರುವಾಗ! ತನ್ನೆರಡು ಕೈಗಳ ಮುಷ್ಟಿಯನ್ನು ಭ್ರೂ ಮಧ್ಯೆ ಗುದ್ದಿಕೊಂಡ. ಕಣ್ಣು ಹನಿಯಿತು.

ಮೈಲಾರಿ ಮೊಗವತ್ತಿ ಚೆನ್ನಮ್ಮನ ದಂಡೆ ನೋಡಿದ. ನೆತ್ತಿಯ ಮೇಲಿತ್ತು. ವೆಂಕೋಬ ಬ್ಯಾಟರಿ ಬೆಳಕಲ್ಲಿ ವಾಚು ನೋಡಿಕೊಂಡ. ತಪಥರ ಹೊತ್ತಾಗಿರುವುದರ ಅರಿವು. ಕಾಲಕ್ಕೆ ಅಪಘಾತವಾಗುವುದಿಲ್ಲವಲ್ಲ.

ದುಃಖಿಗಳು ಎಷ್ಟೊತ್ತಿನಲ್ಲಿ ಏನು ತಿಂದಿದ್ದರೋ ಏನು ಬಿಟ್ಟಿದ್ದರೋ! ಮುಖಗಳಲ್ಲಿ ಬಾಡುವಿಕೆಯನ್ನು ಆ ಹೊತ್ತಿನಲ್ಲಿ ಗುರುತಿಸುವುದು ಎಂಥವರಿಗೂ ಸಾಧ್ಯವಿರಲಿಲ್ಲ. ರಮೇಶ



ಏನಯ್ಯಾ ಇದು! ಇಪ್ಪತ್ತು ಸಾರಿ ನೋಡಿದ ಮೇಲೂ ನಿಮ್ಮ ಮಗನಿಗೆ ಹುಡುಗಿ ಸಿಗಲಿಲ್ವಾ?

ಏನು ಮಾಡಲಿ ..... ನೋಡುವ ಹುಡುಗಿಯರೆಲ್ಲರೂ ನನಗೆ ಹಿಡಿಸಿದ್ದಾರೆ!

ಸಿದ್ಧಪ್ಪ ಜಾತಪ್ಪನವರಿಗೆ ಚುರುಮುರಿ ತಿಂದು ಚಹ ಕುಡಿಯುವಂತೆ ಒತ್ತಾಯಿಸಿದರು ಕೆಲವರು. ಎಷ್ಟು ಪೀಡಿಸಿದರೂ ಅವರಿಗೆ ತಿನ್ನುವುದು ಸಾಧ್ಯವಾಗಲಿಲ್ಲ.

ಎಸ್ಸೈ ಮಾದಪ್ಪ ಹೆಣ ಕಾಯುವ ಪೋಲೀಸರಿಗೆ ವ್ಯವಸ್ಥೆ ಮಾಡುವಂತೆ ಸೂಚಿಸಿದ ಸಿದ್ಧಪ್ಪನಿಗೆ. ಪೀಸಿಗಳು ತಲೆ ಕೆರೆದರು. ಅವರೆಲ್ಲ ಚಿರಪರಿಚಿತರೆ. ಮೈಲಾರಿ ಚವುಕಾಸಿ ಪ್ರಾರಂಭಿಸಿದ. ಒಂದೂವರೆ ಇಸಿದುಕೊಂಡರೆ ಆಗದವರು ಬಂದು ಹೆಣಗಳನ್ನು ಕಾಲುವೆಯಲ್ಲಿ ಎಸೆಯಬಹುದೆಂದರು ಪೀಸಿಗಳು. ಆದ್ದರಿಂದ ಅವರು ಕೇಳಿದಷ್ಟು ಕೊಡುವುದು ಅನಿವಾರ್ಯವಾಯಿತು. ಎಲ್ಲೆಲ್ಲೋ ಜೋಡಿಸಿ ಕೊಟ್ಟದ್ದಾಯಿತು. ಅರ್ಧ ತಾಸಿನಲ್ಲಿ ಪೀಸಿಗಳು ಒಬ್ಬೊಬ್ಬರಾಗಿ ಬಂದರು.

ಹೆಣಗಳಿಗೆ ಸಿದಿಗೆ ಬಡಿಯಲು ಅನು ಮಾಡಿಕೊಡಬೇಕೆಂದು ತಿಮ್ಮಯ್ಯ ಶೆಟ್ಟಿ ಸೂಕ್ಷ್ಮವಾಗಿ ಮಾದಪ್ಪನೆದುರು ಪ್ರಸ್ತಾಪಿಸಿದ. ಅದಕ್ಕಿದ್ದು ಎಸ್ಸೈ ಕಾನೂನಿನ ತೊಂದರೆಗಳನ್ನು ಹೇಳಿದ. ನ್ಯಾಯವೆಂಬ ಜೇಡರ ಹುಳ ಎಸೆಯುವ ಬಲೆಯೇ ಸಂಕೀರ್ಣವಾದ ಕಾನೂನು .... ತಲೆದೂಗಿದರು ಕೇಳಿದವರು.

ಸಿಕ್ಕಿರೋ ಹೆಣಗಳು ಸಿಗದೇ ಇರೋ ಹೆಣಗಳನ್ನು ಮೈ ಎಲ್ಲ ಕಣ್ಣಾಗಿ ಕಾಯುವಂತೆ ಸೂಚಿಸಿ ಎಸ್ಸೈ ಊರ ಕಡೆ ಧೂಳೆಬ್ಬಿಸಿದ. ಉಳಿದವರಿಗೇನು ಕೆಲಸ ಅಲ್ಲಿ! ಮೌನವಾಗಿ ತಣ್ಣಗೆ ಹರಿಯುತ್ತಿರುವ ಗಂಗಮ್ಮ ಪಾರ್ವತಿಯನ್ನು ಎಲ್ಲಿ ಬಚ್ಚಿಟ್ಟುಕೊಂಡಿರುವಳೋ ....? ಶಿವನಿಗೇ ಗೊತ್ತು ....! ಎಲ್ಲರ ಒತ್ತಾಯಕ್ಕೆ ಮಣಿದರು ಸಿದ್ಧಪ್ಪ; ಜಾತಪ್ಪ. ಅದೂ ಒಲ್ಲದ ಮನಸ್ಸಿನಿಂದಲೆ. ಮನೆ ಕಡೆ ಮುಖ ಮಾಡಿದರು. ದಾರಿಯಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ದುಃಖ ಪ್ರಕಟಿಸದೆ ಇರಲಿಲ್ಲ. ಜೀಗರು ಬಿಜ್ಜರು ದುಃಖಿಗಳನ್ನು ಸಮಾಧಾನಪಡಿಸುತ್ತ ತಾವು ಬಂದದ್ದು ಮದುವೆಗೋ ಮಸಣಕೋ ಅಂತ ತಮ್ಮನ್ನು ತಾವು ಹಳಿದುಕೊಂಡರು.

ದೊಡ್ಡ ಅಟವಾಳಿಗೆಯ ಮನೆ ಸಿದ್ಧಪ್ಪನದು. ಮುಂದೆ ಬಾಳೆ ತೆಂಗಿನ ಗಿಡಗರಿಗಳಿಂದಲಂಕರಿಸಿದ್ದ ಹಂದರ. ಕಂಭಕ್ಕೆರಡೆರಡು ಟ್ಯೂಬ್‌ಲೈಟುಗಳು, ನೆರೆದಿದ್ದ ಜನರನ್ನು ನೋಡಿ ಸಿದ್ಧಪ್ಪ 'ಅಕ್ಕಿಕಾಳು ಹಾಕೋಕೆ ಬಂದೀರೇನ್ರಪ್ಪೋ ..... ಮಗಳನ್ನು ಸುಡುಗಾಡಿಗಿಟ್ಟು ಬಂದೀನಲ್ಲ. ನನ್ಗೆ ಹಾಕ್ರಿ ಹೂವಿನ ಹಾರ ಹಾಕಿ ಸ್ವಾಗತಿಸ್ರೀ ...'' ಎಂದು ಹುಚ್ಚನಂತೆ ಸ್ವಾಗತಕ್ಕೆ ಪ್ರತಿ ನುಡಿದ. ಒಳಗುಂದಿ ಎಂಬ ಒಳಗುಂದಿ ಎಲ್ಲ ಎಚ್ಚರಿತ್ತು, ದುರಂತದ ವಿವರ ತಿಳಿದುಕೊಳ್ಳುವ ತವಕಗಳಿಂದ. ಆತನನ್ನು ಬಿಡಿಸಿಕೊಂಡು ಪಡಸಾಲೆಯ ಕೋಣೆಗೆ ಕರೆದೊಯ್ದ ಮೈಲಾರಿ. ಎಷ್ಟೊಂದು ಅಲಂಕರಿಸಿರುವ ಕೋಣೆ ಅದು? ಮಗಳು ಅಳಿಯರ ಶೋಭನವನ್ನು ಅಲ್ಲೆ ಮಾಡಬೇಕೆಂದೇ ಅಷ್ಟೆಲ್ಲ ಅದರೊಳಗಿತ್ತು. ಪ್ರಥಮ ಸಂಭೋಗಕ್ಕೇ ಗಂಡುಮಗುವನ್ನು ಕರುಣಿಸುವ ತಾಕತ್ತು ಆ ಕೋಣೆಗಿತ್ತು. ನೆನಪುಗಳ ಜಡಿ ಮಳೆಯಲ್ಲಿ ಅಲ್ಲೋಲ ಕಲ್ಲೋಲ ಆಗಿಬಿಟ್ಟಿತು ಸಿದ್ಧಪ್ಪನ ಹೃದಯ. ಅಲ್ಲೆ ಇದ್ದ ಡಾಕ್ಟರು ಹಜಾಮರ ಅಂಬಣ್ಣ ರಮಿಸಿದರೂ ಸುಮ್ಮನಾಗಲಿಲ್ಲ, ಸೂಜಿ ಮಾಡಿಬಿಡುವಂತೆ ಅಂಬಣ್ಣಗೆ ಸೂಚಿಸಿದ ಮೈಲಾರಿ ...... ತನ್ನ ತೀರ್ಥರೂಪ ಸಮಾನರಾದ ಸಿದ್ಧಪ್ಪಗೆ ಸೂಜಿ ಮಾಡಿಯೇ ಬಿಟ್ಟ ಅಂಬಣ್ಣ. ''ಅಯ್ಯೋ ನನ್ನ ಶೇಕಿಯ ಮಗ್ನೇ ನನ್ಗೆ ನಿದ್ದೆ ಮಾಡಿಸ್ತೀಯಾ .... ನಿಮ್ಮವ್ವಗೆ ನಾನು ಮಾಡಿರೋ ಅನ್ಯಾಯಕ್ಕೆ ವಿಷಕೊಟ್ಟು ಬಿಡೋ ನನ್ನ ಮುದ್ದು ಮಗ್ನೇ ಅಂಬರೀಷ..... ಹ ಹ್ ... ಹ .. ಹಹ್....'' ಮಾತಾಡುತ್ತಲೆ ಗೊರಕೆ ಏರಿಸಿಬಿಟ್ಟ. ಅಂಬಣ್ಣಗೂ ಕಣ್ಣೀರು ಬಂದವು.

ಮಾಳಿಗೆ ಮೇಲೆ ನಿದ್ದೆ ಬರದೆ ಉರುಳಾಡುತ್ತಿದ್ದ ರಮೇಶ. ಪಾರ್ವತಿಯ ಹೆಸರಿನಲ್ಲಿ ಮುಷ್ಟಿ ಮೈಥುನ ಮಾಡಿಕೊಂಡ ಮೇಲೆಯೇ ಅಳಾರಾಗಿ ನಿದ್ದೆ ಮಾಡಿದ. ಆದರೆ ಇನ್ನೊಂದು ಅಂಕಣದಲ್ಲಿದ್ದ ಜಾತಪ್ಪ ತಾನು ಒಂಟಿಯಾಗಿ ನೀರಿನಲ್ಲಿ ಈಜುತ್ತಿದ್ದಂತೆ ಕಾಲಿಗೆ ಪಾರೋತಿಯ ಹೆಣ ಅಟಕಿದಂತೆ, ಹೆಣ ನಿರಾಭರಣವಾಗಿದ್ದಂತೆ ಕನಸು ಕಂಡು ನಿದ್ದೆಯಿಂದ ದೂರ ಉಳಿದು ಬಿಟ್ಟಿದ್ದ. ಆತಗೆ ಎಷ್ಟು ಸಿಟ್ಟು ಬಂತೆಂದರೆ ಹತ್ತಿರದಲ್ಲಿ ಯಾವುದೇ ವಯಸ್ಸಿನ ಹೆಂಗಸಿದ್ದಲ್ಲಿ ಸಂಭೋಗಿಸಿಬಿಡಬೇಕೆನ್ನಿಸಿತು.

ಮರುದಿನ ಎಚ್ಚರಗೊಂಡಿದ್ದೊಂದೇ ಬಾಕಿ. ಅಡಸಾಬಡಸಾ ಓಡಿದರು ಕಾಲುವೆ ಕಡೆ. ಇನ್ನೂ ಪಾರ್ವತಿಯ ಕಳೇಬರ ಪತ್ತೆಯಾಗಿರಲಿಲ್ಲ. ಹತ್ತನ್ನೆರಡು ಮಂದಿ ಎಸ್ಸೈ ಸುತ್ತ ಸೇರಿದ್ದರು. ಅವರ ನಡುವೆ ಮಾತಿಗೊಮ್ಮೆ ಆಕಳಿಸುವ ಸಿದ್ಧಪ್ಪ ಇದ್ದ. ಹೆಣಗಳನ್ನು ಮಣ್ಣು ಮಾಡಲು ಪರವಾನಿಗೆ ಕೊಡಲು ಕೆಲವು ಕಾನೂನುಗಳು ಅಡ್ಡಿ ಪಡಿಸುತ್ತವೆ ಎಂದು ತಮ್ಮ ಜಾತಿಯವನೇ ಆದ ಎಸ್ಸೈ ಮಾದಪ್ಪ ಕೊಕ್ಕೆ ಹಾಕಿದ್ದ. ಅದು ಯಾರಿಗೂ ಸರಿ ಕಂಡಿರಲಿಲ್ಲ. ನಮ್ಮ ಹೆಣಗಳು ನಮ್ಮ ಮಾತು! ಸೀರೆ ಜಡಿಸಿಕೊಳ್ಳಲು ಬೇಲಿಯ ಅಪ್ಪಣೆ ಯಾಕೆ? ಹಣೆ ಹಣೆ ಚಚ್ಚಿಕೊಳ್ಳಬೇಕೆನಿಸಿತ್ತು ಸಿದ್ಧಪ್ಪಗೆ; ವಿಷಾದದೊಳಗೆ ದುಃಖ ಬಿತ್ತುವ ಕೆಲಸ ನಡೆಸಿದ್ದರು. ಪೊಲೀಸ್ ಠಾಣೆ ತಾನು ಆಡಿಸಿದಂತೆ ಆಡುವ ಸೂತ್ರದ ಬೊಂಬೆ ಎಂದು ತಿಳಿದುಕೊಂಡಿದ್ದ ಸಿದ್ಧಪ್ಪ ಭ್ರಮನಿರಸನಗೊಂಡ.

ಹೆಣಗಳನ್ನು ಪೋಸ್ಟ್ ಮಾರ್ಟಂ ಮಾಡಿಸ

ಬೇಕು. ಹೈಯರ್‍ರ್‍ಆಫೀಸರ್ರು ಬಂದು ತನಿಖೆ ನಡೆಸಬೇಕು. ಈ ದುರ್ಘಟನೆ ಆಕಸ್ಮಿಕವೋ? ಉದ್ದೇಶಪೂರ್ವಕವೋ? ತನಿಖೆಯಿಂದ ಮೂರು ಆರಾಗಬಹುದು! ಆರು ಮೂರಾಗಬಹುದು. ಎಲ್ಲ ಇರೋದು ನಮ್ಮ ಕೈಯಲ್ಲಿ ...! ಆಕಾರ ಮಲ್ಲಿಗೆ ಮರದಿಂದ ಹೂಗಳು ಸಪ್ಪಾಗದೆ ಉದುರಿದಂತೆ ಎಸ್ಸೈ ಮಾತಾಡಿದ. ಪ್ರತಿಯೊಂದು ಮಾತುಗಳೂ ಒಗಟಿನಂತೆ.

''ಒಂದೇ ಕ್ಯಾಸ್ಟಿನವರಾಗಿ'' ಎಂದು ಮಾತು ಜೋಡಿಸುವ ಈಶ್ವರಪ್ಪನಂಥವರಿಗೂ ಎಸ್ಸೈ ಉತ್ತರಿಸಿದ. ನೌಕರಿ ಸಿಗಲು ಕಾರಣರಾದ ಹೋಂ ಮಿನಿಸ್ಟರ್ರೂ ನಂ ಕ್ಯಾಸ್ಟಿನವ್ರೆ ಆದ್ರೆ ಐದೇ ಐದು ಕಡ್ಮೆ ಇಸ್ಕೊಳ್ಳಲ್ಲ.

''ನಾವು ಕಳ್ರಲ್ಲ. ಕೊಲೆಗಾರರಲ್ಲ.'' ಸಿದ್ಧಪ್ಪನ ಹಸಿದ ಹೊಟ್ಟೆಯೊಳಗೆ ಅನ್ನಕ್ಕೆ ಬದಲು ಸಿಟ್ಟಿತ್ತು.

''ನೀವು ಅವೆರಡೂ ಅಲ್ಲ ಅಂತಲೇ ನಿಮ್ಗೆ ಕಾನೂನು ಅಪ್ಲೆ ಆಗ್ತೀರೋದು!'' ದಫೇದಾರ ಮಾತಿನ ಮೂಲಕ ಆಶಾಕಿರಣದ ಸುಳಿವು ನೀಡಿದ. ಚೌಕಾಸಿ ನಡೆಯಿತು. ಅಂತೂ ಕೊನೆಗೆ ಎರಡೂವರೆಗೆ ಈ ಪ್ರಕರಣ ಮುಚ್ಚಿ ಹಾಕುವುದಾಗಿ ಎಸ್ಸೈ ಒಪ್ಪಿದ. ಇದೇ ದೊಡ್ಡ ಮಾತು. ಉದ್ರಿ ಮಾನಭಂಗ ನಗದು ಪ್ರೇಮಸಂಗ! ಸಿದ್ಧಪ್ಪನ ಪರವಾಗಿ ತಿಮ್ಮಯ್ಯ ಶೆಟ್ಟಿ ಗುಟ್ಟಾಗಿ ಹಣ ಎಣಿಸಿದ ಮೇಲೆ ಬರೀ ಹೆಣಗಳನ್ನು ಕದಲಿಸಲು ಅನುವು ಸಿಕ್ಕಿತು.

ಗುರುತಿಲು ಸಾಧ್ಯವಿಲ್ಲ ಎನ್ನುವಷ್ಟರಮಟ್ಟಿಗೆ ಊದಿಕೊಂಡಿದ್ದವು ಹೆಣಗಳು. ಆದರೆ ಅವುಗಳೆಲ್ಲ ನಿರಾಭರಣಗೊಂಡಿದ್ದವು. ಅರ್ಥಗರ್ಭಿತವಾಗಿ ನಗುತ್ತಿದ್ದ ಪೊಲೀಸರನ್ನು ಎದುರಿಸಲಾಗದೆ ವಾರಸುದಾರರು ತಂತಮ್ಮ ಹೆಣಗಳನ್ನು ಮನೆಗೆ ಸಾಗಿಸಿ ಸಿದಿಗಿ ಬಡಿದು ಮಣ್ಣು ಮಾಡಿದರು; ಸುಮಾರು ಸಂಜೆ ಹೊತ್ತಿಗೆ.

ಪಾರ್ವತಿಯ ಹೆಣ ಪತ್ತೆಯಾಗಲಿಲ್ಲ. ●

★ ಈಜುವ ಕೂಸು :

ಸೋವಿಯತ್ ಒಕ್ಕೂಟ, ಜಪಾನ್, ಆಸ್ಟ್ರೇಲಿಯಾ, ಜೆಕೋಸ್ಲಾವಾಕಿಯಾ, ಪ.ಜರ್ಮನಿ, ಅಮೇರಿಕಗಳಲ್ಲಿ ತಜ್ಞರುಗಳು ನವಜಾತ ಕಂದಮ್ಮಗಳಿಗೆ ನೀರಲ್ಲಿ ಈಜುವುದನ್ನು ಕಲಿಸುವುದರ ಬಗ್ಗೆ ಸಾಕಷ್ಟು ಅನುಭವ ಗಳಿಸಿದ್ದಾರೆ. ಇಂತಹ ಒಂದು ಪ್ರಯೋಗ 1962ರಲ್ಲಿ ಮಾಸ್ಕೋದಲ್ಲಿ ಮೊದಲ ಬಾರಿಗೆ ನಡೆಯಿತು. ಅದಕ್ಕಿಂತಲೂ ಎರಡು ವರ್ಷ ಮೊದಲು ಆಸ್ಟ್ರೇಲಿಯಾದಲ್ಲಿ ಈಜು ಶಿಕ್ಷಕ ದಂಪತಿಗಳಿಬ್ಬರು ತಮ್ಮ ನಾಲ್ಕು ತಿಂಗಳ ಪುತ್ರಿಗೆ ಈಜುವುದನ್ನು ಕಲಿಸಿದರೆಂಬ ಸುದ್ದಿ ಜಗತ್ತಿನ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಮಾಸ್ಕೋದ ಶಾರೀರಿಕ ಶಿಕ್ಷಣ ಸಂಶೋಧನಾ ಸಂಸ್ಥೆಯ ತರುಣ ಸದಸ್ಯ ಐಗೋರ್ ಚಾರ್ಕೊವಸ್ಕಿ ಎಂಬಾತ ತನ್ನ ಪುಟ್ಟ ಮಗಳು ವೆಟಾಳಿಗೆ ನೀರಿನಲ್ಲಿ ಈಜುವುದನ್ನು ಕಲಿಸಿದ. ಇಂದು ಮಾಸ್ಕೋದಲ್ಲಿ ನವಜಾತ ಕಂದಮ್ಮಗಳಿಗೆ ಈಜು ಕಲಿಸಲೆಂದೇ 70ಕ್ಕಿಂತಲೂ ಹೆಚ್ಚು ಪಾಲಿ ಕ್ಲಿನಿಕ್‌ಗಳಿವೆ. ಇನ್ನೂ 25ರಷ್ಟು ಸೋವಿಯತ್ ನಗರಗಳಲ್ಲಿ ಇಂತಹ ಪಾಲಿ ಕ್ಲಿನಿಕ್‌ಗಳು ಸ್ಥಾಪನೆಯಾಗಲಿವೆ. ಮಗು ತೀರಾ ಚಿಕ್ಕದಾಗಿರುವಾಗಲೇ ಅದಕ್ಕೆ ಈಜಲು ಕಲಿಸಿದರೆ ಈಜು ಕಲಿಯದ ಮಕ್ಕಳಿಗಿಂತ ಬೇಗನೇ ನಿಲ್ಲಲು ಕಲಿಯುತ್ತವೆ. ಮಗುವಿಗೆ 6 ತಿಂಗಳಾಗುವಾಗ ಅದು ನಡೆಯಲು ಶಕ್ತವಾಗುತ್ತದೆ. ಶೀತ ಮತ್ತು ಹವಾಮಾನಗಳಲ್ಲಾಗುವ ಬದಲಾವಣೆಗಳನ್ನು ಅದು ಎದುರಿಸಬಲ್ಲದು.

(ಸಂಗ್ರಹ) ಎಂ.ಶಾರದಾ ನಾಗಭೂಷಣ

ಇದುವೇ ಜೀವ ಇದು ಜೀವನ

ಮುಂಗಲ ಕಾರ್ಯದ ನಿಮಿತ್ತ ನಾನು ಮುಂಬಯಿಗೆ ಹೋಗಿದ್ದೆ. ಅಲ್ಲಿ ಸಾಕಷ್ಟು ಜನ ಕನ್ನಡದವರಿದ್ದರೂ ಮರಾಠಿ ಅಭಿಮಾನದಿಂದ ಒಬ್ಬರೂ ಕನ್ನಡ ಮಾತನಾಡುತ್ತಿರಲಿಲ್ಲ. ನಾನು ನನ್ನ ಗೆಳೆಯನ ಹತ್ತಿರ ವಾದಿಸತೊಡಗಿದೆ. ''ನೀವು ಮರಾಠಿಗರು ಪ್ರತಿಯೊಂದು ಕೆಲಸಕ್ಕೂ ಕೆಲಸದವರ ಮೇಲೆ ಅವಲಂಬಿಸಿ ಜೀವನ ಸಾಗಿಸುವವರು. ನಾವು ಮಾತ್ರ ಹಾಗಲ್ಲ. ನಮ್ಮ ಕೆಲಸ ನಾವೇ ಮಾಡಿಕೊಳ್ಳುತ್ತೇವಲ್ಲದೆ ಪ್ರಸಂಗ ಬಂದರೆ ಮನೆಯ ಎಲ್ಲ ಕೆಲಸವನ್ನೂ ನಾವೇ ಮಾಡಿ ಮುಗಿಸುತ್ತೇವೆ,'' ಎಂದು ನಗೆಯಾಡಿದೆ.

ಒಂದೆರಡು ದಿನ ಕಳೆದಿರಬಹುದು. ಮನೆಯಲ್ಲಿ ಭಾಂಡೆ ತಿಕ್ಕುವವಳು ಬಾರದ್ದಕ್ಕೆ ನನ್ನ ಗೆಳೆಯನ ಮಡದಿ ಸಿಡಿಮಿಡಿಗೊಂಡು, 'ಏನ್ರೀ ನಿನ್ನೆಯಿಂದ ಭಾಂಡೆಯವಳು ಬರಲೇ ಇಲ್ಲ. ನೋಡಿ ಎಷ್ಟೊಂದು ಭಾಂಡೆ ಬಿದ್ದಿವೆ. ನಾಳೆ ಅಡಿಗೆ ಮಾಡಲು ಭಾಂಡೆಯೇ ಇಲ್ಲ. ಅದೂ ಅಲ್ಲದೆ ನಾಳೆ ಬೀಗರು ಬರುವವರಿದ್ದಾರೆ ಈ ರೀತಿ ಭಾಂಡೆಗಳು ರಾಶಿ ಇಟ್ಟದ್ದನ್ನು ನೋಡಿದರೆ ನಮ್ಮ ಘನತೆಗೇ ಕುಂದೆಂದೂ - ಎಲ್ಲಿ ಯಾದರೂ ಭಾಂಡೆ ತಿಕ್ಕುವವರನ್ನು ಕರೆತನ್ನಿ'ರೆಂದು ಹೇಳಿ ಗೊಣಗಿ ನಿದ್ದೆ ಹೋದಳು.

ನನ್ನ ಮಿತ್ರನಿಗೆ ''ನಮ್ಮ ಕೆಲಸ ನಾವೇ ಮಾಡಿಕೊಳ್ಳುತ್ತೇವೆ'' ಎಂಬ ನನ್ನ ವಾದ ಎಚ್ಚರಿಸಿರಬೇಕು. ಆತನ ಹೆಂಡತಿ ಗಾಢ ನಿದ್ರೆಯಲ್ಲಿರುವಾಗಲೇ ಈತ ಲಗುಬಗೆಯಿಂದ ಬಚ್ಚಲು ಮನೆಗೆ ನಡೆದು ರಾಶಿಯಾಗಿ ಬಿದ್ದಿದ್ದ ಭಾಂಡೆಯನ್ನೆಲ್ಲ ಹೊಳಪಾಗಿ ತೊಳೆದುಹಾಕಿ ಬಂದು ಮಲಗಿಕೊಂಡ.

ಮರುದಿನ ಬೆಳಿಗ್ಗೆ ಆತನ ಮಡದಿ ಎಲ್ಲ ಭಾಂಡೆ ತೊಳೆದುಹಾಕಿದ್ದು ಕಂಡು ಹೌಹಾರಿ ಏನ್ರೀ, ನಿನ್ನೆ ರಾತ್ರಿ ಯಾವಾಗ ಭಾಂಡೆಯವಳು ಬಂದಿದ್ಲು? ಎಂದು ಖುಶಿಯಿಂದ ಕೇಳಿದಾಗ ನನ್ನ ಮಿತ್ರ ಚಾದರದ ಮುಸುಕಿನಲ್ಲಿಯೇ, ''ನಾವು ಕರ್ನಾಟಕದವರು - ಅದೂ ಉತ್ತರ ಕನ್ನಡದವರು ನಮ್ಮ ಕೆಲಸ ನಮಗೆ ಭಾರವೇ,'' ಎಂದು ಹೇಳಿದಾಗ ಆ ರಮಣಿ ನಾಚಿ ನೀರಾದಳು. ಮರುಕ್ಷಣವೇ ಅವಳೂ ಟೊಂಕಕಟ್ಟಿ ಎಲ್ಲ ಕೆಲಸವನ್ನೂ ಪೂರೈಸಿದಳು. ನನಗೆ ಈ ಘಟನೆ ಕಂಡು ವ್ಹಾ! ಇದೂ ಜೀವನವೇ ಎಂದು ಹೆಮ್ಮೆ ಎನಿಸಿತು.

● *ಭೀಮಸೇನ ಪದಕಿ*

ಈ ಘಟನೆ ನಡೆದು ಬಹಳ ವರ್ಷಗಳೇ ಆಗಿವೆ. ಆದರೂ ಅದು ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿಯೇ ಉಳಿದಿದೆ. ಕೆಲಸದಲ್ಲಿದ್ದ ನನಗೆ ಒಂದು ತಾಲ್ಲೂಕಿಗೆ ವರ್ಗ ಮಾಡಿದ್ದರು. ಎಲ್ಲರನ್ನೂ ಹೊಂದಿಕೊಂಡು ಹೋಗುವ ಸ್ವಭಾವ ನನ್ನದು. ಸಾಲದ್ದಕ್ಕೆ ಅವರಿವರ ಕಷ್ಟದಲ್ಲೂ ನನ್ನ ಕೈಲಾದ ಸಹಾಯವನ್ನೂ ಮಾಡುತ್ತಿದ್ದೆ. ಇದರಿಂದ ಯಾರ ಹೊಗಳಿಕೆಗೂ ಪಾತ್ರನಾಗಬೇಕೆಂದಲ್ಲ.

ನನ್ನ ಮನೆ ಎದುರು ಇದ್ದವರು ನನ್ನನ್ನು ಬಹಳ ಹಚ್ಚಿಕೊಂಡಿದ್ದರು. ಅವರ ಮನೆಯಲ್ಲೂ ಗಂಡ, ಹೆಂಡತಿ ಮತ್ತೆ ಹೊಸದಾದ ಮದುವೆಯಾದ ದಂಪತಿಗಳು. ಗಂಡ ಸರ್ಕಾರಿ ನೌಕರ. ಕೈ ತುಂಬ ಸಂಬಳ. ಬದುಕು ಚೆನ್ನಾಗಿಯೇ ನಡೆಯುಕೊಂಡು ಹೋಗುತ್ತಿತ್ತು. ಸಹವಾಸ ದೋಷದಿಂದಲೋ, ಕೈಲಿರುವ ಕಾಸನ್ನು ದ್ವಿಗುಣಗೊಳಿಸುವ ದುರಾಸೆಯಿಂದಲೋ ಗಂಡನಿಗೆ ಇಸ್ಪೇಟ್ ಆಟದತ್ತ ಒಲವು ಹೆಚ್ಚಾಯಿತು. ಕಛೇರಿ ಮುಗಿದ ಕೂಡಲೇ ಮನೆಗೆ ಬರುವಾತ ತಡವಾಗಿ ಬರಲು ಪ್ರಾರಂಭಿಸಿದ. ವಿಷಯ ತಿಳಿದಿದ್ದರೂ ಎಲ್ಲ ಸರಿ

ಹೋಗಬಹುದೆಂದೂ, ಅದು ಗಂಡಹೆಂಡಿರಲ್ಲೆ ಕೊನೆಯಾಗಿ ಮತ್ತೆ ಅವರು ಸಂತೋಷವಾಗಿರಬಹುದೆಂದು ಸುಮ್ಮನಿದ್ದೆ. ಪರಿಸ್ಥಿತಿ ಸುಧಾರಿಸಲಿಲ್ಲ. ಮನೆಯಲ್ಲಿ ಜಗಳಗಳು ಶುರುವಾಗಿ ಗಂಡ ಅತ್ತೆಯ ಎದುರಿನಲ್ಲೇ ಹೊಡೆಯುವುದು ಪ್ರಾರಂಭವಾಯ್ತು. ಸರಿ, ನಾನೂ ಹೇಳೋಣವೆಂದು ತಲೆ ಹಾಕಿದೆ. ಚಟಗಳು ಕಲಿಯುವ ತನಕ ಏನೂ ತೊಂದರೆ ಆಗದು. ಆದರೆ ಅವುಗಳು ಬೇರೂರಿದರಂತೂ ತೊಂದರೆಗಳು ಪ್ರಾರಂಭವಾಗುತ್ತವೆ.

ಒಂದು ದಿನ ಮಧ್ಯಾಹ್ನ ಬಿಸಿಲು ಬೇರೆ. ಅಂದು ರಜೆ ದಿನ. ನಾನು ಆಚೆ ಹೋಗಿ ನನ್ನ ಮನೆ ಬಳಿ ಬರುತ್ತಿದ್ದಂತೆ ಅಯ್ಯೋ .... ಕೊಲೆ ..... ಕೊಲೆ ..... ಎಂದು ಚೀರುತ್ತಾ ಒಬ್ಬಾಕೆ ಓಡಿ ಬರುತ್ತಿದ್ದಳು. ಸರಿ, ವಿಷಯ ಏನೆಂದು ನೋಡಲು ಹೋದರೆ ಆ ಹೆಂಡತಿಗೆ ಕೊಲೆ ಮಾಡಲು ಯತ್ನಿಸಿ ಒಬ್ಬ 15 ವರ್ಷದ ಹುಡುಗ ಓಡಿ ಹೋಗಿದ್ದ. ಕೊನೆಗೆ ಪೊಲೀಸ್ ಬಂದರು, ಡಾಕ್ಟರ್ ತಕ್ಷಣ ಆಕೆಗೆ ಚಿಕಿತ್ಸೆ ಮಾಡಿದರು. ಆಕೆ ಸಾವಿನ ದವಡೆಯಿಂದ ಪಾರಾದಳು. ಈ ಮಧ್ಯೆ ಗಂಡ ಊರಿನಲ್ಲಿ ಇರಲಿಲ್ಲ. ಆತನು ಎಲ್ಲಿ ಹೋಗಿದ್ದಾನೆಂದೂ ತಿಳಿಯದಾಯ್ತು. ಪೊಲೀಸ್‌ನವರು ಆತನನ್ನು ಬಂಧಿಸಿ ಕರೆತಂದರೆನ್ನಿ.

ಆದದ್ದು ಇಷ್ಟೇ .... ಗಂಡ ಇಸ್ಪೇಟ್ ಆಟದಲ್ಲಿ ಸೋತಿದ್ದರಿಂದ ಆ ಹಣವನ್ನು ಮಿತ್ರರಿಗೆ ಕೊಡದಿದ್ದರೆ ಅವನನ್ನು ಚಚ್ಚಿ ಹಾಕುವುದಾಗಿ ತಿಳಿಸಿದ್ದರೆಂದೂ ನಂತರ ಆತನು ತನ್ನ ಮನೆಯಲ್ಲಿಯೇ ಹೆಂಡತಿ ಕೂಡಿಟ್ಟ ಹಣವನ್ನು ತೆಗೆದುಕೊಂಡು ಬರಲು ಒಬ್ಬ ಹುಡುಗನಿಗೆ ಹಣ ಕೊಟ್ಟು ಕಳುಹಿಸಿದ್ದಾಗಿಯೂ, ಆ ಹುಡುಗ ಹಣ ಎತ್ತಿಕೊಳ್ಳಲು ಕೈ ಹಾಕಿದಾಗ ಹೆಂಡತಿ ಆತನನ್ನು ಹಿಡಿದು ಹೊಡೆಯುವುದಕ್ಕೆ ಪ್ರಯತ್ನಪಟ್ಟಾಗ ಕೈಗೆ ಸಿಕ್ಕ ಮಚ್ಚಿನಿಂದ ಹೆದರಿಸಿ ನಂತರ ಇವರ ಇಬ್ಬರ ಹೊಡೆದಾಟದಲ್ಲಿ ಆ ಹುಡುಗನು ಆಕೆಯ ಕತ್ತಿಗೆ ಮಚ್ಚಿನಿಂದ ಹೊಡೆದಿದ್ದ. ಇದೆಲ್ಲ ನಂತರ ತಿಳಿದು ಬಂತು.

ಪತಿಯೇ ಪತ್ನಿಯನ್ನು ಹೊಡೆದು ಹಣ ತೆಗೆದುಕೊಂಡು ಬರಲು ಕಳುಹಿಸಿದ ಸುದ್ದಿ ನಿಜಕ್ಕೂ ಆಶ್ಚರ್ಯ ತಂದಿತು. ಪತಿಗೆ ಕೆಲಸದಿಂದ ತೆಗೆಯಲು ಇಲಾಖೆಯವರು ನಿರ್ಧರಿಸಿದ್ದರೂ ಪತ್ನಿ ಆದದ್ದನ್ನೆಲ್ಲಾ ಮರೆತು ಮತ್ತೆ ನಗುತ್ತ ಮೊದಲಿನಂತಿರುವೆನೆಂದು ಹೇಳಿದಾಗ ನಂಬಲಾರದಾಯಿತು.

● *ರಿಗ್ರೆಟ್ ಅಯ್ಯರ್*

ಬೆಂಗಳೂರಿನ ಜಯನಗರದ ಹತ್ತಿರವಿರುವ ಬೈರಸಂದ್ರದಲ್ಲಿ ಒಂದು ವಠಾರದಲ್ಲಿ ಮನೆ ಮಾಡಿಕೊಂಡು ಇದ್ದಾಗ ನಡೆದ ಘಟನೆ. ನನ್ನ ಮಗು ಅಸ್ತಮದಿಂದ ನರಳುತ್ತಿತ್ತು. ನನ್ನ ಹೆಂಡತಿ ಮತ್ತು ಮಗುವನ್ನು ಕರೆದುಕೊಂಡು ಹತ್ತಿರದಲ್ಲಿದ್ದ ಡಾ|| ಅನುಪಮಾ ನಿರಂಜನರ ಮನೆಯಲ್ಲಿ ಇದ್ದ ಕ್ಲಿನಿಕ್‌ಗೆ ಹೋದೆ. ಅಂದು ಭಾನುವಾರ ಬೆಳಿಗ್ಗೆ 9-30ರ ಸಮಯವಿರಬಹುದು. ಅವರ ಮನೆಯ ಮುಂದಿನ ಪೋರ್ಟಿಕೋನಲ್ಲಿ ಒಬ್ಬ ಹೆಂಗಸು ತಲೆಗೆ ಬಟ್ಟೆ ಕಟ್ಟಿಕೊಂಡು ಒಂದು ಸಣ್ಣ ಸ್ಟೂಲ್ ಮೇಲೆ ನಿಂತು ಪೊರಕೆಯಿಂದ ಅಲ್ಲಲ್ಲಿ ಕಟ್ಟಿದ್ದ ಜೇಡನ ಬಲೆ ಮತ್ತು ಧೂಳನ್ನು ಗುಡಿಸುತ್ತಿದ್ದಳು. ಅವಳನ್ನು ಕಂಡು "ಏನಮ್ಮ ಡಾಕ್ಟರ್ ಮನೆಯಲ್ಲಿ ಇಲ್ಲವೆ?'' ಎಂದು ಕೇಳಿದೆ. ಅದಕ್ಕೆ ಉತ್ತರವಾಗಿ ಅವಳು "ಇನ್ನು ಸ್ವಲ್ಪ ಹೊತ್ತಿನಲ್ಲಿ ಬರುವರು ಒಳಗೆ ಕುಳಿತುಕೊಳ್ಳಿ'' ಎಂದು ತಿಳಿಸಿದಳು.


ಸ್ವಲ್ಪ ಸಮಯದಲ್ಲಿ ಕನ್ನಡಕಧಾರಿಣಿಯಾಗಿ, ಶುಭ್ರವಸ್ತ್ರವನ್ನು ಉಟ್ಟು ಒಳಬಂದ ಆ ಹೆಂಗಸೇ ಡಾ|| ಅನುಪಮ ಎಂದು ನಾನು ತಿಳಿದು "ದಯವಿಟ್ಟು ಕ್ಷಮಿಸಿ'' ಎಂದು ಅವರಲ್ಲಿ ಕ್ಷಮೆ ಯಾಚಿಸಿದೆ. ಅವರು ನಕ್ಕು "ಇದರಲ್ಲಿ ಏನೂ ತಪ್ಪಿಲ್ಲ'' ಎಂದು ತಿಳಿಸಿ ಮಗುವಿನ ಚಿಕಿತ್ಸೆಗೆ ಮುಂದಾದರು. ಅವರ ಸರಳ ಸಜ್ಜನಿಕೆಗೆ ನಾನು ವಿಸ್ಮಿತನಾದೆ. ಕನ್ನಡ ಸಾರಸ್ವತ ಲೋಕ ಡಾ|| ಅನುಪಮರವರಂತಹ ವೈಚಾರಿಕ ಪ್ರಜ್ಞೆಯುಳ್ಳ ಒಬ್ಬ ಬರಹಗಾರ್ತಿಯನ್ನು ಕಳೆದುಕೊಂಡಿತು.

● **ಎಂ.ಆರ್.ರಂಗನಾಥ**

ಅದ್ಭುತ ಮತ್ಸ್ಯ ಬಾಲಕ

ಟೇಕಲ್ ಗೋಪಾಲಕೃಷ್ಣ

ನಮ್ಮ ಪುರಾತನ ದಂತ ಕಥೆಗಳಲ್ಲಿ ಮತ್ಸ್ಯ ಕನ್ಯೆಯರ ಬಗ್ಗೆ ಅನೇಕ ವಿಚಿತ್ರ ಪ್ರಸಂಗಗಳನ್ನು ಹೆಣೆದಿದ್ದಾರೆ. ಆದರೆ ಈಗಿನ ಆಧುನಿಕ ವೈಜ್ಞಾ



ನಿಕ ಯುಗದಲ್ಲಿ ಇಂತಹ ಮತ್ಸ್ಯ ಬಾಲಕನಿದ್ದಾನೆಂದರೆ ನೀವು ಮೂಗಿನ ಮೇಲೆ ಬೆಟ್ಟು ಇಟ್ಟು ಕೊಳ್ಳಬೇಕಾದೀತು.

ಸಮುದ್ರದಲ್ಲಿ 12 ಸಾವಿರ ಅಡಿಗಳ ಕೆಳಗೆ ಸಿಕ್ಕ ಈ ಮತ್ಸ್ಯ ಬಾಲಕ ಇತಿಹಾಸ ಹಾಗೂ ದಂತಕಥೆಗಳಲ್ಲಿ ಮುಳುಗಿ ಹೋದ ಅಟ್ಲಾಂಟಿಕ್ ನಗರದ ಬಗ್ಗೆ ಅದ್ಭುತ ಪರಿಚಯವನ್ನು ನೀಡಿದ್ದಾನೆ. ಈ ಬಾಲಕ ತಾನು ಈ ಸಮುದ್ರದಡಿಯಲ್ಲಿರುವ ನಗರವಾಸಿ ಎಂದು ಹೇಳಿಕೆಯಿತ್ತಿದ್ದಾನೆ.

1962ರಲ್ಲಿ ಕ್ಯೂಬಾವನ್ನು ಅಮೆರಿಕ ಮುತ್ತಿದಾಗ ಪರಮಾಣು ಅಸ್ತ್ರ, ಶಸ್ತ್ರಗಳಿಂದ ಸುಸಜ್ಜಿತವಾದ ರಶಿಯದ ಯುದ್ಧ ವಿಮಾನ ಇಲ್ಲಿ ಭಾಗವಹಿಸಲು ಹೋದಾಗ ಸಮುದ್ರದಲ್ಲಿ ಬಿದ್ದು

ಹೋಯಿತು.

ಈ ಯುದ್ಧ ವಿಮಾನದ ಅವಶೇಷಗಳನ್ನು ರಶಿಯದ ವಿಜ್ಞಾನಿಗಳು ಹಾಗೂ ಸೈನಿಕ ವಿಶೇಷಜ್ಞರ ತಂಡ ಹುಡುಕುತ್ತಿತ್ತು. ಆಗ ಇವರಿಗೆ ಸಮುದ್ರದ ತಳದಲ್ಲಿ ಮೀನಿನಂತಿರುವ ಚರ್ಮವುಳ್ಳ ಹಾಗೂ ಮೀನಿನ ಪ್ರವೃತ್ತಿಯ ಎರಡು ಅಡಿ ಉದ್ದದ ಈ ಮಾನವ ಬಾಲಕ ದೊರಕಿದ. ಇದನ್ನು ನೋಡಿ ಎಲ್ಲರೂ ಸ್ಥಂಭೀಭೂತರಾದರು. ಹಾಗೂ ವಿಮಾನವನ್ನು ಹುಡುಕುವುದು ಬಿಟ್ಟು ಈ ಬಾಲಕನ ಮೇಲೆ ತಮ್ಮ ಎಲ್ಲ ಮನವನ್ನು ಹರಿಸಿದರು. ಈ ಬಾಲಕನನ್ನು ಕೆಲವು ದಿನ ಮೀನನ್ನು ಬದುಕಿರಲು ಇಡುವ ಒಂದು ಕೆರೆಯಲ್ಲಿ ಇಟ್ಟರು. ನಂತರ ಅವನನ್ನು ಹಡಗಿನ ಮೇಲೆ ತಂದು ಪ್ರಶ್ನೆಗಳ ಸುರಿಮಳೆ ನಡೆಸಿದರು.

ವಿಶ್ವವಿಖ್ಯಾತ ಲೆನಿನ್ ವಿಜ್ಞಾನ ಸಂಸ್ಥೆಯ ಡಾ.ಏಥನ್ ವಿನೋಗ್ರೇಡ್ ಈ ಮತ್ಸ್ಯ ಬಾಲಕ 20ನೇ ಶತಮಾನದ ಬಗ್ಗೆಯೇ ಅಲ್ಲದೆ ಮುಂದೆ ಬರುವ ಶತಮಾನಗಳ ಬಗ್ಗೆಯೂ ವಿಚಿತ್ರ ಸುದ್ದಿಗಳನ್ನು ನೀಡಿದ್ದಾನೆ; ಇದನ್ನು ಕೇಳಿದರೆ ನೀವು ಆಶ್ಚರ್ಯ ಚಕಿತರಾಗುವಿರಿ ಎಂದು ಹೇಳಿಕೆಯಿತ್ತಿದ್ದಾರೆ. ಇದೆಲ್ಲ ಮಾನವನ ಬುದ್ಧಿಗೆ ಎಟುಕದ ವಿಷಯವಾಗಿದೆ ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಮತ್ಸ್ಯ ಬಾಲಕನ ಹೇಳಿಕೆಯಂತೆ ಸಾವಿರಾರು ವರ್ಷಗಳ ಹಿಂದೆ ಆಫ್ರಿಕಾ ಖಂಡ ಹಾಗೂ ದಕ್ಷಿಣ ಅಮೆರಿಕ ಖಂಡಗಳ ಮಧ್ಯೆ ಅಟ್ಲಾಂಟಿಕ್ ಮಹಾದ್ವೀಪವಿತ್ತಂತೆ. ಅದು ಸ್ವಲ್ಪ ಸ್ವಲ್ಪವಾಗಿ ಸಮುದ್ರದಲ್ಲಿ ಮುಳುಗುತ್ತಾ ಹೋಯಿತು. ಇಲ್ಲಿನ ನಿವಾಸಿಗಳ ಚರ್ಮ ಮೀನಿನ ಚರ್ಮದಂತೆ ಆಗುತ್ತಾ ಹೋಯಿತು.

ಇವರಿಗೆ ಸಮುದ್ರದಲ್ಲಿದ್ದರೂ ಉಸಿರಾಡಲು ಸಹಾಯವಾಗುವಂತಹ ಶ್ವಾಸಕೋಶ ತಯಾರಾಯಿತು.

ಸಮುದ್ರದ ಅಡಿಯಲ್ಲಿ ಅಮೃತ ಶಿಲೆಯಿಂದ ನಿರ್ಮಿಸಲ್ಪಟ್ಟ ವಿಜೃಂಭಣೆಯ ನಗರದಲ್ಲಿ ಸುಮಾರು 60 ಸಾವಿರ ಮತ್ಸ್ಯ ಮಾನವರು ನಿವಾಸಿಸುತ್ತಿದ್ದಾರೆಂದು ಈ ಬಾಲಕ ಹೇಳಿಕೆಯಿತ್ತಿದ್ದಾನೆ. ಬಡತನ, ರೋಗ ಹಾಗೂ ದುಃಖವೆಂದರೆ ಅರಿಯದ ಈ ಮತ್ಸ್ಯ ಮಾನವರು ಮುನ್ನೂರು ವರ್ಷ ಜೀವಿಸುತ್ತಾರೆ. ಈ ಮತ್ಸ್ಯ ಮಾನವರು ಭೂಲೋಕದ ಜನರಂತೆ ರೂಪ ಬದಲಿಸಿ ಆಗಾಗ ಪೃಥ್ವಿಯ ಮೇಲೆ ಬಂದು ಜನರ ಮಧ್ಯೆ ಇದ್ದು ಈ ಪಥ್ವಿಯ ಪ್ರಗತಿಯ ಬಗ್ಗೆ ತಮ್ಮ ನಗರಕ್ಕೆ ಸೂಚನೆ ನೀಡುತ್ತಿರುತ್ತಾರಂತೆ.

ಈ ರಹಸ್ಯ ಕಂಡ ರಶಿಯದ ಹಡಗಿನ ಕ್ಯಾಪ್ಟನ್‌ರ ಆದೇಶದಂತೆ ಎಲ್ಲರೂ ವಿಮಾನ ಹುಡುಕುವುದನ್ನು ಬಿಟ್ಟು ತಮ್ಮ ದೇಶಕ್ಕೆ ಹಿಂತಿರುಗಿ ಬಂದರು.

ಕಪ್ಪು ಸಮುದ್ರದ ಹತ್ತಿರ ಒಂದು ಅಜ್ಞಾತ ಕ್ಷೇತ್ರದಲ್ಲಿ ಈ ಬಾಲಕನ ವಿಸ್ತೃತ ಶಾರೀರಿಕ ಅಧ್ಯಯನ ನಡೆಸಲಾಯಿತು. ಈ ಬಾಲಕನು ಇನ್ನೇನನ್ನೂ ಹೇಳಲು ನಿರಾಕರಿಸಿದ್ದಾನೆ. ಸಮುದ್ರ ತಳದಲ್ಲಿರುವ ತನ್ನ ನಗರಕ್ಕೆ ಹಿಂದಿರುಗಲು ಹಠ ಹಿಡಿದಿದ್ದಾನೆ.


ಡಾ. ವಿನೋಗ್ರೇಡ್‌ರ ಹೇಳಿಕೆಯ ಪ್ರಕಾರ ಮತ್ಸ್ಯ ಬಾಲಕನು ತನ್ನನ್ನು ಒಂದು ವೇಳೆ ಹಿಂದಿರುಗಲು ಬಿಡದಿದ್ದರೆ, ರಶಿಯ ದೇಶ ಭಯಂಕರ ನಷ್ಟಕ್ಕೆ ಈಡಾಗುವುದೆಂದು ಹೆದರಿಸುತ್ತಿದ್ದಾನೆ.

(ಆಧಾರ)

ದುಃಖಿತರಲ್ಲಿ ಕರುಳಿನ ಸಂಬಂಧವಿದ್ದವರು ಎಷ್ಟೆಷ್ಟು ನೆರೆಯವರೋ ಅಷ್ಟಷ್ಟು ದುಃಖಕ್ಕೆ ಹುರುಪು; ಸಮಾಧಾನಕ್ಕೆ ಸೊನ್ನೆ.

– ರಂ.ಶ್ರೀ.ಮುಗಳಿ

ಸಂಗ್ರಹ : ಭೀಮಸೇನ ಪದಕಿ



'ಸುಪ್ರಿಯ' ಚೊಕ್ಕಾಡಿ

ರಾವಣನಿಗೆ ಹತ್ತು ತಲೆ, ಬ್ರಹ್ಮನಿಗೆ ನಾಲ್ಕು ತಲೆ, ನನಗೆ ಮಾತ್ರ ಒಂದೇ ತಲೆ ಯಾಕೋ ಗೊತ್ತಿಲ್ಲ; ಎಂದು ನಮ್ಮ ಮನೆಯ ಓರ್ವ ಪುಟಾಣಿ ಸದಸ್ಯನಿಗೆ ತಲೆ ಬಿಸಿಯಾಗಿದೆ. ಈ ಒಂದೇ ತಲೆಯ ನಿಭಾವಣೆಯ ಕಷ್ಟ ಅವನಿಗೇನು ಗೊತ್ತು? ಪಾಪ! ಹತ್ತು ತಲೆಯಿದ್ದೂ ಕೊನೆಗೆ ಒಂದು ತಲೆಯನ್ನೂ ಭದ್ರವಾಗಿ ಉಳಿಸಿಕೊಳ್ಳಲಾಗದ ರಾವಣನಿಗಂತೂ ತಲೆಗಳ ಪೇಚಾಟ ಬಹಳವಾಗಿದ್ದಿರಬಹುದು. ಒಂದು ಸಮಸ್ಯೆ ಹತ್ತಾಗಬಹುದು. ಯಾಕೆಂದರೆ ಒಂದು ಸಮಸ್ಯೆಗೆ ಹತ್ತು ತಲೆಗಳದ್ದೂ ಒಂದೊಂದು ಅಭಿಪ್ರಾಯವಿರಬಹುದು. ಕೆಲವು ಸಮಸ್ಯೆಗಳಿಗೆ ಒಂದು ತಲೆಯದ್ದೇ ಹಲವಾರು ಅಭಿಪ್ರಾಯಗಳೂ ಇರುತ್ತವೆ. ಇಂತಲ್ಲಿ ರಾವಣನ ತಲೆಯ ಪಾಡು ನರಕಸದೃಶ! ಅಂತೂ ಅವನಿಗೆ ಒಮ್ಮತದ ಅಭಿಪ್ರಾಯಕ್ಕೆ ಬರಲು ಕಷ್ಟವೇ ಆಗಿದ್ದಿರಬಹುದು. ಬಹುಶಃ ಆತ ಬಹುಮತದ ಆಧಾರದ ಮೇಲೇ (ನಮ್ಮ ಪ್ರಜಾಪ್ರಭುತ್ವದಂತೆ!) ನಿರ್ಣಯ ತೆಗೆದುಕೊಳ್ಳುತ್ತಿದ್ದಿರಬೇಕು. ಇನ್ನು ಬ್ರಹ್ಮ! ನಾಲ್ಕು ತಲೆಯವ! ರಾವಣನಿಗೆ ಹತ್ತು ತಲೆಯನ್ನು ಕೊಟ್ಟವನೂ ಇವನೆ! ಭೂಲೋಕದವರ ತಲೆ ಹೇಗೆ ಕೆಲಸ ಮಾಡುತ್ತದೆಂದು ಪರೀಕ್ಷಿಸಿ ಸೋತು ಹೋಗಿ ಕೊನೆಗೆ ಮಾನವರಿಗೆ ಒಂದು ತಲೆಯನ್ನು ಅನುಗ್ರಹ ಮಾಡಿದ. ಪುರಾಣಗಳು ಹೇಳುವಂತೆ ರಾಕ್ಷಸರು ಭಯಂಕರವಾದ ತಪಸ್ಸು ಮಾಡಿ ದೇವರನ್ನು ಮೆಚ್ಚಿಸಿ ಅವರಿಂದ ವರವನ್ನು ಪಡೆದುಕೊಳ್ಳುತ್ತಿದ್ದರು. ಈ ವರಗಳಾದರೂ ಎಂತಹವು? ದೇವರ ತಲೆಗೇ ಮಾರಕವಾಗುವಂತಹವುಗಳು! ಬ್ರಹ್ಮನು ನಾಲ್ಕು ತಲೆಗಳನ್ನು ಹೊಂದಿದರೂ ಕೂಡ ಅವನು 'ತಲೆಪೋಕ' (ತಲೆ ಇಲ್ಲದವನು) ಎಂದು ಮುದ್ದಣನೇ ಹೇಳಿದ್ದಾನೆ. ಇನ್ನು ಒಂದು ತಲೆಯನ್ನು ಹೊಂದಿದ ನಮ್ಮ ಪಾಡೇನು? ಅದೂ ಆ ತಲೆಪೋಕನಿಂದಲೇ ನಮಗೆ ಬಂದ ತಲೆ! (ತಲೆ ಬರಹ!)

ಮನುಷ್ಯನಲ್ಲಿ ಬಹುಮುಖ್ಯವೆನಿಸಿಕೊಂಡ ಅಂಗ ತಲೆ, ಅದು Head! ಅವನ ಆಲೋಚನೆಗಳ ಜನನಿ ಅದು. 'ತಲೆ'ಯ ಬಗ್ಗೆ ಯೋಚಿಸುವಾಗ ಈ ತಲೆಯ ಉಸಾಬರಿಯೇ ಬೇಡ, ಮನುಷ್ಯನಿಗೆ ತಲೆಯೇ ಇಲ್ಲದಿರುತ್ತಿದ್ದರೆ ಏನಾಗುತ್ತಿತ್ತು ಎಂಬಾಲೋಚನೆ ಬರುತ್ತದೆ. ತಲೆ ಇದ್ದರೆ ನೋಡಿ ಎಷ್ಟೊಂದು ಕಷ್ಟಗಳು.

ವಿದ್ಯಾರ್ಥಿಗಳನ್ನು ಕಂಡಾಗ ಅಧ್ಯಾಪಕರಿಗೆ ಪ್ರಶ್ನೆ ಕೇಳುವುದೊಂದು ಚಾಳಿ. ಅವನಿಗೆ ಉತ್ತರಿಸಲಾಗುವುದಿಲ್ಲ, ಯಾಕೆಂದರೆ ಅವನು

ವಿದ್ಯಾರ್ಥಿ, ಅವನ ತಲೆಗೆ ಕಲಿಯುವುದೊಂದೇ ಕೆಲಸವಲ್ಲ. ಹಲವಾರು ಕೆಲಸ, ಒತ್ತಡಗಳ ಮಧ್ಯೆ ಕಲಿಯುವಿಕೆಗೆ ಎಡೆಮಾಡಿಕೊಡಬೇಕು. ಆದರ ಅರಿವಿಲ್ಲದ ಅಧ್ಯಾಪಕರು, 'ನಿನಗೆ ತಲೆ ಇಲ್ಲ' 'ನಿನ್ನ ತಲೆ ಎಲ್ಲಿ ಇರುವುದು ಮಹರಾಯ' ಎಂದು ಗದರಿಸುತ್ತಾ ತಲೆಗೇ ಕುಟ್ಟಿ ಕೊಡುತ್ತಾರೆ! ಇನ್ನು ವಿದ್ಯಾರ್ಥಿಗಳು ಹೇಳಿದ ಉತ್ತರ ತಪ್ಪಾಗಿದ್ದರಂತೂ 'ನಿನ್ನ ತಲೆ!, ನಿನ್ನ ತಲೆಯಲ್ಲಿ ಮಿದುಳು ಇರುವುದೋ ಅಥವಾ ಗೊಬ್ಬರ ತುಂಬಿಸಿಕೊಂಡಿದ್ದೀಯೋ?' ಎಂದು ತಲೆಯೊಳಗೇ ಹೋಗಿಬಿಡುತ್ತಾರೆ ಈ ಮೇಷ್ಟ್ರು. ಯಾರಿಗೆ ಗೊತ್ತು, ಬ್ರಹ್ಮ ಏನನ್ನು ತುಂಬಿಸಿದ್ದಾನೋ? ತುಂಬಿಸಿದ್ದನ್ನು ಅಧ್ಯಾಪಕರೂ ತೆಗೆಯಲಾರರು. ಯಾಕೆಂದರೆ ಕೇಳಿಲ್ಲವೆ ಗಾದೆ ''ತಲೇ ಮೇಲಣ ಬರಹ ಎಲೆಯಿಂದ ಒರಸಿದರೆ ಹೋದೀತೆ?''

ಈ ಮಿದುಳಿನ ಮೇಲಿರುವ ಕವಚದಿಂದಾಗಿ ಒಟ್ಟಾರೆ ವಿದ್ಯಾರ್ಥಿಗಳಿಗೆ ಅಧ್ಯಾಪಕರು ಮಾಡಿದ ಪಾಠದ ತಲೆ ಬುಡ ಅರ್ಥವಾಗುವುದಿಲ್ಲ. ಬರಿಯ ಮಿದುಳ ಬದಲಾಗಿ ಅದರ ಮೇಲೆ ಒಂದು ಕವಚ ಯಾಕೆ ಇರುವುದೋ ನನ್ನ ತಲೆಗಂತೂ ತಿಳಿಯುವುದಿಲ್ಲ. ಆದರೂ ವಿದ್ಯಾರ್ಥಿಗಳು ಗುರುವಿನ ತಲೆಯನ್ನು ತಿಳಿದಿರುತ್ತಾರೆ. ಗುರುವಿನ ತಲೆಯ ಒಳ ತಿರುಳನ್ನು ಬಲ್ಲವನು ಶಿಷ್ಯನಾದರೆ ಶಿಷ್ಯರ ತಲೆಯನ್ನರೆದು ಕುಡಿದವರು ಅಧ್ಯಾಪಕರು. ಆದ್ದರಿಂದಲೇ ಗುರುವಿನ ತಲೆ ಖಾಲಿ ಆದಂತೆ ಶಿಷ್ಯನ ತಲೆ ತುಂಬುತ್ತದೆ. ಶಿಷ್ಯನ ತಲೆ ಖಾಲಿ ಆದಂತೆ ಪರೀಕ್ಷೆಯ ಉತ್ತರ ಪತ್ರಿಕೆಯು ತುಂಬುತ್ತದೆ. ಮುಂದೆ ಈ ಉತ್ತರ ಪತ್ರಿಕೆಯನ್ನೋದಿ (?) ತಿದ್ದುವ ಗುರುವಿನ ತಲೆ ಮತ್ತೆ ತುಂಬುತ್ತದೆ!

ವಿದ್ಯಾರ್ಥಿಗಳ ತಲೆಯನ್ನು ವರ್ಷಕ್ಕೊಂದಾವರ್ತಿ 'ದೊಡ್ಡ ಪರೀಕ್ಷೆ' ಮಾಡಿ ತಲೆಯ ಬಣ್ಣ ಬಯಲಿಗೆಳೆಯುತ್ತಾರೆ. ಈ ಸಮಯದಲ್ಲಿಯಂತೂ ವಿದ್ಯಾರ್ಥಿಗಳಿಗೆ ತಲೆ ನೋವು ವಿಪರೀತ! ಮನೆಯಲ್ಲಿ ಸರಿಯಾಗಿ ಓದಿ ಒಂದು ವರುಷದ ಪಠ್ಯಗಳನ್ನು ಸಣ್ಣ ತಲೆಯಲ್ಲಿ ತುರುಕಿ ಈ 'ತೂಕದ ತಲೆ'ಯನ್ನು ಬಸ್ಸಿನಲ್ಲಿ ಜಾಗ್ರತೆಯಾಗಿ ಹೊತ್ತುಕೊಂಡು ಹೋಗಬೇಕು. ಪ್ರಶ್ನೆಪತ್ರಿಕೆ ಕಂಡಾಗ ಕೆಲವರ ತಲೆ ಒಮ್ಮೆ ತನ್ನ ಸುತ್ತಮುತ್ತಲಿನವರನ್ನು ಸಿಂಹಾವಲೋಕನ ಮಾಡಿ ಪರಿಸ್ಥಿತಿಗೆ ಹೊಂದಿಕೊಳ್ಳಲು ಪ್ರಯತ್ನಿಸುತ್ತದೆ. ಇನ್ನೂ ಕೆಲವರು ಪ್ರಶ್ನೆ ಪತ್ರಿಕೆ ಕಂಡ ಕೂಡಲೇ ವಾಂತಿ ಮಾಡಿ ತಲೆ ಖಾಲಿ ಮಾಡಿಕೊಳ್ಳುತ್ತಾರೆ. ಉತ್ತರ



ಗೊತ್ತಿಲ್ಲದಿದ್ದಾಗ ತಲೆ ಸ್ವಲ್ಪ ಮುಂದೆ-ಹಿಂದೆ ಓಡಿ ನಕಲು ಮಾಡಲು ಸೂಚನೆ ಕೊಡುತ್ತದೆ. ಇವರಿಗೂ ತಲೆ ಉಂಟು ಸ್ವಾಮೀ, ಅದು ನಕಲಿ ಅಷ್ಟೆ! ನಕಲು ಮಾಡುವಾಗ ಸಿಕ್ಕಿಬಿದ್ದರೆ ಮಾತ್ರ, ಇವರ ತಲೆ ತೆಗೆಯಲು ಇದ್ದಾರಲ್ಲ - ದೊಡ್ಡ

ತಲೆಯ ಸೂಪರ್‌ವೈಸರ್ರು! ಗಣಿತದ ವಿದ್ಯಾರ್ಥಿಗಳಾದರೆ ಅವರ ತಲೆಯನ್ನು ಸೂತ್ರಗಳೇ ತಿಂದು ಬಿಡುತ್ತವೆ. (ಆದರೆ ಕೆಲವು ಸೂತ್ರಭಕ್ಷಕ ತಲೆಗಳೂ ಇವೆ. ಆ ತಲೆಗಳಿಗೆ ಇದು ಅನ್ವಯವಾಗುವುದಿಲ್ಲ.)

ದಿನದಿಂದ ದಿನಕ್ಕೆ (ಗಾತ್ರದಲ್ಲಿ) ಬೆಳೆಯುತ್ತಿರುವ ಈ ತಲೆಯನ್ನು ತಿಂಗಳಿಗೊಮ್ಮೆಯಾದರೂ ಕ್ಷೌರಿಕನಿಗೊಪ್ಪಿಸದಿದ್ದರೆ ಮಾನವನ ಗತಿ ದುರ್ಗತಿ. ಅವನಿಗೆ 'ಬೆಲೆ' ಸಿಗಬೇಕಾದರೆ ಕ್ಷೌರಿಕನಿಗೆ ತಲೆಯನ್ನೊಪ್ಪಿಸಲೇಬೇಕು, ಯಾಕೆಂದರೆ ನಾಗರಿಕ ಸಮಾಜದಲ್ಲಿ ಮನುಷ್ಯನನ್ನು ಅಳೆಯುವ ಮಾನದಂಡಗಳಲ್ಲಿ ತಲೆ ಕೂದಲಿನ ಕ್ರಾಪಿನ ಶೈಲಿಯೂ ಒಂದು. ದಿನಕ್ಕೊಂದರಂತೆ ಬರುವ ಫ್ಯಾಷನ್ನಿನಂತೆ ಬೆಳೆಸಲು ಯಾವುದೋ ಚೂರ್ಣ, ತೈಲಗಳನ್ನು ತಲೆಗೆ ಹುಯಿದುಕೊಂಡರೆ ಇನ್ನೂ ಕೆಲವರು ಉದ್ದವಿದ್ದ ಕೂದಲನ್ನು 'ಬಾಬ್ ಕಟ್', 'ಬಾಯ್ ಕಟ್' ಮಾಡಿಸಿ ಬಾಯ್ (boy)ಗಳನ್ನು ಬಾಯಿ ಬಾಯಿ ಬಿಡುವಂತೆ ಮಾಡುತ್ತಾರೆ. (ಹುಡುಗರಿಗೆ ಪಾಪ ತಲೆ ಕೆಡಿಸಿಕೊಳ್ಳುವುದಷ್ಟೇ ಕೆಲಸ!) ಆದರೆ ಹೀಗೆಲ್ಲಾ ಹುಡುಗಿಯರಿಗೆ 'ಕೋಲ' ಕಟ್ಟಲು ಮನೆಯ ಅಜ್ಜಿ ಬಿಡುವುದಿಲ್ಲ, ಯಾಕೆಂದರೆ 'ಹಿಂದಿನ ಕಾಲದಲ್ಲಿ ಹಾಗೆಲ್ಲಾ ಇರಲಿಲ್ಲ!' ಆದರೂ ಹೆಚ್ಚಿನವರು ಅಜ್ಜಿಯ ಕಣ್ತಪ್ಪಿಸಿ 'ಕೋಲ' ಕಟ್ಟಿಕೊಳ್ಳುತ್ತಾರೆ. ಏನೋ ತಲೆ ಭಾರವೆನಿಸಿ ಈ ರೀತಿ ಮಾಡಿಕೊಳ್ಳುತ್ತಾರೆ ಅಂತ ಅಜ್ಜಿ ಮತ್ತೆ ಸಮಾಧಾನಪಟ್ಟುಕೊಳ್ಳಲೂಬಹುದು.



'ನಮ್ದೇ ತಲೆ ಅಲ್ವೆ, ನಾವು ಹೇಗಾದರೂ ಅದನ್ನು ಉಪಯೋಗಿಸಬಹುದು' ಅಂತ ನಾವು ಸ್ವಾತಂತ್ರ್ಯ ವಹಿಸುವಂತೆಯೂ ಇಲ್ಲ. ನಾವು ಏನನ್ನೋ ಯೋಚಿಸಿ ಬರೆದದ್ದಕ್ಕೆ ಯಾ ಮಾತನಾಡಿದ್ದಕ್ಕೆ ಬೆಲೆ ಕಟ್ಟುವವರು ಮತ್ತೊಬ್ಬರು. ಎಂದರೆ ನಮ್ಮ ತಲೆಯ ಬೆಲೆಯನ್ನು ನಿರ್ಧರಿಸುವವರು ಇತರರು! ಕೃಷಿಕರ ಮಾಲಿನಂತೆ! ತಲೆ ನಮ್ಮದೇ ಸರಿ, ಅದನ್ನು ನಾವು ಇತರರಿಗೆ ಬೇಕಾದಂತೆ ಹೊಂದಿಸಿಕೊಳ್ಳಬೇಕು. ಹಿರಿ ತಲೆ (ಗೌರವಾನ್ವಿತ)ಯವರನ್ನು ಕಂಡಾಗ ನಾವು ತಲೆ ಬಗ್ಗಿಸಿ ವಂದಿಸಬೇಕು. ಮದುವೆ ಮಂಟಪದಲ್ಲಿ ಕುಳಿತ ವಧೂವರರ ತಲೆಗಳಿಗೆ ಬಾಗುವುದೊಂದೇ ಕೆಲಸ. ಹೋಗಲಿ ಎಷ್ಟಾದರೂ ಹಿರಿ ತಲೆ, ತಲೆ ಬಾಗಲಿ, ಇದಕ್ಕೆ ಪ್ರತಿಫಲ? ಮಂತ್ರಾಕ್ಷತೆಯ ಸುರಿಮಳೆ! ಆ ಕೆಂಬಣ್ಣವನ್ನು ಹೋಗಲಾಡಿಸಲು ಗಂಗಾ ಪ್ರವಾಹವೇ ಬೇಕು.

ತಲೆಯ ಮಹತ್ವವೇ ವಿಚಿತ್ರ! ನೀವು ಹೊಸದಾಗಿ ತಾಂಬೂಲ ಹಾಕುವಿರಾದರೆ ತಲೆಯನ್ನು ಸ್ವಲ್ಪ ಜಾಗ್ರತೆಯಾಗಿ ನೋಡಿಕೊಳ್ಳಿ, ಯಾಕೆಂದರೆ ಅದು ತಲೆಗೇರಿಬಿಡುತ್ತದೆ. ನಮ್ಮೂರಿನ ಗುಂಡ ಒಮ್ಮೆ ಕದ್ದು ಸಿಗರೇಟು ಕುಡಿದ. ಪಾಪ, ಅವನೇನೋ ಕೂಡಲೇ ಹೊಗೆಯನ್ನು ಹೊರಗೇ ಬಿಟ್ಟಿದ್ದ. ಆದರೆ ಈ ತಲೆ ಬಿಡಬೇಕಲ್ಲ, ಯಾವುದೋ ಮಾಯೆಯಲ್ಲಿ ಹೊಗೆಯನ್ನು ತನ್ನತ್ತ ಸೆಳೆದುಕೊಂಡು ತನ್ನನ್ನು ತಿರುಗಿಸಿಕೊಂಡಿತ್ತು (ತಲೆ ತಿರುಗಿತು). ಆಗಂತೂ ಅವನಿಗೆ ಬೆನ್ನು ಬಿಡಿ, ಯಾವ ಲೋಕದರ್ಶನವೂ ಆಗಲಿಲ್ಲವಂತೆ! ಹೇಗಾದರೂ ಆಗಲಿ, ಗುಂಡನಿಗೆ ನರಕದರ್ಶನವನ್ನಾದರೂ ಮಾಡಿಸೋಣವೆಂದು ಆಸ್ಪ

ತ್ರೆಗೆ ಕೊಂಡೊಯ್ದೆವು. ಆ ವೈದ್ಯರು 'ತಲೆಯೊಳಗಿರುವ ಹೊಗೆಯನ್ನೆಲ್ಲಾ ತೆಗೆಯಬೇಕು. ಇದೊಂದು ಹೊಸ Case ಎಂದು ಹೇಳಿ ತಲೆಯನ್ನು ತೂತು ಮಾಡಿದರು. ಕೊನೆಗೂ ತಲೆಯಿಂದ ಹೊರಟದ್ದು ಹೊಗೆಯೋ, ರಕ್ತವೋ



ಇನ್ನೂ ತಿಳಿದು ಬಂದಿಲ್ಲ.

ತಲೆ ಎಷ್ಟೊಂದು ಸ್ವಾರ್ಥಿ ನೋಡಿ. ತಾನು ಬದುಕಿದ್ದರೆ ಮಾತ್ರ, ಇತರರಿಗೆ (ಉಳಿದ ಅಂಗಗಳಿಗೆ) ತನ್ನ ಯಜಮಾನಿಕೆಯಲ್ಲಿ ಬದುಕಲು ಬಿಡುತ್ತದೆ. ತಾನು ಹೊರಬೀಳುವ (ತಲೆ ಕತ್ತರಿಸಿ ಹೋಗುವ) ಸಂಭವವಿದ್ದರೆ ಅದು ತನ್ನೊಂದಿಗೆ ಒಡಲಿನ ಜೀವವನ್ನೂ ಕೊಂಡೊಯ್ಯುತ್ತದೆ. ತನ್ನ ತಪ್ಪಿದ್ದರೂ ತಲೆ ಶಿಕ್ಷೆ ಕೊಡುವುದು ಇತರ ಅಂಗಗಳಿಗೆ. ಮಳೆಯಲ್ಲಿ ವಿಪರೀತವಾಗಿ ತಲೆಯನ್ನು ನೆನೆಯಿಸಿದರೆ ಅದು ದೇಹವನ್ನು ಬಿಸಿ ಮಾಡುತ್ತದೆ (ಜ್ವರ) ಮತ್ತು ಮೂಗಿನಿಂದ ನೀರು ಸುರಿಸುತ್ತದೆ (ಶೀತ)!

ಒಬ್ಬ ಅಹಂಕಾರೀ ಮನುಷ್ಯನನ್ನು ನಾವು 'ಅ

ವ ಗೆ ಅಹಂಕಾರ ತಲೆಗೇರಿದೆ' ಎನ್ನುತ್ತೇವೆ. ಅಹಂಕಾರ ತಲೆಗೇ ಇರುವಾಗ ಅದು ಮತ್ತೆಲ್ಲಿಗೆ ಏರಬೇಕು? ತಲೆಯು ಅಹಂಕಾರದಿಂದ ಮನುಷ್ಯನ ದೇಹದ ಮೇಲೆ ಕುಳಿತು ಅವನ ಎಲ್ಲಾ ಅಂಗಗಳಿಗೆ ಆಜ್ಞೆ ಮಾಡುತ್ತದೆ (ಇದರ ಆಜ್ಞೆ ಪ್ರಕಾರ ನಡೆಯದಿದ್ದರೆ ಹೊಟ್ಟೆಗೆ ಹಿಟ್ಟಿಲ್ಲ, ಇದು ತಲೆಕೊಡುವ ಶಿಕ್ಷೆ) ಸ್ವತಃ ಕೆಲಸ ಮಾಡುವ ಪ್ರಮೇಯವೇ ಇಲ್ಲ; ಅಷ್ಟೇ ಅಲ್ಲ ತಲೆಗೆ ಸ್ವತಃ ಅದರ ಭಾರವನ್ನು ಹೊರುವ ಶಕ್ತಿಯೂ ಇಲ್ಲ. ನಮ್ಮ ಕೈಯ ಆಧಾರ ಅದಕ್ಕೆ ಬೇಕು. ಎಷ್ಟಾದರೂ ಯೋಚನೆಗಳ ಭಾರ ಹೊತ್ತಿರುವ ತಲೆ! ತಲೆ ಇದ್ದ ಮೇಲೆ ಆಲೋಚನೆಗಳುಂಟಾಗುವುದು ಸಹಜವೇ. ಎಂದರೆ ತಲೆಯ ಕೆಲಸ ಆಲೋಚಿಸುವುದೊಂದೇ. ಆಲೋಚನೆ ಮಾಡಿದ್ದನ್ನು ಅದೇ ಸ್ವತಃ ಮಾಡದೆ ಇತರ ಅಂಗಗಳಿಂದ ಮಾಡಿಸುವುದು ತಲೆಯ ಸರ್ವಾಧಿಕಾರೀ ಪ್ರಭುತ್ವದ ಸೂಚನೆ!

ತಲೆ ನಮಗೆ ತೊಂದರೆ ಕೊಡುತ್ತಿರುವುದು ಹೊಸತೇನಲ್ಲ. ಇದು ತಲೆತಲಾಂತರದಿಂದ ಬಂದದ್ದು. ಈ ತಲೆಯಿಂದಾಗಿ ಬಲಿಚಕ್ರವರ್ತಿಯಾದ ಗತಿ ಏನೆಂಬುದು ನಿಮಗೆ ಗೊತ್ತೇ ಇದೆಯಲ್ಲ. ಪಾಪ, ವಾಮನ (ಚೋಟುದ್ದ ಹುಡುಗ!) ಮೂರು ಹೆಜ್ಜೆಯ ದಾನ ಕೇಳುತ್ತಿದ್ದಾನಲ್ಲಾ, ಕೊಟ್ಟೇ ಬಿಡೋಣವೆಂದು ಬಲಿಯು ಒಪ್ಪಿಕರಿಸಿದಾಗ 'ವಾಮನ' ಹೆಜ್ಜೆಗಳನ್ನಿಟ್ಟ, ಎಲ್ಲಿ? ಆಕಾಶಕ್ಕೊಂದು, ಭೂಮಂಡಲಕ್ಕೊಂದು, ಇನ್ನೊಂದು? ಬಲಿಚಕ್ರವರ್ತಿಯ ತಲೆ ವಾಮನನ ಮೂರನೇ ಪಾದಕ್ಕೆ ಖತಂ! ಪಾಪ ಬಲಿಯು ತಲೆಯನ್ನು ಪಯೋಗಿಸದೆ ತನ್ನ ತಲೆಯನ್ನೇ ಕಳೆದುಕೊಂಡ. ದಾನಕೊಡಲೊಪ್ಪಿ ಕೆಟ್ಟೆನೆಂದು ತಲೆ ಕೆಡಿಸಿಕೊಳ್ಳಲು ಅವನಿಗೆ ತಲೆಯೇ ಇಲ್ಲ, ಆದ್ದರಿಂದ ಈಗ ಆ ತಲೆಯ ಚಿಂತನೆಯೂ ನಮಗೇ ಸೇರಿದ್ದು. ಶಿಶುಪಾಲನದ್ದು ಮತ್ತೊಂದೇ ಕತೆ. ಶ್ರೀಕೃಷ್ಣನಿಂದ ತಲೆಯನ್ನು ಕಳೆದುಕೊಳ್ಳಬೇಕಾಯಿತು.

ರೂಪಸಿ ಯುವತಿಯರನ್ನು ಕಂಡು ತಲೆ ಕೆಡಿಸಿಕೊಂಡು ತಲೆ ಕಳೆದುಕೊಂಡ ಗಂಡಸರಿಗೇನು ಕೊರತೆ ನಮ್ಮಲ್ಲಿ? ರಾವಣನು ಇದರಲ್ಲಿ ಅಗ್ರಗಣ್ಯ. ವಿಶ್ವಾಮಿತ್ರನ ಕತೆಯೂ ಸಾಮಾನ್ಯವೇನಲ್ಲ. ಭಯಂಕರವಾದ ತಪಸ್ಸು ಮಾಡುತ್ತಿದ್ದ ವಿಶ್ವಾಮಿತ್ರನಿಗೆ ದಕ್ಕಿದ್ದು ಮೇನಕೆಯ ತಲೆ. ಅವಳ ರೂಪಲಾವಣ್ಯಕ್ಕೆ ಮರುಳಾಗಿ ವಿಶ್ವಾಮಿತ್ರ ತಲೆ ಕೆಡಿಸಿಕೊಂಡದ್ದೂ ಅಲ್ಲದೆ ಶಕುಂತಳೆಯ ಜನನಕ್ಕೆ ಕಾರಣ ಪುರುಷನಾಗಿ ಮುಂದೆ ದುಷ್ಯಂತ ಮಹಾರಾಜನಿಗೆ ದೊಡ್ಡ ತಲೆ ನೋವಾಗಿ ಪರಿಣಮಿಸಿತು. ಅಂತೂ ಗಂಡಸರ ತಲೆಗೆ ಹೆಂಗಸರಿಂ



ದಾಗಿ ಭಾರೀ ಪೆಟ್ಟು! ಹೆಂಗಸಿನ ಆಯುಧ ಲಟ್ಟಣಿಗೆ. ಇದು ಪತಿ ದೇವರ ತಲೆಗೇ ದಂಡ ಎಂದು ಬಲ್ಲವರು (ಮದುವೆಯಾದವರು?) ಹೇಳುವುದು ಕೇಳಿದ್ದೇನೆ. ಲಟ್ಟಣಿಗೆಯಿಂದ ಪ್ರಹಾರ ತಿಂದೋ ತಿನ್ನದೆಯೋ, ಅಂತೂ ಅದನ್ನು ಕಂಡ ಕೂಡಲೇ ಗಂಡಸಿನ ತಲೆ ಊದಿಕೊಳ್ಳುತ್ತದೆ. ಕಾರ್ಟೂನುಗಳಲ್ಲಿ (ಮಾತ್ರ?)!

ಇಷ್ಟೆಲ್ಲಾ ಕಷ್ಟಕೊಡುವ ತಲೆಯನ್ನು ಕನಿಕರದಿಂದ 'ಇರಲಿ ಪಾಪ' ಎಂದು ಬಿಟ್ಟುಬಿಟ್ಟರೆ ಕಷ್ಟ. ತಲೆ ಇದ್ದ ಮೇಲೆ ಖರ್ಚು ಮಾಡಬೇಕು. ಹೋಗಲಿ, ಖರ್ಚು ಮಾಡೋಣ, ಆದರೆ

ಖರ್ಚು ಮಾಡಿದ ತಲೆಯಲ್ಲಿ ಉಳಿಯುವುದಾದರೂ ಏನು ಈ ಮರೆವಿನ ಕಾಟದಲ್ಲಿ?

ಆದರೂ ಕೂಡ ನಾವು ತಲೆಗೆ ಕೊಟ್ಟ ಮಹತ್ವ ಬಹಳ. ಸಮಾರಂಭಗಳಲ್ಲಿ ಭಾಷಣಕ್ಕೆ ಅತಿಥಿಗಳನ್ನು ಕರೆಯಿಸಿ ಅವರಿಗೆ ಹಾರ ಅರ್ಪಿಸುವುದರ ಉದ್ದೇಶ ಆ ಅತಿಥಿಗಳಿಗೆ ತಲೆ ಇದೆಯೆಂದು ಪ್ರೇಕ್ಷಕರಿಗೆ ಖಾತ್ರಿಯಾಗಲಿ ಎಂಬುದೇ ಅಲ್ವೆ? ಹಾರ ಕತ್ತಿಗೆ ಬೀಳುವುದಾದರೂ ತಲೆಯ ಮೂಲಕ ಹೋಗಬೇಕಷ್ಟೆ. ಅಲ್ಲದೆ ಉತ್ತರಕುಮಾರನ ವಂಶಜರಾದ ನಮಗೆ ತಲೆಯ ಮೇಲೆ ಪ್ರೀತಿಯೂ ಬಹಳ. ಅರ್ಜುನನಲ್ಲಿ ಕಾಡಿಬೇಡಿಯಾದರೂ ತನ್ನ ತಲೆಯನ್ನುಳಿಸಿಕೊಂಡನಲ್ಲ ಉತ್ತರಕುಮಾರ, ಭಲೇ!

ಈಗಂತೂ ತಲೆ ಎಷ್ಟೇ ಕಷ್ಟಕೊಟ್ಟರೂ ಸದ್ಯಕ್ಕೆ ಅದನ್ನು ತೆಗೆಯುವಂತಿಲ್ಲ. ಅಲ್ಲದೆ ತಲೆ ಇದ್ದ ಮೇಲೆ ಅದು 'ಸರಿ' ಇರಬೇಕು. ಆದ್ದರಿಂದ ಈ ತಲೆಯಿಂದ ಹಲವರು ಹಲವು ರೀತಿಯ ಪ್ರಯೋಜನಗಳನ್ನು ಕಂಡುಹಿಡಿದುಕೊಂಡಿದ್ದಾರೆ. ಕೂಲಿಗಳು ಹೊರೆಯನ್ನು ಹೊರಲು, ಯಜಮಾನರುಗಳು ಹೊರೆ ಹೊರಿಸಲು, ಅಧ್ಯಾಪಕರು ಪಾಠ ಮಾಡಲು, ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಲು, ತರುಣಿಯರು ತಲೆಕೂದಲನ್ನು ಕಟಾವ್ ಮಾಡಲು, ತರುಣರು ತರುಣಿಯರ ಚಿಂತೆ ಮಾಡಲು, ವ್ಯಾಪಾರಿಗಳು ಲಾಭ ಮಾಡಲು, ರಾಜಕಾರಣಿಗಳು ಟೋಪಿ ಹಾಕಲು, ಸಂಸತ್ ಸದಸ್ಯರು ಬೊಬ್ಬೆ ಹೊಡೆಯಲು, ವಿಜ್ಞಾನಿಗಳು ಶೋಧನೆ ಮಾಡಲು, ಸೋಮಾರಿಗಳು ತಲೆ ತುರಿಸಿಕೊಳ್ಳಲು, ಏನೂ ಕೆಲಸವಿಲ್ಲದವರು ತಲೆಯನ್ನೇ ದೊಡ್ಡ ಹೊರೆಯನ್ನಾಗಿ ಮಾಡಿಕೊಳ್ಳಲು, ಹೀಗೆ ತಲೆಯ ಉಪಯೋಗ ಹಲವಾರು ಬಗೆಯದು! ಕೆಲವು ಪ್ರೇಕ್ಷಕರು ತಲೆಯನ್ನು ಮಿನಿ ಭಾಗವತಿಕೆಗೆ ಉಪಯೋಗಿಸುತ್ತಾರೆ. ನಟನ ಒಂದೊಂದು ಮಾತಿಗೂ ಈ ಪ್ರೇಕ್ಷಕರ ತಲೆ ಚೆಂಡೆಯ ಪೆಟ್ಟಿನಂತೆ ಕುಣಿಯುತ್ತದೆ. ಈ ತಲೆಯ ಮರ್ಮ ತಿಳಿಯದೆ ನಾವು ಸಭಾಂಗಣದಲ್ಲಿ ಹಿಂದೆ ಕುಳಿತುಬಿಟ್ಟೆವೋ, ನಮಗೆ ಆಟಕ್ಕಿಂತಲೂ ಹೆಚ್ಚು ಸ್ವಾರಸ್ಯ ಇಂತಹ ತಲೆಯಿಂದಲೇ ಲಭ್ಯ.

ನಮ್ಮ (ಪ್ರಜೆಗಳ) ತಲೆ ಬಿಸಿ, ಕಷ್ಟಗಳನ್ನು ನೋಡಿ ಸರಕಾರದ ತಲೆಯೂ ಬಿಸಿಯಾಗಿದೆ. ಆದ್ದರಿಂದಲೇ ಅದು ಉದಾರೀ ಮನೋಭಾವದಿಂದ ಪ್ರಜೆಗಳಿಗೆ ಮೈಲಿಗೊಂದರಂತೆ, ಹತ್ತ್ಲೆಗೊಂದರಂತೆ ಹೆಂಡದಂಗಡಿಗಳನ್ನು ತೆರೆದಿದೆ. ಸುಲಭವಾಗಿ ತಲೆವಾಸಿ! ಇನ್ನು ರಾಜಕಾರಣಿಗಳ ಪರಿಶುದ್ಧ ತಲೆಗೆ ಹೊಳೆಯದ ವಿಚಾರವೇನಿದೆ? ಭಾರತದ ಸುಪುತ್ರರಿಗೆ ಯುದ್ಧ ಮಾಡುವ ಕಲೆಯನ್ನು ಉಚಿತವಾಗಿ ಕಲಿಸಿಕೊಡುತ್ತಾರೆ - ವಿಧಾನಸಭಾ ನಡವಳಿಕೆಗಳಿಂದ (ಬೆಂಚು, ಕುರ್ಚಿ, ಮೈಕುಗಳ ಕಿತ್ತಾಟ, ಚಪ್ಪಲಿಗಳ ತೂರಾಟ, ಇತ್ಯಾದಿ). ಮಕ್ಕಳ ತಲೆ ಕೂಡ ಇದರಿಂದ ಆಕರ್ಷಿತವಾಗಿ ಅವರೀಗ 'ನಾವು ವಿಧಾನಸಭಾಧಿವೇಶನದ ಆಟ ಆಡೋಣ' ಎಂದು ಹೇಳಿ ಮನೆಯಲ್ಲಿದ್ದ ಬೆಂಚು, ಡೆಸ್ಕುಗಳನ್ನು ಹೊರಕ್ಕೆ ಎಸೆಯುತ್ತಾರೆ!

ಕೆಲವರು 'ರಾಜಕಾರಣಿಗಳು ಪ್ರಶ್ನೆಗೆ ಉತ್ತರಿಸುವಾಗ ತಲೆಯನ್ನುಪಯೋಗಿಸುವುದಿಲ್ಲ' ಎಂದು ಹೇಳುವುದುಂಟು. ಅವರು ಯಾಕಾದರೂ ತಲೆಯನ್ನು ಉಪಯೋಗಿಸಬೇಕು? 'ಕೇಳಿದ ಎಲ್ಲಾ ಪ್ರಶ್ನೆಗಳಿಗೂ ತಲೆಯನ್ನುಪಯೋಗಿಸಿಯೇ ಉತ್ತರಿಸಬೇಕು' ಎಂದು ಎಲ್ಲಿಯಾದರೂ ಸಂವಿಧಾನದಲ್ಲಿ ಬರೆದಿದೆಯೆ? ಅಲ್ಲದೆ ರಾಜಕಾರಣಿಗಳು ಇದ್ದ ತಲೆಯನ್ನು ಈ ಸಮಯದಲ್ಲಿ ಉಪಯೋಗ ಮಾಡಿಬಿಟ್ಟರೆ ಚುನಾವಣಾ ಸಮಯದಲ್ಲಿ ಯಾವ ತಲೆಯನ್ನುಪಯೋಗಿಸುವುದು?

ನಮ್ಮೂರ ಗುಂಡನು ಅಂಗವಿಕಲನಾಗಿರುವುದರಿಂದ ಅವನಿಗೆ ಬೇಗ ಕೆಲಸ ಸಿಗಬಹುದು ಎಂಬ ಧೈರ್ಯದಿಂದಿದ್ದಾನೆ. ಒಂದು ಸರ್ಕಾರೀ ಕಛೇರಿಗೆ ಅರ್ಜಿ ಬರೆದ.

ಹೆಸರು: ಗುಂಡ

ತಂದೆಯ: ಮಹಾಗುಂಡ

ವಯಸ್ಸು: 35

ಊನವಾಗಿರುವ ಅಂಗ: ತಲೆ

x x x

ಅರ್ಜಿದಾರನ/ಳ ರುಜು

ಅರ್ಜಿ ನೋಡಿದ ಸರ್ಕಾರಿ ಅಧಿಕಾರಿಯ ತಲೆ ಬಿಸಿಯಾಗಿ ಗುಂಡನನ್ನು ಕರೆದು ಹೇಳಿದನಂತೆ. 'ನಿಮಗೆ Head injury ಎಂದು ವೈದ್ಯರಿಂದ ಸ್ಪಷ್ಟೀಕರಣ ತೆಗೆದುಕೊಂಡು ಬಂದು ನನ್ನ ಮೇಲಾಧಿಕಾರಿಗೆ ಕಳಿಸಿಕೊಡಿ. ಹಾಗೆಯೇ ಆತ ಸ್ಪಷ್ಟೀಕರಣವನ್ನೂ ತಂದ, ಜೊತೆಗೆ ಖ್ಯಾತ ಮಂತ್ರಿಯ ಒಂದು influence letter ಕೂಡಾ ತಂದ. ನಮ್ಮ ದೇಶದಲ್ಲಿ ಮಂತ್ರಿಗಳು ಹೇಳಿದ ಮೇಲೆ ಆಗದ ಕೆಲಸ ಯಾವುದಿದೆ ಸ್ವಾಮೀ? ಗುಂಡನೂ ಸರ್ಕಾರೀ ಅಧಿಕಾರಿಯಾದ.

ನನ್ನ ತಲೆ (ಯೆಂಬ ಲೇಖನ) ಯನ್ನು ನಿಮ್ಮೆದುರು ಇಟ್ಟಿದ್ದೇನೆ. ಏನೂ ಹಾನಿ ಮಾಡದೆ ಪರೀಕ್ಷಿಸುವ ಜವಾಬ್ದಾರಿ ನಿಮ್ಮ ತಲೆಯದ್ದು! ನಾನು ನಿಮ್ಮ ತಲೆಗೆ ಕೊಟ್ಟ ತೊಂದರೆಗೆ ಕ್ಷಮಿಸಿ! ನನ್ನ ಈ 'ತಲೆ' ಹರಟೆಗೂ ಕ್ಷಮಿಸಿ. ತಲೆಯಿಂದಾಗುವ ಇಷ್ಟೆಲ್ಲಾ ತೊಂದರೆಗಳನ್ನು ಗಮನಿಸುವಾಗ ತಲೆಯೇ ಬೇಡ ಎಂದೆನಿಸುತ್ತದೆ, ಅಲ್ಲವೆ? ಆದರೆ ನಮ್ಮ ತಲೆಯನ್ನು ರಕ್ಷಿಸಲೋಸುಗ, ನಮ್ಮ ತಲೆಯನ್ನೇ ನಂಬಿ ಶಿರಸ್ತ್ರಾಣವನ್ನು ತಯಾರಿಸಿದವರ, ತಯಾರಿಸುತ್ತಿರುವವರ ಗತಿ? ಅವರ ತಲೆಯನ್ನುಳಿಸಲೋಸುಗವಾದರೂ ನಾವು ನಮ್ಮ ತಲೆಯನ್ನು ಉಳಿಸಿಕೊಳ್ಳೋಣ! ನಮಗೆ ಸ್ವಲ್ಪ ತಲೆಭಾರವಾದರೂ ಚಿಂತೆಯಿಲ್ಲ! ●

★ ಚಪ್ಪಲಿ ಅನುಭವ :

ಒಂದು ಸಾರಿ ಚಪ್ಪಲಿ ತೆಗೆದುಕೊಳ್ಳಲು ಒಂದಂಗಡಿಗೆ ಒಬ್ಬ ಸಾಹಿತಿ ಹೋದ. ಅಂಗಡಿಯವನೂ ಒಂದು ಚಪ್ಪಲಿ ಜೊತೆ ತೋರಿಸುತ್ತಾ, ''ಇವು ಚೆನ್ನಾಗಿವೆ ಸ್ವಾಮಿ, ನಿಮ್ಮ ಮುಖಕ್ಕೆ ಒಪ್ಪುತ್ತವೆ'' ಅಂತ ಹೇಳಿದ. ಏನನ್ಯಾಯ, ಮುಖಕ್ಕೆ ಯಾರಾದರೂ ಚಪ್ಪಲಿ ಹಾಕಿಕೊಳ್ಳುತ್ತಾರೆಯೇ? ಮುಖಕ್ಕೆ ಚಪ್ಪಲಿ ಒಪ್ಪುವುದೆಂದರೇನು? ಏನೋ ಸಾಹಿತ್ಯ ಮತ್ತು ಭಾಷೆಯ ಜ್ಞಾನವಿಲ್ಲದೇ ಅವನು ಆ ರೀತಿ ಮಾತನಾಡಿರಬೇಕೆಂದು, ''ಹೋಗಲಿ, ಇವು ಬಾಳಿಕೆ ಬರುತ್ತವೇನಪ್ಪ?'' ಎಂದು ಕೇಳಲು ಅವನು ''ಆರು ತಿಂಗಳವರೆಗೆ ನೀವು ಹಲ್ಲಿನಲ್ಲಿ ಹಾಕಿ ಜಗಿದರೂ ಇವುಗಳು ಕಿತ್ತು ಬರುವುದಿಲ್ಲ'' ಅಂತ ಹೇಳಿದ. ಚಪ್ಪಲಿ ಗಟ್ಟಿಯಾಗಿವೆಯೋ ಇಲ್ಲವೋ ಎಂದು ಯಾರಾದರೂ ಹಲ್ಲಲ್ಲಿ ಕಚ್ಚುತ್ತ ಕುಳಿತುಕೊಳ್ಳುತ್ತಾರೆಯೆ? ಅಥವಾ ಆರು ತಿಂಗಳ ಕಾಲ ಇರುವ ಕೆಲಸ ಬಿಟ್ಟು ಆ ಕೆಲಸ ಮಾಡಲಾದೀತೆ? ಏನೋ ಬುದ್ಧಿಯಿಲ್ಲದವನು ಎಂಬ ತೀರ್ಮಾನಕ್ಕೆ ಬಂದು, ''ಇರಲಪ್ಪಾ, ಇದಕ್ಕಿಂತ ಉತ್ತಮ ನಮೂನೆ ಇದೆಯೇ?'' ಅಂತ ಕೇಳಲು ಅದಕ್ಕವನು ''ಇದಕ್ಕಿಂತ ಒಳ್ಳೆಯ ನಮೂನೆಯನ್ನು ನೀವು ಹೊಲಿದು ಕೊಡಿ, ನಿಮಗೆ ಹತ್ತು ರೂಪಾಯಿ ಇನಾಮು ಕೊಡುತ್ತೇನೆ'' ಅಂತ ಹೇಳಿದ. ಸಾಹಿತಿಯು ''ಹತ್ತು ರೂಪಾಯಿ ಸಂಪಾದಿಸಲು ಇನ್ನು ಚಮ್ಮಾರನ ಕೆಲಸ ಬೇರೆ ಕೈಕೊಳ್ಳಬೇಕೆ'' ಎಂದು ಹೇಳುತ್ತ, ಅವನು ತೋರಿಸಿದ ಜೊತೆಯನ್ನು ಅವನು ಹೇಳಿದ ಬೆಲೆ ಕೊಟ್ಟು ಕೊಂಡುಕೊಂಡು ಮನೆ ಕಡೆ ದಾರಿ ಹಿಡಿದರು.

(ಸಂಗ್ರಹ) ಎಂ.ಶಾರದಾ ನಾಗಭೂಷಣ

ನಿಮ್ಮ ಶಬ್ದಭಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಬಗರ್ ಹುಕುಂ
   (ಅ) ಅಪ್ಪಣೆಯಿಲ್ಲದ
   (ಆ) ಕಟ್ಟಪ್ಪಣೆ
   (ಇ) ಅಪ್ಪಣೆ ಮೀರುವುದು
   (ಈ) ಸ್ವತಂತ್ರ
2. ಅನಕ್ಷರತೆ
   (ಅ) ಶಾಶ್ವತವಾಗಿರುವುದು
   (ಆ) ಕುರುಡುತನ
   (ಇ) ಬರೆಯಲು ಬಾರದ ಸ್ಥಿತಿ
   (ಈ) ನಿಮಿಷದಲ್ಲಿ ಕೆಡುವಿಕೆ
3. ಅತಿವರ್ತಿ
   (ಅ) ಕೆಟ್ಟ ಸುದ್ದಿ
   (ಆ) ದೊಡ್ಡ ದೀಪ
   (ಇ) ಉಕ್ಕುವುದು
   (ಈ) ಮೀರಿ ನಡೆಯುವಂಥ
4. ಗಿಟ್ಟು
   (ಅ) ಜಡಿ
   (ಆ) ದೊರಕು
   (ಇ) ಹೋಳು
   (ಈ) ಕುಬ್ಜ ವೃಕ್ಷ
5. ಗಿರಕು
   (ಅ) ಸುತ್ತಾಟ
   (ಆ) ದಟ್ಟವಾಗಿರುವುದು
   (ಇ) ಬೀಳು
   (ಈ) ತೆಂಗಿನ ಪರಟೆ
6. ನಲ್
   (ಅ) ಟೊಳ್ಳು
   (ಆ) ತೆಳ್ಳಗಾಗು
   (ಇ) ಸುತ್ತು ಹಾಕು
   (ಈ) ಒಳ್ಳೆಯ
7. ಪ್ರಾಂಶುಪಾಲ
   (ಅ) ಕಾಲೇಜಿನ ವರಿಷ್ಠ ಅಧ್ಯಾಪಕ
   (ಆ) ಕೋಟೆಯ ಅಧಿಕಾರಿ
   (ಇ) ಧೂಳಿಯ ಕಣ
   (ಈ) ಕೊಡಲಿಯ ಆಳು
8. ಪ್ರಾಂಶು
   (ಅ) ಕೊಡಲಿ
   (ಆ) ಬೆಳಕು ಕೊಡುವ
   (ಇ) ಎತ್ತರವಾದ
   (ಈ) ಮಂಕು ಬಣ್ಣದ
9. ವಿಜನ
   (ಅ) ಬೀಸುವಿಕೆ
   (ಆ) ಚೆನ್ನಾಗಿ ತಿಳಿದವ
   (ಇ) ಖಾಲಿ
   (ಈ) ಬೀಸಣಿಗೆ
10. ಸಹಿಷ್ಣು
   (ಅ) ದಬ್ಬಾಳಿಕೆಗೆ ಗುರಿಯಾದವ
   (ಆ) ಒಟ್ಟಿಗೇ ಇರುವ
   (ಇ) ಜಿನುಗುವ
   (ಈ) ಸಹನೆಯುಳ್ಳ
11. ಸೀಯು
   (ಅ) ನವಿಯಾಗು
   (ಆ) ಅತಿಯಾಗಿ ಸುಡು
   (ಇ) ಸಿಟ್ಟಾಗು
   (ಈ) ಕೊಡು
12. ಸುಯಿಲು
   (ಅ) ಶ್ವಾಸ
   (ಆ) ಗೊತ್ತಾದ ವೇಳೆ
   (ಇ) ಸಂಭೋಗ
   (ಈ) ಸತ್ಯ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಬಗರ್ ಹುಕುಂ

(ಅ) ಅಪ್ಪಣೆಯಿಲ್ಲದ, ಸರಕಾರದ ಒಪ್ಪಿಗೆ ಪಡೆಯದ, ಅಕ್ರಮ. ಉದಾ: ಬಗರ್ ಹುಕುಂ ಸಾಗುವಳಿ (ಅರಬ್ಬಿ-ಬಗ್ಯೆರ್= ಇಲ್ಲದೆ+ ಹುಕುಂ= ಅಪ್ಪಣೆ)

2. ಅನಕ್ಷರತೆ

(ಇ) ಬರೆಯಲು ಬಾರದ ಸ್ಥಿತಿ, ಜನರಿಗೆ ಓದು ಬರಹ ಬಾರದಿರುವುದು. ಉದಾ: ಕೇರಳದಲ್ಲಿ ಅನಕ್ಷರತೆ ಅತಿ ಕಡಿಮೆ. (ಸಂ. ಅನ್= ಇಲ್ಲ + ಅಕ್ಷರ= ಬರಹ+ ತಾ- ಭಾವ ಪ್ರತ್ಯಯ)

3 ಅತಿವರ್ತಿ

(ಈ) ಕ್ರಮ ನಿಯಮ ಮೀರಿ ನಡೆಯುವ, ಅಂಕೆಯಿಲ್ಲದ. ಉದಾ: ಅತಿವರ್ತಿಗಳಾದ ರಾಜಕಾರಣಿಗಳು. (ಸಂ. ಅತಿ= ಮೀರಿದ+ ವರ್ತಿ= ನಡೆಯುವ)

4. ಗಿಟ್ಟು

(ಅ) ದೊರಕು, ಲಭ್ಯವಾಗು, ದಕ್ಕು. ಉದಾ: ಲಾಭಗಿಟ್ಟಲಿಲ್ಲ. (ದೇಶ್ಯ)

5. ಗಿರಕು

(ಅ) ದಟ್ಟವಾಗಿರುವಿಕೆ. ಒತ್ತೊತ್ತಾಗಿರುವಿಕೆ, ನಿಬಿಡತೆ; ಬಿಗಿಯಾಗಿ ಜೋಡಿಸಿರುವಿಕೆ. ಉದಾ: ಸಸಿಗಳ ಗಿರಕು ಅತಿಯಾಗಿತ್ತು. (ದೇಶ್ಯ - ಕಿರಿ ಒತ್ತೊತ್ತಾಗಿರು- ಎಂಬುದರಿಂದ?)

6. ನಲ್

(ಈ) ಒಳ್ಳೆಯ, ಉತ್ತಮ; ಸುಂದರ, ಸುಖವಾಗಿರುವ. ಉದಾ: ನಲ್ಮಾತು (ದೇಶ್ಯ)

7. ಪ್ರಾಂಶುಪಾಲ

(ಅ) ಕಾಲೇಜಿನ ಅಧ್ಯಾಪಕರ ಹಿರಿಯ. ಉದಾ: ಪ್ರಾಂಶುಪಾಲರನ್ನು ಧಿಕ್ಕರಿಸಿದ. (ಇಂಗ್ಲಿಷ್ Princi pal= ಮುಖ್ಯ ಶಬ್ದ ಅಪಭ್ರಂಶ)

8. ಪ್ರಾಂಶು

(ಇ) ಎತ್ತರನ್ನ, ಉನ್ನತ, ನೀಳ. ಉದಾ: ತಾಳ ಪ್ರಾಂಶು= ತಾಳೆಯ ಮರದಂತೆ ಎತ್ತರ- (ಸಂ.)

9. ವಿಜನ

(ಇ) ನಿರ್ಜನ, ಜನರಿಲ್ಲದ, ಖಾಲಿ. ಉದಾ: ವಿಜನ ವನ. (ಸಂ. ವಿ= ಇಲ್ಲದ+ ಜನ)

10. ಸಹಿಷ್ಣು

(ಈ) ಸಹನೆಯುಳ್ಳವ, ಮತಭೇದದಿಂದ ಕೆರಳದ, ತಾಳ್ಮೆಯುಳ್ಳ. ಉದಾ: ಪರಮತ ಸಹಿಷ್ಣು; ಕಷ್ಟಸಹಿಷ್ಣು. (ಸಂ.)

11. ಸೀಯು

(ಅ) ಅತಿಯಾಗಿ ಸುಡು, ಕರಕಾಗು. ಉದಾ: ಸೀದು ಹೋದ ಕಾಳು. (ದೇಶ್ಯ)

12. ಸುಯಿಲು

(ಅ) ಶ್ವಾಸ, ಉಸಿರು, ದೀರ್ಘಶ್ವಾಸ, ನಿಟ್ಟುಸಿರು; ಸಿಳ್ಳು. ಉದಾ: ಹಾವಿನ ಸುಯಿಲು ದೂರಕ್ಕೆ ಕೇಳಿಸುತ್ತಿತ್ತು. (ದೇಶ್ಯ)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8 ಸರಿಯಿದ್ದರೆ .... ಸಾಧಾರಣ
9-10 " ... ಉತ್ತಮ
11-12 " ... ಅತ್ಯುತ್ತಮ

ಓದುವುದೊಂದು ಕಲೆ

ಪ್ರೊ। ಟಿ.ಎಂ.ಪಂಡಿತ

ಮನುಷ್ಯ ಜ್ಞಾನಪ್ರಧಾನವಾದ ಪ್ರಾಣಿ. ಜ್ಞಾನಶೂನ್ಯನಾದವನು ಪ್ರಾಣಿಗೆ ಸಮಾನ ಎಂಬ ಶಾಸ್ತ್ರ ವಚನವಿದೆ. ಜ್ಞಾನವು ಸಂಸ್ಕೃತಿ ಹಾಗೂ ನಾಗರಿಕತೆಗಳ ಅಡಿಗಲ್ಲು. ಸಂಸ್ಕೃತಿ ಹಾಗೂ ನಾಗರಿಕತೆಗಳು ಜ್ಞಾನ ತರುವಿನಲ್ಲಿ ಹೊಮ್ಮಿದ ಸುಂದರ-ಸುಗಂಧಪುಷ್ಪಗಳು.ಜ್ಞಾನಕ್ಕೆಸರಯು-ಮುಪ್ಪುಗಳಿಲ್ಲ. ಅದು ಧಾರೆಯೆರೆದಷ್ಟೂ ವೃದ್ಧಿಯಾಗುತ್ತದೆ. ಜ್ಞಾನತೃಷೆ ಹೆಚ್ಚಿದಷ್ಟು ಕಾರ್ಯತತ್ಪರತೆ ಹೆಚ್ಚುತ್ತದೆ. ಜ್ಞಾನವೇ ಸುಖವನ್ನು ಹೆಚ್ಚಿಸುವ ಬೆಳಕು.

ಅರ್ಥಕೋಶದನ್ವಯ ಜ್ಞಾನವೆಂದರೆ ಅರಿವು, ತಿಳುವಳಿಕೆ, ಅನುಭವ. ತತ್ವಜ್ಞಾನಿ ಕನ್‌ಫ್ಯೂಷಿಯಸ್‌ನ ಪ್ರಕಾರ ಒಂದು ವಿಷಯ ತಿಳಿದಿರುವಾಗ ಅದು ತಿಳಿದಿದೆಯೆಂದೂ, ತಿಳಿಯದೆ ಇದ್ದಾಗ ಅದು ತಿಳಿದಿಲ್ಲವೆಂದೂ ಅರ್ಥ ಮಾಡಿಕೊಳ್ಳಬಲ್ಲ ಚೈತನ್ಯವೇ ಜ್ಞಾನ. ''ಶ್ರದ್ಧವಾನ್ ಲಭತೇ ಜ್ಞಾನಂ'' ಎಂಬುದು ಆರ್ಯೋಕ್ತಿ. ಶ್ರದ್ಧೆಯಿಲ್ಲದಿದ್ದರೆ, ಆಸಕ್ತಿಯಿಲ್ಲದಿದ್ದರೆ, ಕುತೂಹಲವಿಲ್ಲದಿದ್ದರೆ, ವೀಕ್ಷಣ ಸಾಮರ್ಥ್ಯವಿಲ್ಲದಿದ್ದರೆ ನೂತನಾನುಭವ, ನೂತನ ವಿಚಾರ ದೊರಕುವುದಿಲ್ಲ. ''ಅರಿವನರಸ ಬೇಕಯ್ಯಾ ಅಮೆರಿಕದ ಆಚೆ ಬೇಕಾದರೆ ಅದು ಅವಿತು ಕೊಂಡಿರಲಿ'' ಎಂದು ಕಾವ್ಯಗಂಧಿಯಾದ ತಮ್ಮ ಈ ವಚನದಲ್ಲಿ ಎಸ್.ವಿ.ರಂಗಣ್ಣನವರು ಬಹು ಮಾರ್ಮಿಕವಾಗಿ ಹೇಳಿದ್ದಾರೆ. ಬದುಕು ಕ್ಷಣಕ್ಷಣಕ್ಕೂ ಹೊಸದಾಗ ಬೇಕಾದರೆ ಹೊಸ ಹೊಸ ಅನುಭವ, ಹೊಸ ಹೊಸ ವಿಚಾರ-ತರಂಗಗಳು ನಮ್ಮ ಮನದ ಕೋಶವನ್ನು ಸೇರುತ್ತಿರಬೇಕು. ಈ ಅನುಭವ ನಾನಾ ಮೂಲಗಳಿಂದ ದೊರೆಯುತ್ತದೆ. ನಮ್ಮ ಸುತ್ತಮುತ್ತಣ ಪ್ರಾಕೃತಿಕವಾದ ಸಾಮಾಜಿಕವಾದ ಹಲವು-ಹತ್ತು ಸಂಗತಿಗಳು ನಮಗಾಗಿ ಹೃದಯವನ್ನು ತೆರೆದು ನಿಂತಿವೆ. ಆದರೆ ನಮಗೆ ನೋಡುವ ಕಣ್ಣು ಬೇಕು. ಕಣ್ಣು ಸಣ್ಣದಾದರೂ ಕಂಡದ್ದು ಸಣ್ಣದಾಗಬಾರದು. ''ಕೆಲವಂ ಬಲ್ಲವರಿಂದೆ ಕಲ್ತು, ಕೆಲವಂ ಶಾಸ್ತ್ರಂಗಳಿಂ ಕೇಳುತುಂ, ಕೆಲವಂ ಮಾಳ್ಪವರಿಂದೆ ಕಂಡು, ಕೆಲವಂ ಸುಜ್ಞಾನದಿಂ ನೋಡುತುಂ, ಕೆಲವಂ ಸಜ್ಜನಸಂಗದಿಂದಲರಿಯಲ್ ಸರ್ವಜ್ಞನಪ್ಪಂ ಕೇಳ್ ....'' ಹೀಗೆ ಜ್ಞಾನಾರ್ಜನೆಯ ಪಂಚಪಥಗಳನ್ನು ಸೋಮೇಶ್ವರ ಶತಕದಲ್ಲಿ ಸಾರಲಾಗಿದೆ. ಓದುಗಾರಿಕೆ ಜ್ಞಾನಾರ್ಜನೆಯ ಪ್ರಮುಖ ಸಾಧನೆಗಳಲ್ಲೊಂದು. ಅದು ನಾಗರಿಕ ಸಮಾಜದ ಒಂದು ಲಕ್ಷಣ; ಸುಶಿಕ್ಷಿತರ ಅವಿಭಾಜ್ಯ ಚರ್ಯೆ.

ಓದುಗಾರಿಕೆ ಎಂದರೇನು?

ಲಿಖಿತ ಅಥವಾ ಮುದ್ರಿತ ಸಂಕೇತಗಳ ಮೂಲಕ ವ್ಯಕ್ತವಾಗುವ ಕೃತಿಗಾರನ ಅಭಿಪ್ರಾಯವನ್ನು ಗ್ರಹಿಸುವ ಮತ್ತು ಅದಕ್ಕೆ ಅನುಗುಣವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವ ಮನೋವ್ಯಾಪಾರಕ್ಕೆ ಓದುಗಾರಿಕೆ ಎನ್ನುತ್ತಾರೆ. ಓದುಗಾರಿಕೆ ಒಂದು ಮಾನಸಿಕ ಕ್ರಿಯೆ-ಚಟುವಟಿಕೆ. ಓದುಗಾರಿಕೆ ಮೂಲತಃ ದೃಶ್ಯ ಕ್ರಿಯೆ. ಕಣ್ಣುಗಳ ನೆರವಿನಿಂದ ಲಿಖಿತ ಅಥವಾ ಮುದ್ರಿತ ಸಂಜ್ಞೆಗಳನ್ನು ಸ್ಪಷ್ಟವಾಗಿ ನೋಡುವ ಸಾಮರ್ಥ್ಯ. ದೃಷ್ಟಿ ನರಗಳ ಮೂಲಕ ಲಿಖಿತ

ಅಥವಾ ಮುದ್ರಿತ ಮಾಹಿತಿ ಮೆದುಳನ್ನು ತಲುಪಿದಾಗ ಮೆದುಳು ನಮ್ಮ ಹಿಂದಿನ ಅನುಭವ ಮತ್ತು ಪ್ರತಿಕ್ರಿಯೆಗಳಿಗೆ ಅನುಗುಣವಾಗಿ ಈ ಮಾಹಿತಿಯನ್ನು ಅರ್ಥೈಸುತ್ತದೆ. ಆದ್ದರಿಂದ ಒಳ್ಳೆಯ ಓದಿಗೆ ಸುಸ್ಥಿತಿಯಲ್ಲಿರುವ ಕಣ್ಣು, ಮೆದುಳು ಹಾಗೂ ಶ್ರೀಮಂತ ಅನುಭವ ಅವಶ್ಯ.

ಓದಿನ ಸುಖ!

ಓದುವುದು ಜೀವನದ ಬಹು ದೊಡ್ಡ ಸುಖ. ಹಾಗೆಂದು ವಿ.ಕೃ.ಗೋಕಾಕರು ಎಚ್ಚರಿಸಿದಂತೆ - ''ಓದಿ ಮರುಳಾಗಬಾರದು. ಓದದೆಯೂ ಮರುಳಾಗಬಾರದು. ಓದಿ ಹುರುಳಾಗಬೇಕು'' ಓದುಗಾರಿಕೆ ಒಂದು ಚಾಳಿ. ಆ ಚಾಳಿಯನ್ನು ಒಮ್ಮೆ ಬೆಳೆಸಿಕೊಂಡರೆ ಅದನ್ನು ಬಿಡುವುದೇ ಕಷ್ಟವಾಗುತ್ತದೆ. ಊಟ-ಉಸಿರುಗಳಂತೆ ಅದು ಬದುಕಿನ ಸಹಜಕ್ರಿಯೆಯಾಗಿ ಪರಿಣಮಿಸುತ್ತದೆ. ಕೆಲವರಿಗೆ ಓದು ಹವ್ಯಾಸ; ಇನ್ನು ಕೆಲವರಿಗೆ ಅದು ಉದ್ಯೋಗ. ಎಡ್ವರ್ಡ್ ನ್ಯೂಟನ್ ಅಂದಂತೆ ಚಿಂತನೆಯಿಂದ ಬುದ್ಧಿವಂತನಾಗಬಹುದಾದರೂ ತಿಳಿವು ಬರುವುದು ಓದಿನಿಂದ. ಓದುಗಾರಿಕೆಯಿಂದ ಆತ್ಮಾಹ್ಲಾದದ ಜೊತೆಗೆ ಆತ್ಮೋದ್ಧಾರವೂ ಲಭಿಸುತ್ತದೆ. ಮನರಂಜನೆಯ ಜೊತೆಗೆ ಜ್ಞಾನಲಾಭವೂ ಒದಗುತ್ತದೆ. ವ್ಯಕ್ತಿತ್ವ ವಿಕಾಸ ಸುಲಭವಾಗುತ್ತದೆ. ವಿರಾಗಿಗೆ, ಅನುರಾಗಿಗೆ, ಪ್ರವಾಸಿಗಳಿಗೆ, ತವಸಿಗಳಿಗೆ, ಧೀಮಂತರಿಗೆ, ಬಾಲಕರಿಗೆ, ಪಾಲಕರಿಗೆ, ಶಿಕ್ಷಕರಿಗೆ, ಬಡವರಿಗೆ, ಬಲ್ಲಿದರಿಗೆ, 'ಚಿಂತಾಮಣಿ'ಗಳಿಗೆ, ನಿದ್ರಾಹೀನರಿಗೆ, ಅಪ್ಸರೆಗೆ, 'ಅಪಸ್ಮಾರಿಗೆ' ಹೀಗೆ ಎಲ್ಲರಿಗೂ ಓದುಗಾರಿಕೆ ಒಂದಿಲ್ಲೊಂದು ರೀತಿಯಲ್ಲಿ ಉಪಕಾರಿ. ಅದು ದುಷ್ಟರಿಗೆ ಶೀಲಸಂವರ್ಧನಕಾರಿಯೂ ಹೌದು.

ಓದುಗಾರಿಕೆ ವೈಯಕ್ತಿಕವಾಗಿಯೂ ಸಾರ್ವಜನಿಕವಾಗಿಯೂ ಪರಿಣಾಮ ಬೀರಬಲ್ಲ ಒಂದು ಪ್ರಕ್ರಿಯೆ. ವಾಚನ ವಸ್ತುವಿನ ಸ್ವರೂಪ ಮತ್ತು ವೈಶಾಲ್ಯವನ್ನು ಅನುಸರಿಸಿ ಆ ಪರಿಣಾಮ ಕೆಟ್ಟದ್ದಾಗಿರಬಹುದು; ಒಳ್ಳೆಯದೂ ಆಗಿರಬಹುದು. ಉದಾಹರಣೆಗಾಗಿ: ಹಾಸ್ಯ, ಆಶ್ಚರ್ಯ ಈ ಮನೋಗುಣಗಳನ್ನು ಪ್ರಚೋದಿಸಲು ವಿಕಾರವೂ ವಿಚಿತ್ರವೂ ಅಪರಾಧಪೂರ್ಣವೂ ಆದ ವರ್ಣನೆಗಳನ್ನೊಳಗೊಂಡ ವಾಚನವಸ್ತು ಓದುಗರಲ್ಲಿ ಕ್ಷುಲ್ಲಕ ಭಾವನೆಗಳನ್ನು, ಅಪರಾಧ ಕಾರ್ಯಗಳನ್ನು ಎಸಗುವ ಚಾಳಿಯನ್ನು ಬೆಳೆಸಬಹುದು. ಗಹನವೂ ಗಂಭೀರವೂ ರಮಣೀಯವೂ ಆದ ಕೃತಿಗಳು ವ್ಯಕ್ತಿಯಲ್ಲಿ ವಿಷಯಜ್ಞಾನ, ಅಭಿಪ್ರಾಯ ಖಚಿತತೆ, ಧರ್ಮ, ತತ್ವನಿಷ್ಠೆ, ನ್ಯಾಯಪರತೆ, ಕಾರ್ಯತತ್ಪರತೆ, ಮಾನವೀಯ ಮನೋಧರ್ಮ, ಪ್ರಸನ್ನತೆ, ರಸಾನಂದ, ವಿವೇಕ, ಮುಕ್ತಿಪದ ಇತ್ಯಾದಿ ಲಕ್ಷಣಗಳನ್ನು ಪೋಷಿಸಬಲ್ಲವು.

ಬೇಕನ್ ಉವಾಚ:

ಆಧುನಿಕ ಪುಸ್ತಕ ಪ್ರಪಂಚದಲ್ಲಿ ಎಷ್ಟೊಂದು ಪುಸ್ತಕಗಳು? ಎಷ್ಟೊಂದು ವಿಷಯಗಳು?



ಎಷ್ಟೊಂದು ವಾಚನ ಸಾಮಗ್ರಿಗಳು? ಯಾವುದನ್ನು ಓದಬೇಕು? ಯಾವುದನ್ನು ಬಿಡಬೇಕು? ಯಾವುದನ್ನು ಮುಟ್ಟಬೇಕು? ಯಾವುದನ್ನು ಮೂಸಬೇಕು? ಈ ಪ್ರಶ್ನೆಗಳಿಗೆ ಸುಪ್ರಸಿದ್ಧ ಪ್ರಬಂಧಕಾರ ಫ್ರಾನ್ಸಿಸ್ ಬೇಕನ್ ಮಹಾಶಯರು ಉತ್ತರಿಸಿ ಉಪಕಾರ ಮಾಡಿದ್ದಾರೆ: "ಎಲ್ಲವನ್ನೂ ಓದಬೇಕಾಗಿಲ್ಲ. ಅವುಗಳಲ್ಲಿ ಆಯ್ಕೆ ಅಗತ್ಯ. ಕೆಲವೊಂದರ ಹಾಳೆಗಳನ್ನು ಮುಗುಚಿ ಹಾಕಿದರೆ ಸಾಕು; ಕೆಲವುಗಳ ಸಾರವನ್ನು ಬೇರೆಯವರಿಂದ ತಿಳಿದುಕೊಂಡರೆ ಸಾಕು; ಕೆಲವನ್ನಂತೂ ಆಮೂಲಾಗ್ರವಾಗಿ ಓದಿ ಗ್ರಹಿಸಬೇಕು" ನಿಜವಾದ ಓದುಗಾರಿಕೆಯ ಯಶಸ್ಸು ಅಡಗಿರುವುದು ಇಲ್ಲಿಯೇ. ಯಾವುದನ್ನು ಎಷ್ಟು ಓದಬೇಕು ಎಂದು ತೀರ್ಮಾನಿಸುವದರಲ್ಲಿಯೇ ಓದುಗ ಎಂಥವನೆಂಬುದು ಗೊತ್ತಾಗಿಬಿಡುತ್ತದೆ.

ಓದಿನ ಉದ್ದೇಶ

ಯಾವ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿ ಓದುವವನು ಎಂಬುದನ್ನು ಆಧಾರವಾಗಿಟ್ಟುಕೊಂಡು ಓದುಗಾರಿಕೆಯಲ್ಲಿ ಪ್ರಮುಖವಾಗಿ ನಾಲ್ಕು ಪ್ರಕಾರಗಳನ್ನು ಗುರುತಿಸಬಹುದು:

- **ಮನೋರಂಜಕ ಓದುಗಾರಿಕೆ:** ಮನೋರಂಜನೆಯೇ ಮುಖ್ಯ ಉದ್ದೇಶವಾಗಿರುವ ಓದುಗಾರಿಕೆಯನ್ನು 'ಮನೋರಂಜಕ ಓದುಗಾರಿಕೆ' ಎಂಬುದಾಗಿ ಕರೆಯಬಹುದು. ಸಾಮಾನ್ಯವಾಗಿ ಕತೆ, ಕಾದಂಬರಿ, ನಾಟಕ, ಮ್ಯಾಗಝಿನ್, ನಿಸರ್ಗ ಚಿತ್ರ, ಇತ್ಯಾದಿಗಳ ಓದುವಿಕೆ ಈ ಬಗೆಗೆ ಸೇರುತ್ತದೆ.

- **ಸಮಾಚಾರ ಸಂಗ್ರಹ ಓದುಗಾರಿಕೆ:** ದೇಶ-ವಿದೇಶಗಳಲ್ಲಿಯ ಸುದ್ದಿಗಳನ್ನು ತಿಳಿಯುವ ಉದ್ದೇಶದಿಂದ ಓದುವುದು 'ಸಮಾಚಾರ ಸಂಗ್ರಹ ಓದುಗಾರಿಕೆ'. ವೃತ್ತಪತ್ರಿಕೆ, ಜಾಹೀರಾತು, ತಿಳಿವಳಿಕೆ ಪತ್ರ, ಇವುಗಳ ಓದುವಿಕೆ ಈ ಪ್ರಕಾರಕ್ಕೆ ಸೇರಿದ್ದು.

- **ಜ್ಞಾನಾರ್ಜನೆ ಓದುಗಾರಿಕೆ:** ಸಾಹಿತ್ಯ, ಧರ್ಮ ವಿಜ್ಞಾನ, ತಂತ್ರಶಾಸ್ತ್ರ, ಮಾನವಿಕ ಇವೇ ಮುಂತಾದವುಗಳಿಗೆ ಸಂಬಂಧಿಸಿದ ಜ್ಞಾನವನ್ನು ತಿಳಿದುಕೊಳ್ಳುವುದಕ್ಕಾಗಿ ಕೈಗೊಳ್ಳುವ ಓದುಗಾರಿಕೆ.

- **ಚಿಕಿತ್ಸಾರೂಪಕ ಓದುಗಾರಿಕೆ:** ಮನೋರೋಗದಿಂದ ನರಳುವ ಕೆಲವು ರೋಗಿಗಳಿಗೆ ವಿಶಿಷ್ಟ ರೀತಿಯಲ್ಲಿ ಬರೆದು ಮುದ್ರಿಸಿದ ವಾಚನ ವಸ್ತುವನ್ನು ಕೊಟ್ಟು ಓದಿಸಿ ಆ ಮೂಲಕ ಅವರ ರೋಗ ನಿವಾರಣೆಗೆ ಮನೋರೋಗ ತಜ್ಞರು ಯತ್ನಿಸುವರು. ಇದು 'ಚಿಕಿತ್ಸಾರೂಪಕ ಓದುಗಾರಿಕೆ'.

ಹೀಗೆ ಓದುಗಾರಿಕೆಯ ಪ್ರಯೋಜನ-ಪರಿಣಾಮಗಳು ಓದುಗನ ರುಚಿ-ಅಭಿರುಚಿಗಳನ್ನು, ಅಗತ್ಯ-ಆವಶ್ಯಕತೆಗಳನ್ನು ಅವಲಂಬಿಸಿರುತ್ತದೆ.

ಯಾವ ಓದು ತ್ಯಾಜ್ಯ?

ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವಂತಹ ಪುಸ್ತಕ ಯಾವ ಕಾಲದಲ್ಲೂ ತ್ಯಾಜ್ಯವೇ. ಪುಸ್ತಕವೊಂದನ್ನು ಓದಿ ಸಹೃದಯ ಮುಖ ಸಿಂಡರಿಸಿದರೆ, ವಾಕರಿಸಿದರೆ, ಅಷ್ಟರ ಮಟ್ಟಿಗೆ ಅದು ಅಯಶಸ್ವಿ ಕೃತಿಯೆಂದು ಭಾವಿಸಬೇಕಾಗುತ್ತದೆ. ವ್ಯಕ್ತಿಯ ಮಾನಸಿಕ ಆರೋಗ್ಯದ ಕಡೆಗೆ ಯಾವುದೇ ಸಾಹಿತ್ಯ ಎಚ್ಚರವಹಿಸುವುದು ಅವಶ್ಯ. "ಜನ ಬದುಕಬೇಕೆಂದು ಕಾವ್ಯ ಬರೆಯುತ್ತೇನೆ" ಎಂದು ರಾಘವಾಂಕ ಹೇಳಿದ್ದು ಕೂಡ ಈ ದೃಷ್ಟಿಯಿಂದಲೇ. ಹೃದಯದ ಸಮಸ್ತ ಕೊಳಕನ್ನು ಶುದ್ಧಗೊಳಿಸಿ ಪರಿಷ್ಕರಿಸಿ ಸುಸಂಸ್ಕೃತವನ್ನಾಗಿ ಮಾಡುವುದರ ಮೂಲಕ 'ಶಿವ'ನನ್ನು ಆವಾಹನೆ ಮಾಡುವುದೇ ಎಲ್ಲ ಉತ್ತಮ ಕೃತಿಗಳ ಗುರಿಯಾಗಿದೆ. ಉತ್ತಮ ಕೃತಿಗಳು ಯಾವವು? ಅವು ಎಲ್ಲಿ ಲಭ್ಯ? ಇವೇ ಮುಂತಾದ ಮಾಹಿತಿಗಳನ್ನು ಸಚ್ಚಾರಿತ್ರ್ಯ ಹಾಗೂ ಸುಜ್ಞಾನವನ್ನು ಗರ್ಭೀಕರಿಸಿಕೊಂಡಿರುವ ಮಿತ್ರರ ಮುಖೇನ ಪಡೆದುಕೊಳ್ಳುವುದು ಅವಶ್ಯ. ಮಿತ್ರ ಎಂದರೆ ಮಾರ್ಗದರ್ಶಿ.

ಹಸನಾದ ಓದು

ಗಿಳಿಯೋದಿನಿಂದ ಫಲವಿಲ್ಲ. ಓದುವಾಗ ಅರ್ಥ ಗ್ರಹಿಸಿಕೊಂಡು ಓದಬೇಕು. ಶೀಘ್ರ ಅರ್ಥಗ್ರಹಣ ಶೀಘ್ರವಾಚನಕ್ಕೆ ಕಾರಣವಾಗು

ತ್ತದೆ. ಬೋರ್ಗಲ್ಲ ಮೇಲೆ ಮಳೆಯ ನೀರು ಉರುಳಿ ಹೋದಂತೆ ಓದುವುದರಲ್ಲಿ ಯಾವ ಸಿದ್ಧಿಯೂ ಇಲ್ಲ. ಇಂಥ ಓದಿನಲ್ಲಿ ಭಾವಭಾವನೆಗಳ ಗಾಢ ಆಲೋಚನೆಗಳಿರುವುದಿಲ್ಲ. ಓದುವುದು ಇಂಥವರಿಗೆ ಕಣ್ಣಿನ ಕ್ರಿಯೆಯೇ ಹೊರತು ಮನಸ್ಸಿನ ಪ್ರಕ್ರಿಯೆಯಲ್ಲ. ಕೂಚುಭಟ್ಟನನ್ನಾಗಿಸುವ ಓದುಗಾರಿಕೆಯಿಂದ ಪ್ರಯೋಜನವಿಲ್ಲ. ಇರುವ ಕೆಲಸವ ಬಿಟ್ಟು ಓದುವುದರಲ್ಲಿಯೇ ಹೆಚ್ಚು ಹೊತ್ತನ್ನು ಕಳೆಯುವುದು ಸೋಮಾರಿತನದ ಪರಮ ಲಕ್ಷಣ. ಓದುಗಾರಿಕೆ ಭೂಷಣವೆಂದು ಅದನ್ನು ಅತಿಯಾಗಿ ಬಳಸುವುದು ವಿದ್ವತ್ತಿನ ಸೋಗು. ಓದನ್ನೇ ಆಧಾರವಾಗಿಟ್ಟುಕೊಂಡು ಅದರ ನಿಯಮಗಳಿಂದಲೇ ನಿರ್ಣಯ ಕೊಡುವುದು ಪಂಡಿತರ ಮನೋಧರ್ಮ. ಅಂಧಶ್ರದ್ಧೆ, ಗ್ರಂಥ ದಾಕ್ಷಿಣ್ಯಗಳಿಗಾಗಿ ಓದುವುದು ಆತ್ಮ ಘಾತಕ ಕಾರ್ಯ. ಕೇವಲ ಖ್ಯಾತಿಗಾಗಿ, ತೋರಿಕೆಗಾಗಿ, ಪ್ರತಿಷೇಧಕ್ಕಾಗಿ, ಖಂಡನೆಗಾಗಿ ಓದುವವರನ್ನು ಶಾರದೆ ಮೆಚ್ಚಲಾರಳು. ಕ್ರಿಯಾತ್ಮಕವಾದ ಓದು ಸರ್ವಮಾನ್ಯ ಸರ್ವಗ್ರಾಹ್ಯ. ಅಲ್ಲಿ ಸೃಜನಶೀಲತೆ ಉಸಿರಾಡುತ್ತದೆ, ಬೆಳಕು ಪ್ರತಿಫಲಿಸುತ್ತದೆ. ಇಂಥ ಓದುಗರು ಪ್ರತ್ಯುತ್ಪನ್ನ ಮತಿಗಳು.

ಹಸನಾದ ಓದು ಹೊಸ ಅನುಭವಕ್ಕೆ ಪ್ರೇರಣೆ ನೀಡುತ್ತದೆ. ಅದರಿಂದ ಬುದ್ಧಿ ಶಕ್ತಿ ಬೆಳೆಯುತ್ತದೆ, ಚುರುಕಾಗುತ್ತದೆ. ಜ್ಞಾನ ದಿಗಂತ ವಿಸ್ತರಿಸುತ್ತದೆ. ಸುಖ-ಸಂತೋಷಗಳು ವರ್ಧಿಸುತ್ತವೆ. ಆದರೆ ಓದಿದ್ದನ್ನು ಅರಗಿಸಿಕೊಂಡು ಅನುಷ್ಠಾನದಲ್ಲಿ ತಂದಾಗ ಮಾತ್ರ ಸರ್ವಫಲಗಳೂ ದೊರೆಯುತ್ತವೆ. ಅರಗಿಸಿಕೊಳ್ಳದ ಓದು ಗೊಬ್ಬಳಿ ಬೀಜ ನುಂಗಿದ ಆಡಿನಂತೆ. 'ಖ್ಯಾತಿಯ ಆಶೆಯಿಲ್ಲದೆ, ದೀನನಾಗಿ ಶ್ರದ್ಧೆಯಿಂದ ಓದು. ಆಗಲೇ ಅದರಿಂದ ಲಾಭ' ಎನ್ನುತ್ತಾರೆ ಥಾಮಸ್ ಕೆಂಪಿಸ್'. Read with your heart. Then you will understand ಎಂಬ ಪಾಂಡಿಚೇರಿಯ ಶ್ರೀಮಾತೆಯ ಮಾತನ್ನು ಸದಾ ನೆನಪಿನಲ್ಲಿಟ್ಟುಕೊಂಡು ಚಪ್ಪರಿಸಬೇಕು.

ಸಿನೆಮಾ, ರೇಡಿಯೋ, ದೂರದರ್ಶನ, ಮೈಕ್ರೊಫಿಲ್ಮ್, ಕ್ಯಾಸೆಟ್, ಕಂಪ್ಯೂಟರ ಇವೆಲ್ಲ ಪುಸ್ತಕದ ಸ್ಪರ್ಧಿಗಳು, ಪ್ರಭಾವಶಾಲಿ ಸ್ಪರ್ಧಿಗಳು. ಆದರೂ ಪುಸ್ತಕಗಳಿಗೆ ಚ್ಯುತಿಯಿಲ್ಲ. ಇತರ ಯಾವ ಮಾಧ್ಯಮವೂ ಪುಸ್ತಕಗಳ ಹಾಗೆ ಸ್ವತಂತ್ರವಾದುವಲ್ಲ; ವೈಯಕ್ತಿಕವಾದುವೂ ಅಲ್ಲ. ಯಾವ ಶತಮಾನದಲ್ಲಿಯೂ ಪುಸ್ತಕ ಕೈಯಿಂದ ಕಳೆದುಕೊಳ್ಳುವುದಿಲ್ಲ ಎನ್ನುವುದು ಸಮಾಧಾನದ ಮಾತು. ●

★ ಯಶಸ್ಸಿನ ಗುಟ್ಟು :

"ಮಹಾ ದಂಡನಾಯಕ ಗ್ರಾಂಟ್ ಶುದ್ಧ ಕುಡುಕ. ಆತ ಯಾವಾಗಲೂ ಕುಡಿದು ಕೆಂಗಣ್ಣನಾಗಿಯೇ ಇರುತ್ತಾನೆ" ಎಂದು ಒಬ್ಬ ಪಾನವಿರೋಧಿ ಪ್ರಭಾವೀ ರಾಜಕಾರಣಿ ಅಬ್ರಹಮ್ ಲಿಂಕನ್ ಹತ್ತಿರ ದೂರು ಹೇಳಿದ. "ಹಾಗೋ! ಮಹಾದಂಡನಾಯಕ ಕುಡಿಯುತ್ತಾನೋ?" "ಹೌದು, ಬೇಕಿದ್ದರೆ ಸಾಕಷ್ಟು ಪುರಾವೆಗಳನ್ನು ಒದಗಿಸಬಲ್ಲೆ" ಉದ್ವೇಗದಿಂದ ಹೇಳಿದ ಪಾನ ವಿರೋಧಿ. "ಆ ತೊಂದರೆ ನಿನಗೆ ಬೇಡ, ನಿನ್ನನ್ನು ನಂಬುತ್ತೇನೆ. ಆದರೆ ಒಂದು ಉಪಕಾರ ಮಾಡು. ಆತನ ಯಶಸ್ಸಿನ ಗುಟ್ಟೇನೋ ಈಗ ಗೊತ್ತಾಯಿತು. ಆತ ಕುಡಿಯುವ ವಿಸ್ಕಿ ಯಾವ ತಯಾರಿಕೆಯೋ ದಯವಿಟ್ಟು ತಿಳಿಸು. ನಮ್ಮ ದಂಡನಾಯಕರಿಗೆಲ್ಲ ಅಂಥದ್ದನ್ನೇ ಒಂದು ಪೀಪಾಯಿ ಸರಬರಾಜು ಮಾಡೋಣ" ಎಂದ ಹುಸಿನಗುತ್ತ ಲಿಂಕನ್.

(ಸಂಗ್ರಹ) ಎಂ.ಶಾರದಾ ನಾಗಭೂಷಣ

ಕೆ.ಟಿ. ಪಾಂಡುರಂಗಿ

ಕೈ ಕೆಲಸ-ಬುದ್ಧಿಯ ಕೆಲಸ

ಮನುಷ್ಯನ ಜೀವನವು ಸುಗಮವಾಗಿ ಸಾಗಬೇಕಾದರೆ ಕೈಕೆಲಸ ಬುದ್ಧಿಯ ಕೆಲಸ ಎರಡೂ ಅಗತ್ಯ. ಹಿಂದಿನ ಕಾಲದಲ್ಲಿ ಕೈಕೆಲಸಗಳು ಹೆಚ್ಚಾಗಿದ್ದು ಬುದ್ಧಿಯ ಕೆಲಸಗಳು ಕಡಿಮೆಯಾಗಿದ್ದವು. ಆದರೆ ಈಗ ಕೈಕೆಲಸಗಳು ಕಡಿಮೆಯಾಗುತ್ತಿವೆ ಮಾತ್ರವಲ್ಲ. ಇಂದಿನ ಕೈಕೆಲಸಗಳಿಗೂ ಬುದ್ಧಿಯ ಅಗತ್ಯ ಹೆಚ್ಚಾಗುತ್ತಿದೆ. ಇದರಂತೆಯೇ ಇಂದಿನ ಬುದ್ಧಿಯ ಕೆಲಸಗಳಿಗೂ ಕೈಕೆಲಸ ಸೇರಿಕೊಳ್ಳುತ್ತಿದೆ. ಇದಕ್ಕೆ ಮುಖ್ಯ ಕಾರಣ ಈ ಕೈ ಮತ್ತು ಬುದ್ಧಿಗಳ ನಡುವೆ ಯಂತ್ರಗಳು ಬಂದು ಸೇರಿಕೊಂಡಿರುವುದು.

ಇಂದು ಅನೇಕ ಕೈಕೆಲಸಗಳು ಯಂತ್ರಗಳಿಗೆ ವರ್ಗಾಯಿಸಲ್ಪಟ್ಟಿವೆ. ಆದರೆ ಈ ಯಂತ್ರಗಳನ್ನು ಉಪಯೋಗಿಸುವಾಗ ಇದು ಕೈಕೆಲಸವಾಗಿದ್ದರೂ ಬುದ್ಧಿಯ ಉಪಯೋಗ ಅಗತ್ಯವಾಗಿದೆ. ಇಂದು ಒಂದಿಲ್ಲ ಒಂದು ರೀತಿಯಿಂದ ಯಂತ್ರದ ಪ್ರವೇಶ ಇಲ್ಲದ ಕೈಕೆಲಸವೇ ಇಲ್ಲ. ಕೃಷಿ, ಮನೆಕಟ್ಟುವುದು, ಬಟ್ಟೆ ತಯಾರಿಸುವುದು, ಒಗೆಯುವುದು, ಅಡಿಗೆ, ಬಡಿಗತನ ಹೀಗೆ ಎಲ್ಲ ಕೈಕೆಲಸಗಳಲ್ಲಿಯೂ ಯಂತ್ರಗಳು ಸೇರಿಕೊಂಡಿವೆ. ಈ ಯಂತ್ರಗಳನ್ನು ಉಪಯೋಗಿಸಲು ಕೆಲ ಮಟ್ಟಿಗೆ ಬುದ್ಧಿಯು ಅಗತ್ಯವಾಗಿದೆ.

ಇದರಂತೆಯೇ ಓದುವುದು ಬರೆಯುವುದು ಎಣಿಕೆ ಮಾಡುವುದು ನೆನಪಿಡುವುದು ವರ್ಗೀಕರಿಸುವುದು ಇತ್ಯಾದಿ ಅನೇಕ ಬುದ್ಧಿಯ ಕೆಲಸಗಳಿಗೆ ಇಂದು ಯಂತ್ರಗಳನ್ನು ಅಳವಡಿಸಲಾಗಿದೆ. ಈ ಯಂತ್ರಗಳನ್ನು ಉಪಯೋಗಿಸುವುದು ಕೆಲ ಮಟ್ಟಿಗೆ ಕೈ ಕೆಲಸವಾಗಿದೆ.

ಹಿಂದಿನ ಕಾಲದಲ್ಲಿ ಕೈಕೆಲಸ ಮತ್ತು ಬುದ್ಧಿಯ ಕೆಲಸದವರಿಗೆ ದೊರೆಯುವ ಸಂಭಾವನೆಯಲ್ಲಿ ಬಹಳ ಅಂತರವಿರುತ್ತಿತ್ತು. ಆದರೆ ಈಗ ಅದು ಕಡಿಮೆಯಾಗುತ್ತಿದೆ. ಅನೇಕ ಕ್ಷೇತ್ರಗಳಲ್ಲಿ ಕೈಕೆಲಸದವರ ಸಂಬಳ ಬುದ್ಧಿಯ ಕೆಲಸದವರಿಗಿಂತ ಹೆಚ್ಚಾಗುತ್ತಿದೆ. ಹಿಂದಿನ ಕಾಲದಲ್ಲಿ ಬುದ್ಧಿಯ ಕೆಲಸದವರಿಗೆ ಕೈಕೆಲಸದವರಿಗಿಂತ ಹೆಚ್ಚು ಸಾಮಾಜಿಕ ಮನ್ನಣೆಯಿರುತ್ತಿತ್ತು. ಆದರೆ ಈಗ ಕೈಕೆಲಸದವರು ಹೆಚ್ಚು ಸ್ವಾವಲಂಬಿಗಳೂ ಆರ್ಥಿಕವಾಗಿ ಹೆಚ್ಚು ಸ್ವತಂತ್ರರೂ ಆಗಿರುವುದರಿಂದ ಅವರಿಗೇ ಮನ್ನಣೆ ಹೆಚ್ಚುತ್ತಿದೆ.

ಕೈಕೆಲಸವೂ ಅಲ್ಲ ಬುದ್ಧಿಯ ಕೆಲಸವೂ ಅಲ್ಲದ ದಲ್ಲಾಳಿಗಳ ಹೊಸದೊಂದು ವರ್ಗ ಇಂದು ನಿರ್ಮಾಣವಾಗುತ್ತಿದೆ. ಅಲ್ಲದೆ ಕೇವಲ ಹಣವನ್ನು ಮಾತ್ರ ಒದಗಿಸಿ ಹಣದ ಲಾಭವನ್ನು ಪಡೆಯುವ ವರ್ಗವೂ ಒಂದು ಉಂಟಾಗಿದೆ. ಇವರೂ ಒಂದು ರೀತಿಯ ಬುದ್ಧಿಯ ಕೆಲಸದವರಾದರೂ ಇವರು ಯಾವುದೇ ವಿಷಯದಲ್ಲಿ ತಜ್ಞರಲ್ಲ. ಇವರಲ್ಲಿ ಅನೇಕರು ನಿರಕ್ಷರಿಗಳು. ಸಂಬಳ ಅಥವಾ ಲಾಭದ ದೃಷ್ಟಿಯಿಂದ ನೋಡಿದರೆ ಇಂದು ಇವರೇ ಹೆಚ್ಚು ಲಾಭ ಪಡೆಯುವವರು. ●

ಇಂಗ್ಲೆಂಡಿನ ನತದೃಷ್ಟ ರಾಜಕುಮಾರರು

● ರೇಣುಕ

ರಾಜಕುಮಾರನಾಗಿಯೋ ಅಥವಾ ರಾಜಕುಮಾರಿಯಾಗಿಯೋ ಹುಟ್ಟುವುದು ಪೂರ್ವಜನ್ಮದ ಸುಕೃತವೆಂಬುದು ಬಹುಮಂದಿಯ ಕಲ್ಪನೆ. ವಾಸ್ತವಿಕವಾಗಿ ಅದು ಪೂರ್ಣ ಸತ್ಯವೇನಲ್ಲ. ಎಷ್ಟೋ ಮಂದಿ ರಾಜವಂಶದಲ್ಲಿ ಜನಿಸಿದವರು ಅಧಿಕಾರ ದಾಹದ ಕುತಂತ್ರಿಗಳ ಜಾಲದಿಂದಾಗಿ ಜೀವನದಲ್ಲಿ ದುರ್ಗತಿಗೀಡಾದ ಅನೇಕ ಪ್ರಸಂಗಗಳು ಇತಿಹಾಸದ ಪುಟಗಳಲ್ಲಿ ಅಡಗಿ ಹೋಗಿವೆ. ಇಂತಹ ದುರ್ಘಟನೆಯೊಂದು ಹದಿನೈದನೇ ಶತಮಾನದಲ್ಲಿ ಇಂಗ್ಲೆಂಡಿನ ರಾಜಮನೆತನದಲ್ಲಿ ಸಂಭವಿಸಿತು.

ಕ್ರಿ.ಶ. 1483ರಲ್ಲಿ ಇಂಗ್ಲೆಂಡಿನ ರಾಜ ನಾಲ್ಕನೇ ಎಡ್ವರ್ಡ್ ಸತ್ತಾಗ ಅವನ ಇಬ್ಬರು ಮಕ್ಕಳಾದ ಎಡ್ವರ್ಡ್ (ಐದನೆಯವ) ಮತ್ತು ರಿಚರ್ಡ್ ಇನ್ನೂ ಹಸುಳೆಗಳು. ಇವರಿಬ್ಬರಲ್ಲಿ ಹಿರಿಯವನಾದ ಎಡ್ವರ್ಡ್ ಇಂಗ್ಲೆಂಡಿನ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಬೇಕಿದ್ದವನು. ಆದರೆ ಈ ಮಕ್ಕಳಿಗೆ ಚಿಕ್ಕಪ್ಪನೊಬ್ಬನಿದ್ದ. ಆತನ ಹೆಸರು ರಿಚರ್ಡ್ (ಮೂರನೆಯವ). ಈತ ಮಹಾ ಕುತಂತ್ರಿ ಮತ್ತು ಕ್ರೂರಿ.

ಮೂರನೆಯ ರಿಚರ್ಡ್‌ನು ತನ್ನ ಅಣ್ಣ ನಾಲ್ಕನೆಯ ಎಡ್ವರ್ಡ್ ಸತ್ತೊಡನೆ ಆತನ ಮಕ್ಕಳಿಬ್ಬರೂ ಅಪ್ರಾಪ್ತ ವಯಸ್ಕರೆಂಬ ನೆಪದಿಂದ ತಾನೇ ಆಡಳಿತ ಸೂತ್ರಗಳನ್ನು ವಹಿಸಿಕೊಂಡ. ಅಣ್ಣನ ಮಕ್ಕಳಿಬ್ಬರನ್ನು ಲಂಡನ್ನಿನ ಕುಪ್ರಸಿದ್ಧವಾದ ಗೋಪುರದ ಅರಮನೆಯಲ್ಲಿರಿಸಿದನು. ರಾಜಕುಮಾರರು ಪ್ರಾಪ್ತ ವಯಸ್ಕರಾಗಿ ರಾಜ್ಯದ ಆಡಳಿತ ಸೂತ್ರವನ್ನು ವಹಿಸಿಕೊಳ್ಳಲು ಸಮರ್ಥರಾಗುವವರೆಗೂ ಸುರಕ್ಷತೆಯ ದೃಷ್ಟಿಯಿಂದ ಅಲ್ಲಿರಿಸಿರುವುದಾಗಿ ಜನರಿಗೆ ವಿವರಣೆ ಕೊಡುತ್ತಿದ್ದನು. ಇಂಗ್ಲೆಂಡಿನ ಸಿಂಹಾಸನಕ್ಕೆ ಉತ್ತರಾಧಿಕಾರಿಗಳಾದ ಆ ಬಾಲಕರನ್ನು ಮುಗಿಸುವುದೇ ಅವನ ನಿಜ ಉದ್ದೇಶವಾಗಿತ್ತು.

ರಿಚರ್ಡ್ ಚಿಕ್ಕಪ್ಪನು ರಾಜಕುಮಾರರೊಡನೆ ಜೇನು ಸೂಸುವಂತೆ ಸಿಹಿಯಾಗಿ ಮಾತನಾಡುತ್ತಿದ್ದ. ರಾಜಕುಮಾರರನ್ನು ಅತಿಯಾಗಿ ಪ್ರೀತಿಸುವಂತೆ ನಟಿಸುತ್ತಿದ್ದ. ಆದರೂ ಆ ಬಾಲಕರಿಗೆ ಚಿಕ್ಕಪ್ಪನನ್ನು ಕಂಡರೆ ಆದರವಿರಲಿಲ್ಲ. ಅವನನ್ನು ಕಂಡರೆ ಬೆದರುತ್ತಿದ್ದರು. ಅವನು ತೋರುತ್ತಿರುವುದು ಕೃತ್ರಿಮ ಪ್ರೀತಿಯೆಂಬುದು ಆ ಮುಗ್ಧ ಹಸುಳೆಗಳ ಹೃದಯಕ್ಕೆ ಹೇಗೋ ಭಾಸವಾಗಿತ್ತು.

ರಾತ್ರಿಯ ಸಮಯದಲ್ಲಿ ರಾಜಕುಮಾರರನ್ನಿರಿಸಿದ್ದ ಗೋಪುರದ ಅರಮನೆಯ ಭಾಗದಲ್ಲಿ ಮೊಂಬತ್ತಿಯೊಂದನ್ನು ಮಾತ್ರ ಉರಿಸಲಾಗುತ್ತಿತ್ತು. ಸಮಯಕ್ಕೆ ಸರಿಯಾಗಿ ರಾಜಕುಮಾರರಿಗೆ ಪರಿಚಾರಕನೊಬ್ಬ ಊಟೋಪಚಾರಗಳನ್ನು ಮಾಡಿಸುತ್ತಿದ್ದ. ಉಳಿದ ಸಮಯದಲ್ಲಿ ಬಾಲಕರಿಬ್ಬರು ಯಾರ ಸಂಪರ್ಕವೂ ಇಲ್ಲದೆ ಆ ಭೂತಬಂಗಲೆಯಲ್ಲಿ ಭಯದಿಂದ ದಿನಗಳನ್ನು ತಳ್ಳುತ್ತಿದ್ದರು.

ಕರಾಳ ಕೃತ್ಯಗಳ ಕಾರಸ್ಥಾನವೆಂದು ಕುಖ್ಯಾತವಾಗಿದ್ದ ಆ ಅರಮನೆಗೆ ಎತ್ತರವಾದ ನಾಲ್ಕು ಗೋಪುರಗಳಿದ್ದವು. ರಾಜಮನೆತನದವರು ಅರಮನೆಯನ್ನು ತೆರವು ಮಾಡಿ ಬಹಳ ಕಾಲವಾಗಿದ್ದ ಕಾರಣ ಅದು ಬಾವಲಿಗಳ ಮತ್ತು ಪಾರಿವಾಳಗಳ ಆವಾಸಸ್ಥಾನವಾಗಿತ್ತು. ಅರಮನೆಯೊಳಗೆ ಅನೇಕ ಗುಪ್ತ ಸುರಂಗ ಮಾರ್ಗಗಳಿದ್ದವು. ನಾಲ್ಕನೇ ಹೆನ್ರಿ, ಡ್ಯೂಕ್ ಸಾಮರ್‌ಸೆಟ್, ಡ್ಯೂಕ್ ನಾರ್ತಂಬರ್‌ಲಾಂಡ್ ಮೊದ

ಲಾದ ಅನೇಕ ಇಂಗ್ಲೆಂಡಿನ ರಾಜಮನೆತನದ ಪ್ರತಿಷ್ಠಿತ ವ್ಯಕ್ತಿಗಳು ಈ ಗೋಪುರದ ಅರಮನೆಯಲ್ಲಿ ಕೊಲೆಗೀಡಾಗಿದ್ದರು. ಅವರೆಲ್ಲರ ಪ್ರೇತಗಳು ಅಲ್ಲಿ ಸದಾ ಸುಳಿದಾಡುತ್ತಿರುವವೆಂಬ ನಂಬಿಕೆ ಜನರಲ್ಲಿ ಬಲವಾಗಿ ಬೇರೂರಿತ್ತು. ಅಂತಹ ಗೋಪುರದ ಭಾಗವೊಂದರಲ್ಲಿ ವಾಸಿಸುತ್ತಿದ್ದ ರಾಜಕುಮಾರರು ಪಾರಿವಾಳಗಳ ವಿಚಿತ್ರ ಗುಟುರಿಕೆಗೆ ರಾತ್ರಿಯೆಲ್ಲ ಎಚ್ಚೆತ್ತು ಭಯದಿಂದ ತತ್ತರಿಸುತ್ತಿದ್ದರು.

ಒಂದು ದಿನ ರಿಚರ್ಡ್ ಚಿಕ್ಕಪ್ಪನು ರಾಜಕುಮಾರರನ್ನು ನೋಡಲು ಬಂದಾಗ ರಾಜಕುಮಾರ ಎಡ್ವರ್ಡ್‌ನು "ಚಿಕ್ಕಪ್ಪ, ಈ ಕತ್ತಲ ಗೋಪುರದಲ್ಲಿ ವಾಸಿಸಲು ನಮಗೆ ಬಹಳ ಭಯವಾಗುತ್ತದೆ. ನಮ್ಮನ್ನು ಇಲ್ಲಿಂದ ಹೊರಗೆ ಕರೆದುಕೊಂಡು ಹೋಗಿ" ಎಂದು ಬಿಕ್ಕಿ ಬಿಕ್ಕಿ ಅತ್ತನು.

"ರಾತ್ರಿಯಲ್ಲಿ ಭೂತಗಳು ಬಂದು ನಮ್ಮನ್ನು ಹೆದರಿಸುತ್ತವೆ. ಖಂಡಿತ ಇಲ್ಲಿ ನಾವಿರುವುದಿಲ್ಲ" ಎಂದು ರಿಚರ್ಡ್ ರಾಜಕುಮಾರನು ಗೋಳಿಟ್ಟನು. ಅದಕ್ಕುತ್ತರವಾಗಿ ಅವರ ಚಿಕ್ಕಪ್ಪನು ನಕ್ಕು, "ಮಕ್ಕಳೇ, ಇಲ್ಲಿ ಭಯ ಪಡಲು ಯಾವ ಕಾರಣವೂ ಇಲ್ಲ. ಅರಮನೆಯ ಸುತ್ತ ಬಿಗಿಯಾದ ಕಾವಲಿದೆ. ಎಲ್ಲಿಗಿಂಥ ಇಲ್ಲಿ ನೀವು ಹೆಚ್ಚು ಸುರಕ್ಷಿತರಾಗಿದ್ದೀರಿ" ಎಂದು ಮಕ್ಕಳನ್ನು ರಮಿಸಿ ಅಲ್ಲಿಂದ ಹೊರಟು ಹೋದ. ಅಸಹಾಯಕರಾದ ಆ ಹಸುಳೆಗಳಿಬ್ಬರೂ ಒಬ್ಬರನ್ನೊಬ್ಬರು ತಬ್ಬಿಕೊಂಡು ಗೋಳಿಡುತ್ತಾ ನಿದ್ದೆ ಹೋದರು.

ಒಂದು ದಿನ ಬೆಳಗಾದಾಗ ಪರಿಚಾರಕನೊಬ್ಬ ರಾಜಕುಮಾರರನ್ನು ಎಚ್ಚರಗೊಳಿಸಲು ಬಂದಾಗ ಅವರು ಹಾಸಿಗೆಯಲ್ಲಿರಲಿಲ್ಲ. ಗೋಪುರದ ಅರಮನೆಯ ಮೂಲೆಮೂಲೆಗಳನ್ನು ಶೋಧಿಸಿದರೂ ರಾಜಕುಮಾರರ ಸುಳಿವು ದೊರೆಯಲಿಲ್ಲ.

ರಾಜಕುಮಾರರ ಚಿಕ್ಕಪ್ಪನು ಕಾಣೆಯಾದ ಮಕ್ಕಳನ್ನು ಹುಡುಕಿಸಲು ದೇಶದ ನಾನಾ ಭಾಗಗಳಿಗೆ ಸಿಬ್ಬಂದಿಯನ್ನು ಕಳುಹಿಸಿದ. ಕೊನೆಗೂ ರಾಜಕುಮಾರರು ಪತ್ತೆಯಾಗಲಿಲ್ಲ. ತನ್ನ ಅಣ್ಣನ ಮಕ್ಕಳು ಹಠಾತ್ತಾಗಿ ಕಣ್ಮರೆಯಾದುದಕ್ಕೆ ಸಂಬಂಧ ಕಲ್ಪಿಸಿ ರಾಜಮನೆತನದ ತನ್ನ ಹಲವಾರು ಮಂದಿ ವೈರಿಗಳನ್ನು ಹಿಡಿದು ತರಿಸಿ ವಿಚಾರಣೆಯ ನಾಟಕ ನಡೆಸಿ ಅದೇ ಗೋಪುರದ ಅರಮನೆಯ ಗೋಪ್ಯ ಸ್ಥಳದಲ್ಲಿ ಅವರನ್ನು ವಧೆ ಮಾಡಿಸಿದ.

ಸಿಂಹಾಸನವನ್ನೇರುವ ಆಕಾಂಕ್ಷೆಯಿಂದ ರಿಚರ್ಡ್‌ನೇ ತನ್ನ ಅಣ್ಣನ ಮಕ್ಕಳನ್ನು ಕೊಲೆ ಮಾಡಿಸಿರಬಹುದೆಂಬ ವದಂತಿ ಇಂಗ್ಲೆಂಡಿನ ಜನರಲ್ಲಿ ಹಬ್ಬಿತ್ತು. ಆದರೆ ಕ್ರೂರ ಸ್ವಭಾವದವನಾದ ಆತನಿಗೆ ಎದುರು ಬೀಳಲು ಧೈರ್ಯದಿಂದ ಯಾರೂ ಮುಂದೆ ಬರಲಿಲ್ಲ.

ಸಿಂಹಾಸನವನ್ನೇರುವ ರಿಚರ್ಡ್‌ನ ದುರಾಕಾಂಕ್ಷೆಯೇನೋ ಈಡೇರಿತು. ಆದರೆ ಆತ ಸಿಂಹಾಸನವನ್ನು ಬಹು ಕಾಲ ಉಳಿಸಿಕೊಳ್ಳಲಾರದಾದ. ಮೂರನೇ ರಿಚರ್ಡ್‌ನ ಎರಡು ವರ್ಷಗಳ ಅಲ್ಪ ಕಾಲಾವಧಿಯ (ಕ್ರಿ.ಶ. 1483-1485) ಆಡಳಿತ ಅರಾಜಕತೆಯಿಂದ ಕೂಡಿತ್ತು. ಇವನ ದುರಾಡಳಿತವನ್ನು ಸಹಿಸಿ ಸಾಕಾದ ದೇಶದ ಜನ ತಿರುಗಿ ಬಿದ್ದು ಬಂಡೆದ್ದರು. ಕ್ರಿ.ಶ. 1485ರಲ್ಲಿ ನಡೆದ ಅಂತರ್ಯುದ್ಧದಲ್ಲಿ ರಿಚರ್ಡ್ ದೊರೆ ಹತನಾದ.

ಇನ್ನೂರು ವರ್ಷಗಳ ನಂತರ ಒಂದು ದಿನ ಕೆಲಸಗಾರರು ಗೋಪುರದ ಅರಮನೆಯಲ್ಲಿ ಸುರಂಗ ಮಾರ್ಗವೊಂದರ ದುರಸ್ತಿ ಕಾರ್ಯದಲ್ಲಿ ತೊಡಗಿದ್ದರು. ಸುರಂಗ ಮಾರ್ಗದ ಪಾವಟಿಗೆಯೊಂದನ್ನು ಕಿತ್ತಾಗ ಅದರಡಿಯಲ್ಲಿ ಒಂದು ಪೆಟ್ಟಿಗೆ ಕಂಡು ಬಂತು. ಪೆಟ್ಟಿಗೆಯನ್ನು ತೆರೆದಾಗ ಅದರೊಳಗೆ ಇಬ್ಬರು ಚಿಕ್ಕ ಮಕ್ಕಳ ಅಸ್ಥಿಪಂಜರಗಳು ದೊರೆತವು. ಕಾಣೆಯಾದ ನತದೃಷ್ಟ ರಾಜಕುಮಾರರಿಬ್ಬರನ್ನು ಕೊಲೆ ಮಾಡಿ ಅವರ ಅಸ್ಥಿಗಳನ್ನು ರಿಚರ್ಡ್ ಚಿಕ್ಕಪ್ಪ ಪೆಟ್ಟಿಗೆಯಲ್ಲಿ ಅಡಗಿಸಿಟ್ಟಿದ್ದ. (ಆಧಾರ) ●


ಚಂದ್ರಲೋಕದಲ್ಲಿ ಮಾತಾದೀನ್

ಇಂಗ್ಲೀಷ್ ಮೂಲ : ಹರಿಶಂಕರ ಪರಸಾಯಿ
ಕನ್ನಡಕ್ಕೆ : ಸೊಂದಲಗೆರೆ ಲಕ್ಷ್ಮೀಪತಿ



ವಿಜ್ಞಾನಿಗಳು ಚಂದ್ರನಲ್ಲಿ ಜೀವರಾಶಿ ಇಲ್ಲವೆಂದು ಹೇಳುತ್ತಾರೆ. ಆದರೆ ಇವರು ಸುಳ್ಳಿನ ಕಂತೆಯನ್ನು ಹೊಸೆಯುವವರು ಎಂದು ವಾದಿಸುತ್ತಿದ್ದ ಹಿರಿಯ ಪೊಲೀಸ್ ಇನ್ಸ್‌ಪೆಕ್ಟರ್ ಮಟಾಧಿನ್ (ಈತನನ್ನು ಇಲಾಖೆಯಲ್ಲಿ ವಿಶೇಷವಾಗಿ ಎಂ.ಡಿ. ಸಾಬ್ ಎಂದು ಕರೆಯುವುದು ವಾಡಿಕೆ.) ಅವನ ಪ್ರಕಾರ ಚಂದ್ರ ನಮ್ಮನ್ನು ಪೂರ್ಣವಾಗಿ ಹೋಲುವ ಮಾನವರ ಬೀಡು.

ಇನ್ಸ್‌ಪೆಕ್ಟರ್ ಮಟಾಧಿನ್‌ನ ಅಭಿಪ್ರಾಯಕ್ಕಿಂತ ಉತ್ತಮ ವಾದವನ್ನು ವಿಜ್ಞಾನಿಗಳು ಈ ವಿಷಯದಲ್ಲಿ ಮಂಡಿಸಲಾಗಲಿಲ್ಲ. ಅವನು ಸದಾ ಬೇರೆಯವರನ್ನು ಮುಖಭಂಗ ಮಾಡುತ್ತಿದ್ದ.



ಉದಾಹರಣೆಗೆ ಬೆರಳು ತಜ್ಞ, ಚಾಕುವಿನ ಮೇಲೆ ಕಂಡುಬರುವ ಬೆರಳಿನ ಗುರುತುಗಳು ದೋಷಿ ಎಂದು ಗುರುತಿಸಲ್ಪಡುವ ವ್ಯಕ್ತಿಯದಲ್ಲ ಎಂದು ವಾದಿಸಿದರೆ, ಇನ್ಸ್‌ಪೆಕ್ಟರ್ ಮಟಾಧಿನ್ ಮಾತ್ರ ಆ ಮನುಷ್ಯನನ್ನು ಶಿಕ್ಷೆಗೆ ಗುರಿಪಡಿಸುವುದರಲ್ಲಿ ಜಯಶಾಲಿಯೇ ಆಗುತ್ತಿದ್ದ. ಚಂದ್ರನ ಮೇಲಿನ ಪರಿಸ್ಥಿತಿಯನ್ನು ಕರಾರುವಾಕ್ಕಾಗಿ ವಿಜ್ಞಾನಿಗಳು ತನಿಖೆ ಮಾಡಿಲ್ಲ ಎಂದು ದೃಢವಾಗಿ ಹೇಳುತ್ತಿದ್ದ. ಚಂದ್ರನ ಪ್ರಕಾಶಮಾನವಾಗಿ ಕಾಣುವ ಭಾಗವನ್ನು ನೋಡಿದ ಅವರು ಚಂದ್ರನ ಮೇಲೆ ಜೀವಿಗಳು ಇಲ್ಲ ಎಂಬ ತೀರ್ಮಾನಕ್ಕೆ ಬಂದು ಬಿಟ್ಟಿದ್ದಾರೆ. ''ಆದರೆ ನಮಗೆಲ್ಲರಿಗೂ ತಿಳಿದಿರುವಂತೆ ಚಂದ್ರನ ಮತ್ತೊಂದು ಭಾಗ-ಕತ್ತಲೆಯಿಂದ ಆವರಿಸಿರುವ ಭಾಗ ನೋಡಿದ ಮೇಲೆಯೇ ನಾನು ಹಿಂದಿರುಗಿದ್ದು. ಚಂದ್ರನ ಆ ಭಾಗದಲ್ಲಿ ಜೀವಿಗಳಿದ್ದಾರೆಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ'' ಎಂದು ವಾದಿಸುತ್ತಿದ್ದ ಮಟಾಧಿನ್.

ಮಟಾಧಿನ್‌ನನ್ನು ವಾದದಲ್ಲಿ ಸೋಲಿಸುವುದು ಕಷ್ಟವೇ, ಕಾರಣ ತಾನು ಮಾತ್ರ ಈ ವಿಷಯದಲ್ಲಿ ಪ್ರಚಂಡನೆಂಬ ಹೆಮ್ಮೆ ಅವನಿಗೆ. ಯಾರಾದರೂ ಕೇಳಬಹುದು, ಮಟಾಧಿನ್ ಎಂದಾದರೂ ಚಂದ್ರಲೋಕಕ್ಕೆ ಹೋಗಿದ್ದನಾ? ಹೋಗಿದ್ದರೆ, ಪ್ರವಾಸಿಯಾಗಿ ಹೋಗಿದ್ದನೆ? ಅಥವಾ ಯಾರಾದರೂ ಅಪರಾಧಿಗಳನ್ನು ಬೆನ್ನಟ್ಟಿಕೊಂಡು ಹೋಗಿದ್ದನೆ? ವಿಷಯ ಇಷ್ಟು, ಅವನು ನಿಜವಾಗಿಯೂ ಚಂದ್ರಲೋಕಕ್ಕೆ ಭೇಟಿ ಕೊಟ್ಟಿದ್ದ: ಭಾರತ ಸರಕಾರದ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಪರವಾಗಿ. ಅಲ್ಲಿಯ ಸರಕಾರ ಭಾರತ ಸರಕಾರಕ್ಕೆ ಬರೆದ ಪತ್ರದಲ್ಲಿ ಅವರ ದೇಶ ಅನೇಕ ಕ್ಷೇತ್ರಗಳಲ್ಲಿ ಗಣನೀಯವಾದ ಮುನ್ನಡೆಯನ್ನು ಸಾಧಿಸಿದ್ದರೂ ಸಹ ಪೊಲೀಸ್ ವ್ಯವಸ್ಥೆಯಲ್ಲಿ ತುಂಬಾ ಹಿಂದೆ ಬಿದ್ದು ಶೋಚನೀಯ ಸ್ಥಿತಿ ತಲುಪಿದೆ ಎಂದು, ತಾವು ಹೇಗೆ ಇರಬೇಕೆಂದು ಊಹಿಸಿದ್ದೇವೋ ಅದರ ಅರ್ಧದಷ್ಟಾದರೂ ದಕ್ಷತೆಯನ್ನು ಸಾಧಿಸಲಾಗ

ಲಿಲ್ಲವೆಂದು ಬರೆದಿತ್ತು. ನಮ್ಮ ಪೊಲೀಸರು ಬಹಳ ಸಾರಿ ಅಪರಾಧಿಯನ್ನು ದಸ್ತಗಿರಿ ಮಾಡುವುದರಲ್ಲಿ ಸಫಲರಾದರೂ ಅವನನ್ನು ಶಿಕ್ಷೆಗೆ ಗುರಿಪಡಿಸುವುದರಲ್ಲಿ ಸೋತಿದ್ದಾರೆ. ''ನಿಮ್ಮಲ್ಲಿ ರಾಮರಾಜ್ಯವಿದೆ ಎಂದು ಕೇಳಿದ್ದೇವೆ. ನಿಮ್ಮ ಪೊಲೀಸ್ ಅಧಿಕಾರಿಗಳಲ್ಲಿ ಒಬ್ಬರನ್ನು ನಮ್ಮ ದೇಶಕ್ಕೆ ನಿಯೋಜಿಸಬೇಕೆಂದು ಹಾಗೂ ನಮ್ಮ ಪೊಲೀಸ್ ಪಡೆಯನ್ನು ಅದರ ಕಾರ್ಯಗತಿಯಲ್ಲಿ ಸಾಗುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇವೆ. ಅವರ ಮಾರ್ಗದರ್ಶನದಲ್ಲಿ ನಮ್ಮ ಪೊಲೀಸ್ ಪಡೆ ದಕ್ಷತೆಯನ್ನು ಪಡೆದು ಯಶಸ್ಸನ್ನು ಸಾಗಲಿ'' ಎಂದಿತ್ತು ಆ ಪತ್ರದ ಒಕ್ಕಣೆ.

ಒಳಾಡಳಿತ ಇಲಾಖೆಯ ಕಾರ್ಯದರ್ಶಿಯೊಂದಿಗೆ ಈ ವಿಷಯ ಚರ್ಚಿಸಿದ ಅನಂತರ ಗೃಹ ಸಚಿವರು ಐ.ಜಿ.ಪಿ.ಯವರನ್ನು ಚಂದ್ರಲೋಕಕ್ಕೆ ಕಳುಹಿಸಲು ಸೂಚಿಸಿದರು.

''ನೋ ಸಾರ್, ಐ.ಜಿ.ಪಿ.ಯವರನ್ನು ಚಂದ್ರಲೋಕಕ್ಕೆ ಕಳಿಸಲು ಸಾಧ್ಯವಿಲ್ಲ. ಅದು ಶಿಷ್ಟಾಚಾರದ ಪ್ರಶ್ನೆ. ಚಂದ್ರಲೋಕ ಒಂದು ಸಣ್ಣ ಲೋಕ. ಐ.ಜಿ.ಪಿ. ಗ್ರೇಡಿನ ಒಬ್ಬ ಪೊಲೀಸ್ ಅಧಿಕಾರಿಯನ್ನು ಕಳಿಸುವದು ಶಿಷ್ಟಾಚಾರಕ್ಕೆ ವಿರೋಧವಾಗುತ್ತದೆ. ಆದುದರಿಂದ ಹಿರಿಯ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರನ್ನು ಕಳಿಸಬಹುದು'' ಎಂದರು ಒಳಾಡಳಿತ ಇಲಾಖೆಯ ಕಾರ್ಯದರ್ಶಿ.

ಒಂದು ಸಾವಿರ ಕೇಸುಗಳ ತನಿಖೆಯ ಖ್ಯಾತಿ ಹೊತ್ತ ಮಟಾಧಿನ್‌ಗೆ ಈ ಹೊಣೆಯನ್ನು ವಹಿಸಬೇಕೆಂದು ತೀರ್ಮಾನಿಸಲಾಯಿತು. ಚಂದ್ರಲೋಕದ ಸರಕಾರಕ್ಕೆ ಅಧಿಕೃತ ಪತ್ರವೊಂದನ್ನು ಬರೆದು ಮಟಾಧಿನ್‌ನನ್ನು ಕರೆದೊಯ್ಯಲು ಆಕಾಶ ನೌಕೆಯನ್ನು ಕಳಿಸಿಕೊಡಿರೆಂದು ತಿಳಿಸಲಾಯಿತು.

ಮಟಾಧಿನ್‌ನನ್ನು ಕರೆಸಿದ ಗೃಹಮಂತ್ರಿಗಳು ''ನಮ್ಮ ಪೊಲೀಸ್ ಪಡೆಯ ಪವಿತ್ರ ಪರಂಪರೆಯ ನಂಬಿಗಸ್ಥ ಪ್ರತಿನಿಧಿಯಾಗಿ ನಿಮ್ಮನ್ನು ಕಳಿಸುತ್ತಿದ್ದೇವೆ ಎನ್ನುವುದನ್ನು ಮರೆಯಬೇಡಿ'' ಎಂದರು ಸಂಕ್ಷಿಪ್ತವಾಗಿ. ''ಈ ಪರಂಪರೆಯನ್ನು ನೀವು ಎತ್ತಿ ಹಿಡಿಯಬೇಕು, ಜೊತೆಗೆ ನೀವು ಗಳಿಸಿದ ಶಹಬಾಸ್‌ಗಿರಿಯ ಧ್ವನಿ ತಾರಮಂಡಲದ ಮೂಲಕ ಪ್ರತಿಧ್ವನಿಗೊಂಡು ಅದು ನಮ್ಮ ಪ್ರಧಾನ ಮಂತ್ರಿಗಳ ಕಿವಿಯನ್ನು ತಲುಪಬೇಕು'' ಎಂದರು.

ಕೊನೆಗೆ ಮಟಾಧಿನ್ ಹೊರಡುವ ದಿನ ಬಂತು. ಮಟಾಧಿನ್‌ನ್ನು ಕರೆದೊಯ್ಯಲು ಆಕಾಶ ನೌಕೆ ಅಂತರಿಕ್ಷ ನಿಲ್ದಾಣದಲ್ಲಿ ಬಂದಿಳಿಯಿತು. ಆಕಾಶ ನೌಕೆಯೆಡೆ ಹೋಗುವ ಮೊದಲು ಮಟಾಧಿನ್ ತನ್ನ ಗುಮಾಸ್ತ ಅಬ್ದುಲ್‌ಗಫೂರ್‌ನನ್ನು ಕೂಗಿದ. ಅಬ್ದುಲ್‌ಗಫೂರ್ ತನ್ನ ಹಿಮ್ಮಡಿಗಳೆರಡನ್ನು ಒಟ್ಟುಗೂಡಿಸಿ ಟಕ್ ಎಂದು ಶಬ್ದ ಮಾಡುತ್ತ ಮಟಾಧಿನ್‌ನಿಗೆ ಸೆಲ್ಯೂಟ್ ಹೊಡೆದು ''ಯಸ್, ಪೆಕ್ಟ್‌ಸಾ! (ಇನ್ಸ್‌ಪೆಕ್ಟರ್ ಸಾಹೇಬ್)'' ಎಂದ.

''ಆ ಎಫ್.ಐ.ಆರ್.ನ ನನ್ನ ಫೈಲಿನಲ್ಲಿಟ್ಟಿದ್ದೀಯಾ?''

''ಯಸ್, ಪೆಕ್ಟ್‌ಸಾ!''

''ಆ ಡೈಲಿ ರಿಪೋರ್ಟ್ ಫೂರ್ಫಾರ್ಮ?''

''ಯಸ್, ಪೆಕ್ಟ್‌ಸಾ!''

ಮಟಾಧಿನ್ ಇನ್ನೇನು ಆಕಾಶ ನೌಕೆಗೆ ಹತ್ತಬೇಕು ಅನ್ನೋವಾಗ ಇದ್ದಕ್ಕಿದ್ದಂತೆ ಏನನ್ನೋ ಜ್ಞಾಪಿಸಿಕೊಂಡವನಂತೆ ಹವಾಲ್ದಾರ್ ಬಲಭದ್ರನನ್ನು ಕೂಗಿ, ''ಹೆರಿಗೆ ದಿನ ಹತ್ತಿರ ಬರ್ತಿದ್ದಂಗೆ ನಿನ್ನ ಹೆಂಡ್ತಿನಾ ನಮ್ಮ ಮನೆಗೆ ಕಳಿಸು'' ಎಂದು ಆದೇಶಿಸಿದ.

''ಯಸ್, ಪೆಕ್ಟ್‌ಸಾ!'' ಎಂದ ಬಲಭದ್ರ.

''ಇನ್ನೂ ಸಮಯವಾಗಿಲ್ಲ, ಯೋಚ್ನೆಮಾಡ್ಬೇಡಿ ಪೆಕ್ಟ್‌ಸಾ, ಮೇಮ್ ಸಾಬ್ ಹೆರಿಗೆ ಟೈಂಗೆ ನನ್ನ ಹೆಂಡ್ತಿನಾ ಕಳ್ಸಿಕೊಡ್ತಿನಿ'' ಎಂದ ಬಲಭದ್ರನ ಜೊತೆ ತನ್ನ ಧ್ವನಿ ಸೇರಿಸುತ್ತ ಗಫೂರ್.

ಭರವಸೆಹೊತ್ತ ಮಟಾಧಿನ್ ಆಕಾಶ ನೌಕೆಯ ಪೈಲಟ್‌ನೆಡೆಗೆ ತಿರುಗಿ ''ಡ್ರೈವಿಂಗ್ ಲೈಸೆನ್ಸ್ ಇದೆಯಾ?'' ಎಂದು ಪ್ರಶ್ನಿಸಿದ.

''ಯಸ್, ಸಾರ್.''

''ಲೈಟ್ ಎಲ್ಲ ಹತ್ಕೋತಾವಾ?''

''ಯಸ್, ಸಾರ್.''

''ಜೋಕೆ! ಎಲ್ಲ ಸರಿಯಾಗಿರಬೇಕು. ಇಲ್ಲ ಅಂದರೆ ಆಕಾಶದ ಮಧ್ಯದಲ್ಲೇ ಫೈನ್ ಬೀಳ್ತದೆ. ನಾನು ಯಾವ ಹರಾಮಜಾದನನ್ನು ಬಿಡಲ್ಲ.'' ಪೈಲಟ್ ಮಟಾಧಿನ್‌ನನ್ನು ದೃಷ್ಟಿಸಿ ನೋಡುತ್ತಾ ''ನಮ್ಮ ಲೋಕದಲ್ಲಿ ಜನಗಳೊಂದಿಗೆ ಪೊಲೀಸ್ನೋರು ಈ ರೀತಿ ಒರಟಾಗಿ ಮಾತ್ನಾಡಲ್ಲ, ಯೋಚಿಸಿ ಮಾತಾಡ್ತಾರೆ'' ಎಂದ.

''ಗೊತ್ತಯ್ಯಾ, ನಂಗೂ ಗೊತ್ತು. ಅದಕ್ಕೇ ನಿಮ್ಮ ಪೊಲೀಸ್ ವೀಕ್. ಸ್ವಲ್ಪ ತಾಳು. ಸರಿಯಾದ ದಾರಿಗೆ ತರ್ತೀನಿ'' ಎಂದ ಮಟಾಧಿನ್. ಮಟಾಧಿನ್ ಇನ್ನೇನು ಆಕಾಶ ನೌಕೆಯೊಳಗೆ ಕಾಲಿಡಬೇಕು ಎನ್ನುವಾಗ ಹವಲ್ದಾರ್ ರಾಮ್‌ಸಂಜೀವನ್ ಆತುರಾತುರದಲ್ಲಿ ತನ್ನೆಡೆಗೆ ಓಡಿಬರುತ್ತಿರುವುದನ್ನು ಕಂಡ. ''ಪ್ರೆಸ್ಟ್ ಸಾ, ಹೆಂಗಸರು ಹಿಮ್ಮಡಿ ಉಜ್ಜಿಕೊಳ್ಳೋ ಕಲ್ಲು ತರಬೇಕಂತೆ ಚಂದ್ರಲೋಕದಿಂದ. ಎಸ್.ಪಿ. ಸಾಹೇಬರ ಅಮ್ಮಾವ್ರು ಈಗ ತಾನೇ ಹೇಳಿಕಳ್ಸವ್ರೆ.''

ಮಟಾಧಿನ್ ಮುಗುಳ್ನಗುತ್ತ ''ಅಮ್ಮಾವ್ರಿಗೆ ಹೇಳು ಅವರ ಆಸೆಯನ್ನು ಪೂರೈಸಲು ನನಗೆ ತುಂಬಾ ಸಂತೋಷವಾಗುತ್ತಂತ...... ಆಮೇಲೆ ಖಂಡಿತ ತರ್ತಾರಂತೆ ಅಂತ.''

ಆಕಾಶ ನೌಕೆ ಮೇಲೇರಿತು. ಊರ್ಧ್ವವಾಯು ಮಂಡಲವನ್ನು ಆಗ ತಾನೆ ಹಿಂದಕ್ಕಾಕಿ ಸಾಗಿತ್ತು. ಆಗ ಮಟಾಧಿನ್ ಪೈಲಟ್‌ನನ್ನು ಮಾತಿಗೆಳೆಯುತ್ತ ''ಹಾರ್ನ್ ಯಾಕೆ ಹೊಡೆಯುತ್ತಿಲ್ಲ'' ಎಂದು ಕೇಳಿದ.

''ಲಕ್ಷಾಂತರ ಮೈಲಿ ಸುತ್ತಮುತ್ತಲೂ ಬರಿ ಶೂನ್ಯ ಪ್ರದೇಶ'' ಎಂದು ಪ್ರತ್ಯುತ್ತರಿಸಿದ ಪೈಲಟ್.

''ಆದರೇನಂತೆ? ರೂಲ್ಸ್ ಅಂದರೆ ರೂಲ್ಸ್. ಹಾರ್ನ್ ಆಗಾಗ್ಗೆ ಹೊಡೀಬೇಕು'' ಎಂದ ಆತನನ್ನು ಪರೀಕ್ಷಿಸುವವನಂತೆ.

ಚಂದ್ರಲೋಕದಲ್ಲಿ ಆಕಾಶ ನೌಕೆ ಇಳಿಯುತ್ತಿದ್ದಂತೆ ಗೌರವಾನ್ವಿತ ಅತಿಥಿಯನ್ನು ಸ್ವಾಗತಿಸಲು ಪೊಲೀಸ್ ತುಕಡಿಯೊಂದು ನೌಕಾ ನಿಲ್ದಾಣದಲ್ಲಿ ಕಾದಿರುವುದನ್ನು ಮಟಾಧಿನ್ ಕಂಡ. ದರ್ಪದಿಂದ ಮೇಲೆದ್ದ. ತನ್ನನ್ನು ಸ್ವಾಗತಿಸಲು ಸಾಲಾಗಿ ನಿಂತಿರುವ ಅಧಿಕಾರಿಗಳ ಭುಜದ ಮೇಲೆ ಅವನ ಕಣ್ಣು ಹರಿದಾಡಿತು. ಅವರಲ್ಲಿ ಯಾರೊಬ್ಬರಿಗೂ ಒಂದು ನಕ್ಷತ್ರವಾಗಲೀ, ಸ್ಟ್ರೈಪ್ ಆಗಲೀ ಇರಲಿಲ್ಲ. ತಾನು ಹಿಮ್ಮಡಿಯನ್ನು ಜೋಡಿಸಿ ಟಕ್ ಎನ್ನಿಸುವುದಾಗಲೀ, ಪ್ರತಿವಂದನೆ ಮಾಡಲು ಕೈ ಮೇಲೆತ್ತುವುದಾಗಲೀ, ಅವಶ್ಯವಿಲ್ಲವೆಂದು ನಿರ್ಧರಿಸಿಕೊಂಡ. ಅವನೀಗ ಇಲ್ಲಿಗೆ ಇನ್ಸ್‌ಪೆಕ್ಟರ್ ಹುದ್ದೆಯ ಅರ್ಹತೆಯ ಮೇಲೆ ಬಂದಿರಲಿಲ್ಲ! ಆದರೆ ಬಂದದ್ದು ಸಲಹೆಗಾರನಾಗಿ.

ಅವರು ಮಟಾಧಿನ್‌ನನ್ನು ಪೊಲೀಸ್ ಕ್ವಾರ್ಟರ್ಸ್‌ಗೆ ಕರೆದೊಯ್ದು ಅಲ್ಲಿಯ ಒಂದು ಭವ್ಯವಾದ ಬಂಗ್ಲೆಯೊಳಗೆ ಇರಿಸಿದರು. ಇಡೀ ದಿನ ಪೂರಾ ವಿಶ್ರಾಂತಿ ಪಡೆದ ಬಳಿಕ ಕರ್ತವ್ಯದ ಮೇಲೆ ಹಾಜರಾದ. ಪ್ರಾರಂಭಕ್ಕೆ ಪೊಲೀಸ್ ಕಾಲೋನಿಯನ್ನು ತಪಾಸಿಸಿದ. ಸಂಜೆ ಐ.ಜಿ.ಯನ್ನು ಕಂಡು ''ನಿಮ್ಮ ಪೊಲೀಸ್ ಕಾಲೋನಿಯಲ್ಲಿ ಹನುಮಂತನ ಗುಡಿ ಇಲ್ಲದಿರುವುದನ್ನು ಕಂಡೆ. ನಮ್ಮ ರಾಮರಾಜ್ಯದಲ್ಲಿ ಒಂದು ಕಾಲೋನಿಲೂ ಇಲ್ಲ ಅನ್ನಂಗೇ ಇಲ್ಲ. ಪ್ರತಿ ಪೊಲೀಸ್ ಕಾಲೋನಿಲೂ ಹನುಮಂತನ ಗುಡಿ ಇದೆ.''

''ಈ ಹನುಮಂತ ಯಾರು? ಆ ಹೆಸರ್ನೋರು ಯಾರು ನನಗೆ ಗೊತ್ತಿಲ್ಲವಲ್ಲ'' ಎಂದರು ಚಂದ್ರಲೋಕದ ಐ.ಜಿ.

''ನಮ್ಮ ದೇಶದಲ್ಲಿ ಪ್ರತಿಯೋರ್ವ ಪೊಲೀಸ್ ಪೇದೆಯ ಆದ್ಯ ಕರ್ತವ್ಯ ಹನುಮನ ದರ್ಶನ ಪಡೆಯುವುದು. ಸುಗ್ರೀವನ ವಾನರ ಸೈನ್ಯದಲ್ಲಿ ಹನುಮ ವಿಶೇಷ ವ್ಯಕ್ತಿ. ಸೀತಾ ಮಾತೆಯನ್ನು ಪತ್ತೆ ಹಚ್ಚಿದವನು. ಸೆಕ್ಷನ್ 362ರ ಪ್ರಕಾರ ಅದೊಂದು ಅಪಹರಣದ ಸ್ಪಷ್ಟ ಪ್ರಕರಣ. ರಾವಣನನ್ನು ಅಲ್ಲೇ, ಆವಾಗಲೇ, ಹನುಮಂತ ಶಿಕ್ಷಿಸಿದ. ಪೊಲೀಸರಿಗೆ ಅಪರಾಧಿಯನ್ನು ಹಿಡಿದು ಅಲ್ಲೇ, ಆ ಕ್ಷಣದಲ್ಲೇ, ಶಿಕ್ಷೆ ವಿಧಿಸುವ

ಅಧಿಕಾರ ಬೇಕು. ಅಪರಾಧಿಯನ್ನು ಪತ್ತೆ ಹಚ್ಚಿ, ಎಳೆದು ತಂದು ನ್ಯಾಯಾಲಯದ ಮುಂದೆ ನಿಲ್ಲಿಸೋ ಈ ಎಲ್ಲ ಗೋಜೇಕೆ? ಈ ನಿಟ್ಟಿನಲ್ಲಿ ನಾವೂನೂ ಹಿಂದುಳಿದಿದ್ದೀವಿ ಅಂತ ಒಪ್ಪಿಕೊಳ್ತೀನೆ. ನಮ್ಮ ನಾಡಿನಲ್ಲಿ ನಾವಿನ್ನೂ ಅಂತಹ ಕಾನೂನೊಂದನ್ನು ಜಾರಿಗೆ ತರಬೇಕಾಗಿದೆ. ನನಗೆ ಕಂಡಂಗೆ, ನಿಮ್ಮಲ್ಲಿ ಇನ್ನೂ ಕೆಟ್ಟದಾಗೆ ಇದೆ. ಆಯ್ತು, ಶ್ರೀರಾಮಚಂದ್ರ ಹನುಮನ ಕರ್ತವ್ಯ ನಿಷ್ಠೆ ಕಂಡು ತುಂಬ ಸಂತುಷ್ಟನಾದ. ತನ್ನ ಸಂಗಡ ಅಯೋಧ್ಯೆಗೆ ಅವನನ್ನು ಕರೆತಂದು ನಗರದ ಪಾಲನೆಯ ಕರ್ತವ್ಯಕ್ಕೆ ನೇಮಿಸಿದ. ಅದೇ ಹನುಮನನ್ನು ನಾವು ನಮ್ಮ ಆರಾಧ್ಯ ದೈವವೆಂದು ಪೂಜಿಸುತ್ತಿರೋದು. ನನ್ನ ಜೊತೆ ಆತನ ಫೋಟೋ ತಂದಿದ್ದೀನಿ. ಈ ಫೋಟೋ ಇದ್ದಂಗೆ ಇರೋ ವಿಗ್ರಹಗಳನ್ನು ಮಾಡಿ ಪ್ರತಿ ಪೊಲೀಸ್ ಕಾಲೋನಿಯಲ್ಲೂ ಪ್ರತಿಷ್ಠಾಪನೆ ಮಾಡಿ'' ಎಂದು ಸಲಹೆಯನ್ನಿತ್ತ ಮಟಾಧಿನ್.

ಮುಂದಿನ ಕೆಲವು ದಿನಗಳಲ್ಲಿ ಹನುಮನ ವಿಗ್ರಹದ ಪ್ರತಿಷ್ಠಾಪನೆ ಉಚಿತ ರೀತಿಯಲ್ಲಿ ಪ್ರತಿ ಪೊಲೀಸ್ ಕಾಲೋನಿಯಲ್ಲೂ ನೇರವೇರಿತು. ಚಂದ್ರಲೋಕದಲ್ಲಿ ತನ್ನ ಅರಿವಿಗೆ ಬಂದಂತೆ ಪೊಲೀಸರ ತಾತ್ಸಾರ ಹಾಗೂ ಆಲಸ್ಯತನಕ್ಕೆ ಕಾರಣವಾದ ಅಂಶಗಳನ್ನು ಕುರಿತು ಮಟಾಧಿನ್



ತೀರಾ ನಿಗಾ ಇಟ್ಟು ಪರಿಶೀಲಿಸಿದ. ಅಪರಾಧಗಳ ಬಗೆಗೆ ಪೊಲೀಸರು ಎಚ್ಚರಿಕೆಯಿಂದ ಲಕ್ಷ್ಯ ಕೊಡದಿರುವುದನ್ನು ಇಷ್ಟು ಕಡಿಮೆ ಅವಧಿಯಲ್ಲಿ ಗಮನಿಸಿದ. ಈ ರೀತಿಯ ಕರ್ತವ್ಯ ಲೋಪಗಳಿಗೆ ಬಲವತ್ತಾದ ಕಾರಣಗಳನ್ನು ಅವನಿಂದ ಹುಡುಕಲಾಗಲಿಲ್ಲ. ಅನಂತರ ಅವನ ಮೆದುಳಿಗೆ ಒಂದು ಉಪಾಯ ಹೊಳೆಯಿತು. ಪೊಲೀಸ್ ಪೇದೆಗಳ ಸಂಬಳ ಬಟವಾಡೆಯ ರಿಜಿಸ್ಟರ್‌ನ್ನು ತರುವಂತೆ ಗುಮಾಸ್ತನೊಬ್ಬನಿಗೆ ಹೇಳಿದ. ಆ ರಿಜಿಸ್ಟರ್ ಮೇಲೆ ಒಂದು ಸಾರಿ ಕಣ್ಣು ಹಾಯಿಸಿದ್ದೇ ತಡ ಅವನಿಗೆ ಪ್ರತಿಯೊಂದು ಸ್ಫಟಿಕದಂತೆ ಸ್ಪಷ್ಟವಾಯಿತು. ಸಂಜೆ ಗೃಹ ಮಂತ್ರಿಗಳನ್ನು ಅವಸರವಸರವಾಗಿ ಕಂಡವನೆ, ''ನಿಮ್ಮ ಪೊಲೀಸರು ಯಾಕಿಷ್ಟು ಜಡಭರತರು ಎನ್ನುವುದಕ್ಕೆ ಕಾರಣಗಳನ್ನು ನಾನು ಊಹಿಸಿದ್ದೇನೆ. ನೀವು ಅವರಿಗೆ ಭರ್ಜರಿ ಸಂಬಳ ಕೊಡುತ್ತೀದ್ದೀರಿ. ಐದುನೂರು ರೂಪಾಯಿ ಪೇದೆಗೆ, ಏಳುನೂರು ಹವಾಲ್ದಾರ್‌ನಿಗೆ, ಆಮೇಲೆ ಸಾವಿರ ರೂಪಾಯಿ ಪೊಲೀಸ್ ಇನ್ಸ್‌ಪೆಕ್ಟರ್‌ನಿಗೆ. ಇದೊಳ್ಳೆ ಭಾರಿ ತಮಾಷೆ. ಹೀಗಿದ್ದರೆ ಅಪರಾಧಿಯ ಹಿಂದೆ ಹೋಗಕ್ಕೆ ಪೊಲೀಸ್ನೋರು ಯಾಕೆ ಬಯಸುತ್ತಾರೆ? ನಮ್ಮ ದೇಶದಲ್ಲಿ ಪೇದೆಗೆ ನೂರು, ಇನ್ಸ್‌ಪೆಕ್ಟರಿಗೆ ಇನ್ನೂರು. ದಿನದ ಇಪ್ಪತ್ತು ನಾಲ್ಕು ಗಂಟೆನೂ ಅವರು ಅಪರಾಧಿಗಳ ಹಿಂದೇನೆ ಇರ್ತಾರೆ. ನೀವು ಈಗಿಂದೀಗಲೇ ನಿಮ್ಮ ಪೊಲೀಸ್ ಪಡೆಗಳ ಸಂಬಳ ಇಳಿಸಿ'' ಎಂದ.

''ಹಾಗೆ ಮಾಡೋದು ಕಣ್ಣಿಗೆ ಕಂಡಂಗೆ ಅನ್ಯಾಯ ಅಲ್ವೆ? ಅವರಿಗೆ ಸಾಕಾಗುವಷ್ಟು ಸಂಬಳ ಸಿಗದಿದ್ದರೆ ಕೆಲಸ ಮಾಡುವುದಕ್ಕೆ ಪ್ರೇರಣೇನೆ ಇರಲ್ಲ. ಮೇಲಾಗಿ ಅವರು ಕೆಲಸ ಯಾಕಾದ್ರೂ ಮಾಡ್ಬೇಕು?'' ಎನ್ನುತ್ತ ಮಂತ್ರಿಗಳು ಅವನ ಮಾತಿಗೆ ತಡೆಯೊಡ್ಡಿದರು.

''ಇದರಲ್ಲಿ ಅನ್ಯಾಯ ನನಗೇನೂ ಕಾಣಲ್ಲ. ಮೊದಲನೆ ತಿಂಗಳ ಸಂಬಳದಲ್ಲಿ ಕಡಿತ ಮಾಡುತ್ತಿದ್ದಂತೆ ನೋಡ್ತಾಯಿರಿ, ಅವರ ಮೆದುಳು ಎಷ್ಟು ಚುರುಕಾಗ್ತದೆ ಅನ್ನೋದನ್ನ ಕಂಡು ನಿಮಗೇ

ಆಶ್ಚರ್ಯವಾಗಬಹುದು'' ಮಾರುತ್ತರಿಸಿದ ಮಟಾಧಿನ್.

ಮಟಾಧಿನ್‌ನ ಸಲಹೆಯ ಮೇರೆಗೆ ಗೃಹಮಂತ್ರಿಗಳು ಪೊಲೀಸ್ ಪಡೆಯ ಸಂಬಳವನ್ನು ಕಡಿತ ಮಾಡಿದರು. ಅನಂತರ ಮೊದಲ ಮೂರೇ ತಿಂಗಳಲ್ಲಿ ಪೊಲೀಸ್ ಪಡೆಯಲ್ಲಿ ಉಂಟಾದ ವ್ಯತ್ಯಾಸ ಅವರ ಅರಿವಿಗೆ ಬಂದಿತು. ಚಂದ್ರಲೋಕದ ಪೊಲೀಸ್ ಪಡೆ ಕುಂಭಕರ್ಣನ ನಿದ್ರೆಯಿಂದ ದಿಢೀರನೇ ಎಚ್ಚೆತ್ತವರಂತೆ ಕಂಡುಬಂದರು. ತಮ್ಮ ಸುತ್ತಮುತ್ತ ಏನು - ಎಂತ ಎನ್ನುವುದರ ಕಡೆ ಚುರುಕಾದರು. ಅಪರಾಧದ ಜಗತ್ತಿನಲ್ಲಿ ಕೋಲಾಹಲವುಂಟಾಯಿತು. ಗೃಹಮಂತ್ರಿಗಳು ಎಲ್ಲ ಪೊಲೀಸ್ ಠಾಣೆಗಳಿಂದ ರೇಕಾರ್ಡ್ಸ್‌ಗಳನ್ನು ತರಿಸಿ ಕಣ್ಣಲ್ಲಿ ಕಣ್ಣಿಟ್ಟು ಪರಿಶೀಲಿಸಿದರು. ಈಗ ದಾಖಲಾಗಿರುವ ಕೇಸುಗಳು ಈ ಹಿಂದೆ ದಾಖಲಾದುದಕ್ಕಿಂತ ಅನೇಕ ಪಟ್ಟು ಹೆಚ್ಚಿದ್ದವು. ''ನಿಮ್ಮ ಜಾಣತನವನ್ನು ಮೆಚ್ಚುತ್ತೇನೆ. ಒಂದೇ ಏಟಿಗೆ ಊಹಿಸಲಾರದಂತೆ ಬದಲಾವಣೆ ತಂದ್ರಿ. ಆದರೆ ಅದರ ಮೂಲದಲ್ಲಿ ಕೊರತೆ ಏನಿತ್ತು?'' ಎಂದು ಕೇಳಿದರು ಮಂತ್ರಿಗಳು ಮಟಾಧಿನ್‌ನನ್ನು.

''ಅದಕ್ಕೆ ವಿವರಣೆ ಬಹಳ ಸುಲಭ ಸಾರ್'' ಇಷ್ಟೊಂದು ಕಡಿಮೆ ಸಂಬಳದಲ್ಲಿ ಈ ನೌಕರರು ಖರ್ಚುವೆಚ್ಚ ಸರಿದೂಗಿಸಲಾರದೆ ಕಷ್ಟಪಡಬೇಕಾಗ್ತದೆ. ಪೊಲೀಸ್ ಪೇದೆಯೊಬ್ಬ ನೂರು ರೂಪಾಯಿಯ ತನ್ನ ಸಂಸಾರಕ್ಕೆ ಅನ್ನ ಬಟ್ಟೆ ಒದಗಿಸಲಾರ; ಹಾಗೆಯೇ ಇನ್ನೂರು ರೂಪಾಯಿ ಸಂಬಳದಲ್ಲಿ ಒಬ್ಬ ಇನ್‌ಸ್ಪೆಕ್ಟರ್ ತನ್ನ ಅಂತಸ್ತಿಗೆ ತಕ್ಕಂತೆ ಜೀವನ ನಡೆಸಕ್ಕಾಗಲ್ಲ. ಆವಾಗ ಇವರು ವರಮಾನದ ಬೇರೆ ಮಾರ್ಗಗಳನ್ನು ಹುಡುಕಿಕೋಬೇಕು. ಅಪರಾಧಿಯನ್ನು ಹಿಡಿದರೆ ಮಾತ್ರವೇ ಅವರಿಗೆ ಮೇಲು ಸಂಪಾದನೆ ಸಾಧ್ಯ. ಸಂಕ್ಷೇಪವಾಗಿ ಹೇಳುವುದಾದರೆ ಅವರು ಶ್ರೀಮಂತ ಅಪರಾಧಿಗಳ ಮೇಲೆ ಕಣ್ಣಿಡಲು ಶುರು ಮಾಡುತ್ತಾರೆ. ಚುರುಕಾಗ್ತಾರೆ, ಕರ್ತವ್ಯ ನಿಷ್ಠರಾಗ್ತಾರೆ, ಆಮೇಲೆ ದೃಢಮನಸ್ಸಿನವರೂ ಆಗ್ತಾರೆ. ಇದೇ ನಮ್ಮ ರಾಮರಾಜ್ಯದ ದಕ್ಷ ಹಾಗೂ ಸದೃಢ ಆಡಳಿತದ ಗುಟ್ಟು'' ಎಂದ ಮಟಾಧಿನ್.

ಸಮೃದ್ಧಿ

ಹೆಣ್ಣು ಹಡೆದರೆ ಮನೆಗೆ ಕಳೆಯು
ಭೂಮಿ ಹಡೆದರೆ ಇಳೆಗೆ ಬೆಳೆಯು
ಇವೆರಡಿದ್ದರೇನೆ ಸುಖಸಮೃದ್ಧಿಯು
ಎಂದಾತ ನಮ್ಮ ವಾಲೀಕಾರ ಚೆನ್ನಣ್ಣ

• *ಚೆನ್ನಣ್ಣ ವಾಲೀಕಾರ*

ಈ ಪವಾಡದ ಸುದ್ದಿ ತತ್‌ಕ್ಷಣವೇ ಚಂದ್ರಲೋಕದಲ್ಲೆಲ್ಲ ಹಬ್ಬಿತು. ಮಟಾಧಿನ್‌ನ ದರ್ಶನ ಪಡೆಯಲು ಜನ ಹಿಂದು ಹಿಂಡಾಗಿ ಮುಗಿಬಿದ್ದರು. ಸಂಬಳ ಕಡಿಮೆ ಮಾಡಿ ದಕ್ಷತೆ ಹೆಚ್ಚಿಸಬೇಕಾದರೆ ಅವನೆಂಥ ಮನುಷ್ಯ ಇರಬೇಕು. ಪೊಲೀಸರು ಕೂಡ ಸಂತೋಷಪಡುತ್ತಾ ''ಓ, ಒಳ್ಳೇದಾಯ್ತು, ನೀವೇನಾದರೂ ಇಲ್ಲಿಗೆ ಬರದೆ ಹೋಗಿದ್ದರೆ ನಾವು ಬರೀ ಸಂಬಳದಲ್ಲಿ ಹೊಟ್ಟೆ ಹೊರೆಯಬೇಕಾಗ್ತಿತ್ತು'' ಎಂದರು. ಸರಕಾರಕ್ಕೂ ಸಂತೋಷವಾಯಿತು. ಮೊಟ್ಟಮೊದಲ ಬಾರಿಗೆ ಅದಕ್ಕೆ ಉಳಿತಾಯದ ಆಯವ್ಯಯ ಮಂಡಿಸಲು ಸಾಧ್ಯವಾಯಿತು. ಅರ್ಧದಷ್ಟು ಸಮಸ್ಯೆಗಳು ನಿವಾರಣೆಯಾದವು. ಅಪರಾಧಿಗಳನ್ನು ಹಿಡಿಯಲು ಪೊಲೀಸರು ಪ್ರಾರಂಭಿಸಿದರು. ತನಿಖೆಯ ವಿಧಾನವನ್ನು ಒಂದು ವ್ಯವಸ್ಥಿತ ಮಾರ್ಗದಲ್ಲಿ ರೂಪಿಸುವ ಕ್ರಮವೊಂದು ಮಾತ್ರವೇ, ಈಗ ಅವನಿಗೆ ಮಾಡಲು ಉಳಿದದ್ದು. ಅಪರಾಧಿಯನ್ನು ಹಿಡಿದ ಮೇಲೆ ಅವನನ್ನು ಹೇಗೆ ಶಿಕ್ಷಿಸಬೇಕು? ತನಿಖೆಯ ಒಂದು ಮಾದರಿಯನ್ನು ಪೊಲೀಸರಿಗೆ ಮಾಡಿ ತೋರಿಸಲು ಒಂದು ದೊಡ್ಡ ಕೇಸಿಗಾಗಿ ಮಟಾಧಿನ್ ಈಗ ಕಾಯುತ್ತಿದ್ದ.

ಒಂದು ದಿನ ಹಾಡೇಹಗಲಿನಲ್ಲಿ ನಡೆದ ಬೀದಿ ಜಗಳವೊಂದರಲ್ಲಿ ಒಬ್ಬ ರಸ್ತೆ ಮಧ್ಯದಲ್ಲಿ ಸಾವನ್ನು ಅಪ್ಪಿದ. ಇಂತಹ ಸದವಕಾಶಕ್ಕಾಗಿಯೇ

ಮಟಾಧಿನ್ ಕಾಯುತ್ತಿದ್ದುದು. ಅವನೇ ಸ್ವತಃ ಪೊಲೀಸ್ ಠಾಣೆಗೆ ಹೋದ ''ಈ ತನಿಖೆಯನ್ನು ಹೇಗೆ ಮಾಡಬೇಕು ಎಂದು ನಿಮಗೆ ನಾನೇ ಖುದ್ದಾಗಿ ಮಾಡಿ ತೋರಿಸ್ತೀನಿ. ಈ ಕೇಸ್‌ನಿಂದ ನೀವು ಕಲಿಯೋದು ಬಹಳ ಇದೆ. ನಿಮಗೆ ಗೊತ್ತಿದ್ದಂಗೆ ಇದೊಂದು ಕೊಲೆ ಕೇಸ್. ಕೊಲೆ ಕೇಸ್‌ನಲ್ಲಿ ಪೂರ್ಣವಾದ ಸಾಕ್ಷ್ಯಾಧಾರಗಳನ್ನು ಕಲೆ ಹಾಕಬೇಕು. ಅದು ತುಂಬ ಬಲವಾಗಿರಬೇಕು ಹಾಗೂ ವಾದದಲ್ಲಿ ಸೋಲಿಸಲಾಗದಂತಿರಬೇಕು'' ಎಂದ.

''ಮೊದಲಿಗೆ ನಾವು ಸಂಶಯಾಸ್ಪದ ಕೊಲೆಗಾರರನ್ನು ಪತ್ತೆ ಹಚ್ಚಬೇಕು. ಅನಂತರವೇ ಸಾಕ್ಷಿ ಹುಡುಕಬೇಕಾಗೋದು'' ಎಂದ ಈ ಘಟನೆ ನಡೆದ ಸ್ಥಳದ ಠಾಣೆಯ ವ್ಯಾಪ್ತಿಗೆ ಬರುವ ಪೊಲೀಸ್ ಅಧಿಕಾರಿ.

''ನೋ. ಅಲ್ಲೇ ನೀವು ಎಡವೋದು! ವಿರುದ್ಧ ತುದಿ ಹಿಡ್ಕೊಂಡು ಹೋಗ್ತಿದ್ದೀಯಾ ನೀನೇಳೋದು ಕುದುರೆ ಮುಂದೆ ಗಾಡಿ ತಂದು ನಿಲ್ಲಿಸಿದ ಹಾಗೆ. ಮೊದಲು ಎಲ್ಲ ಸಾಕ್ಷಿಗಳನ್ನು ಕಲೆ ಹಾಕಿ. ಎಲ್ಲಾದರೂ ರಕ್ತದ ಕಲೆಗಳುಂಟೆ? ಇದ್ದರೆ, ಯಾರ ಬಟ್ಟೆ ಮೇಲಿವೆ ಅಥವಾ ಇನ್ನೆಲ್ಲಾದರೂ?'' ಎಂದ ಮಟಾಧಿನ್.

''ಆದರೆ ಕೊಲೆಗಾರ ತಲೆಮರೆಸಿಕೊಂಡಿದ್ದಾನೆ. ಕೊಲೆಗೆ ಗುರಿಯಾದವನು ರಸ್ತೆಯಲ್ಲಿ ಪ್ರಜ್ಞಾಹೀನನಾಗಿ ಬಿದ್ದಿದ್ದ. ಆ ಘಟನೆ ನಡೆದ ಸ್ಥಳದ ಬಡಾವಣೆಯಲ್ಲಿ ಒಬ್ಬ ಸಂಭಾವಿತ ವಾಸವಾಗಿದ್ದಾನೆ. ಅವನೇ ಆತನನ್ನು ಆಸ್ಪತ್ರೆಗೆ ಸಾಗಿಸಿದ. ಹೀಗೆ ಸಾಗಿಸುವಾಗ ಅವನ ಬಟ್ಟೆ ಮೇಲೆಲ್ಲ ರಕ್ತದ ಕಲೆಗಳು ಆಗಿವೆ'' ಎಂದ ಅಲ್ಲಿದ್ದ ಒಬ್ಬ ಇನ್ಸ್‌ಪೆಕ್ಟರ್.

''ಹಾಗಾದರೆ ಈಗಲೇ ಅವನನ್ನು ಬಂಧಿಸಿ'' ಎಂದ ಮಟಾಧಿನ್.

''ಆದರೆ ಸಾಯುತ್ತಿದ್ದೋನ ಬದುಕಿಸಲು ನಿಜವಾಗಿಯೂ ಆ ಸಂಭಾವಿತನೇ ಪ್ರಯತ್ನ ಪಟ್ಟಿದ್ದು'' ಎಂದ ಪೊಲೀಸ್ ಇನ್ಸ್‌ಪೆಕ್ಟರ್.

''ಅದು ಸರಿ, ಆದರೆ ರಕ್ತದ ಕಲೆ ಪತ್ತೆ ಮಾಡ್ಕೊಂಡು ಎಲ್ಲಿಗೆ ಹೋಗ್ತೀರಾ? ಈ ಕೇಸಿನಲ್ಲಿ ಅದೇ ಮುಖ್ಯ ಅಲ್ವಾ? ನಿಮಗೆ ಸುಲಭವಾಗಿ ಲಭಿಸುವಂತ ಸಾಕ್ಷಿ ಪುರಾವೆಗಳನ್ನೆಲ್ಲ ದಕ್ಕಿಸಿಕೊಳ್ಳಲು ಮೊದಲು ಪ್ರಯತ್ನಪಡಿ'' ಎಂದ ಮಟಾಧಿನ್.

ಆ ಸಂಭಾವಿತನನ್ನು ಠಾಣೆಗೆ ಕರೆಸಿ ಕಂಬಿ ಹಿಂದೆ ತಳ್ಳಿದರು.

''ಆದರೆ ನನ್ನ ಅಪರಾಧವೇನು? ಕೊಲೆಯಾದ ಅವನನ್ನು ನಾನೇ ಆಸ್ಪತ್ರೆಗೆ ಸಾಗಿಸಿದ್ದೆ'' ಎಂದು ಪ್ರಲಾಪಿಸಿದ, ತೀರಾ ಬೆದರಿದವನಂತೆ ಕಾಣುತ್ತಿದ್ದ ಅವನು.

ಚಂದ್ರಲೋಕದ ಪೊಲೀಸರಿಗೆ ಅವನ ಹೇಳಿಕೆ ನಿಜವೆಂದು ಮನದಟ್ಟಾಯಿತು. ಆದರೆ ಮಟಾಧಿನ್‌ನಿಗೆ ಆಗಲಿಲ್ಲ. ಈ ವ್ಯಕ್ತಿಯ ವಾದವನ್ನು ಹೇಗೆ ಮಟಾಧಿನ್ ಎದುರಿಸುತ್ತಾನೆ ಎಂದು ಚಂದ್ರಲೋಕದ ಪೊಲೀಸರಿಗೆ ಕುತೂಹಲ.

''ಆ ಕೊಲೆ ನಡೆದ ಸ್ಥಳಕ್ಕೆ ಹೋಗಲು ನಿನಗೆ ಉಂಟಾದ ಪ್ರೇರಣೆಯಾದರೂ ಏನು? ನೀನ್ಯಾಕೆ ಅಲ್ಲಿಗೆ ಹೋಗಿದ್ದೆ?'' ಎಂದು ಆ ಸಂಭಾವಿತನನ್ನು ಮಟಾಧಿನ್ ಪ್ರಶ್ನಿಸಿದ.

''ಕೊಲೆ ನಡೆದ ಜಾಗಕ್ಕೆ ನಾನು ಹೋಗಲಿಲ್ಲ. ಆ ಘಟನೆ ನನ್ನ ಮನೆ ಎದುರೇ ಸಂಭವಿಸಿತು. ತಾವೇ ಖುದ್ದು ಬಂದು ನೋಡಿ. ನನ್ನ ಮನೆ ಅಲ್ಲುಂಟೋ ಇಲ್ಲವೋ ಎಂದು'' ಪ್ರತ್ಯುತ್ತರಿಸಿದ ಆ ಸಂಭಾವಿತ.

ಮಟಾಧಿನ್ ಪುನಃ ಅವನನ್ನು ವಿಚಾರಣೆ ಮಾಡಲು ಪ್ರಾರಂಭಿಸಿದ. ಅಲ್ಲಿ ನೆರದಿದ್ದವರೆಲ್ಲ ಕಾತರದಿಂದ ಅವನ ಮುಖ ನೋಡುತ್ತಿದ್ದರು.

''ನಿನ್ನ ಮನೆ ಅಲ್ಲಿ ಇದೆ ಅನ್ನೋ ನಿನ್ನ ಮಾತು, ನಾನು ಒಪ್ಪುತ್ತೇನೆ. ಆದರೆ ಆ ಘಟನೆ ನಡೆದ ಸ್ಥಳಕ್ಕೆ ನೀನು ಏತಕ್ಕೆ ಹೋದೆ ಅನ್ನೋದು ಮಾತ್ರ ನನಗೆ ಬೇಕು?'' ಎಂದ ಮಟಾಧಿನ್ ಸಂದರ್ಭಕ್ಕೆ ತಕ್ಕಂತೆ.

ಈ ಪ್ರಶ್ನೆಗೆ ಉತ್ತರಿಸಲು ಅವನಲ್ಲಿ ಸರಿಯಾದ ಉತ್ತರವಿರಲಿಲ್ಲ. ಒಂದೇ ಸಮನೆ ತಡವರಿಸುತ್ತ ''ಆ ಘಟನೆ ನಡೆದ ಸ್ಥಳಕ್ಕೆ ನಾನು


ಹೋಗಲಿಲ್ಲ; ಅದೃಷ್ಟವಶಾತ್ ನನ್ನ ಮನೆ ಅಲ್ಲಿದೆ'' ಎಂದು ಗೊಣಗಾಡಿದ ಆತ.

''ನೀನು ಏನು ಹೇಳುತ್ತಿದ್ದೀಯಾ ಅನ್ನೋದನ್ನ ನಾನು ಒಪ್ತೇನೆ. ಆದರೆ ನೀನು ಅಲ್ಯಾಕಿದ್ದೆ ಅನ್ನೋದು ಅಷ್ಟೇ ನನಗೆ ಬೇಕು?'' ಮಟಾಧಿನ್‌ನ ವಾದದ ಧಾಟಿ ಕಂಡ ಪೊಲೀಸರು ತಲೆದೂಗಿದರು. ತನಿಖೆಯ ಮೂಲ ತತ್ವ ಅ. ಆ. ಇ.ಗಳ ಅನುಭವವಿಲ್ಲದ ಈ ಜನರಿಗೆ ಕಲಿಸಿಕೊಡಲು ಇದು ಒಳ್ಳೆಯ ಸದವಕಾಶವೆಂದು ಮಟಾಧಿನ್ ಆಲೋಚಿಸಿದ.

''ಇಲ್ಲಿ ನೋಡಿ, ಯಾವನೋ ಕೊಲೆ ಆಗಷ್ನೆ. ಅವನನ್ನು ಯಾರೋ ಕೊಲೆ ಮಾಡಿರುವುದಂತೂ ದಿಟ. ಕೊಲೆಗಡುಕ ಅಂತೂ ಎಲ್ಲೋ ಇದ್ದಾನೆ; ಅವನನ್ನು ಹಿಡಿದು ಶಿಕ್ಷೆಗೆ ಗುರಿಪಡಿಸಬೇಕು'' ಎಂದ ತುಂಬಾ ಗಂಭೀರವಾಗಿ. ಪೊಲೀಸರಿಗೆ ಈ ಪ್ರಶ್ನೆ ಅಂತಹ ಮಹತ್ವದ್ದೇನು ಅಲ್ಲ. ಇದರಲ್ಲಿ ನಿಜವಾಗಿಯೂ ಮಹತ್ವದ್ದು ಅಂದರೆ ಹಾಗೂ ಪೊಲೀಸರಿಗೆ ತೀರಾ ಸಂಬಂಧಿಸಿದ್ದು ಅಂದರೆ ಈ ಅಪರಾಧವನ್ನು ಯಾರ ಮೇಲೆ ಹೊರಿಸಬೇಕು ಎನ್ನುವುದು. ಈಗ ಕೊಲೆಯೊಂದು ನಡೆದಿದೆ. ಅದನ್ನು ಮಾಡಿದ ಅಪರಾಧಿಯನ್ನು ಶಿಕ್ಷಿಸಬೇಕೆನ್ನುವುದು ತರ್ಕಬದ್ಧ. ಇದರ ಜೊತೆಗೆ ಇಲ್ಲಿಯ ಮುಖ್ಯ ಅಂಶವೆಂದರೆ ನಿಜವಾದ ಕೊಲೆಗಡುಕನನ್ನು ಶಿಕ್ಷೆಗೆ ಗುರಿಪಡಿಸಬೇಕೇ ಅಥವಾ ಅವನ ಜಾಗದಲ್ಲಿ ಯಾರಾದರೂ ಮುಗ್ಧನನ್ನೇ ಎನ್ನುವುದು. ಈ ಪ್ರಶ್ನೆಗಳನ್ನೆಲ್ಲಾ ಕೆದಕುತ್ತಾ ಪೊಲೀಸರು ವೇಳೆಯನ್ನು ಕಳೆಯಬಾರದು. ಎಲ್ಲರೂ ಸಮಾನರೇ. ಎಲ್ಲರಲ್ಲೂ ಇರುವ ದೇವ ಒಬ್ಬನೇ. ಆದ್ದರಿಂದ ಅವರೆಲ್ಲ ಆ ದೇವರ ಒಂದು ಅಂಶ. ನಾವು ಪೊಲೀಸರು ಒಬ್ಬನಿಗೂ ಮತ್ತೊಬ್ಬನಿಗೂ ವ್ಯತ್ಯಾಸವನ್ನು ತೋರಬಾರದು. ಪೊಲೀಸರ ಮೂಲಭೂತ ನಿಯಮಗಳಲ್ಲಿ ಇದೂ ಒಂದು.

''ಈಗ ಮುಂದಿನ ಪ್ರಶ್ನೆ ಈ ಅಪರಾಧವನ್ನು ಯಾರ ತಲೆಗೆ ಕಟ್ಟುವುದು. ಈ ಕೆಳಗಿನ ವಿಚಾರಗಳ ಆಧಾರದ ಮೇಲೆ ಈ ಪ್ರಶ್ನೆಯನ್ನು ತೀರ್ಮಾನಿಸಬೇಕು.

1) ಪೊಲೀಸರ ಕರ್ತವ್ಯಕ್ಕೆ ಈ ವ್ಯಕ್ತಿ ಅಡ್ಡಿ ಪಡಿಸಿದನೇ?
2) ಈ ವ್ಯಕ್ತಿಯನ್ನು ಶಿಕ್ಷಿಸಿದರೆ ಮೇಲಿನವರು ಸುಪ್ರೀತಿಗೊಳ್ಳುವರೇ?



ಮಟಾಧಿನ್‌ನಿಗೆ ಮತ್ತೊಮ್ಮೆ ಈ ಸಂದೇಹಾಸ್ಪದದ ವ್ಯಕ್ತಿ ಒಳ್ಳೆಯವನೆಂದು ಮನದಟ್ಟು ಮಾಡಿಕೊಡಲಾಯಿತು. ಆದರೂ ಒಂದು ಅಂಶ ಮಾತ್ರ ಆ ವ್ಯಕ್ತಿಯ ವಿರುದ್ಧವಾಗಿತ್ತು. ಯಾರಾದರೂ ಅವನ ವಿರುದ್ಧ ತಿರುಗಿ ಬಿದ್ದರೆ ಅಥವಾ ಪೊಲೀಸರು ಅನ್ಯಾಯದಿಂದ ವರ್ತಿಸಿದ್ರೆ ಆದರೆ ಅವನು ಖಂಡಿತವಾಗಿ ಅವರ ವಿರುದ್ಧ ತಿರುಗಿ ಬೀಳುತ್ತಾನೆ. ಅಧಿಕಾರ ಸೂತ್ರ ಹಿಡಿದಿರುವವರು ಇವನ ಬಗ್ಗೆ ಹೊಂದಿದ್ದ ಅಭಿಪ್ರಾಯಕ್ಕೆ, ವಿರೋಧ ಪಕ್ಷಗಳು ಹೊಂದಿರುವ ಅಭಿಪ್ರಾ, ಯಕ್ಕೆ, ಈ ವ್ಯಕ್ತಿಯ ಅಭಿಪ್ರಾ,ಯಗಳು, ಅನುಗುಣವಾಗಿವೆ.

''ಸಮಸ್ಯೆ ಬಗೆಹರಿಯಿತು; ಎನ್ನುತ್ತಾ ಮಟಾಧಿನ್ ಮೇಜಿನ ಮೇಲೆ ತನ್ನ ಮುಷ್ಟಿಯನ್ನು ಗುದ್ದಿದ. ಇಂತಹ ಫಸ್ಟ್‌ಕ್ಲಾಸ್ ಕೇಸ್ ಎಲ್ಲಾದರೂ ಇದ್ದಿಷ್ಟೇ ಆದರೆ ಅದು ಇದೊಂದೇ; ಒಳ್ಳೆ

ಭರ್ಜರಿ ಸಾಕ್ಷಿನೂ ಉಂಟು. ಜೊತೆಗೆ ಮೇಲಿನೋರ ಕುಮ್ಮಕ್ಕೂ ಉಂಟು!''

''ಒಬ್ಬ ಸಂಭಾವಿತ ಹಾಗೂ ಮುಗ್ಧನನ್ನು ಎಳೆದು ತಂದು ಶಿಕ್ಷೆಗೆ ಗುರಿಪಡಿಸಿದರೆ ನಮಗೆ ಕ್ಷಮೆ ಸುಲಭವಾಗಿ ದೊರೆಯದು;'' ಎಂದ ಅಲ್ಲಿದ್ದ ಒಬ್ಬ ಇನ್‌ಸ್ಪೆಕ್ಟರ್.

''ನೋಡಿ, ನಾನೀಗಾಗಲೇ ನಿಮಗೆ ಹೇಳಿದ್ದೀನಿ, ಅವನಲ್ಲಿರೋ ದೇವರೇ ಪ್ರತಿಯೊಬ್ಬ ಮನುಷ್ಯನಲ್ಲೂ ಇದ್ದಾನೆ ಅಂತ. ನಿಜವಾದ ಕೊಲೆಗಡುಕನನ್ನು ಶಿಕ್ಷಿಸಿದರೂ ಒಂದೇ ಅಥವಾ ಮುಗ್ಧನನ್ನು ಶಿಕ್ಷಿಸಿದರೂ ಒಂದೇ, ಎರಡೂ ಒಂದೇ. ಇಬ್ಬರಲ್ಲೂ ಆ ದೇವರೇ ಗಲ್ಲುಗಂಬ ಏರೋನು. ಆ ಮೇಲೆ ಈ ವ್ಯಕ್ತಿಯ ಮೈ ಮೇಲಿನ ಬಟ್ಟೆ ಬರೇಲಿ ರಕ್ತದ ಕಲೆಗಳು ಸಿಕ್ಕಿವೆ. ಬೇಕಾಗಿರೋದು ಈಗಲೇ ಇಲ್ಲೇ ಸಿಕ್ಕಿರಬೇಕಾದರೆ ರಕ್ತದ ಕಲೆ ಹುಡುಕೋದಕ್ಕೆ ಯಾಕೆ ಹೋಗಬೇಕು? ಎಷ್ಟು ಸರಳವಾಗಿರಬೇಕಿತ್ತೋ ಅಷ್ಟು ಸರಳವಾಗಿದೆ. ಈಗ ನೀವು ಎಫ್.ಐ.ಆರ್. ಫೈಲ್ ಮಾಡೋದಷ್ಟೇ ಮಾಡಬೇಕಾಗಿರೋದು ಎಂದ ಮಟಾಧಿನ್ ಶಾಂತವಾಗಿ. ಅವನ ಆದೇಶದಂತೆ ಅವರು ಎಫ್.ಐ.ಆರ್. ಫೈಲ್ ಮಾಡಿದರು. ಫೈಲ್ ಮಾಡುವಾಗ ಸ್ವಲ್ಪ ಜಾಗ ಖಾಲಿ ಬಿಟ್ಟುಕೊಂಡರು - ಯಾವುದಾದರೂ ''ಕಣ್‌ತಪ್ಪಿದ ಮಾಹಿತಿಯನ್ನು ಸೇರಿಸಲು'' ಇರಲೆಂದು.

ಮರುದಿನ ಠಾಣೆಯ ಉಸ್ತುವಾರಿ ನೋಡಿಕೊಳ್ಳುವವನೊಬ್ಬ ಮಟಾಧಿನ್‌ನನ್ನು ಕುರಿತು ''ಸಾರ್ ಪ್ರಾಣ ಹೋಗೋ ಅಂತ ಮಾತು ಎದುರಿಸಬೇಕಾಗಿದೆ. ದಿನಾ ಅನೇಕ ಜನ ಆ ಮುಗ್ಧನ ಪರವಹಿಸಿಕೊಂಡು ಮೊರೆ ಇಡೋಕೆ ನಮ್ಮ ಹತ್ರ ಬರ್ತಿದ್ದಾರೆ. ಆ ಮುಗ್ಧನನ್ನು ಏತಕ್ಕೆ ಒಳೇಲಿ ಹಾಕಿ ಬೇಯಿಸ್ತಿರಾ? ಈ ಮುಂಚೆ ಇಂತಹ ಕೆಲಸ ಚಂದ್ರಲೋಕದಲ್ಲಿ ಎಂದೂ ಆಗಿರಲಿಲ್ಲ; ಅಂತ ಎಲ್ಲಿ ಹೇಳ್ತಿದ್ದಾರೆ. ಈ ಜನಕ್ಕೆ ಏನು ಉತ್ತರ ಹೇಳಬೇಕು ಹೇಳಿ? ನಾವಂತೂ ತುಂಬಾ ಪೇಚಾಟಕ್ಕೆ ಸಿಕ್ಕಿಕೊಂಡಿದ್ದೀವಿ'' ಎಂದ.

''ನೀವು ಅವರ ಬಗ್ಗೆ ಗಡಿಬಿಡಿಗೊಳ್ಳೋದಕ್ಕೆ ಏನೂ ಕಾರಣ ನನಗೆ ಕಾಣ್ಸಲ್ಲ. ಪ್ರಾರಂಭದಲ್ಲಿ ಯಾವಾಗಲೂ ಹೀಗೇನೆ. ನಿಜಕ್ಕೂ ಪೇಚಾಟಕ್ಕೆ ಸಿಕ್ಕಿಕೊಳ್ಳಬೇಕಾಗ್ತದೆ. ಆದರೆ ಮುಗ್ಧ ವ್ಯಕ್ತಿಯನ್ನು ಬಿಡುಗಡೆ ಮಾಡುವಾಗ ಪೇಚಾಟಕ್ಕಿಟ್ಟುಕೊಳ್ಳೊ ಕಾಲಾನೂ ಒಂದು ದಿನ ಬರ್ತದೆ. ಜ್ಞಾಪಕವಿರಲಿ, ಪ್ರತಿಯೊಂದಕ್ಕೂ ಉತ್ತರ ಇದ್ದೇ ಇದೆ. ಯಾರಾದರೂ ಇವನ ಪರ ವಕಾಲತ್ತು ವಹಿಸಿ ಬಂದರೆ ಈ ಕೇಸಿನ ಬಗ್ಗೆ ನನಗೆ ಎಲ್ಲವೂ ಗೊತ್ತು, ಈ ವ್ಯಕ್ತಿನೂ ಮುಗ್ಧ ಅಂತಾನೂ ಗೊತ್ತು. ಆದರೆ ಈ ಕೇಸಿನಲ್ಲಿ ಏನೂ ಮಾಡಕ್ಕಾಗಲ್ಲ. ಇದು ಮೇಲಿನವರ ಆರ್ಡರ್ಸ್ ಎನ್ನಿ'' ಎಂದ ಮಟಾಧಿನ್.

''ಹಾಗಿದ್ದ ಪಕ್ಷದಲ್ಲಿ ಅವರು ಎಸ್.ಪಿ. ಬಳಿಗೆ ಹೋಗ್ತಾರೆ'' ಎಂದ ಪೊಲೀಸ್ ಇನ್ಸ್‌ಪೆಕ್ಟರ್.

''ತನ್ನ ಹತ್ತಿರಕ್ಕೆ ಬಂದಾಗ ಎಸ್.ಪಿ.ನೂ ಮೇಲಿನವರ ಆದೇಶ ಇದು, ಎಂದು ಹೇಳ್ತಾರೆ.''

''ಆ ಮೇಲೆ ಅವರು ಐ.ಜಿ. ಮನೆ ಬಾಗಿಲ ಚಿಲಕ ತಟ್ತಾರೆ''

''ತಟ್ಲಿ. ಐ.ಜಿ.ನೂ ಅದೇ ನೆಪ ಹೇಳ್ತಾರೆ.''

''ಸರಿ, ಅಷ್ಟಕ್ಕೆ ಅವರು ನಿಲ್ಲಿಸಲ್ಲ. ಗೃಹಮಂತ್ರಿಗಳ ಹತ್ತಿರ ಹೋಗ್ತಾರೆ.''

''ಹೋಗ್ಲಿ, ಅವರು ಎಲ್ಲಾ ನೋಡ್ಕೊಳ್ತಾರೆ. ಅವರೂ ಕೂಡ ಇದು ಮೇಲಿನವರ ಆರ್ಡರಪ್ಪ ಅಂತಾರೆ.''

''ಅಂದರೆ ನಿಮ್ಮ ಅರ್ಥ ಮಿನಿಸ್ಟ್ರೂನೂ ಹಾಗೆ ಹೇಳ್ತಾರಾ? ಅವರು ಮಂತ್ರಿಗಳನ್ನು ನೋಡೋದನ್ನು ಯಾರ ಕೈಲೂ ತಡೆಯೋಕ್ಕಾಗಲ್ಲ.''

''ನಿನಗೆ ಗ್ಯಾರಂಟಿ ಕೊಡ್ತೀನಿ. ಮಿನಿಸ್ಟ್ರು ಕೂಡ ಇದೇ ರೆಡಿಮೇಡ್ ಉತ್ತರಾನೇ ಹೇಳ್ತಾರೆ. ಇದು ಮೇಲಿನವರ ಆದೇಶದಂತೆ ಆಗಿರೋದು.''

''ಹಾಗಾದರೆ ....'' ಎಂದ ಪೊಲೀಸ್ ಇನ್‌ಸ್ಪೆಕ್ಟರ್.

''ಹಾಗಾದರೆ ಅಂದ್ರೇನು ಅರ್ಥ, ನಿನಗಷ್ಟು

ಅರ್ಥವಾಗಲ್ವ. ಅವರಿಗೆ ಇನ್ನೆಲ್ಲೂ ಹೋಗಕ್ಕಾಗಲ್ಲ ಅಂತ? ಮೇಲಿರೋ ದೇವರ ಬಳಿಗಷ್ಟೇ ಅವರು ಹೋಗಬಹುದು. ಆದರೆ ಎಂದಾದರೂ ಯಾರಾದರೂ ದೇವ್ರ ಲೋಕಕ್ಕೋದವರು ಹಿಂದಿರುಗ್ವರಾ?'' ಎಂದ ಮಟಾಧಿನ್.

ಮಟಾಧಿನ್‌ನ ಕಡೆ ಆಶ್ಚರ್ಯಭರಿತನಾಗಿ ನೋಡಿದ ಪೊಲೀಸ್ ಇನ್‌ಸ್ಪೆಕ್ಟರ್. ಎಂತಹ ಚಾಣಕ್ಯತನದ ಮಾತು. ಅವನ ವಾದದ ಸರಣಿಗೆ ಮನಸೋತ. ಸ್ವಲ್ಪ ಹೊತ್ತು ಮೌನ ಕಳೆಯಿತು. ಮಟಾಧಿನ್ ಪುನಃ ''ಕಳೆದ 25 ವರ್ಷಗಳಿಂದ ಇಂತಹ ರೆಡಿ-ಮೇಡ್ ಆದೇಶಗಳು ನಮಗೆ ಮಾಮೂಲಿಯಾಗಿದ್ದು ಅವನ್ನೇ ಮೇಲಿನವರಿಂದ ಪಡೆಯುತ್ತ ಬಂದಿದ್ದೀವಿ. ಈ ಆದೇಶಗಳು ಅನೇಕ ವೇಳೆ ಸರಕಾರವನ್ನು ಅಪಾಯದಿಂದ ಪಾರು ಮಾಡಿವೆ'' ಎಂದ. ಅವರು ಆ ಮುಗ್ಧನ ಮೇಲೆ ಕೇಸ್ ಹಾಕಲು ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡರು.

''ಈ ಕೆಲ್ಸ ಬಹಳ ಅಚ್ಚುಕಟ್ಟಾಗಿ ಮಾಡ್ಬೇಕು. ಸೀದಾ ಹೋಗಿ ಅರ್ಧ ಡಜನ್ ಸಾಕ್ಷಿಗಳನ್ನು ಹಿಡಕ್ಕೊಂಡು ಬನ್ನಿ'' ಎಂದ ಮಟಾಧಿನ್.

ಕಕ್ಕಾಬಿಕ್ಕಿಗೊಂಡ ಆ ಪೊಲೀಸ್ ಇನ್‌ಸ್ಪೆಕ್ಟರ್ ಮಟಾಧಿನ್‌ನ ಕಡೆ ನೋಡಿದ.

''ಎಲ್ಲಿಂದ ಕರಕ್ಕೊಂಡು ಬರೋಣ ಸಾಕ್ಷಿಗಳನ್ನ? ಕೊಲೆಯಾದೋನ್ನ ಯಾರೂ ನೋಡಿಲ್ಲ ಅಂದ ಮೇಲೆ ಸಾಕ್ಷಿಗಳ ಪ್ರಶ್ನೇನೆ ಉದ್ಭವಿಸಲ್ಲ''.

ಮಟಾಧಿನ್ ಹತಾಶನಾಗಿ ತಲೆಯನ್ನು ಚಚ್ಚಿಕೊಂಡ. ಇಂತಹ ಮಡ್ಡ ಸಾಂಬ್ರಾಣಿಗಳೊಂದಿಗೆ ತಾನು ಹೆಣಗಬೇಕಲ್ಲ! ಕಾನೂನಿನ ಅ. ಆ. ಇ. ನೂ ಗೊತ್ತಿಲ್ಲ!

''ಸಾಕ್ಷಿಯ ಅರ್ಥ ಗೊತ್ತೆ ನಿನ್ಗೆ? ಸಾಕ್ಷಿ ಅಂದ್ರೆ, ತಾವೆ ಕಣ್ಣಾರೆ ಘಟನೆಯನ್ನು ನಿಜವಾಗಿಯೂ ನೋಡಿದವರಲ್ಲ. ಆದರೆ ಅವರೇನಿದ್ದರೂ ನೋಡಿದ್ದೇವೆ ಎಂದು ಹೇಳುವ ಹಕ್ಕನ್ನು ಚಲಾಯಿಸುವವರು'' ಎಂದ ರೇಗುತ್ತ.

''ಯಾರು ಅಂತ ಬುರಡೆ ಬಿಡೋ ಧೈರ್ಯ



''ಇದು ಒಂದು ತರಹ ಚಿಕ್ಕ ಗುದ್ಲಿ ಇದ್ದ ಹಾಗೆ, ಕೆಂಚಣ್ಣ! ದೋಸೆಯಲ್ಲಿ ಬರುವ ಹಳ್ಳು, ಕೂದ್ಲು, ಕೊಬ್ಬರಿ ಚಿಪ್ಪು ಹೆಕ್ಕ ತೆಗೀಲಿಕ್ಕಂತ ಇಟ್ಟಿರುತ್ತಾರೆ.''

ತೋರಿಸಲು ಮುಂದೆ ಬರಲ್ಲ ಸಾರ್'' ಎಂದ ಪೊಲೀಸ್ ಇನ್‌ಸ್ಪೆಕ್ಟರ್. ನಿಸ್ಸಂದೇಹವಾಗಿ, ಬರ್ತಾರೆ, ಎಂದು ಒತ್ತಿ ಹೇಳಿದ. ನೀವು ಹೇಗೆ ಈ ಇಲಾಖೇನಾ ನಿಭಾಯಿಸ್ತೀರೋ ಅಂತ ಆಶ್ಚರ್ಯವಾಗ್ತಿದೆ ನನ್ಗೆ. ಅರೇ, ಪೊಲೀಸ್ನೋರು ಸದಾ ತಮ್ಮ ಕರ್ತವ್ಯದ ಒಂದು ಮಾಮೂಲ್ ಭಾಗದಂತೆ ತಮ್ಮ ಜೇಬಿನಲ್ಲಿ ಸಾಕ್ಷಿಗಳ ಒಂದು ಪಟ್ಟಿಯನ್ನು ಇಟ್ಟಿರಬೇಕು. ಸಂದರ್ಭ ಬಂದಾಗಲೆಲ್ಲ ಆ ಪಟ್ಟಿ ಅದೇ ಸಾಕ್ಷಿಗಳನ್ನು ಪ್ರತಿ ಕೇಸಿಗೂ ಮುಂದಕ್ಕೆ ತಳ್ಳುತ್ತೆ. ನಮ್ಮ ಭೂಲೋಕದಲ್ಲಿ ಒಂದೇ ಹೊತ್ನಲ್ಲಿ ನಡೆದ ಹಲವಾರು ಘಟನೆಗಳನ್ನು ಕಣ್ಣಿಂದ ತಾವೇ ನೋಡಿದವರೆಂದು ಸಾಕ್ಷಿ ಹೇಳುವ ಜನರೇ ಅನೇಕರಿದ್ದಾರೆ. ಈ ಜನರು ಯಾವುದೋ ದೈವಿಶಕ್ತಿಯನ್ನು ಕೈವಶ ಮಾಡಿಕೊಂಡಿರುವ ಕಾರಣ ಎಲ್ಲಿ ಏನಾಗ್ತವೆ ಅಂತಲೂ ಹಾಗೇನೆ ಘಟನೆ ನಡೆಯೋ ಸ್ಥಳದಲ್ಲಿ

ತಾವು ಹಾಜರಿರಬೇಕೆಂದು ಅವರು ಮುಂಭಾವಿಸುತ್ತಾರೆ. ನಮ್ಮ ನ್ಯಾಯಾಲಯಗಳು ಕೂಡ ಇದನ್ನು ಸುಲಭವಾಗಿ ಒಪ್ಪಿಕೊಳ್ತವೆ. ನಾನೀಗ ನಿಮಗೆ ಸೀದಾ ಸಾಕ್ಷಿದಾರರ ಪಟ್ಟಿ ತಯಾರು ಮಾಡಲು ಸಹಾಯ ಮಾಡ್ತೀನಿ. ಒಂದು ಡಜನ್ ಅಥವಾ ಎಷ್ಟೋ ಬೊಟಾಟಿಕೆಯೋರ್ನ ಅಂದರೆ ಜೇಬುಗಳ್ಳತನ, ಸಣ್ಣ ಪುಟ್ಟ ಕಳ್ಳತನ, ಬೀದಿ ಬೀದಿ ಅಲೆಯೋದು, ಇವನ್ನೆ ಕುಲಕಸುಬನ್ನಾಗಿ ಮಾಡಿಕೊಂಡಿರೋ ಕೆಲವು ಮಡ್ಡಿಗಳ್ನ ಕರೆಸು. ಜೊತೆಗೆ ಜೂಜುಕೋರರ್ನ, ಬಟ್ಟೆ ಇಳಿಸೋರ್ನನೂ! ಎಂದ.

ಮರುದಿನ ಮೇಲ್ಕಂಡ ಲಕ್ಷಣಗಳನ್ನು ಹೋಲುವ ಆ ಬಡಾವಣೆಯ 'ಕುಖ್ಯಾತರು' ಠಾಣೆಯಲ್ಲಿ ಹಾಜರಾದರು. ಅವರನ್ನು ನೋಡಿ ಮಠಾಧಿನ್ ಪರಮಾನಂದ ಪಟ್ಟ. ಅವನ ತಲೇಲಿ ಇದ್ದ ಭೂಪತಿಗಳೇ! ಇಂತಹ ಕುಳಗಳನ್ನು ಚಂದ್ರ ಲೋಕದಲ್ಲಿ ಬಹಳ ದಿನದಿಂದ ನೋಡಿರಲಿಲ್ಲ. ಓ! ಅದ್ಹೇಗೆ ಅವರನ್ನು ನೋಡದೆ ಇದ್ದ!

ಈ ಜನಗಳು ಅವನ ಹೃದಯದ ತಂತಿಯನ್ನು ಮೀಟಿದರು. ''ಹಾಗಾದ್ರೆ ನೀನು ಆ ಕೊಲೆಗಾರ, ಅವನ್ನ ಲಾಠಿಯಿಂದ ಹೊಡೆಯೋದ್ನ ನೋಡ್ದೆ'' ಎಂದು ಕೇಳಿದ ಒಬ್ಬನನ್ನು ಖುಷಿಯಿಂದ.

''ಇಲ್ಲ ಸಾಬ್, ನಾನು ಅಲ್ಲಿರಲಿಲ್ಲ. ನಾನು ನೋಡ್ಲಿಲ್ಲ.'' ಮಟಾಧಿನ್‌ನಿಗೆ ಗೊತ್ತಿತ್ತು. ಈ ತರಹದ ತನಿಖೆ ಅವರಿಗೆ ತೀರಾ ಹೊಸದು ಎಂದು. ತುಂಬಾ ಎಚ್ಚರಿಕೆಯಿಂದ, ತಾಳ್ಮೆಯಿಂದ ಅವರನ್ನು ತಯಾರಿ ಮಾಡಬೇಕು. ಆಮೇಲೆ ಅವರನ್ನು ದಾರಿಗೆ ತರಬಹುದು ಎಂದುಕೊಂಡ.

''ನೀನು ಅಲ್ಲಿ ಇರಲಿಲ್ಲ ಅನ್ನೋದ್ನ ನಾನೂ ಒಪ್ತೀನಿ'' ಎಂದ ಒಳ್ಳೆ ಭರ್ಜರಿ ನಗೆ ಚಟಾಕಿ ಹಾರಿಸುತ್ತ ಮಟಾಧಿನ್. ''ಆದರೆ ಅವನಿಗೆ ಲಾಠಿ ಎತ್ತಿ ಹೊಡಿತಿದ್ದುದ್ದನ್ನು ನೀನು ನೋಡಿರಬೇಕಲ್ವ, ನೋಡ್ಲಿಲ್ವ?''

ತಾವು ಯಾರೋ ಹುಚ್ಚನೊಂದಿಗೆ ವ್ಯವಹರಿಸುತ್ತಿದ್ದೇವೆ, ಅದಕ್ಕೆ ಅವನು ಈ ರೀತಿಯ ಹುಚ್ಚಾಟಿಕೆಯ ಮಾತುಗಳನ್ನು ಆಡುತ್ತಿದ್ದಾನೆ ಎಂದುಕೊಂಡ ಅವರು ನಗಲು ಪ್ರಾರಂಭಿಸಿದರು.

''ಬಾಯಿ ಮುಚ್ಚಿ! ಉತ್ತರ ಬೇಕು ನನ್ಗೆ'' ಎಂದು ಅಬ್ಬರಿಸಿದ.

''ನಾವು ಅಲ್ಲಿರಲ್ಲ ಎಂದಮೇಲೆ ಏನಾದರೂ ನೋಡೋಕೆ ಹೇಗೆ ಸಾಧ್ಯ?''

ಮಟಾಧಿನ್ ಅವರ ಕಡೆ ದುರುಗುಟ್ಟಿದ.

''ಹೇಗೆ ಅಂತ ನಾನು ಹೇಳ್ತಿನಿ'' ಎಂದು ಗೊಣಗಿದ.

''ನನ್ನ ಹತ್ರ ನಿಮ್ಮ ಪೂರ್ವೋತ್ತರ ಎಲ್ಲಾ ಇದೆ. ಪೊಲೀಸ್ ರಿಜಿಸ್ಟರ್‌ನಲ್ಲಿ ನಿಮ್ಮ ಪ್ರತಿಯೊಂದು ಅಪರಾಧಾನೂ ರೆಕಾರ್ಡ್ ಆಗಿದೆ. ಅದರ ಪ್ರಕಾರ ನಿಮ್ಮಲ್ಲಿ ಒಬ್ಬೊಬ್ಬನನ್ನು ಹತ್ತತ್ತು ವರ್ಷ ಕಂಬಿ ಎಣಿಸಲಿಕ್ಕೆ ಹಾಕಬಹುದು. ಕೆಲಸ ಮಾಡ್ಕೊಂಡು ಬದಕಕ್ಕೆ ಆಸೆನೋ ಅಥವಾ ಹತ್ತತ್ತು ವರ್ಷ ಕೊಳಿತೀರೊ ಜೈಲಲ್ಲಿ?''

''ಸಾರ್, ಜೈಲಿಗ್ಹೋಗಕ್ಕೆ ಆಸೆ ಇಲ್ಲ'' ಭಯದಿಂದ ತಲ್ಲಣಿಸುತ್ತ ಎಂದರು.

''ಸರಿ, ಹಾಗಿದ್ದ ಮೇಲೆ ಕೊಲೆಗಾರ ಲಾಠಿ ಹಿಡ್ಕೊಂಡು ಅವನನ್ನು ಹೊಡೆಯೋದ್ನ ನೀವು ನೋಡಿದ್ರಿ, ನೋಡ್ಲಿಲ್ವ ನೀವು?''

''ಸಾಬ್, ಹೊಡೆಯೋದ್ನ ನೋಡ್ದೊ. ಆ ಮನುಷ್ಯ ತನ್ನ ಮನೆಯಿಂದ ಹೊರಗೆ ಬಂದವನ ಲಾಠಿ ಹಿಡಿದು ಸೀದಾ ಅವನ ಹತ್ತಿರ ಹೋದ. ಪ್ರಜ್ಞೆ ತಪ್ಪಿ ನೆಲಕ್ಕುರುಳೋವರೆಗೂ ಬಾರಿಸ್ದ.''

''ಅಬ್ಬಾ, ಅಂತೂ ಕೊನೆಲಾದರೂ ಬುದ್ಧಿ ಬಂತಲ್ಲ. ಇನ್ನ ಮೇಲೆ ಇಂತಹ ಹಲವಾರು ಘಟನೆಗಳನ್ನು ನಿಗಾ ಇಟ್ಟುಕೊಂಡು ನೋಡಿ'' ಎಂದ ಮಟಾಧಿನ್.

''ಸಾಬ್, ತಾವು ಯಾವುದನ್ನು ನೋಡಿ ಅಂತ ಹೇಳ್ತಿರೋ ಅದನ್ನು ನೋಡ್ತಿವಿ'' ಎಂದರು ಅವರೆಲ್ಲ.

ಈ ತನಿಖೆ ಹಿಡಿದ ಜಾಡನ್ನು ಕಂಡ ಇನಸ್ಪೆಕ್ಟರ್ ದಂಗಾದ. ಅನಂತರ ತನ್ನ ಚಿತ್ತ ಸ್ವಾಸ್ಥ್ಯವನ್ನು ಮರಳಿ ಪಡೆದು ಮಟಾಧಿನ್‌ನ ಕಾಲಿಗೆ ಅಡ್ಡಬಿದ್ದ.

ಪಕ್ಕಕ್ಕೆ ಸರಿ, ಮೊದ್ಲು. ಕೆಲ್ಸ ಮಾಡಕ್ಕೆ ಬಿಡು'' ಎಂದ ಮಟಾಧಿನ್. ಆದರೆ ಪೊಲೀಸ್ ಇನ್‌ಸ್ಪೆಕ್ಟರ್ ಮಟಾಧಿನ್‌ನ ಕಾಲನ್ನು ತಬ್ಬಿ ''ಈ ಪಾದಕಮಲಗಳ ಬಳಿಯಲ್ಲೇ ಇಡೀ ಜೀವನವನ್ನು ಕಳೆಯುವ ಬಯಕೆ ನನ್ನದು'' ಎಂದ.

ಈ ತನಿಖೆಯನ್ನು ಹೇಗೆ ಕೈಗೊಳ್ಳಬೇಕೆಂದು ಮಟಾಧಿನ್ ವಿಚಾರ ಮಾಡಿದ. ಅನಂತರ ಅದನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಬಿಳಿ ಕಾಗದದ ಮೇಲೆ ಇಳಿಸಲು ಕಾರ್ಯ ಮಗ್ನನಾದ. ಹೀಗೆ ಮಾಡುವಾಗ ಎಫ್.ಐ.ಆರ್. ತಿದ್ದಿದ. ರಿಜಿಸ್ಟರ್‌ಗೆ ಕೆಲವು ಹಾಳೆಗಳನ್ನು ಸೇರಿಸಿದ. ಲಾಗ್ ಬುಕ್‌ನಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದ. ಅನಂತರ ಸಾಕ್ಷಿದಾರರ ಹೇಳಿಕೆಗಳನ್ನು ರೆಕಾರ್ಡ್ ಮಾಡಿಕೊಂಡ. ತಮ್ಮ ಅನುಕೂಲಕ್ಕೆ ತಕ್ಕಂತೆ ಹೇಗೆ ತನಿಖೆಯನ್ನು ಮಾಡಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ಸಲಹೆಗಳನ್ನು ನೀಡಿದ.

ಆ ಅಪರಾಧಿಗೆ 20 ವರ್ಷಗಳ ಸೆರೆಮನೆ ಶಿಕ್ಷೆ ಆಯಿತು. ಚಂದ್ರಲೋಕದ ಪೊಲೀಸರು ತನಿಖಾ ತರಬೇತಿಯನ್ನು ಪೂರ್ಣಗೊಳಿಸಿದರು. ಜನರ ವಿರುದ್ಧ ಕೇಸುಗಳನ್ನು ಹಾಕಿ ಅವರನ್ನು ಜೈಲಿಗೆ ತಳ್ಳುವ ವಿಧಾನವನ್ನು ಕಲಿತರು. ಚಂದ್ರಲೋಕದ ಸರಕಾರವೂ ಭಾರಿ ಹೆಮ್ಮೆಪಟ್ಟಿತು. ಈ ದಕ್ಷತೆ ನಿಜಕ್ಕೂ ಭಾರತ ಸರಕಾರದ ಕೊಡುಗೆಯಾಗಿತ್ತು. ಚಂದ್ರಲೋಕದ ಸಂಸತ್ತು ಅಭಿನಂದನೆಯ ಠರಾವೊಂದನ್ನು ಪಾಸು ಮಾಡಿ ಭಾರತ ಸರಕಾರಕ್ಕೆ ರವಾನಿಸಿತು.

ಕಡೆಗೊಂದು ದಿನ ಮಟಾಧಿನ್‌ನಿಗೆ ಸಾರ್ವಜನಿಕ ಸನ್ಮಾನವನ್ನೇರ್ಪಡಿಸಿದರು. ಹೂಮಾಲೆಗಳ ರಾಶಿ ಹೊತ್ತ ಅವನನ್ನು ತೆರೆದ ಜೀಪಿನಲ್ಲಿ ನಗರದ ಸುತ್ತ ಪ್ರದಕ್ಷಿಣೆ ಹಾಕಿಸಲಾಯಿತು. ಸಹಸ್ರಾರು ಜನ ಅವನ ಸುತ್ತ ಮುತ್ತಿ ಅವನ ಗೌರವಾರ್ಥ ಘೋಷಣೆಗಳನ್ನು ಕೂಗಿದರು. ಅವರ ಪ್ರಶಂಸೆಯನ್ನು ಮಟಾಧಿನ್ ತನ್ನ ನಾಡಿನ ಗೃಹ ಮಂತ್ರಿ ಸ್ವೀಕರಿಸುವ ಭಂಗಿಯಲ್ಲಿ ನಿಂತು ಸ್ವೀಕರಿಸಿದ.

> **ನೆಲಮುಗಿಲು**
>
> ಕೋಟಿ ನಕ್ಷತ್ರಗಳಲ್ಲಿ ಚಂದ್ರನೊಬ್ಬನಿರುವ
> ಹಗಲ ಬೆಳಕಿಲ್ಲಿ ಸೂರ್ಯನೊಬ್ಬನಿರುವ
> ತೆರದಲ್ಲಿ ವ್ಯಕ್ತಿತ್ವ ಸಾಧಿಸಿದಾಗ ನೀನೆ ನೆಲವಾಗುವಿ
> ನೀನೆ ಮುಗಿಲಾಗುವಿ ನೀನೆ ಸೂರ್ಯ ಚಂದ್ರನಾಗುವಿ
> ಎಂದಾತ ನಮ್ಮ ವಾಲೀಕಾರ ಚೆನ್ನಣ್ಣ
>
> • *ಚೆನ್ನಣ್ಣ ವಾಲೀಕಾರ*

26 ವರ್ಷಗಳ ಹಿಂದೆ ತಾನು ಪೊಲೀಸ್ ಪಡೆಗೆ ಸೇರಿದಾಗ ಎಂದಾದರೊಂದು ದಿನ ತಾನು ಈ ಬಗೆಯ ಗೌರವವನ್ನು ಸ್ವೀಕರಿಸುವೆನೆಂದು ಅವನು ಯೋಚಿಸಿದ್ದನೆ? ಅದೂ ಪರದೇಶದಲ್ಲಿ! ಈ ಸಮಾರಂಭಕ್ಕೆ ಒಂದು ಕುರ್ತಾ, ಟೋಪಿ ಹಾಗೂ ಧೋತಿಯನ್ನು ತಂದಿದ್ದರೇ ... ಎಂದುಕೊಂಡ.

ಇತ್ತ ಕಡೆ ಭಾರತದಲ್ಲಿ ಗೃಹಮಂತ್ರಿಗಳು ದೂರದರ್ಶನದಲ್ಲಿ ಈ ಘಟನೆಯನ್ನು ನೋಡುತ್ತಿದ್ದರು. ಹಾಗೂ ಚಂದ್ರಲೋಕಕ್ಕೆ ತಾನು ಕಳಿಸಿದ ಸೌಹಾರ್ದ ನಿಯೋಗಕ್ಕೆ ವೇದಿಕೆ ತನ್ನ ಕಣ್ಮುಂದೆಯೇ ಸಿದ್ಧವಾಗುತ್ತಿರುವುದನ್ನು ಕಂಡು ಅಂತರ್ಯದಲ್ಲಿ ಹಿಗ್ಗಿದರು.

ಅನಂತರ ಇದ್ದಕ್ಕಿದ್ದಂತೆ ಘಟನೆಗಳು ಬೇರ ದಿಕ್ಕನ್ನು ಹಿಡಿದವು. ಒಂದು ದಿನ ಚಂದ್ರಲೋಕದಲ್ಲಿ ಸಂಸತ್ತಿನ ವಿಶೇಷ ಸಭೆಯನ್ನು ಕರೆಯಲಾಯಿತು. ಆ ಸಭೆ ಭಾರಿ ಕೋಲಾಹಲವನ್ನುಂಟು ಮಾಡಿತು. ಅದು ಗುಪ್ತವಾಗಿ ನಡೆದ ಸಭೆಯಾದುದರಿಂದ ಪತ್ರಿಕೆಗೆ ಯಾವ ವರದಿಯೂ ಬಿಡುಗಡೆಯಾಗಲಿಲ್ಲ. ಆದರೆ ಸಂಸತ್ತಿನ ಗೋಡೆಗಳಿಗೆ ಡಿಕ್ಕಿ ಹೊಡೆದ ಅವರ ವಾಗ್ವಾದ ಮಾರ್ದನಿಗೊಂಡು ಅಸ್ಪಷ್ಟವಾಗಿ ಹೊರಹೊಮ್ಮಿ ತಮ್ಮ ಆತ್ಮಕತೆಯನ್ನು ಹೇಳಿಕೊಂಡವು.

ಸದಸ್ಯರು ತಮ್ಮ ತಮ್ಮಲ್ಲಿ ನಂಜು ತುಂಬಿದ ಒರಟು ಭಾಷೆಯಲ್ಲಿ ಕಿರುಚಾಡಿದರು.

- ರೋಗಿಷ್ಟ ತಂದೆಯನ್ನು ಸಾಕಲು ಯಾವ



''ಅವನು ಒಂದು ಸುಳ್ಳು ಹೇಳಿದ್ದಕ್ಕೆ ಯಾಕೆ ಹೊಡಿತೀರಾ ಬಿಡಿ, ನೀವು ಕೋರ್ಟಿನಲ್ಲಿ ಎಷ್ಟು ಬಾರಿ ಹೇಳಿಲ್ಲಾ ....''

ಮಕ್ಕಳೂ ಸಿದ್ಧರಿಲ್ಲ.

- ನೀರಿನಲ್ಲಿ ಮುಳುಗುತ್ತಿರುವ ಮಗುವನ್ನು ರಕ್ಷಿಸಲು ಯಾರೂ ಮುಂದೆ ಬರುತ್ತಿಲ್ಲ.
- ಹತ್ತಿ ಉರಿಯುವ ಮನೆಯನ್ನು ನಂದಿಸಲು ಯಾರೂ ಪ್ರಯತ್ನಪಡುತ್ತಿಲ್ಲ.
- ಇತ್ತೀಚಿನ ದಿನಗಳಲ್ಲಿ ಪ್ರಾಣಿಗಿಂತಲೂ ಕಡೆಯಾಗಿದ್ದಾರೆ ಮನುಷ್ಯರು.
- ಸರಕಾರ ಈ ಕೂಡಲೇ ರಾಜನಾಮೆ ನೀಡಬೇಕು

ಮರುದಿನ ಚಂದ್ರಲೋಕದ ಪ್ರಧಾನ ಮಂತ್ರಿ ಮಟಾಧಿನ್‌ನನ್ನು ಕರೆಸಿದರು. ಒಂದೇ ರಾತ್ರಿಗೆ ಪ್ರಧಾನ ಮಂತ್ರಿಗಳು ವಯಸ್ಸಾದವರಂತೆ ಕಂಡು ಬಂದರು ಮಟಾಧಿನ್‌ನಿಗೆ. ಪ್ರಾಯಶಃ ನಿದ್ರೆ ಇಲ್ಲದೆ ಹಲವು ರಾತ್ರಿಗಳನ್ನು ಕಳೆದಿರಬೇಕು ಅವರು.

ವ್ಯಥೆ ತುಂಬಿದ ಧ್ವನಿಯಲ್ಲಿ ಮಟಾಧಿನ್‌ನನ್ನು ಕುರಿತು ''ನಿಮಗೆ ಹಾಗೂ ನಿಮ್ಮ ಸರಕಾರಕ್ಕೆ ನಿಜಕ್ಕೂ ಆಭಾರಿಗಳು ನಾವು. ಈ ದಿನ ನಿಮ್ಮ ನಾಡಿಗೆ ವಾಪಸು ಹೋಗಿ'' ಎಂದು ಆದೇಶಿಸಿದರು.

''ಇಲ್ಲ, ಸಾರ್, ಅವಧಿ ಮುಗಿಯುವವರೆಗೂ ನಾನು ದೇಶ ಬಿಡಲು ಉದ್ದೇಶಿಸಿಲ್ಲ.''

''ನಿಮ್ಮ ಉಳಿದ ಅವಧಿಗೆ ನಾವು ಸಂಭಾವನೆಯನ್ನು ನೀಡುತ್ತೇವೆ. ಅದರ ಎರಡರಷ್ಟು ಹೋಗಲಿ ಮೂರರಷ್ಟು ಕೊಡುತ್ತೇವೆ. ನೀವು ಮಾತ್ರ ಇಲ್ಲಿಂದ ಹೊರಟು ಹೋಗಿ'' ಎಂದರು ಪ್ರಧಾನಮಂತ್ರಿಗಳು.

''ಹಣ ಎಂದರೆ ನಮ್ಗೆ ಲೆಕ್ಕಕ್ಕಿಲ್ಲ. ಕರ್ತವ್ಯ ನಮ್ಗೆ ಮುಖ್ಯ. ಕಾಯಕವೇ ಕೈಲಾಸ ಎನ್ನುವವರು ನಾವು. ಇದೇ ನಮ್ಮ ಮೂಲತತ್ವ'' ಎಂದ ಮಟಾಧಿನ್.

ಕೊನೆಯ ಪ್ರಯತ್ನವಾಗಿ ಚಂದ್ರಲೋಕದ ಪ್ರಧಾನಿಗಳು ಭಾರತದ ಪ್ರಧಾನಿಗಳಿಗೆ ರಹಸ್ಯ ಪತ್ರವೊಂದನ್ನು ಬರೆದರು. ನಾಲ್ಕೇ ದಿನಗಳಲ್ಲಿ ಭಾರತಕ್ಕೆ ಮರಳುವಂತೆ ಅವನ ಐ.ಜಿ.ಯಿಂದ ಮಟಾಧಿನ್ ಆದೇಶ ಸ್ವೀಕರಿಸಿದ.

ಮಟಾಧಿನ್ ಎಸ್.ಪಿ.ಯ ಪತ್ನಿಗೆ ಚಂದ್ರಲೋಕದ ಶಿಲೆ ತೆಗೆದುಕೊಂಡು ಆಕಾಶನೌಕೆಗೆ ಬಂದು ಕುಳಿತ. ತಮ್ಮನ್ನು ತೊರೆದು ಹೋಗುತ್ತಿರುವ ಮಟಾಧಿನ್‌ನನ್ನು ನೋಡಿದ ಪೊಲೀಸರು ರೋಧಿಸಲು ಪ್ರಾರಂಭಿಸಿದರು.

ಬಹಳ ಕಾಲದವರೆಗೆ ಮಟಾಧಿನ್‌ನ ವಾಪಸಾತಿಯು ರಹಸ್ಯವಾಗಿಯೇ ಉಳಿಯುವಂತೆ ಕಾಯಲಾಯಿತು. ಇದ್ದಕ್ಕಿದ್ದಂತೆ ಮಟಾಧಿನ್‌ನ ಮೇಲೆ ಅಂತಹ ಕಳಂಕ ಹೊರಿಸಿ ಬಲವಂತದಿಂದ ಭಾರತಕ್ಕೆ ಹಿಂದಿರುಗುವಂತಹ ಅಹಿತಕಾರಿ ಘಟನೆಯಾದರೂ ಏನು? ಭಾರತದ ಪ್ರಧಾನಿಗಳಿಗೆ ಚಂದ್ರಲೋಕದ ಪ್ರಧಾನಿಗಳು ಬರೆದದ್ದಾದರೂ ಏನು?

ಒಂದು ದಿನ ಬೆಕ್ಕು ಚೀಲದಿಂದ ಹೊರಬಂತು.

''ಇನ್‌ಸ್ಪೆಕ್ಟರ್ ಮಟಾಧಿನ್‌ರ ಸೇವೆಯನ್ನು ನಮಗೆ ಎರವಲು ಕೊಟ್ಟು ಸಹಾಯ ಮಾಡಿದ್ದಕ್ಕಾಗಿ ನಾವು ನಿಮಗೆ ಆಭಾರಿಗಳು. ಆದರೆ ನೀವು ಅವರನ್ನು ಈ ಕ್ಷಣವೇ ಹಿಂದಕ್ಕೆ ಕರೆಸಿಕೊಳ್ಳಬೇಕು. ಭಾರತವನ್ನು ಇಷ್ಟು ದಿನವೂ ನಾವು ಸ್ನೇಹ ರಾಷ್ಟ್ರವೆಂದು ಗೌರವಿಸುತ್ತ ಬಂದಿದ್ದೇವೆ.

ಆದರೆ ನೀವು ನಮ್ಮನ್ನು ಶತ್ರುಗಳಂತೆ ನಡೆಸಿಕೊಳ್ಳುತ್ತಿರುವಿರಿ. ಇದು ವಿಶ್ವಾಸಘಾತುಕವಲ್ಲದೆ ಬೇರೇನೂ ಅಲ್ಲ. ನಿಮ್ಮ ಇನ್‌ಸ್ಪೆಕ್ಟರ್ ಮಟಾಧಿನ್ ನಮ್ಮ ನೆಮ್ಮದಿಯನ್ನು ಅಲ್ಲೋಲ ಕಲ್ಲೋಲಗೊಳಿಸಿರುವುದರಲ್ಲಿ ಅನುಮಾನವೇ ಉಳಿದಿಲ್ಲ. ಜೊತೆಗೆ ಅದೇ ಸಮಯಕ್ಕೆ ನಮಗೆ ಭಾರಿ ಹೊಡೆತವನ್ನೂ ಕೊಟ್ಟಿದ್ದಾನೆ. ಅವನು ಏನು ಮಾಡಿರುವನೋ ಅದು ಭಾರಿ ದಿಗಿಲು ಹುಟ್ಟಿಸುವಂತಹ ಫಲಿತಾಂಶಗಳನ್ನು ನೀಡಿದೆ. ಉದಾಹರಣೆಗೆ, ಸಾಯುವ ಸ್ಥಿತಿಯಲ್ಲಿರುವ ವ್ಯಕ್ತಿಯ ಬಳಿಗೆ ಅವನನ್ನು ರಕ್ಷಿಸಲು ಈಗ ಯಾರೂ ಹೋಗುತ್ತಿಲ್ಲ. ಕೊಲೆ ಆಪಾದನೆ ಹೊರಿಸಿ ಬಂಧಿಸುವರೆಂಬ ಭೀತಿಯಿಂದ. ರೋಗಿಷ್ಟ ತಂದೆಯನ್ನು ಮಗ ಕೂಡ ನೋಡಲಾರ - ತನ್ನ ತಂದೆ ಸತ್ತರೆ ತಾನು ಕೊಲೆ ಆಪಾದನೆಗೆ ಗುರಿಯಾಗುವೆನೆಂಬ ಹೆದರಿಕೆಯಿಂದ. ಇಂತಹ ಹಲವು ಉದಾಹರಣೆಗಳು ನಮ್ಮ ಜೀವನದ ಹಲವು ಮುಖಗಳನ್ನೊಳಗೊಂಡಂತೆ ಸರಾಗವಾಗಿ ವೃದ್ಧಿಸುತ್ತಿವೆ. ಸಂಕ್ಷೇಪವಾಗಿ ಹೇಳಬೇಕೆಂದರೆ ಮಾನವ ಸಂಬಂಧದ ಸೂಕ್ಷ್ಮ ಮೌಲ್ಯಗಳನ್ನು ಕಿತ್ತೊಗೆಯಲಾಗುತ್ತಿದೆ. ಮಟಾಧಿನ್‌ಜೀಯವರು ನಮ್ಮ ಸಂಸ್ಕೃತಿಯನ್ನು ನಿರ್ಮೂಲ ಮಾಡಿದ್ದಾರೆ. ಅವರು ಇನ್ನೂ ಇಲ್ಲೇ ಹೆಚ್ಚು ದಿನ ಉಳಿದರೆ ಅವರೊಬ್ಬರೇ ಏಕಾಕಿಯಾಗಿ ನಮ್ಮ ಸಂಪ್ರದಾಯವನ್ನು ಸಂಪೂರ್ಣವಾಗಿ ನಿಶ್ಶೇಷ ಮಾಡುವ ಕಾಲ ದೂರ ಉಳಿಯುವುದಿಲ್ಲ. ನಮ್ಮ ನಿವೇದನೆ: ''ಈ ಕ್ಷಣವೇ ನಿಮ್ಮ ರಾಮರಾಜ್ಯಕ್ಕೆ ಅವರನ್ನು ವಾಪಸ್ಸು ಕರೆಸಿಕೊಳ್ಳಿ'' ಎಂದಿತ್ತು ಪತ್ರದ ಒಕ್ಕಣೆ. ●

('ಇಂಡಿಯನ್ ಲಿಟರೇಚರ್'ನಲ್ಲಿ ಮೊದಲು ಮುದ್ರಿತ)

★ ಹವ್ಯಾಸ :

ಛಾಯಾಗ್ರಹಣ, ಅಂಚೆ-ಚೀಟಿಗಳ ಸಂಗ್ರಹ, ಖಗೋಳ ವಿಜ್ಞಾನ, ಪಕ್ಷಿ-ವೀಕ್ಷಣೆ ಮುಂತಾದ ಹವ್ಯಾಸಗಳಂತೆ ಹ್ಯಾಮ್ ರೇಡಿಯೋ ಕೂಡ ಒಂದು ಹವ್ಯಾಸ.

ಅಮೇಚೂರ್ ರೇಡಿಯೋ ಎಂದೂ ಕರೆಯಲ್ಪಡುವ ಈ ಹವ್ಯಾಸ ಸ್ಯಾಮುಯೆಲ್ ಮೋರ್ಸ 1840ರಲ್ಲಿ ಟೆಲಿಗ್ರಾಫ್ ಯಂತ್ರ ಪ್ರದರ್ಶಿಸಿದಾಗಲೇ ಹುಟ್ಟಿಕೊಂಡಿತೆನ್ನಬಹುದು. ರೇಡಿಯೋ ಅಲೆಗಳ ಮೂಲಕ ಹವ್ಯಾಸಿಗಳು ಒಬ್ಬರನ್ನೊಬ್ಬರು ಸಂಪರ್ಕಿಸುವುದರಿಂದ ಇದನ್ನು ಅಮೇಚೂರ್ ರೇಡಿಯೋ ಎನ್ನುತ್ತಾರೆ. ಈ ಹವ್ಯಾಸಿಗಳನ್ನು 'ಹ್ಯಾಮ್' ಎಂದು ಏಕೆ ಕರೆಯಲಾಗುತ್ತಿದೆ ಎಂದು ನಿಖರವಾಗಿ ಹೇಳಲಾಗದಿದ್ದರೂ ಬಹುತೇಕ ಜನರ ಅಭಿಪ್ರಾಯದಂತೆ ಈ ಶಬ್ದ ಮೂರು ಸಂಶೋಧಕರ ಹೆಸರುಗಳ ಮೊದಲಕ್ಷರದಿಂದ ಹುಟ್ಟಿಕೊಂಡಿದೆ. ಅವರುಗಳೆಂದರೆ ಹರ್ಜ್ (Herty) ಅಲೆಕ್ಸಾಂಡರ್ ಗ್ರಹಾಂಬೆಲ್ (Alexander Graham Bell) ಮತ್ತು ಮಾರ್ಕೋನಿ (Ma rconi) ಈ ಮೂವರುಗಳ ಹೆಸರುಗಳ ಮೊದಲ ಅಕ್ಷರಗಳನ್ನು ಪೋಣಿಸಿದಾಗ (HAM) ಎಂಬ ಪದವುಂಟಾಗುವುದು. ಹ್ಯಾಮ್ ರೇಡಿಯೋ ಒಂದು ಖಾಸಗಿ ರೇಡಿಯೋ ನಿಲಯ. ಅದರ ಕಾರ್ಯನಿರ್ವಾಹಕರು ನಮ್ಮ-ನಿಮ್ಮಂತಹ ಸಾಮಾನ್ಯ ಜನರು.


(ಸಂಗ್ರಹ) ಎಂ.ಶಾರದಾ ನಾಗಭೂಷಣ

ತನ್ನ ಸರಳ, ನಿಷ್ಠ ಬದುಕು ಹಾಗೂ ಸಂಶೋಧನ ಕೃತಿಗಳಿಂದ ಈ ಮಹಾನ್ ವಿಜ್ಞಾನಿಯು, ಭಾರತೀಯ ಪರಿಸರ ತಜ್ಞರ ಮೂರು ಪೀಳಿಗೆಗೆ ಸ್ಫೂರ್ತಿದಾಯಕರಾಗಿದ್ದರು .....

ಮರೆಯಲಾಗದ ಸಲೀಂ ಆಲಿ

ಮೂಲ : ಜೆ.ಸಿ.ಡೇನಿಯಲ್
ಕನ್ನಡಕ್ಕೆ : ಡಾ. ಎನ್.ಕೆ.ಆರ್.

ಹೊಯ್ಗಾಳಿಯಿಂದೆದ್ದು ಕುಣಿಯುವ, ಏರಿಳಿಯುವ ಕಡಲನ್ನು ಕುಸಿಯುತ್ತಿದ್ದ ಮನದಿಂದಲೇ ನೋಡುತ್ತಲಿದ್ದೆ. ಹೃದಯ ಅಂದು ಅದೇಕೋ ಭಾರವಾಗಿತ್ತು. ಕೆಲವು ತಿಂಗಳ ಮೊದಲಷ್ಟೆ ನಾನು, ಮುಂಬಯಿಯ ನಿಸರ್ಗ ಇತಿಹಾಸ ಸಂಸ್ಥೆಗೆ (Bombay Natural History Society - BNHS) ಸೇರಿದ್ದು. ಇದರಿಂದಾಗಿ ನನ್ನ ಬದುಕು ಉತ್ತಮಗೊಳ್ಳಬೇಕೆಂಬ ಆಕಾಂಕ್ಷೆ, ಆಶಯ ಇತ್ತೇ ವಿನಹ, ಕಿರಿದಾದ ತೋಡು ದೋಣಿಯಲ್ಲಿ ಕುಳಿತು ಬಹು ಪ್ರಯಾಸದಿಂದ, ತುಯ್ಯುತ್ತ ಹೊಯ್ದಾಡುತ್ತ ಮುಂದುವರೆಯಲು ನಾನು ಸಮ್ಮತಿಸಿರಲಿಲ್ಲ. ಬದುಕು ನೆಮ್ಮದಿಯಿಂದಿರಲೆಂದೇ ನಾನು ಈ ಸಂಸ್ಥೆಗೆ ಸೇರಿದ್ದು. ಅದೆಷ್ಟು ಹೊತ್ತು ನೀಲ ಕಡಲನ್ನೇ ದಿಟ್ಟಿಸುತ್ತಿದ್ದೆ. ನನ್ನ ಕಾಲು ಭಾರವಾಗಿ ಜೋಮು ಹಿಡಿದು ಮರಗಟ್ಟಿ, ನನ್ನ ಹತೋಟಿ ತಪ್ಪಿ ಅತ್ತಿತ್ತ ತುಯ್ದಾಡತೊಡಗಿದಾಗ, ನನ್ನ ಮಗ್ಗುಲಲ್ಲೆ ಕುಳಿ



ಚಿತ್ರ ಕೃಪೆ: ಕೇಶವ (ದಿ ಹಿಂದು)

ತಿದ್ದ ಬಡಕಲು-ಗಡ್ಡದ ಆಸಾಮಿ ಕೇಳಿದರು; ''ಡೇನಿಯಲ್, ನೀವು ಕಡಲಲ್ಲಿ ಈಸಬಲ್ಲಿರೇನು?'' ''ಈಜುವುದೇ ....? ಓಹೋ! ಬಲ್ಲೆ .... ಬಲ್ಲೆ ....'' ನಾನು ತೊದಲುತ್ತ ಉತ್ತರಿಸಿದೆ. ನನಗೆ ಒಂದು ರೀತಿಯ ಅಚ್ಚರಿ, ಬಿ.ಎನ್.ಹೆಚ್.ಎಸ್. ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿ ನಿರಂತರ ದುಡಿದು, ಅಷ್ಟೆ ಮಟ್ಟಿಗೆ ಅಂತಾರಾಷ್ಟ್ರೀಯ ಗೌರವ ಆದರಗಳಿಗೆ ಪಾತ್ರರಾಗಿದ್ದ ಸಲೀಂ ಆಲಿ, ಅಪಾಯ ಸ್ಥಿತಿಯಲ್ಲಿ ಸಿಲುಕಿರುವ ಹಡಗನ್ನು ತೊರೆಯಲು ಅಣತಿಯಿತ್ತಂತೆ ಹೇಳಿದರೋ ಎಂಬುದಾಗಿ ....!! ನನ್ನಲ್ಲೆ ಗಲಿಬಿಲಿ.

ಸಲೀಂ ಆಲಿ, ಒಂದು ಕ್ಷಣ ನನ್ನನ್ನೇ ದಿಟ್ಟಿಸಿದರು. ಅನಂತರ ನಿಧಾನವಾಗಿ ನುಡಿದರು: ''ನಾನು ಈಸಲಾರೆ!'' ಅವರ ಶಾಂತ ನುಡಿ ನನ್ನಲ್ಲಿದ್ದ ಬಹುಪಾಲು ಹೆದರಿಕೆಯನ್ನು ಕೂಡಲೆ ತೊಡೆದು ಹಾಕಿತು. ಅಲ್ಲಿಂದ ಮುಂದೆ, ನಾನು ಅದೆಷ್ಟೇ ಕಠಿಣ ಪರಿಸ್ಥಿತಿಯ ಕಾವಳ ಕವಿದು ಬಂದರೂ, ಅಷ್ಟೆ ತಾಳ್ಮೆ ಧೃತಿಯಿಂದ ಆ ಸನ್ನಿವೇಶ ಎದುರಿಸಲು ಕಲಿತೆ. ಪರಿಸ್ಥಿತಿಯ ಒಡಗೂಡಿ ನಡೆಯಲು ಅರಿತುಕೊಂಡೆ. ಅಷ್ಟು ಮಾತ್ರ ಅಲ್ಲ, ಒಬ್ಬ ನಿಜವಾದ ಪ್ರಕೃತಿ ಶಾಸ್ತ್ರಜ್ಞ ಯಾವ ರೀತಿ ಇರಬೇಕೋ ಹಾಗೆ ಪ್ರತಿ ನಿಮಿಷವನ್ನೂ ಸವಿಯಲು ಕೂಡ ಕಲಿತೆ. ಇದಕ್ಕಾಗಿ ನಾನು, ನನ್ನ ಹಿರಿಯ ಶ್ರೀ ಸಲೀಂ ಆಲಿಯವರಿಗೆ ತುಂಬು ಕೃತಜ್ಞನಾಗಿರಬೇಕು.

ಅಂಥ ಒಂದು ತೆರನಾದ ಮೃದು, ಆದರೆ ಅಷ್ಟೇ ಪರಿಣಾಮವನ್ನು ನಮ್ಮ-ನಿಮ್ಮೆಲ್ಲರ ಮೇಲೆ ಬೀರಿದವರು ಸಲೀಂ ಆಲಿ. ನನಗೊಬ್ಬನಿಗಲ್ಲ, ಎಲ್ಲರಿಗೂ ಅವರು ಹಿತರಾದವರೆ. ಜಗತ್ತಿಗೆ ಅವರು ಒಬ್ಬ ಆಶ್ಚರ್ಯಕಾರಿ, ಅಷ್ಟೇ ಪ್ರಭಾವೀವ್ಯಕ್ತಿ-ಉನ್ನತ ಮಟ್ಟದ ಪಕ್ಷಿ ಶಾಸ್ತ್ರಜ್ಞ, ಸಂಶೋಧಕ, ಸದಾ ಹೊಸತನ್ನು ಕಾಣುವ, ನಿಸರ್ಗದ ಜತೆ ಇರುವ ಉತ್ಸಾಹಿ, ಉತ್ತಮಮಟ್ಟದ ಅಧ್ಯಾಪಕ ಹಾಗೂ ಬರಹಗಾರ. ಈ ಎಲ್ಲ ಗುಣವಿಶೇಷ ಸಲೀಂ ಆಲಿಯವರಲ್ಲಿ ಮನೆ ಮಾಡಿದ್ದವು. ಅಷ್ಟೇ ಸರಳತೆ ನಿಷ್ಕಪಟ ಸ್ವಭಾವ. ಮುಂಬಯಿಯ ಪ್ರಾಕೃತಿಕ ಇತಿಹಾಸ ಸಂಸ್ಥೆಯಲ್ಲಿಯಂತೂ ತನ್ನ ಬದುಕಿನ 91 ವರ್ಷಗಳಲ್ಲಿ 80 ವರ್ಷ ಕಾಲ ಸಂಪರ್ಕ ಇರಿಸಿಕೊಂಡಿದ್ದ, ಹೊಳೆಯುವ ಕಣ್ಣುಗಳ, ಗುಬ್ಬಚ್ಚಿಯಂಥ ಆ ವ್ಯಕ್ತಿ, ನಮಗೆಲ್ಲ ತಂದೆ 'ಬಾಪೂ' ಇದ್ದ ಹಾಗೆ.

ಸಲೀಂ ಆಲಿ ಪಕ್ಷಿಗಳ ಬದುಕು-ಅಭ್ಯಾಸ-ವೈವಿಧ್ಯ-ಎಲ್ಲದರ ಬಗ್ಗೆ ಗಂಭೀರವಾದ ಅಧ್ಯಯನ ನಡೆಸಹೊರಟಾಗ ಇದ್ದ ಪರಿಸ್ಥಿತಿಯೋ?! ಪಕ್ಷಿ ವೀಕ್ಷಣೆಯೆಂದರೆ ಪರಂಗಿಯವರಿಗೆ ವೇಳೆ ಕಳೆಯಲು ಇದ್ದ 'ಹವ್ಯಾಸ' ಮಾತ್ರ! ಆಲಿಯವರಿಗೆ ವಿವಿಧ ಬಣ್ಣದ ಪಕ್ಷಿ ಪ್ರಪಂಚವೇ ಪವಿತ್ರ-ಅಧ್ಯಯನ ಕ್ಷೇತ್ರ! ಭಾರತ ಉಪಖಂಡದ ಪ್ರತಿಯೊಂದು ಪ್ರಾಂತ್ಯದ ಹಕ್ಕಿಗಳನ್ನು ಆಲಿಯವರು ಕಂಡು ಅಧ್ಯಯನ ಮಾಡಿದರೆಂದರೆ ಉತ್ಪ್ರೇಕ್ಷೆಯಾಗಲಿಕ್ಕಿಲ್ಲ. ಅವುಗಳ ಬಗ್ಗೆ ಅದೆಷ್ಟು ತಿಳಿಯಾಗಿ, ಅಷ್ಟೇ ದಟ್ಟ ಅನುಭವದಿಂದ, ಜಾಣ್ಮೆಯಿಂದ ಸೂಕ್ಷ್ಮ ರೀತಿಯಲ್ಲಿ ಬರೆದರೆಂದರೆ ''ಇಂಗ್ಲೀಷಿನ ಭಾರತೀಯ ಉಪಾಧ್ಯಾಯರು'' ಸಂಕಲನ ಗ್ರಂಥದಲ್ಲಿ ವಿಶ್ವಕವಿ ರವೀಂದ್ರರು ಮತ್ತು ಕವಯಿತ್ರಿ ಸರೋಜನಿನಾಯ್ಡು ಅವರ ಜತೆಗೆ ಒಂದು ಗಣನೀಯ ಸ್ಥಾನ ಪಡೆಯುವಷ್ಟು! ಅಂಥ ಕವಿ ಹೃದಯವು ಸಲೀಂ ಆಲಿಯವರಿಗಿತ್ತು.

ಸಲೀಂ ಆಲಿಯವರಿಗೆ ಬಂದ ಅದೆಷ್ಟೋ ಪ್ರಶಸ್ತಿಗಳಲ್ಲಿ ಪದ್ಮವಿಭೂಷಣ ಹಾಗೂ ಮೂರು ಗೌರವ ಡಾಕ್ಟರೇಟ್ ಪದವಿ ಕೂಡ ಸೇರಿದ್ದವು! ಲೋಕಸಭೆಗೆ ಸಲೀಂ ಆಲಿ ಅವಿರೋಧವಾಗಿ ನಾಮಕರಣವಾದರು. ರಾಷ್ಟ್ರಪ್ರಾಧ್ಯಾಪಕ (National Professor) ಕೂಡ ಆಗಿ ನೇಮಕವಾದರು. ಅವರ ನೇತೃತ್ವದಲ್ಲಿ ಬಿ.ಎನ್.ಹೆಚ್.ಎಸ್. ಒಂದು ಪ್ರಥಮ ವರ್ಗದ ಸಂಶೋಧನಾ ಕೇಂದ್ರವಾಯಿತು. ಹಾಗೂ ಅದರ ಪತ್ರಿಕೆ (ಜರ್ನಲ್) ವಿಶ್ವದಾದ್ಯಂತ ಜೀವಶಾಸ್ತ್ರಜ್ಞರಿಗೆ ಒಂದು ಆಕರ ಸಾಧನ

ವಾಯಿತು.

1896ರಲ್ಲಿ ಮುಂಬಯಿಯ ಒಂದು ಪ್ರಗತಿಶೀಲ ಹಾಗೂ ಸ್ಥಿತಿವಂತ ಕುಟುಂಬದಲ್ಲಿ ಜನಿಸಿದ ಸಲೀಂ ಆಲಿ, ತಾಯಿಗೆ ಹತ್ತು ಮಕ್ಕಳಲ್ಲಿ ಕೊನೆಯ ಮಗು. ಬಾಲ್ಯದ ದಿನಗಳಲ್ಲೆ ತಾಯಿಯನ್ನು ಕಳೆದುಕೊಂಡ ತಬ್ಬಲಿ. ಆಲಿಯವರ ಬಾಲ್ಯದ ನೇತಾರನೆಂದರೆ, ಸದಾ ಕೆಂಗಿಡಿಕಾರುವಂತಿದ್ದ ಚಿಕ್ಕಪ್ಪ ಅಮಿರುದ್ದೀನ್ ತ್ಯಾಬ್ಜಿ. ಒಬ್ಬ ಉನ್ನತ ಕ್ರೀಡಾಪಟು. ರಾಜಕುಟುಂಬದವರ ಜತೆ ಶಿಕಾರಿಗಳಿಗೆ ಹೋಗುತ್ತಿದ್ದನಾತ. ಸಲೀಂ ಹತ್ತು ವರ್ಷದವನಿದ್ದಾಗ, ಅಮೀರುದ್ದೀನ್ ಚಿಕ್ಕಪ್ಪ ಹುಡುಗನಿಗೆ ''ಏರ್‌ಗನ್'' ಒಂದನ್ನು ಉಡುಗೊರೆಯಾಗಿತ್ತ. ಒಂದು ದಿನ, ಹುಡುಗ ಸಲೀಂ, ಒಂದು ವಿಶಿಷ್ಟ ತರನಾದ ಗುಬ್ಬಚ್ಚಿಯನ್ನು ಕಂಡ. ಏರ್‌ಗನ್ನಿನಿಂದ ಹೊಡೆದ. ಹಕ್ಕಿಗೆ ಅದರ ಕುತ್ತಿಗೆಯ ಕೆಳಭಾಗದಲ್ಲಿ ಒಂದು ಹಳದಿ ಬಣ್ಣದ ಕೊಕ್ಕು! ಅದು ಹೇಗೆ? ಸಲೀಂ ಆಲಿಯ ಪ್ರಶ್ನೆಗೆ ಚಿಕ್ಕಪ್ಪ ಅಮೀರುದ್ದೀನ ಉತ್ತರಿಸಲು ಅಸಮರ್ಥನಾಗಿಬಿಟ್ಟ. ''ನೇರ ಹಕ್ಕಿಯನ್ನು ಬಿ.ಎನ್.ಹೆಚ್.ಎಸ್. ಸಂಸ್ಥೆಗೆ ತೆಗೆದುಕೊಂಡು ಹೋಗು. ಅವರು ವಿವರಣೆಯಿತ್ತಾರು'' ಎಂದು ನುಡಿದ. ಅಲ್ಲಿ, ಸಂಸ್ಥೆಯ ಕಾರ್ಯದರ್ಶಿ ಇಂಗ್ಲೀಷರವನು ಅದನ್ನು ಹಳದಿ ಕೊರಳಿನ ಗುಬ್ಬಚ್ಚಿಯೆಂದು ಗುರುತಿಸಿದ. ಹಾಗೂ ಹುಡುಗ ಆಲಿಗೆ ಅಲ್ಲಿ ಜೋಡಿಸಿದ್ದ ಹಕ್ಕಿಗಳ ಸಂಗ್ರಹವಿಡೀ ತೋರಿಸಿದ. ಸಲೀಂ ಆಲಿ, ಈ ಪಕ್ಷಿ ಜಗತ್ತಿನ ವಿಶಿಷ್ಟ ಪರಿಗಳನ್ನು ಕಂಡ. ದಿಗ್ಭ್ರಮೆಗೊಂಡ. ಅಲ್ಲಿಂದಾಚೆ ಇಡೀ ಬದುಕೆಲ್ಲ ಪಕ್ಷಿಶಾಸ್ತ್ರ ಹಾಗೂ ಪ್ರಕೃತಿ ಇತಿಹಾಸ ಸಂಸ್ಥೆಯ ಜತೆ ಸಂಪರ್ಕವಿರಿಸಿಕೊಂಡರು.

ಸಂಶೋಧನ ಸಂಸ್ಥೆಗೆ ಆಗಾಗ್ಗೆ ಭೇಟಿ ನೀಡುತ್ತಲೇ ಸಲೀಂ ಹೈಸ್ಕೂಲ್ ಶಿಕ್ಷಣ ಮುಗಿಸಿದ. ಕಾಲೇಜು ಎಂಬುದಂತೂ ಸಲೀಂ ಆಲಿಗೆ ತುಂಬಾ ಕಷ್ಟವೆನಿಸಿತು. ''ಲಾಗರಿದಮ್ ಆಲ್ಜಿಬ್ರ'' ಬೀಜಗಣಿತದ ಒಂದು ಅಧಿಕರಣ ಲಾಗರಿದಮ್ಸ್‌ಗಳಿಂದ ತಪ್ಪಿಸಿಕೊಳ್ಳಲು ಆಲಿ ಮುಂಬೈ ತೊರೆದು ಬರ್ಮಾಕ್ಕೆ ತೆರಳುವುದೆ? ಅಲ್ಲಿ 10 ವರ್ಷ ಅಣ್ಣನ ಮರಮುಟ್ಟು ವ್ಯವಹಾರದಲ್ಲಿ ಪಾಲುದಾರರಾಗಿ ಸೇರಿಕೊಂಡರು. ಆದರೆ ಇಲ್ಲಿಯೂ ಆಗಿದ್ದೇನು? ಆಲಿಯವರನ್ನು ದೂರದ ದಟ್ಟ ಕಾಡುಗಳಿಗೆ ಮರವನ್ನು ಆಯ್ಕೆ ಮಾಡಲು ಕಳಿಸಿದರೆ, ಆಲಿ ಗೈದುದಿಷ್ಟೆ: ಬಹುಪಾಲು ವೇಳೆಯನ್ನು ಹಕ್ಕಿಗಳು-ವನ್ಯಜೀವಿಗಳನ್ನು ಕುರಿತ ಅಧ್ಯಯನ. ಇದರಿಂದಾಗಿ ವ್ಯಾಪಾರವು ಕುಸಿದು, ಸಾಕಷ್ಟು ಸಾಲವಾಗಿ, ಆ ವೇಳೆಗಾಗಲೆ ಮದುವೆ ಆಗಿದ್ದ ಮಡದಿ ತೆಹ್‌ಮೀನಾ ಜತೆ ಮತ್ತೆ ಮುಂಬಯಿಗೆ ಆಲಿ ಮರಳಿದ್ದು ಅಚ್ಚರಿಯೇನಲ್ಲ.


ತಾಯ್ನಾಡಿಗೆ ಮರಳಿದ ಸಲೀಂ ಆಲಿ 1927ರಲ್ಲಿ ಮುಂಬಯಿಯ ''ಪ್ರಿನ್ಸ್ ಆಫ್ ವೇಲ್ಸ್'' ಮ್ಯೂಜಿಯಮ್‌ದಲ್ಲಿ ಗೈಡ್-ಅಧ್ಯಾಪಕನಾಗಿ ಸೇರಿದರು. ಎರಡು ವರ್ಷದ ನಂತರ ಆಲಿ ಬರ್ಲಿನ್ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ಮ್ಯೂಜಿಯಮ್‌ದಲ್ಲಿ ಪ್ರೊ। ಐರ್ವಿನ್ ಸ್ಟ್ರೆಸ್‌ಮನ್ ಅವರಲ್ಲಿ ತನ್ನ ಪ್ರಿಯ ವಿಷಯವಾದ ಪಕ್ಷಿಶಾಸ್ತ್ರ ಕುರಿತಂತೆ ಹೆಚ್ಚು ಕಲಿಯಲಿಕ್ಕೆಂದು ನಿರ್ಧರಿಸಿ ಬರ್ಲಿನ್‌ಗೆ ಪಯಣಿಸಿದರು ಆಲಿ. ಒಂದು ವರ್ಷದ ನಂತರ ಮತ್ತೆ ಮುಂಬೈಗೆ ಹಿಂತಿರುಗಿದ ಆಲಿಯವರಿಗೆ ಮೊದಲು ದೊರೆತಿದ್ದ 'ಗೈಡ್-ಲೆಕ್ಚರರ್' ಹುದ್ದೆಯೂ ರದ್ದಾಗಿರುವುದು ತಿಳಿಯಿತು. ಇನ್ನು ಮುಂದೆ ಸರಕಾರಿ ಕೆಲಸದಲ್ಲಿ ಯಾವುದೇ ರೀತಿ ಮುಂದುವರಿಯಲು ಅವಕಾಶ ಇರುವಂತಿರಲಿಲ್ಲ. ಏಕೆಂದರೆ, ಪಕ್ಷಿಶಾಸ್ತ್ರಜ್ಞರ ಹುದ್ದೆಗೆ ಸಲೀಂ ಕೋರಿಕೆ ಸಲ್ಲಿಸಿದಾಗ ಕಾಲೇಜಿನ ಒಂದು ಪದವಿ ಕೂಡ ಇರಲಿಲ್ಲವೆಂಬುದೇ ಕಾರಣದಿಂದ ಅದನ್ನು ತಿರಸ್ಕರಿಸಲಾಗಿತ್ತು!

ಅಂದಿನ ದಿನಗಳಲ್ಲಿ ಇಂಗ್ಲೀಷ್ ಭಾಷಾ ಪ್ರಭುತ್ವ ಹಾಗೂ ತಾಖತ್ ಇರುವವರು ಮುಂಬಯಿಯ ಯಾವುದೇ ಖಾಸಗಿ ಉದ್ದಿಮೆಯಲ್ಲಿ ನೆಮ್ಮದಿಯ ಬದುಕನ್ನು ಕಂಡುಕೊಳ್ಳಬಹುದಿತ್ತು. ಸಲೀಂ ಆಲಿ ಯಾವುದೆ ಕೆಲಸಕ್ಕೂ ಅರ್ಜಿ ಸಲ್ಲಿಸಲಿಲ್ಲ. ಮನೆಯವರಂತೂ ಇವನಿ

ಗೇನು ಹುಚ್ಚು ಹಿಡಿಯಿತೇ? ಎಂದುಕೊಂಡರು. ನಿರುದ್ಯೋಗಿ ಗೃಹಸ್ಥ, ಸದಾ ಹಕ್ಕಿಗಳನ್ನು ವೀಕ್ಷಿಸುವುದರಲ್ಲೇ ತೃಪ್ತಿಪಟ್ಟುಕೊಂಡು ಖುಷಿಯಿಂದ ಇರುವುದೆಂದರೆ ಅದು ಸರಿಯೇ......?

ತೆಹ್‌ಮೀನಾ, ಪತಿ ಆಲಿಯವರಿಗ ಸಂಪೂರ್ಣ ಸಹಕರಿಸಿದಳು. ಏನಿರಲಿ, ಇಲ್ಲದಿರಲಿ, ಯಾವತ್ತೂ ಮುಖ ಇಳಿ ಬೀಳದೆ ಸಿಡುಕದೆ, ಹರ್ಷದಿಂದಿರುತ್ತಿದ್ದ ಹೆಣ್ಣು. ಬಂದದ್ದು ಸ್ಥಿತಿವಂತರ ಕುಟುಂಬದಿಂದಲೇ. ಇಂಗ್ಲಂಡಿನ ಒಂದು ಶಾಲೆಯಲ್ಲಿ ಓದಿದ್ದು. ಇಷ್ಟಾಗಿಯೂ, ಹೃದಯತಃ ಅವಳು ಹಳ್ಳಿ ಹೆಣ್ಣೆ. ಗಂಡನ ವೈವಿಧ್ಯಮಯ ಆಸಕ್ತಿಯಲ್ಲಿ ಆಕೆ ಸಮಭಾಗಿ. ತೆಹ್‌ಮೀನಾಳ ಮನೆಯವರಿಗೆ ಮುಂಬಯಿಯ ದಕ್ಷಿಣಕ್ಕಿದ್ದ ಕಿಹಿಮ್ ಎಂಬ ಕಡಲ ತಡಿಯ ಗ್ರಾಮದಲ್ಲೊಂದು ಮನೆ ಇತ್ತು. ಅಲ್ಲಿಗೆ ಸಲೀಂ-ತೆಹ್‌ಮೀನಾ ಸಂಸಾರ ಹೂಡಲು ತೆರಳಿದರು. ಕಿಹಿಮ್, ಸಣ್ಣ ಹಳ್ಳಿ. ಕಡಲ ತೀರದ ಹವೆ, ಪರಿಸರ. ವಿವಿಧ ಹಕ್ಕಿಗಳ ಆಗಮನ, ನಿರ್ಗಮನ. ಸಲೀಂ ಆಲಿ ಸದಾ ಕಾರ್ಯನಿರತರು

1930ರಲ್ಲಿ ಸಲೀಂ ಆಲಿಯವರು ಬಿ.ಎನ್.ಎಚ್.ಎಸ್. ಸಂಸ್ಥೆಗೆ ಒಂದು ಮನವಿಯೊಡನೆ ಹೋದರು. ಭಾರತ ದೇಶದ ಹಕ್ಕಿಗಳನ್ನು ಕುರಿತಂತೆ, ಕ್ರಮಬದ್ಧ ರೀತಿಯಲ್ಲಿ ಯಾರೂ ಅಲ್ಲಿನವರೆಗೆ ಅಧ್ಯಯನ ನಡೆಸಿರಲಿಲ್ಲ. ಆದ್ದರಿಂದ, ಪಕ್ಷಿ ವೀಕ್ಷಣೆ-ಸರ್ವೇಕ್ಷಣೆಯ ಕಾರ್ಯಕ್ಕೆ ಸಂಸ್ಥೆಯು ತನ್ನನ್ನು ನೇಮಿಸಿ, ಕಳಿಸುವುದೆ? ಎಂಬುದು ಆಲಿಯವರ ಮನವಿ. ಅದಕ್ಕೆಂದು ಅವರು ಸಂಬಳ ಭತ್ಯೆ ಬೇಕೆಂದೇನೂ ಮನವಿ ಮಾಡಿರಲಿಲ್ಲ!! ಕೇವಲ ಪ್ರಯಾಣ, ಸಾರಿಗೆ ವೆಚ್ಚ ಸಾಕು. ಎಂಥ ಸಂಶೋಧನೆಯ ಹುಚ್ಚು. ಸಂಸಾರದ ಜವಾಬ್ದಾರಿಯಿದ್ದ, ಈ ಮನುಷ್ಯನಿಗೆ



ಕಾಡು-ಮೇಡು, ಬಯಲು-ದಿಣ್ಣೆ ಹಳ್ಳಕೊಳ್ಳಗಳ ಅಲೆದಾಟ! ಈ ರೀತಿ ನಿಯಮಿತರಾದ ಆಲಿ ಮುಂದಿನ ಇಪ್ಪತ್ತು ವರ್ಷ, ಇಡೀ ಭಾರತವೆಲ್ಲ ಸುತ್ತಿದರು. ಕಛ್ (kutch)ನಿಂದ ಸಿಕ್ಕಿಂ (sikkim) ತನಕ, ಅಫ್ಘಾನಿಸ್ಥಾನದಿಂದ ಕೇರಳದ ತನಕವಿತ್ತು ಅವರ ವ್ಯಾಪಕ ಪರ್ಯಟನ. ಅವರ ಅಧ್ಯಯನ ವಿಧಾನಗಳೂ ಅನನ್ಯವೆ. ಒಂದು ಹಕ್ಕಿ-ಅದರ ಕುಟುಂಬ ಪರಂಪರೆ-ವಂಶಗಳ ಅಭ್ಯಾಸ, ಬದುಕಿನ ಪರಿ-ಇತಿಹಾಸ-ಚರಿತ್ರ, ಪರಿಸರ, ಭೂವಿವರಣೆ, ಇವೆಲ್ಲ ಅಂಶಗಳನ್ನು ನೇಯ್ದು ಆಲಿ ಒಂದು ಸತ್ಯ ಸುಂದರ ಚಿತ್ರವನ್ನು ಅಷ್ಟೇ ವಸ್ತುನಿಷ್ಠವಾಗಿ ನೀಡಿದ್ದರು. ಅದೆಷ್ಟರ ಮಟ್ಟಿಗೆಂದರೆ, 1936ರಲ್ಲಿ ಅಮೆರಿಕನ್ ಜೀವಶಾಸ್ತ್ರಜ್ಞ ಅರ್ನೆಸ್ಟ್ ಮೆಯರ್ ಅವರಿಂದ ಆಲಿಯವರಿಗೊಂದು ಪತ್ರ! ನ್ಯೂಯಾರ್ಕ್‌ನ ಪ್ರಾಕೃತಿಕ ಇತಿಹಾಸದ ಮ್ಯೂಜಯಮ್‌ದಲ್ಲಿ ಆತ ಪಕ್ಷಿ ಶಾಸ್ತ್ರದ ಆಧ್ಯಾಪಕರಾಗಿದ್ದರು. ''ನಿಮಗೆ ಶುಭಾಶಯ'' ಎಂದ ಮೇಯರ್, ಬಿಎನ್‌ಹೆಚ್‌ಎಸ್ ಪತ್ರಿಕೆಯ ಅನೇಕ ಸಂಚಿಕೆಗಳಲ್ಲಿ ನಿಮ್ಮ ವಸ್ತುನಿಷ್ಠ ವರದಿ, ಕಾರ್ಯದ ವಿವರಗಳನ್ನು ಗಮನಿಸಿದ್ದೇನೆ ಹಾಗೂ ತುಂಬ ಸಂತೋಷ ಪಟ್ಟಿದ್ದೇನೆ'' ಎಂದು ಮುಂದುವರಿದು ಬರೆದರು.

ಸಲೀಂ ಆಲಿಯವರ ಪಾಲಿಗೆ ಈ ಎರಡು ದಶಕವೂ ಸಾಧನೆ-ಸುಖ-ದುಃಖಗಳ ಸಂಧಿಸಮಯ ಆಯಿತಷ್ಟೆ. ಆದರಲ್ಲಿಯೂ ಸಂಶೋಧನೆಗಳಲ್ಲಿ ಜತೆಗೆ ಹೆಗಲೆಣೆಯಾಗಿ ದುಡಿದು ಗಂಡನಿಗೆ ಉತ್ತೇಜನ ನೀಡಿ ಮನೆಯನ್ನು-ಸಂಸಾರವನ್ನು ಸಂಬಾಳಿಸಿದ ಮಡದಿ ತೆಹ್ಮೀನಾ 1939ರಲ್ಲಿ ಒಂದು ಸಣ್ಣ ಶಸ್ತ್ರ ಚಿಕಿತ್ಸೆಗೀಡಾಗಿ, ಹಠಾತ್ತಾಗಿ ನಿಧನರಾದರು! ತಿಂಗಳುಗಟ್ಟಲೆ - ಆಲಿ ಅವರ ಸೋದರಿಯ ಜತೆ ಮುಂಬೈಯಲ್ಲಿ ಹೇಗೋ ನಿಷ್ಕ್ರಿಯತೆಯಿಂದ ಇದ್ದುಬಿಟ್ಟರು. ಮತ್ತೆ ಅವರಿಗೆ ನಿಜವಾದ ಸಾಂತ್ವನ ದೊರೆತದ್ದು, ತಮ್ಮ ಎಂದಿನ ವೀಕ್ಷಣ ಕಾರ್ಯಕ್ಕೆ ಹಾಜರಾದಾಗಲೇ.

1941ರಲ್ಲಿ ಸಲೀಂ ಆಲಿ ತನ್ನ ''ಭಾರತೀಯ ಪಕ್ಷಿಗಳು'' (The Book of Indian Birds) ಎಂಬ ಮಹಾಗ್ರಂಥವನ್ನು ಪ್ರಕಟಿಸಿದರು. ಬಿಡುಗಡೆಯಾದೊಡನೆ ಆ ಹೊತ್ತಿಗೆ ತುಂಬು ಪ್ರಸಿದ್ಧ ಆಯಿತು. ಅವುಗಳ ರಾಯಲ್ಟಿ ಹಣ ಬಂದಾಗ ಸಲೀಂ ಆಲಿ, ತನ್ನೆಲ್ಲ ಹಳೆ ವ್ಯವಹಾರದ ಸಾಲವನ್ನೂ ಪೂರಾ ತೀರಿಸುವಂತಾಯಿತು. ಪುಸ್ತಕವನ್ನು ಓದಿದ ಜವಾಹರಲಾಲ್ ನೆಹರು ಅದೆಷ್ಟು ಇಷ್ಟಪಟ್ಟರೆಂದರೆ, ತಮ್ಮ ಮುದ್ದಿನ ಮಗಳ ಹುಟ್ಟಿದ ಹಬ್ಬಕ್ಕೆ ಅದೇ ಪುಸ್ತಕವೇ ಅವರಿತ್ತ ಉಡುಗೊರೆ! ಇಂದಿರಾ ವರ್ಷಗಳ ನಂತರ ತಿಳಿಸಿದ್ದು: ''ನನ್ನ ಕಣ್ಣುಗಳಿಗೊಂದು ನೂತನ ಪ್ರಪಂಚವೆ ಕಂಡು ಬಂದಿತು'' ''ಮೊದಲ ಸಲ, ನಾನು ಹಕ್ಕಿಗಳೆಡೆ ಗಮನ ನೀಡಿದೆ. ಅವುಗಳ ವಿಧವಿಧ ಹಾಡು ಆಲಿಸಿದೆ. ಅದರಿಂದ ಹಕ್ಕಿ ಇಂಥದೆಂದು ಗುರುತಿಸಲೂ ಸಮರ್ಥಳಾದೆ''.

ಈ ಅವಧಿಯಲ್ಲಿ ಸಲೀಂ ಆಲಿಯವರು ಅನೇಕ ಮಿತ್ರರನ್ನು ಗಳಿಸಿದರು. ಶ್ರೀಲಂಕಾದ, ಸಂಯುಕ್ತ ಸಂಸ್ಥಾನ ಸೇನೆಯಲ್ಲಿ ಪ್ರಾಣಿಶಾಸ್ತ್ರಜ್ಞನಾಗಿದ್ದ ತರುಣ ಎಸ್.ಧಿಲ್ಲಾನ್ ರೀಲ್ಲೆ, ಅನಂತರ ವಾಷಿಂಗ್ಟನ್‌ನ ಸುಪ್ರಸಿದ್ಧ ಸಂಸ್ಥೆ ''ಸ್ಮಿತ್ ಸೋನಿಯನ್''ದ ಮಹಾಕಾರ್ಯದರ್ಶಿಯಾತ. ಆಲಿ, ಧಿಲ್ಲಾನ್ ಇಬ್ಬರೂ ತಮ್ಮ ವ್ಯಾಪಕ ಸಂಶೋಧನೆಯ ಅರಿವನ್ನು ಒಕ್ಕೂಡಿಸಿ 10 ಸಂಪುಟಗಳ ಹೆಬ್ಹೊತ್ತಿಗೆಯನ್ನೆ ಪ್ರಕಟಿಸಿದರು! ''ಇಂಡಿಯ-ಪಾಕಿಸ್ತಾನ ಹಕ್ಕಿಗಳ ಕೈಪಿಡಿ'' ಪುಸ್ತಕದ ಶಿರೋನಾಮೆ. ಮುಂದೆ, 1960ರಲ್ಲಿ ನಾನು, ಬಿ.ಎನ್.ಹೆಚ್.ಎಸ್. ಸಂಸ್ಥೆಯ ಕ್ಯುರೇಟರ್ ಆಗಿರುವಾಗ, ಸರಕಾರಿ ಕೆಲಸಕ್ಕೂ ತಿರಸ್ಕೃತನಾದ ಈ ವ್ಯಕ್ತಿ (ಆಲಿ), ಪಿಹೆಚ್‌ಡಿ (ಸಂಶೋಧನೆ) ವಿದ್ಯಾರ್ಥಿಗಳಿಗೆ ಅಧಿಕೃತ ಮಾರ್ಗದರ್ಶಕರಾಗಿ ತಮ್ಮ ಅಮೂಲ್ಯ ಸಲಹೆ ನೀಡುವುದನ್ನು ಕಂಡು ಖುಷಿಗೊಂಡೆ. ಅವರ ಕಾರ್ಯವೈಖರಿ, ಪುಸ್ತಿಕೆ-ಪಕ್ಷಿಗಳಲ್ಲಿ ಮುಳುಗಿ ತಲ್ಲೀನರಾಗಿರುತ್ತಿದ್ದ ಪರಿ, ಕಂಡುಕೊಂಡೆ. ಆತ ಅದೆಷ್ಟು ಸಮಯ ಪಾಲಕ! ಅವರ ಜತೆ ಯಾವುದೆ ಕೆಲಸವಿ

ರಲಿ, ನಾನು ಅವರಿಗಿಂತ ಮೊದಲು ನಿಯಮಿತ ಸ್ಥಳದಲ್ಲಿರಲು ಖಾತ್ರಿ ಮಾಡಿಕೊಳ್ಳುತ್ತಿದ್ದೆ. ಯಾವುದೆ ಭೇಟಿ-ವ್ಯವಹಾರ ಮುಗಿದನಂತರ, ಆಲಿ ತನ್ನ ಬಳಿ ಹುಬ್ಬೇರಿಸಿ, ಅವರ ಕುರ್ಚಿಯ ಕೈಗಳನ್ನು ತಟ್ಟುತ್ತಿದ್ದರು. ಅದಾಗದಿದ್ದರೆ ಅವರು ನೇರ ವಿದಾಯ ಹೇಳಿ, ತಮ್ಮ ಎಂದಿನ ಕಾರ್ಯದ ಹೊಣೆಯಲ್ಲಿ ಮುಳುಗುವವರ!

ಆಲಿ ಯಾವುದೆ ವರದಿ ಅಸಮರ್ಪಕವಾಗಿದ್ದರೆ, ಕಳಪೆಯಾಗಿದ್ದರೆ, ಅದನ್ನು ಮಗ್ಗುಲಿಗೆ ಸೆದು ಬಿಡುತ್ತಿದ್ದರು! ಕೋಪದಿಂದ ಕುದಿದು '' ಮೂರ್ಖತನ''ವೆನ್ನುವರು. ಅದೇ ಅವರು ಬಳಸುತ್ತಿದ್ದ ತುಂಬ ಬಲವಾದ ಬೈಗಳು. ಆದರೆ, ಅದನ್ನು ಆಲಿ ವ್ಯಕ್ತಪಡಿಸುವ ರೀತಿ ಹೇಗಿತ್ತೆಂದರೆ ನೀವು ಮತ್ತೆ ಎಂದೂ ಅವರಿಂದ ಆ ರೀತಿ ಬೈಗುಳ ಕೇಳಲು ಇಷ್ಟಪಡುವುದಿಲ್ಲ.

ಆಲಿಯವರ ಗಮನ ಸೆಳೆಯದಿರುವುದು ಯಾವುದೂ ಇರಲಿಲ್ಲ. ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಅವರು ವೈಯಕ್ತಿಕ ಆಸಕ್ತಿ-ಗಮನವೀಯುತ್ತಿದ್ದರು. ಬಿ.ಎನ್.ಹೆಚ್.ಎಸ್‌ನ ಪ್ರಕೃತಿ ಶಾಸ್ತ್ರಜ್ಞರು ಕ್ಷೇತ್ರ ಕಾರ್ಯ ನಡೆಸಲು ಪ್ರವಾಸ ಹೋಗುವಾಗ ಪ್ರತಿ ವಾರವೂ ಸಲೀಂ ಆಲಿಯವರಿಗೆ ತಾನು ಸಂಗ್ರಹಿಸಿದ ಅಂಶ, ಮಾಹಿತಿ ಎಲ್ಲ ವರದಿ ನೀಡಿ ಪತ್ರಿಸಬೇಕಾಗಿತ್ತು. ಸಲೀಂ ಆಲಿಯವರ ಮೊದಲ ವಿದ್ಯಾರ್ಥಿ ವಿ.ಸಿ. ಅಂಬೇಡ್ಕರ್. ಅವರು ತಡ ಮಾಡದೆ ಉತ್ತರ ಬರೆಯುತ್ತಿದ್ದರು. ಆಲಿಯವರ ಗುಣದ ಬಗ್ಗೆ ತಿಳಿಸುತ್ತಾ ಅಂಬೇಡ್ಕರ್ ತಮ್ಮ ಗುರುವನ್ನು ನೆನಪಿಸಿಕೊಂಡಿದ್ದಾರೆ. ''ನಾನು ನಡೆಸುತ್ತಿದ್ದ, ನಡೆಸಬೇಕಾಗಿದ್ದ ವೀಕ್ಷಣೆ-ಸರ್ವೇಕ್ಷಣೆಗಳ ಬಗ್ಗೆ ಮಾತ್ರವೆ ಆಲಿ ಬರೆಯುತ್ತಿರಲಿಲ್ಲ. ವೇಳೆಗೆ ಸರಿಯಾಗಿ ಕಾರ್ಯ ಆರಂಭಿಸುವುದು, ಅವಿರತ ಶ್ರಮ, ಸರಿಯಾದ ಇಂಗ್ಲೀಷ್ ಬಳಕೆ, ಇವುಗಳೆಲ್ಲದರ ಬಗ್ಗೆ ಅವರು ತುಂಬ ಪ್ರಾಮುಖ್ಯತೆ ನೀಡುತ್ತಿದ್ದರು.''

ಆಲಿ 1962ರಲ್ಲಿ ಅಂಬೇಡ್ಕರ್ ಅವರಿಗೊಂದು ಕಾರ್ಯವನ್ನು ವಹಿಸಿದ್ದರು. ''ಕುಮಾ ತೇರಾಯ್'' ಪ್ರದೇಶದ ಹುಲಿಕಾಡುಗಳಲ್ಲಿ ಕೆಲಸ. ವಿದ್ಯಾರ್ಥಿಯ ತಾಯಿಗೆ ತಳಮಳ, ಕಾತರ. ಸಲೀಂ ಆಲಿಯವರು ತಾಯಿಯನ್ನೇ ನೇರ ಕಂಡರು. ಅನಂತರ ಅಂಬೇಡ್ಕರರಿಗೆ ಬರೆದದ್ದು ''ಹುಲಿಯು ನಿನ್ನನ್ನು ಇನ್ನೂ ತಿಂದಿಲ್ಲ ಎಂದು ನಿನ್ನಮ್ಮನಿಗೆ ಹೇಳಿದ್ದೇನೆ. ಹಾಗೆಂದಾಗ ನಿನ್ನಮ್ಮ ಖುಷಿಪಡದಿರುವರೆ? ಅವರ ಸಂತೋಷಕ್ಕೆ ಮೇರೆಯೇ ಇಲ್ಲ. .... ಸಂಶೋಧನೆಯ ವಿಧಾನದ ಬಗ್ಗೆ ನಾನು ಹೇಳಿದ್ದು ನೆನಪಿರಲಿ.'' ಇದು ಆಲಿಯ ವಿನೋದ ಹಾಗೂ ಕಾರ್ಯನಿಷ್ಠೆ.



ಪತ್ರಗಳನ್ನು ಬರೆಯುವುದು, ಉತ್ತರಿಸುವುದು, ಆಲಿಯವರ ಉತ್ಸಾಹಕಾರಿ ಚಟುವಟಿಕೆ. ಅವರು ತಮ್ಮ ಜೇಬಿನಿಂದಲೇ ಅಂಚೆ ವೆಚ್ಚಕ್ಕೆಂದು ವ್ಯಯ ಮಾಡುತ್ತಿದ್ದುದು. ಆಲಿ ಆ ಮೂಲಕ ಎಲ್ಲೆಡೆಯ ತಮ್ಮ ಮಿತ್ರರನ್ನು ಸಂಪರ್ಕಿಸುತ್ತಿದ್ದರು. ಎಲ್ಲ ಪತ್ರದಲ್ಲೂ ಪರಿಸರ, ಹೊಸ ಅನ್ವೇಷಣೆಯ ಬಗ್ಗೆಯೆ ಕಾಳಜಿ, ಕಳಕಳಿ! ಭರತ್‌ಪುರ, ಕರ್ನಾಲ ಪ್ರದೇಶಗಳ ಪಕ್ಷಿ ರಕ್ಷಣಾಧಾಮಗಳ ಸ್ಥಾಪನೆ, ಕೇರಳದ ಶಾಂತ ಕಣಿವೆ (Silent valley) ಯನ್ನು ವಿದ್ಯುತ್ ಯೋಜನೆಗಾಗಿ ನಾಶ ಮಾಡಕೂಡದೆಂಬ ನಿರ್ಧಾರ ಸರಕಾರ ಕೈಗೊಂಡದ್ದು-

ಹಾಗೂ ಇಂಥ ಅನೇಕ ಕಾರ್ಯಗಳಲ್ಲೆಲ್ಲ ಈ ಮುದುಕ ಪ್ರಧಾನಮಂತ್ರಿಗಳಿಗೆ, ಅರಣ್ಯಾಧಿಕಾರಿಗಳಿಗೆ, ಅದೆಷ್ಟು ಶಕ್ತಿಯುತವಾಗಿ ಬರೆಯುತ್ತಿದ್ದರೊ! ಆದರೆ, ಸದಾ ಅವರು ಗಣ್ಯರಿಗೆ ಹಾಗೂ ಸಂಶೋಧಕಮಿತ್ರರಿಗೆ ಮಾತ್ರವೇ ಪತ್ರಿಸುತ್ತಿದ್ದರೆಂದು ಭಾವಿಸುವಂತಿಲ್ಲ. ಕ್ಷೇತ್ರ ಪ್ರವಾಸದಲ್ಲಿ ತಾನು ಕಂಡುಬಂದ ಗ್ರಾಮಸ್ಥರಿಗೆ, ನೆರವಾದವರಿಗೂ ಬರೆಯುವವರೆ! ಕೆಲವರಿಗೆ ಓದುಬರಹ ಬಾರದು, ಉತ್ತರ ಬರೆಯಲಾರರು ಎಂಬುದನ್ನು ಆಲಿ ಬಲ್ಲರು. ಆದರೂ ತಮ್ಮ ಕಾರ್ಯದಲ್ಲಿ ನೆರವಿತ್ತವರೆಂದು ಕೃತಜ್ಞತೆಯಿಂದ ಆಲಿ ಸ್ಮರಿಸಿ, ಪತ್ರಿಸುತ್ತಿದ್ದರು.

ಮುಂಬೈಯಲ್ಲಿರುವಾಗಲಂತೂ ಆಲಿಯವರದು ಕಟ್ಟುನಿಟ್ಟು ಬದುಕು. ಬೆಳಗಿನ ಜಾವ 5ಕ್ಕೆ ಅವರು ಗಾಳಿಸೇವನೆಗೆಂದು ಹೊರಹೊರಡುವುದು, ಅನಂತರ ಸಂಸ್ಥೆಗೆ ಹೋಗುವ ಮುಂಚೆ ಕೆಲವು ಗಂಟೆ ಕಾಲ ಅಧ್ಯಯನ. ಆಫೀಸಿನ ಹೊರಗೆ ಅವರ ಪ್ರಿಯಸಂಗಾತಿ ಮೋಟರ್‌ಬೈಕ್ ಗುಡುಗುಡಿಸುವ ಸದ್ದು ನಮಗೆಲ್ಲ ಕೇಳಿಬರುವುದು. ಎಷ್ಟೇ ದುಡಿಯಲಿ, ರಾತ್ರಿ 10 ಘಂಟೆಗೆ ಸರಿಯಾಗಿ ನಿದ್ದೆ. ''ನಾನೂ ಹಕ್ಕಿಗಳಂತೆಯೆ'' ಆಲಿ ಹೇಳುತ್ತಿದ್ದ ರೀತಿ: ''ದಿನವೆಲ್ಲ ದುಡಿಯುಲಿಚ್ಛಿಸುತ್ತೇನೆ'' ಹಕ್ಕಿಯಂತೆಯೇ ಊಟ. ಆಹಾರ ಅಲ್ಪಪ್ರಮಾಣ ಮಾತ್ರ. ಸ್ವಪ್ಪ ಪಲ್ಲೆ, ಒಂದೇ ಚಪಾತಿ!

ಈ ರೀತಿಯ ಕ್ಲುಪ್ತ ಆಹಾರ ಸೇವನೆ, ಕೆಲವೊಮ್ಮೆ ಈ ಮುದುಕನ ಜತೆ ಕ್ಷೇತ್ರ ಪ್ರವಾಸ ಕೈಗೊಂಡಾಗ ನನಗಂತೂ ತುಂಬ ಪ್ರಯಾಸವೆನಿಸುತ್ತಿತ್ತು. ಮೂರು ಚಪಾತಿಗೂ ಹೆಚ್ಚು ತಿನ್ನಲೂ ನನಗೆ ಮುಜುಗರ! ಅಂತೆಯೇ ಒಂದು ಉಪಾಯ ಹೂಡಿದೆ. ಅಡಿಗೆಯವನ ಬಳಿ ತುಂಬ ಸ್ನೇಹದಿಂದಿದ್ದೆ. ಅಡಿಗೆ ಮನೆಯಲ್ಲೊಂದು ಊಟ, ಆಲಿಯುವರ ಜತೆ ಇನ್ನೊಂದು! ಇದು ನನ್ನ ಆಹಾರ ಪದ್ಧತಿ.

ಇತರ ಮಿತ್ರ-ಸಹೋದ್ಯೋಗಿಗಳಿಗೂ ಕೆಲವು ಸಮಸ್ಯೆಗಳಿದ್ದುವು. ಆಲಿಯವರ ಪರಿಸರ ಪ್ರೀತಿಯಿದ್ದ ಹಾಗೆಯೇ ಅವರೆದುರಲ್ಲಿ ಸಿಗರೇಟು ಸೇದುವುದಾಗಲಿ, ಕುಡಿಯುವುದಾಗಲೀ ಯಾರಿಗೂ ಸುತರಾಂ ಸಾಧ್ಯವಿರಲಿಲ್ಲ! ಅವರ ಜತೆಗಿನ ಪ್ರವಾಸದಲ್ಲಿ, ಒಂದು ಸಣ್ಣ ಗುಂಪು ಚದುರಿ ಪ್ರತ್ಯೇಕಗೊಂಡು ಬಿಡುವಿನ ವೇಳೆಯಲ್ಲಿ ಹೊಗೆಯೇಳಿಸುವುದನ್ನೂ ನೀವು ಕಾಣಬಹುದಿತ್ತು. ಇದಕ್ಕೂ ಮಿಗಿಲಾದದ್ದು, ಸಲೀಂ ಅವರಿಗೆ ಗೊರಕೆ ಹೊಡೆಯುವವರನ್ನು ಕಂಡರೇನೇ ದ್ವೇಷ. ರಾತ್ರಿಯ ಗೊರಕೆ ಸದ್ದಿಗೆ, ಸದ್ದಿಲ್ಲದೆ ಬರಬಹುದಾದ ಎಳೆ ಹಕ್ಕಿ ಹೆದರಿ ಹಾರಿಯಾವು ಎಂಬ ಭೀತಿ ಮೂಡುವಷ್ಟು ಪ್ರೀತಿ!

ಸಲೀಂ ಆಲಿಯವರ ಅಗತ್ಯಗಳು ಸ್ವಲ್ಪವೇ ಇದ್ದ ಪ್ರಯುಕ್ತ, ಹಣದ ಅಗತ್ಯ ಅವರಿಗೆ ತುಂಬ ಕಡಿಮೆ ಇತ್ತು. ಅವರ ಬರಹ-ಪ್ರಶಸ್ತಿಗಳಿಂದ ಬೇಕಾದಂತೆ ಹಣ ಬರುತ್ತಿತ್ತು. ಆದರೆ, ಅದರಲ್ಲಿ ಆಲಿ ತನಗೆಂದು ಇರಿಸಿಕೊಳ್ಳುತ್ತಿದ್ದುದು ತುಂಬ ಕಡಿಮೆ. ಎಲ್ಲವನ್ನು ಸ್ಕಾಲರ್‌ಶಿಪ್ ಹಾಗೂ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ದತ್ತಿಯಾಗಿ ಕೊಟ್ಟುಬಿಡುತ್ತಿದ್ದರು. ಪಾನ್ ಗೆಟ್ಟಿ (Pane Gatti) ವನ್ಯಸಂರಕ್ಷಕ ಪ್ರಶಸ್ತಿ 1976ರಲ್ಲಿ ಆಲಿಯವರಿಗೆ ಬಂದಿತು! 50000 ಡಾಲರ್ ಮೌಲ್ಯದ ಬಹುಮಾನ! ಆಲಿ ಅದಷ್ಟನ್ನು ಬಿ.ಎನ್.ಹೆಚ್.ಎಸ್. ಸಂಸ್ಥೆಯಲ್ಲಿ ಸ್ಥಾಪಿಸಿದ್ದ ''ವನ್ಯ ಜೀವಿ ಸಂರಕ್ಷಕ ಸಂಶೋಧನಾ ನಿಧಿ''ಗೆ ಅರ್ಪಿಸಿದರು.

ಕೇವಲ ಕಡಿಮೆ ಹಣದ ಯೋಜನೆಯಲ್ಲಿ ಆಲಿ ಕೆಲಸ ಮಾಡಲಿ, ಯೋಜನೆಯ ಅವಧಿ ಮುಗಿದ ನಂತರ ಹಣ ಉಳಿದೇ ಇರುತ್ತಿತ್ತು. ''ಅಗತ್ಯವಿರದೆ ಖರ್ಚು ಕೂಡದು'' ಆಲಿ, ನನಗೆ ಪದೇ ಪದೇ ಹೇಳುತ್ತಿದ್ದ ಹಿತನುಡಿ: ''ನೀನು ಬಿ.ಎನ್.ಹೆಚ್.ಎಸ್.ಗೆ ಲೆಕ್ಕಾಚಾರ ಕೊಡುವಾಗ, ನಿನ್ನ ಮನಸ್ಸಾಕ್ಷಿಗೂ ಲೆಕ್ಕ ಕೊಡುವುದಿದೆ'' ಹೊಸ ಹೊಸ ವಸ್ತು ಖರೀದಿಸಿ, ದುಂದು ಮಾಡುವುದನ್ನು ಆಲಿ ಸಹಿಸರು.

ಮೋಟರ್ ಬೈಕ್‌ಗಳನ್ನು ಕಂಡರಂತೂ ಈ ಬಡಕಲು ಆಸಾಮಿ ತುಂಬಾ ಇಷ್ಟಪಡುತ್ತಿದ್ದರು. ಮಕ್ಕಳಂತೆ ಪ್ರೀತಿಸುತ್ತಿದ್ದರು. ತನ್ನ ಬೈಕ್ ಅನ್ನು

ಒಮ್ಮೆ ತಡವಿ, ಒರೆಸಿ, ತೀವ್ರಗತಿಯಲ್ಲಿ ಒಂದು ಸುತ್ತು ವೇಗವಾಗಿ ಹೋಗಿ ಬರುವದೆಂದರೆ ಆಲಿಗೆ ಖುಷಿ. 1950ರಲ್ಲಿ ಆಲಿಯವರು ಸ್ವೀಡನ್‌ಗೆ ಹೋದಾಗಲೂ ತಮ್ಮ ಸನ್‌ಬೀವ್ರ್ 500 cc ಭಾರದ ಬೈಕ್ ಅನ್ನು ಹಡಗಲ್ಲಿ ಕೊಂಡೊಯ್ದರು. ಅದಕ್ಕೆ ತಮ್ಮ ಲಗ್ಗೇಜ್ ಬಿಗಿದು, ಪಕ್ಷಿಶಾಸ್ತ್ರಜ್ಞರ ಅಧಿವೇಶನದ ಚಪ್ಪರಕ್ಕೂ ಮೊರೆಯುತ್ತ ನುಗ್ಗಿಸಿದರು! ಭಾರತದಿಂದ ಬೈಕ್‌ನಲ್ಲಿಯೆ ಬಂದರೇನೋ ಎನ್ನುವ ಹಾಗೆ! ಅಧಿವೇಶನ ಮುಗಿದ ನಂತರ, ಯುರೋಪೆಲ್ಲ ಆಲಿ ತಮ್ಮ ಬೈಕ್‌ನಲ್ಲೇ ಸುತ್ತಿದ್ದು! ಫ್ರಾನ್ಸ್‌ನಲ್ಲಿ ಒಂದೆಡೆ ಆಲಿಯವರು, ಬೈಕ್‌ನಲ್ಲಿ ಹೋಗುತ್ತಿದ್ದಾಗ ಎದುರಾಗಿ ವೇಗದಿಂದ ಬಂದ ಟ್ರಕ್ ಢೀ ಹೊಡೆಯಿತು! ಆಲಿ ಗಾಯಗೊಂಡು ಆಸ್ಪತ್ರೆ ಸೇರಿದರು. ಆದರೇನು? ಮತ್ತೆ ಮರು ಬೆಳಿಗ್ಗೆ ಆಸ್ಪತ್ರೆ, ಹಾಸಿಗೆ ತೊರೆದದ್ದೆ, ತಾನೇ ಬೈಕ್ ರಿಪೇರಿ ಮಾಡಿ ಹೊರಟಿದ್ದರು! ನೋಡಲು ಬಡಕಲು ಆಸಾಮಿ, ಮನಸ್ಸು ಮಾತ್ರ ವಜ್ರ! ತಲೆಗೆ ಗಾಯದ ಪಟ್ಟಿ, ಆ ದಿನ ಯಾರಿಗೆ ತಾನು ಊಟಕ್ಕೆ ಬರುವೆನೆಂದಿದ್ದರೋ ಆ ಮನೆಗೆ ವೇಳೆಗೆ ಸರಿಯಾಗಿ ಹಾಜರ್! ಇದು ಆಲಿಯವರ ನಿಯಮ.

ಸಲೀಂ ಆಲಿಯವರ ಧೃತಿ ಶಕ್ತಿಯನ್ನು ಯಾವುದೂ ಮುಪ್ಪು ಕೂಡ ಸಡಿಲಗೊಳಿಸಲಿಲ್ಲ. 87ರ ವಯಸ್ಸಿನ ತನಕವೂ ಆಲಿಯವರು ದೊಡ್ಡ ದೊಡ್ಡ ಕ್ಷೇತ್ರ ಪ್ರವಾಸ ಕೈಗೊಂಡು ಕಾರ್ಯ ನಿರ್ವಹಿಸಿದರು. 1983ರಲ್ಲಿ ಬರ್ಮಾ ಗಡಿ ಸನಿಹದ ಮೂಲೆಯ ದಟ್ಟ ಕಾಡು. "ನಮ್ದಫ್ ನ್ಯಾಷನಲ್ ಪಾರ್ಕ್" (Namdapha National Park) ನಲ್ಲಿ ಆಲಿ ನಾಲ್ಕು ವಾರ ಕಳೆದರು. ಎರಡು ವರ್ಷದ ನಂತರ ಆಲಿಗೆ ಹಿಮಾಲಯ ಪ್ರಾಂತ್ಯ ಪ್ರವಾಸದ ಆದೇಶ, ಸರಕಾರದಿಂದ! ಹಿಮಾಲಯ ಪರ್ವತದ ವಿಶಿಷ್ಟ ಜಾತಿಯ ಲಾವಕ್ಕಿ (-ಪುರಲೆ ಹಕ್ಕಿ) ಯನ್ನು ಪತ್ತೆ ಮಾಡಲೆಂದು ಕೈಗೊಂಡ ಪ್ರವಾಸ ಅದು. 1858ರಲ್ಲಿ ಕಾಣಿಸಿಕೊಂಡಿದ್ದ ಆ ವಿಶಿಷ್ಟ ಜಾತಿಯ ಪಕ್ಷಿ ಮತ್ತೆ ಕಾಣಸಿಗಲಿಲ್ಲ. ಆಲಿ, ಅದರ ಅನ್ವೇಷಣೆ ನಡೆಸಿದರು - ಪಕ್ಷಿಶಾಸ್ತ್ರಜ್ಞನ ರೀತಿಯಲ್ಲಿ! ಈ ಬಾರಿ ಮಾತ್ರ ಮುಪ್ಪು ಆಲಿಯುವರ ಉತ್ಸಾಹಕ್ಕೆ ತಡೆಯೊಡ್ಡಿತೇನೋ! ಪಶ್ಚಾತ್ತಾಪ ಖಾಹಿಲೆ ಬಿದ್ದ ಆಲಿಯವರನ್ನು ಅವರ ಕಠಿಣ ಪ್ರವಾಸ ಕೈಬಿಡುವಂತೆ ಕೋರಲಾಯಿತು. ಅದೇ ವೇಳೆಯನ್ನು ಅವರು ತಮ್ಮ ಉತ್ಕೃಷ್ಟ ಕೃತಿ "ಗುಬ್ಬಚ್ಚಿಯ ಪತನ" (The fall of a sparrow) ರಚನೆಗೆ ಬಳಸಿಕೊಂಡರು. ಇದು, ಆಲಿಯವರ ಆತ್ಮಕಥನ ಹಾಗೂ ಜಗತ್ತಿನಲ್ಲೇ ಪ್ರಸಿದ್ಧಿವಾದ ಕೃತಿ.

ಮುಂಬಯಿಯಲ್ಲಿ ಪಕ್ಷಿಶಾಸ್ತ್ರ ಸಂಸ್ಥೆಯನ್ನು ಸ್ಥಾಪಿಸಿರುವದು ಸಲೀಂ ಆಲಿಯವರ ಅಂತಿಮ ಬಯಕೆಗಳಲ್ಲೊಂದು. 1987ರ ಏಪ್ರಿಲ್‌ನಲ್ಲಿ ಖಾಯಿಲೆ ಮಲಗಿ ಎದ್ದ ನಂತರ, ಅದು ಅರ್ಬುದ (cancer) ಎಂದು ಪತ್ತೆ ಆಯಿತು. ವಿಮಾನದಲ್ಲಿ ಆಲಿ ಡೆಲ್ಲಿಗೆ ತೆರಳಿದರು, ಅಲ್ಲೊಂದು ಅಧಿವೇಶನಕ್ಕೆ ಅವರು ಹಾಜರಾಗಬೇಕಿತ್ತು. ಅಲ್ಲೇ ಅಂದು ಪ್ರಧಾನಿ ರಾಜೀವ್ ಗಾಂಧಿಯವರಲ್ಲಿ ಮುಂಬಯಿ ಪಕ್ಷಿಶಾಸ್ತ್ರ ಸಂಸ್ಥೆಯ ಸ್ಥಾಪನೆಯ ಬಗ್ಗೆ ಮಾತನಾಡಿ, ಒಪ್ಪಿಸಿದರು. ಡೆಲ್ಲಿಯಲ್ಲೇ ಮತ್ತೆ ಆಸ್ಪತ್ರೆಗೆ ದಾಖಲಾದ ಆಲಿ, ಅಧಿವೇಶನಕ್ಕೆ ಹೋಗುವುದಾಗಲಿಲ್ಲ. "ಏನಾದರಾಗಲಿ ನಾನು ಅಧಿವೇಶನದಲ್ಲಿರಲೇಬೇಕು" ಇದೇ ಅವರ ಹಠ. ಪ್ರಧಾನಿಯೇ ಆಸ್ಪತ್ರೆಗೆ ಧಾವಿಸಿ, ತಮ್ಮ ಪೂರ್ಣ ಬೆಂಬಲ, ನೆರವನ್ನು ವ್ಯಕ್ತಪಡಿಸಿದರು.

ಆಮೇಲೆ ಎರಡೇ ತಿಂಗಳು. ಆಲೀ ಸದ್ದಿಲ್ಲದೆ ಹಕ್ಕಿಯಂತೆಯೇ ಕಾಲವಶವಾದರು. ಅವರಿಗೆ ಮನಸ್ಸಿರದೆ ನಡೆಸಿದ ಕಾರ್ಯವೆಂದರೆ ಸಾವೊಂದೆ! ಉಳಿದೆಲ್ಲದರಲ್ಲೂ ಆಲಿ ಸಂಪೂರ್ಣ ಮನದಿಂದ ದುಡಿಯುತ್ತಿದ್ದರು. ಏಕೆಂದರೆ, ತಾನು ಅಷ್ಟೇ! ದುಡಿದಿರಲಿ, "ಇನ್ನೂ ತುಂಬಾ ಕೆಲಸ ಉಳಿದಿದೆ" ಎಂಬುದೆ ಆಲಿಯ ಕಳಕಳಿ. "ನಾನು ಈಗಲೆ ಸಾಯಲು ಸಿದ್ಧನಿಲ್ಲ. ಇನ್ನೂ ಮೇಲಂಚನ್ನು (ಕ್ಯಾನ್ಸರಿಂದಾಗಿ) ಮಾತ್ರ ತಲುಪಿದ್ದೇನೆ. ಪ್ರವೇಶ ಮಾಡಿಲ್ಲ. ಇನ್ನೂ ಸಾಧಿಸುವುದಿದೆ. ಅದೇ ನನ್ನ ಗುರಿ" ಆಲಿಯವರ ಈ ಕಳಕಳಿ ಎಲ್ಲರಿಗೂ ಮಾದರಿ ತಾನೆ? ●

ನೀತಿಕಥೆ

ಎಚ್. ಪಾಂಡುರಂಗ ವಿಠಲ

ತರ್ಕಕ್ಕೆ ತೋರದ ಕನಕನ ಕಿಂಡಿ

ಬೋಧಿ ಧರ್ಮ ತನ್ನ ಕಾಷಾಯ ವಸ್ತ್ರ, ಭಿಕ್ಷಾ ಪಾತ್ರೆಗಳನ್ನು ತನ್ನ ಅನಂತರದ ಜೆನ್ ಗುರುವಿಗೆ ಬಿಟ್ಟು ಹೋದ. ಹೀಗೇ ಆ ಶಿಷ್ಯ ಪರಂಪರೆ ಮುಂದುವರೆದು ಐದನೆ ಮಹಾಂತ ಗುನಿನ್‌ಗೆ ಬಂತು. ಮುಪ್ಪಿನ ಗುನಿನ್ ಒಂದು ದಿನ ಜೆನ್ ರಹಸ್ಯವನ್ನು ತಿಳಿಸುವ ಅತ್ಯುತ್ತಮ ಪದ್ಯ ರಚಿಸಿದವನನ್ನು ಮರಿಯಾಗಿ ಆರಿಸುವುದಾಗಿ ಹೇಳಿದ.

ಗುನಿನ್ ಮಠದ ಮುಖ್ಯ ಸನ್ಯಾಸಿ ಮಸಿ ಕುಂಚಗಳನ್ನು ಹಿಡಿದು, ದಪ್ಪ ಅಕ್ಷರದಲ್ಲಿ ಬರೆದ:

'ದೇಹವೊಂದು ಬೋಧಿ ವೃಕ್ಷ
ಆತ್ಮ ಸ್ವಚ್ಛ ಕನ್ನಡಿ
ಓದಿನಿಂದ ಅದನ್ನೊರೆಸು
ಇಲ್ಲ, ದೂಳು ಮುಸುಕಿ ಹಾಳು'

ಮುಖ್ಯನೊಡನೆ ಸ್ಪರ್ಧೆಗೆ ಇಳಿಯುವ ಎದೆಗಾರಿಕೆಯನ್ನು ಉಳಿದ ಯಾವ ಸನ್ಯಾಸಿಯೂ ತೋರಲಿಲ್ಲ. ಆದರೆ ಸಂಜೆ ಮಸುಕಿನಲ್ಲಿ ಅಡಿಗೆ ಪರಿಚಾರಕನಾಗಿದ್ದ ಯೇನೋ ಎಂಬ ಕೀಳು ಶಿಷ್ಯ ಆ ಪದ್ಯ ತೂಗುಬಿಟ್ಟಿದ್ದ ಪಾಠಶಾಲೆಯನ್ನು ಹಾದು ಹೋದ. ಪದ್ಯವನ್ನು ಓದಿ, ಅಲ್ಲೇ ಬಿದ್ದಿದ್ದ ಕುಂಚವನ್ನೆತ್ತಿ ಒರಟು ಬರಹದಲ್ಲಿ ಈ ರೀತಿ ಬರೆದುಬಿಟ್ಟ:

'ಬೋಧಿಯೊಂದು ವೃಕ್ಷವಲ್ಲ
ಸ್ವಚ್ಛ ಕನ್ನಡಿ ಇಲ್ಲ ಇಲ್ಲ
ಶೂನ್ಯದಿಂದ ಮೊದಲು ಎಲ್ಲ
ಆದ್ದರಿಂದ ಎಲ್ಲಿ ದೂಳು?

ಆ ರಾತ್ರಿಯ ಮಧ್ಯದಲ್ಲಿ ಗುನಿನ್ ಯೇನೋವನ್ನು ತನ್ನ ಕೋಣೆಗೆ ಕರೆದ. ನಿನ್ನ ಪದ್ಯ ಓದಿದೆ. ನೀನೇ ನನ್ನ ಅನಂತರದ ಗುರು. ಇಕೋ ನನ್ನ ವಸ್ತ್ರ, ಭಿಕ್ಷಾ ಪಾತ್ರೆ. ಆದರೆ ನಮ್ಮ ಮುಖ್ಯ ಸನ್ಯಾಸಿ ಮತ್ತಿತರರು ಹೊಟ್ಟೆಕಿಚ್ಚಿನಿಂದ ನಿನಗೆ ಹಾನಿ ಮಾಡಿಯಾರು. ಈ ರಾತ್ರಿಯೇ ಮಠ ಬಿಟ್ಟು ದೂರ ಹೋಗಿಬಿಡು ಎಂದ.

ಮುಖ್ಯ ಸನ್ಯಾಸಿಗೆ ಮುಂಜಾನೆಯೆ ವಿಷಯ ತಿಳಿದು ಯೇನೋನ ಜಾಡು ಹಿಡಿದು ದೌಡಾಯಿಸಿದ. ಮಧ್ಯಾಹ್ನ ಅವನನ್ನು ಹಿಡಿದು, ಬೇರೇನೂ ಮಾತಾಡದೆ ಭಿಕ್ಷಾ ಪಾತ್ರೆ, ವಸ್ತ್ರಗಳನ್ನು ಹಿಡಿದೆಳೆದ.

ಯೇನೋ ದಾರಿ ಪಕ್ಕದಲ್ಲಿದ್ದ ಬಂಡೆಯ ಮೇಲೆ ಅವನ್ನಿಟ್ಟು, 'ಇವು ಬರೀ ಚಿಹ್ನೆಗಳು ಅಷ್ಟೆ. ಇವೇ ನಿನಗೆ ಬೇಕಿದ್ದರೆ ದಯವಿಟ್ಟು ತೆಗೆದುಕೊಂಡು ಹೋಗು' ಎಂದ.

ಮುಖ್ಯ ಸನ್ಯಾಸಿ ತುಂಬ ಕಾತರನಾಗಿ ಕೆಳಗೆ ಬಗ್ಗಿ ಅವನ್ನೆತ್ತಿದ. ಅವನ್ನು ಸ್ವಲ್ಪವೂ ಕದಲಿಸಲು ಅವನಿಗಾಗಲಿಲ್ಲ. ಅವು ಪರ್ವತದಷ್ಟು ಭಾರವಾಗಿದ್ದವು. ಅನಂತರ ಆತ ಹೇಳಿದ: 'ದಯವಿಟ್ಟು ನನ್ನ ಕ್ಷಮಿಸು, ನಿಜವಾಗಿ ನನಗೆ ಬೇಕಾದ್ದು ತತ್ವ, ಈ ವಸ್ತ್ರಗಳಲ್ಲ. ನನಗೆ ಕಲಿಸುವೆಯಾ?'

ಯೇನೋ ನುಡಿದ. 'ಇದು ನನ್ನದು ಎಂದು ಯೋಚಿಸುವುದನ್ನು ನಿಲ್ಲಿಸು. ಇದು ನನ್ನದಲ್ಲ ಎಂದು ಯೋಚಿಸುವುದನ್ನು ನಿಲ್ಲಿಸು. ಅನಂತರ ನನಗೆ ಹೇಳು: ನೀನು ಎಲ್ಲಿದ್ದೀಯಾ? ಇದನ್ನೂ ನನಗೆ ಹೇಳು: ನಿನ್ನ ಅಪ್ಪ ಅಮ್ಮ ಹುಟ್ಟುವುದಕ್ಕೂ ಮೊದಲು ನಿನ್ನ ಮುಖ ನೋಡಲು ಹೇಗಿತ್ತು?' ಜೆನ್‌ನ ಬಹು ಮುಖ್ಯ ಕೋಅನ್ ಇದು. ನಮ್ಮ ಕನಕ 'ಸ್ವರ್ಗಕ್ಕೆ ನಾನು ಹೋದರೆ ಹೋದೇನು' ಎಂದು ತೆರೆದ ಧ್ಯಾನದ ಕಿಂಡಿಯಂತೆ (Gateless gate) ಇದು.

ಆಗಸದ ಒಡಲೊಳಗೆ ಚಿಮ್ಮಲಿರುವ ಚಾಲಕರಹಿತ ವಿಮಾನಗಳು!

ಸಿ.ಪಿ. ಭಾಸ್ಕರ

70ರ ದಶಕದ ಕೊನೆಯ ವರ್ಷದ ಒಂದು ದಿನ. ಅಮೆರಿಕ ಸಂಯುಕ್ತ ಸಂಸ್ಥಾನದ ಒಂದು ಭಾಗ.

ಮುಸುಕಿದ ಮಂಜು, ಮೋಡಗಳಿಂದ ತುಂಬಿದ ಕಪ್ಪಾದ ಆಕಾಶ. ಇಂತಹ ವಾತಾವರಣದಲ್ಲಿ ದೂರದ ಪರ್ವತಮಯವಾದ ಪ್ರದೇಶದಲ್ಲಿನ ತನ್ನ ರಾಷ್ಟ್ರದ ಸೈನಿಕರಿಗೆ ಅತ್ಯಗತ್ಯವಾದ ಔಷಧಿ ಮತ್ತಿತರ ವಸ್ತುಗಳನ್ನು ಸರಬರಾಜು ಮಾಡಲು ಒಂದು ವಿಮಾನ ಹಾರುತ್ತಿದೆ. ಮುಖ್ಯ ಪೈಲಟ್ ತನ್ನ ವಾಯುನೆಲೆಗೆ ಕೆಟ್ಟ ಹವೆಯಿಂದಾಗಿ ಹಾರಾಟ ಕಷ್ಟವಾಗಿದೆಯೆಂದೂ, ಆದರೂ, ಎಚ್ಚರಿಕೆಯಿಂದ ಹೋಗುತ್ತಿರುವುದಾಗಿಯೂ ವರದಿ ಮಾಡುತ್ತಾನೆ.

ಮುಂದೆ ಸ್ವಲ್ಪ ಸಮಯದ ನಂತರ ವಿಮಾನ ಮತ್ತು ಮುಖ್ಯ ನೆಲೆಗೆ ಇದ್ದ ಸಂಪರ್ಕ ಕಡಿದು ಹೋಗುತ್ತದೆ. ವಾಯುನೆಲೆಯ ಅಧಿಕಾರಿಗಳು ಸಂಪರ್ಕ ಸಾಧಿಸಲು ಮಾಡಿದ ಎಲ್ಲಾ ಪ್ರಯತ್ನಗಳೂ ವಿಫಲವಾದಾಗ ಬಹುಶಃ ವಿಮಾನ ಅಪಘಾತಕ್ಕೀಡಾಗಿರಬಹುದೆಂದು ಊಹಿಸಿದರು. ಎರಡು ದಿನಗಳ ನಂತರ ಹವೆ ಸುಧಾರಿಸಿದಾಗ ವಿಮಾನದ ಶೋಧನೆಯಲ್ಲಿ ಹೊರಟ ಹೆಲಿಕಾಪ್ಟರ್‌ಗಳು ಪರ್ವತವೊಂದಕ್ಕೆ ಡಿಕ್ಕಿ ಹೊಡೆದು ಚಲ್ಲಾಚೆದುರಾಗಿ ಬಿದ್ದಿದ್ದ ವಿಮಾನದ ಅವಶೇಷಗಳನ್ನು ಕಂಡವು. ಕೆಳಗಿಳಿದ ರಕ್ಷಣಾದಳದ ಸೈನಿಕರಿಗೆ ಸ್ವಲ್ಪ ಹುಡುಕಾಟದ ನಂತರ ಚಾಲಕ ವರ್ಗದ ಮೃತ ದೇಹಗಳು ಸಿಕ್ಕಿದವು. ದುಃಖತಪ್ತ ತಂಡ ಮೃತ ದೇಹಗಳೊಂದಿಗೆ ಮುಖ್ಯ ನೆಲೆಗೆ ಹಿಂದಿರುಗಿದರು.

ವೈಮಾನಿಕ ಹಾರಾಟದ ಇತಿಹಾಸದಲ್ಲಿ ಇಂತಹ ಅಪಘಾತ ಮತ್ತು ಸಾವುಗಳು ತುಂಬಾ ಸಾಮಾನ್ಯವಲ್ಲದಿದ್ದರೂ ಕೆಟ್ಟ ಹವೆ ಮತ್ತು ಪರ್ವತಮಯ ಪ್ರದೇಶದ ಹಾರಾಟದಲ್ಲಿ ಇವುಗಳು ಯಾವಾಗಲೂ ನಿರೀಕ್ಷಿತ. ಯುದ್ಧನಿರತ ವಿಮಾನಗಳು ಶತ್ರುವಿನ ದಾಳಿಯಲ್ಲಿ ನಾಶವಾಗುವ ಸಂದರ್ಭ ಯುದ್ಧರಂಗದಲ್ಲಿ ಅತೀ ಸಾಮಾನ್ಯ.

ಇಂತಹ ನಾಶವನ್ನು ತಡೆಗಟ್ಟುವ ಅಗತ್ಯತೆಯನ್ನು ಮನಗಂಡ ಅಮೆರಿಕೆಯ ಪೆಂಟಾಗನ್‌ನ ವಕ್ತಾರರೊಬ್ಬರು: ಹೇಳುವಂತೆ ಇಂದು ಪ್ರಪಂಚದಲ್ಲಿ ಭಯೋತ್ಪಾದನೆ ಹೆಚ್ಚುತ್ತಿದೆ ಮತ್ತು ಪ್ರಪಂಚದ ರಾಜಕೀಯದಲ್ಲಿ ಅಷ್ಟೇನೂ ಮಹತ್ವದಲ್ಲದ ಆದರೆ ಸ್ಥಳೀಯ ಜನಜೀವನವನ್ನು ಸಾಕಷ್ಟು ಹಾಳುಗೆಡಹುವ ಸಣ್ಣಪುಟ್ಟ ಯುದ್ಧಗಳು ನಡೆಯುತ್ತಲೇ ಇವೆ. ಇಂತಹ ಕಾಲದಲ್ಲಿ ಶಾಂತಿ ಸ್ಥಾಪನೆಗಾಗಿ ಕಾರ್ಯಾಚರಣೆಯಲ್ಲಿ ತೊಡಗಬಹುದಾದ ಯುದ್ಧವಿಮಾನ ಮತ್ತು ಪೈಲಟ್‌ಗಳು ಅಪಾಯದಲ್ಲಿರುತ್ತಾರೆ. ಸಾಂಪ್ರದಾಯಿಕ ಚಮತ್ಕಾರದಿಂದ ರೂಪಿಸಿದ, ಯುದ್ಧ ವಿಮಾನಗಳ ತಯಾರಿ, ಮತ್ತು ಅವುಗಳ ಚಾಲನೆಗೆ ಪೈಲಟ್‌ಗಳಿಗೆ ನೀಡಲಾಗುವ ಅತ್ಯಾಧುನಿಕ ತರಬೇತಿ, ಇವುಗಳ ವೆಚ್ಚ ಗಗನ ಮುಟ್ಟುತ್ತಿರುವ ಈ ಕಾಲದಲ್ಲಿ ಅಪಘಾತದಿಂದ ಎರಡನ್ನೂ ಕಳೆದುಕೊಳ್ಳುವ ವಿಷಯ ಯೋಚಿಸಲೂ ಸಾಧ್ಯವಿಲ್ಲ. ಕೊನೆಯ ಪಕ್ಷ ಪೈಲಟ್ ಆದರೂ ಬದುಕುಳಿದರೆ ಸಮಾಧಾನಪಡಬಹುದು. ಈ ಎಲ್ಲ ಹಿನ್ನೆಲೆಯಲ್ಲಿ ಮನುಷ್ಯ ರಹಿತ ವಿಮಾನಗಳ ಕಾಲ ಸನ್ನಿಹಿತವಾಗುತ್ತಿದೆ. ಇವುಗಳನ್ನು ಮೊದಲು ರಿಮೋಟ್ಲಿ ಪೈಲಟೆಡ್ ವೆಹಿಕಲ್ ಎನ್ನುತ್ತಿದ್ದರು. ಈಗ ಇವನ್ನು ಅನ್‌ಮ್ಯಾನ್‌ಡ ಏರಿಯಲ್ ವೆಹಿಕಲ್ (UAV) ಎನ್ನುತ್ತಾರೆ.

ಈ ರೀತಿಯ ವಿಮಾನಗಳ ಕುರಿತ ಸಂಶೋಧನೆಗಳು ನಡೆಯುತ್ತಲೇ ಇವೆ. ಮೊದಮೊದಲು ಶಾಂತಿಕಾಲದ ಕಾರ್ಯಾಚರಣೆಯಲ್ಲಿ ಇಂತಹ ವಿಮಾನಗಳನ್ನು ಬಳಸಬೇಕೆಂದು ನಿರ್ಧರಿಸಿ ಅದರಂತೇ ವಿಮಾನಗಳ ತಯಾರಿಕೆಯ ಬಗೆಗೆ ಯೋಚಿಸತೊಡಗಿದರು. ಆದರೆ ಕ್ರಮೇಣ ಹೆಚ್ಚು ಅಪಾಯಕಾರಿಯಾದ ಯುದ್ಧರಂಗದಲ್ಲಿ ಬಳಸಲು ಸಾಧ್ಯವಾಗುವಂತೆ ನಿರ್ಮಿಸಬೇಕೆಂದು ಕೆಲವು ದೇಶಗಳು, ಮುಖ್ಯವಾಗಿ ಇಸ್ರೇಲ್, ನಿರ್ಧರಿಸಿದವು. ಬೇರೆ ಯಾವ ದೇಶದಲ್ಲೂ ಇಂತಹ ವಿಮಾನಗಳ ತಯಾರಿಕೆಗೆ ವಿರೋಧ ವ್ಯಕ್ತವಾಗಿಲ್ಲವಾದರೂ, ಪೈಲಟ್‌ಗಳೇ 'ಹೀರೋ' ಎಂದು ಭಾವಿಸುವ ಅಮೆರಿಕ ಪೈಲಟ್‌ಗಳು ಇಂತಹ ನಿರ್ಮಾಣದ ಬಗ್ಗೆ ಉತ್ಸಾಹ ತೋರಿಲ್ಲ. ಬೇರೆ ಬೇರೆ ದೇಶಗಳು ಈ ವಿಷಯದಲ್ಲಿ ಕಂಡಷ್ಟು ಯಶಸ್ಸನ್ನು ಅಮೆರಿಕ ಕಂಡಿಲ್ಲ. ಇದನ್ನು ಅದರ ವಾಯುದಳದ ಪೇವ್ ಟೈಗರ್ ಮತ್ತು ಸೇನೆಯ ಅಕ್ವಿಲಾ ಕಾರ್ಯಕ್ರಮಗಳ ವಿಫಲತೆ ಸ್ಪಷ್ಟಪಡಿಸುತ್ತವೆ.

ಈ ಮನುಷ್ಯ ರಹಿತ ವಿಮಾನಗಳು ಸ್ಥಳ ಶೋಧನೆ, ಕಣ್ಗಾವಲು, ಗುರಿಸಾಧನೆ, ಯುದ್ಧ ಮುಂತಾದ ಕಾರ್ಯಗಳನ್ನು ಮನುಷ್ಯ ಸಹಿತ ವಿಮಾನಕ್ಕಿಂತ ಉತ್ತಮವಾಗಿ ನಿರ್ವಹಿಸುತ್ತವೆ. ಇವು ಅಪಘಾತಕ್ಕೀಡಾಗುವ ಸಂಭವನೀಯತೆ ಮನುಷ್ಯಸಹಿತ ವಿಮಾನದ ಸಂಭವನೀಯತೆಗಿಂತ ಕಡಿಮೆ. ಕ್ರಿ.ಶ. 2010 ಅಥವಾ 2015ರ ಸುಮಾರಿಗೆ ಏನಾದರೂ ಒಂದು ಮಹಾಯುದ್ಧ ನಡೆದಲ್ಲಿ ಮನುಷ್ಯ ಸೈನಿಕರ ಬದಲಿಗೆ ರೋಬೋಟ್ ಸೈನಿಕರು ಯುದ್ಧರಂಗದಲ್ಲಿ ಪ್ರಮುಖ ಪಾತ್ರವಹಿಸುವ ಸಾಧ್ಯತೆ ಇದೆ. ಇಂತಹ ಪರಿಸ್ಥಿತಿ ಒದಗಿದಲ್ಲಿ ಮನುಷ್ಯರಹಿತ ವಿಮಾನದ ಅವಶ್ಯಕತೆ ಹೆಚ್ಚುತ್ತದೆ. 1982ರಲ್ಲಿ ಇಸ್ರೇಲ್ ಮನುಷ್ಯ ರಹಿತ ವಿಮಾನಗಳನ್ನು ಲೆಬನಾನ್‌ನ ಬೆಕ್ಕಾ ಕಣಿವೆಯ ಮೇಲೆ ಹಾರಿಸಿ ಅಲ್ಲಿದ್ದ ಶತ್ರು ರೇಡಾರ್‌ಗಳನ್ನು ಪತ್ತೆ ಹಚ್ಚಿ ನಾಶಗೊಳಿಸಿತು. ಈ ಕಾರ್ಯಾಚರಣೆ ಮೊಟ್ಟಮೊದಲ ಬಾರಿಗೆ ಮನುಷ್ಯರಹಿತ ವಿಮಾನಗಳ ಉಪಯೋಗವನ್ನು ತೋರಿಸಿಕೊಟ್ಟಿತು. ಈ ರೀತಿ ಪತ್ತೆ ಹಚ್ಚಿ ನಾಶ ಮಾಡುವ ವಿಮಾನಗಳಲ್ಲಿ ಟಿ.ವಿ. ಕ್ಯಾಮರಾ ಅಳವಡಿಸಿರುತ್ತಾರೆ. ಟಿ.ವಿ. ಕ್ಯಾಮರಾ ಗ್ರಹಿಸುವ ದೃಶ್ಯಗಳು ಮುಖ್ಯ ನೆಲೆಗೆ ರವಾನೆಯಾಗುತ್ತವೆ. ಇದರ ಆಧಾರದ ಮೇಲೆ ತಂತ್ರಜ್ಞರು ಮುಂದಿನ ನಿರ್ಧಾರ ಕೈಗೊಳ್ಳುತ್ತಾರೆ.

ಈ ಮನುಷ್ಯರಹಿತ ವಿಮಾನಗಳೂ ಇತರ ಯುದ್ಧ ವಿಮಾನಗಳಂತೆಯೇ ಇರುತ್ತವೆ. ಈ ವಿಮಾನಗಳಲ್ಲಿ ಪೈಲಟ್‌ನ ಬದಲು ಒಂದು ಕಂಪ್ಯೂಟರ್ ಇರುತ್ತದೆ. ಈ ಕಂಪ್ಯೂಟರ್‌ಗೆ ಹಾರಾಟ ಮತ್ತು ಹಾರಾಟದಲ್ಲಿ ನಿರ್ವಹಿಸಬೇಕಾದ ಕಾರ್ಯಗಳ 'ಪ್ರೋಗ್ರಾಂ' ಅನ್ನು ಉಣಿಸಿರುತ್ತಾರೆ. ಮೊದಮೊದಲು ಒಂದು ಮನುಷ್ಯರಹಿತ ವಿಮಾನ ಕೇವಲ ಒಂದು ನಿರ್ದಿಷ್ಟ ಕಾರ್ಯ ಮಾಡಲು ಮಾತ್ರ ಶಕ್ತವಾಗಿತ್ತು. ಆದರೆ ಇತ್ತೀಚಿನ ಬೆಳವಣಿಗೆಗಳಲ್ಲಿ ಹಾರುತ್ತಿರುವ ಒಂದು ವಿಮಾನದ ಮಾರ್ಗವನ್ನು ಮಧ್ಯದಲ್ಲಿಯೇ ಬದಲಿಸಿ, ಮೊದಲಿನ ಕೆಲಸದ ಬದಲು ಮತ್ತೊಂದು ಕೆಲಸ ಮಾಡುವಂತೆ ನಿರ್ದೇಶಿಸಬಹುದು. ಶತ್ರುವಿನ ಮೇಲೆ ದಾಳಿ ಮಾಡುವ ಮನುಷ್ಯರಹಿತ ವಿಮಾನಗಳು ಎರಡು ಬಗೆಯ ಕಾರ್ಯಗಳನ್ನು ಮಾಡಬೇಕಾಗಬಹುದು. ಒಂದು, ನಿಶ್ಚಲ ಗುರಿಯ ಮೇಲೆ ದಾಳಿ. ಎರಡು, ಚಲಿಸುತ್ತಿರುವ ಗುರಿಯ ಮೇಲೆ ದಾಳಿ.

ನಿಶ್ಚಲಗುರಿಯ ಮೇಲೆ ದಾಳಿ ಮಾಡುವ ಯುದ್ಧವಿಮಾನಕ್ಕೆ ಮೊದಲೇ ಗುರಿ ಇರುವ ಸ್ಥಾನ, ದೂರ ಮತ್ತು ವಿಮಾನ ಎಷ್ಟು ಎತ್ತರದಿಂದ ಅದರ ಮೇಲೆ ಬಾಂಬ್ ಹಾಕಬೇಕು ಮತ್ತು ಹಿಂದಿರುಗುವಾಗ ಅನುಸರಿಸಬೇಕಾದ ಮಾರ್ಗ ಎಲ್ಲವನ್ನೂ ಕಂಪ್ಯೂಟರ್‌ಗೆ ತಿಳಿಸಲಾಗಿರುತ್ತದೆ. ಆದರೂ ಅಂತಹ ವಿಮಾನಗಳಿಗೆ ಟಿ.ವಿ. ಕ್ಯಾಮರಾ ಅಳವಡಿಸಿ ವಿಮಾನ ನಿರ್ದಿಷ್ಟ ದಾರಿಯಲ್ಲಿ ಹೋಗುತ್ತಿರುವುದನ್ನು ಖಚಿತ ಮಾಡಿಕೊಳ್ಳುತ್ತಾರೆ.

ಚಲಿಸುತ್ತಿರುವ ಗುರಿಯ ಮೇಲೆ ದಾಳಿ

ಮಾಡಲು ವಿಮಾನ ಮತ್ತು ಮುಖ್ಯನೆಲೆಯ ನಡುವೆ ನಿರಂತರ ಸಂಪರ್ಕ ಇರಬೇಕು. ಚಲಿಸುತ್ತಿರುವ ಟ್ಯಾಂಕ್ ಒಂದರ ಮೇಲೆ ಆಕ್ರಮಣ ಮಾಡಬೇಕಾದರೆ ಮೊದಲು ಟ್ಯಾಂಕ್ ಇರುವ ಸ್ಥಾನವನ್ನು ಉಪಗ್ರಹದ ಸಹಾಯದಿಂದ ತಿಳಿಯುತ್ತಾರೆ; ಮನುಷ್ಯರಹಿತ ವಿಮಾನದಲ್ಲಿ ಅಳವಡಿಸಿರುವ ಕ್ಯಾಮರಾ ಸಹಾಯದಿಂದಲೂ ತಿಳಿಯಬಹುದು. ಹೇಗೆಂದರೆ ಈ ಕ್ಯಾಮರಾ ಟ್ಯಾಂಕ್ ಒಂದನ್ನು ನೋಡಿದಾಗ ಅದರ ಚಿತ್ರವನ್ನು ಮುಖ್ಯ ನೆಲೆಗೆ ರವಾನಿಸುತ್ತದೆ. ವಿಮಾನ ಇರುವ ಜಾಗದ ಆಧಾರದಿಂದ ಟ್ಯಾಂಕ್ ಇರುವ ಜಾಗವನ್ನು ಲೆಕ್ಕ ಹಾಕುತ್ತಾರೆ. ಮತ್ತು ಟ್ಯಾಂಕ್ ವಿಮಾನಗಳ ನಡುವಣ ಅಂತರವನ್ನೂ ಲೆಕ್ಕ ಹಾಕುತ್ತಾರೆ. ಅದೇ ವಿಮಾನದಲ್ಲಿರುವ ಇನ್ನಿತರ ಉಪಕರಣಗಳ ಸಹಾಯದಿಂದ ಟ್ಯಾಂಕ್‌ನ ವೇಗ, ಅದು ಚಲಿಸುತ್ತಿರುವ ದಿಕ್ಕು, ವಿಮಾನ ಟ್ಯಾಂಕ್‌ನಿಂದ ಇರುವ ಎತ್ತರ ಇವುಗಳನ್ನು ತಿಳಿಯುತ್ತಾರೆ. ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ಈ ಮಾಹಿತಿಗಳನ್ನು ವಿಮಾನದಲ್ಲಿನ ಕಂಪ್ಯೂಟರ್‌ಗೆ ಉಣಿಸಲಾಗುತ್ತದೆ. ಕಂಪ್ಯೂಟರ್ ಈ ಮಾಹಿತಿಗಳ ಆಧಾರದಿಂದ ಅದರ ಮೇಲೆ ದಾಳಿ ಮಾಡುತ್ತದೆ. ಈ ರೀತಿಯ ನಿಯಂತ್ರಣವು ವಿಮಾನದ ಕಂಪ್ಯೂಟರ್ ಮತ್ತು ಉಪಯೋಗಿಸುವ ಸಂಪರ್ಕ ವ್ಯವಸ್ಥೆಯ ಮೇಲೆ ಅವಲಂಬಿಸಿರುತ್ತದೆ.

ಈ ರೀತಿಯ ಮನುಷ್ಯರಹಿತ ವಿಮಾನಗಳಲ್ಲಿ ಮುಖ್ಯವಾಗಿ ನಾಲ್ಕು ಬಗೆಗಳಿರಬೇಕೆಂದು ನಿರ್ಧರಿಸಿದ್ದಾರೆ. ಅವೆಂದರೆ ಅತಿಸಮೀಪವ್ಯಾಪ್ತಿ, ಸಮೀಪವ್ಯಾಪ್ತಿ, ಮಧ್ಯಮವ್ಯಾಪ್ತಿ ಹಾಗೂ ಸಹಿಷ್ಣು ವಿಮಾನ ಈ ನಾಲ್ಕೂ ವಿಭಾಗಗಳನ್ನೂ ಅಮೆರಿಕ ಮತ್ತಿತರ ಮುಂದುವರಿದ ರಾಷ್ಟ್ರಗಳು ಅತಿ ತ್ವರಿತವಾಗಿ ಅಭಿವೃದ್ಧಿಗೊಳಿಸುತ್ತಿವೆ. 1990 ರಲ್ಲಿ ಇವುಗಳ ಸಂಶೋಧನೆಗೆಂದೇ ಅಮೆರಿಕ ಸುಮಾರು 150 ಮಿಲಿಯನ್ ಡಾಲರ್ ಅಂದರೆ ಸುಮಾರು 3000 ಕೋಟಿ ರೂಪಾಯಿ ಖರ್ಚು ಮಾಡಿದೆ.

ಈ ನಾಲ್ಕರಲ್ಲಿ ಸಮೀಪ ವ್ಯಾಪ್ತಿಯ ವಿಮಾನಗಳನ್ನು ಅಮೆರಿಕ ಸೇನೆಯ ಎಲ್ಲಾ ವಿಭಾಗಗಳಲ್ಲೂ ಬಳಸಲು ಸಿದ್ಧತೆಗಳು ನಡೆಯುತ್ತಿವೆ. ಈ ರೀತಿಯ ಸಮೀಪವ್ಯಾಪ್ತಿಯ ವಿಮಾನಗಳಿಗೆ ಒಟ್ಟು 200 ಕಿ.ಮಿ. ವ್ಯಾಪ್ತಿ ನಿಗದಿ ಮಾಡಲಾಗಿದೆ. ಮೊದಲಿನ 50 ಕಿ.ಮಿ. ದೂರವನ್ನು ತನ್ನ ಪ್ರದೇಶದ ಮೇಲೆ ಹಾರುವ ಇದು ಉಳಿದ 150 ಕಿ.ಮಿ. ದೂರವನ್ನು ಶತ್ರು ಪ್ರದೇಶದ ಮೇಲೆ ಹಾರುತ್ತದೆ. ಈ ಹಾರಾಟದಲ್ಲಿ ಸ್ಥಳ ಶೋಧನೆ ಮತ್ತು ಕಣ್ಗಾವಲು ಅತಿ ಮುಖ್ಯ ಕಾರ್ಯ. ದಾಳಿ ಮಾಡುವ ವಿಮಾನಗಳು ಇನ್ನೂ ಅಭಿವೃದ್ಧಿ ಹಂತದಲ್ಲಿವೆ. ಕಾವಲು ಕಾಯಬಲ್ಲ 'ಸ್ಕೈಪಾ' ಎಂಬ ವಿಮಾನಗಳು ಈಜಿಪ್ಟಿನ ಪಿರಮಿಡ್‌ಗಳನ್ನು ಕಾಯುತ್ತಿವೆ.

ಅತಿ ಹೆಚ್ಚು ವೇಗದಲ್ಲಿ ಆದರೆ ಶಬ್ದ ವೇಗವನ್ನು ಮೀರದ, ಸುಮಾರು 650 ಕಿ.ಮಿ. ವ್ಯಾಪ್ತಿ ಹೊಂದಿರುವ ಎರಡು ಗಂಟೆಗಳ ನಿರಂತರ ಹಾರಾಟದ ಸಾಮರ್ಥ್ಯ ಹೊಂದಿರುವ ವಿಮಾನಗಳನ್ನು ಮಧ್ಯಮ ವ್ಯಾಪ್ತಿ ವಿಮಾನ ಎನ್ನುತ್ತಾರೆ. ಈ ವಿಮಾನಗಳನ್ನು ಈಗಿನ ಎಫ್-4ನ ಬದಲು ಬಳಸಬಹುದು. ಸೈನ್ಯದ ಎಲ್ಲ ವಿಭಾಗಗಳೂ ಬಳಸಲು ಸಾಧ್ಯವಾಗುವಂತೆ ನಿರ್ಮಿಸಿದ ವಿಮಾನಗಳೇ ಅತಿ ಸಮೀಪವ್ಯಾಪ್ತಿಯ ವಿಮಾನಗಳು. ಈ ವಿಮಾನಗಳು ಕೇವಲ 30 ಕಿ.ಮಿ. ಮಾತ್ರ ವ್ಯಾಪ್ತಿ ಹೊಂದಿದ್ದು 15,000 ಅಡಿ ಎತ್ತರದವರೆಗೂ ಹಾರಬಲ್ಲವು. ಈ ಎಲ್ಲ ವಿಮಾನಗಳಿಗಿಂತ ಅತ್ಯುತ್ತಮವಾದದ್ದೆಂದರೆ ಸಹಿಷ್ಣು ವಿಮಾನ. ಈಗಿನ SR-71 ಸ್ಥಳ ಶೋಧನೆ ವಿಮಾನದ ಬದಲು ಇವುಗಳನ್ನು ಬಳಸಬಹುದು. ಇವುಗಳು 70,000 ಅಡಿ ಎತ್ತರದಲ್ಲಿ ಸುಮಾರು 3200 ಕಿ.ಮಿ. ದೂರದವರೆಗೂ ಹಾರುತ್ತವೆ. ಈ ಎಲ್ಲ ವಿಮಾನಗಳ ಸಂಪೂರ್ಣ ಅಭಿವೃದ್ಧಿ ಇನ್ನೂ ಸಂಶೋಧನೆಯ ಹಂತದಲ್ಲಿವೆ. ಆದರೂ ಅತಿ ಶೀಘ್ರದಲ್ಲೇ ಅಂದರೆ 2000ನೇ ಇಸವಿಯ ವೇಳೆಗೆ ಇವು ಪೂರ್ಣ ಅಭಿವೃದ್ಧಿ ಹೊಂದಬಹುದೆಂದು ನಿರೀಕ್ಷಿಸಲಾಗಿದೆ. •

(ಆಧಾರ)

ಪ್ರಾಣಿಪಕ್ಷಿಗಳಿಗೂ ಭಾಷೆಯಿದೆಯೇ?

• 'ಗೌರಿ ಅಭಿ'



ಚಿತ್ರ: ಶಶಿ ಸಾಲಿ

ಪ್ರಾಣಿ, ಪಕ್ಷಿ, ಕೀಟಗಳಿಗೆ ತಮ್ಮದೇ ಆದ ಒಂದು ಭಾಷೆಯಿದೆ ಎನ್ನುತ್ತಾರೆ ವಿಜ್ಞಾನಿಗಳು. 2200 ವರ್ಷಗಳ ಹಿಂದೆಯೇ ಗ್ರೀಸಿನ ವಿಜ್ಞಾನಿ ಅರಿಸ್ಟಾಟಲ್ ಜೇನು ನೊಣಗಳ ಭಾಷೆಯ ಬಗೆಗೆ ವಿವರಣೆ ನೀಡಿದ್ದ. ಜೇನು ನೊಣಗಳಲ್ಲಿ ಆಹಾರ ಮತ್ತು ಮಕರಂದ ಎಲ್ಲಿದೆ ಎಂದು ತಿಳಿದು ಬರುವ ಪ್ರತ್ಯೇಕ ಪಡೆಯಿದೆ. ಅವು ಆ ವಿವರಗಳೊಂದಿಗೆ ಹಿಂದಿರುಗಿ ಹೊಟ್ಟೆಯ ಭಾಗವನ್ನು ಅಲ್ಲಾಡಿಸಿ, ರೆಕ್ಕೆಯನ್ನೋ ಕೊಂಡಿಯನ್ನೋ ಕುಣಿಸಿ ಹಾಡುವ ಸಂಕೇತದಿಂದ ಇತರ ನೊಣಗಳಿಗೆ ಆಹಾರ ಅಥವಾ ಮಕರಂದವು ಎಲ್ಲಿದೆಯೆಂದು ತಕ್ಷಣ ತಿಳಿಸುತ್ತವೆ. ಗೂಡಿನ ರಚನೆ, ಕೆಲಸ, ಮಕರಂದದ ಸಾಗಣೆ, ಉಷ್ಣತೆ ನಿಯಂತ್ರಣ ಇವೆಲ್ಲವು

ಗಳಿಗೂ ಜೇನು ನೊಣಗಳು ಬಳಸುವ ನಿಖರವಾದ ಭಾಷೆಯನ್ನು 'ಲಿಂಡೂರ್' ಎಂಬ ತಜ್ಞ ಅಧ್ಯಯನ ಮಾಡಿ, ಈ ಭಾಷಾ ಚಮತ್ಕಾರದ ವಿವರಣಾ ಗ್ರಂಥವೊಂದನ್ನು ರಚಿಸಿದ್ದಾನೆ.


ತಾಯಿ ಜೇಡ ಬಲೆಯ ನೂಲನ್ನು ಅಲ್ಲಾಡಿಸುವುದರಿಂದ ರಾಗ ತಾಳ ಗತಿಗಳ ಮೂಲಕ ಬಲಿಗೆ ಆಹಾರ ಬಿದ್ದರೆ, ಮರಿಗಳು ಚಲಿಸದೆ ಸುಮ್ಮನಿರಬೇಕಾದರೆ ಮತ್ತು ಯಾವುದೇ ಸೂಚನೆ ನೀಡಬೇಕಿದ್ದರೂ ತಿಳಿಯುವುದು ಎನ್ನುತ್ತಾರೆ ಕೀಟಶಾಸ್ತ್ರಜ್ಞ ಡಾ. ಟ್ರಕ್ಸಿಲ್.

ಇರುವೆಯ ಗೂಡಿನೊಳಗೆ ಮರಿಗಳ ಲಾಲನೆ ಪಾಲನೆ, ಆಹಾರ ಸಂಗ್ರಹಣೆ, ರಕ್ಷಣೆ ಮುಂತಾಗಿ ನಾನಾ ವಿಭಾಗಗಳಿವೆ. ಇವು ಆಯಾ ವಿಭಾಗದ ಸೂಚನೆಗಳನ್ನು ಒಂದಕ್ಕೊಂದು ತಿಳಿಸಲು ಮುಖಕ್ಕೆ ಮುಖ ತಾಗಿಸುವುದನ್ನು ಗುರುತಿಸಬಹುದು. ಇರುವೆಗಳಿಗೆ 'ಆಂಟನೀ' ಎಂಬ ಸೂಕ್ಷ್ಮ ಇಂದ್ರಿಯವಿದ್ದು ಸ್ಪರ್ಶ ಮತ್ತು ವಾಸನೆಗಳ ಮೂಲಕ ಅದು ಸೂಚನೆಗಳನ್ನು ನೀಡುವುದು.

ಜಗತ್ತಿನಲ್ಲಿರುವ ಎಲ್ಲಾ ಹಕ್ಕಿಗಳಿಗೆ ಕೋತಿಗಳಿಗೆ ಭಾಷೆ ಒಂದೇ, ಜನಿಸಿದ ಎರಡೇ ಗಂಟೆಗಳಲ್ಲಿ ಮರಿಗೆ ತಾಯಿಯ ಭಾಷೆ ತಿಳಿಯುತ್ತದೆ. ಹಕ್ಕಿಗಳು ಸಾವಿರಾರು ಸಂಖ್ಯೆಯಲ್ಲಿ ಸಾಲಾಗಿ ಹಾರುತ್ತಾ ವಲಸೆ ಹೋಗುವಾಗ ಕೂಗುತ್ತಲೇ ಇರುತ್ತವೆ. ಇದು ಗುಂಪಿನಲ್ಲಿ ಎಲ್ಲವೂ ಒಟ್ಟಾಗಿರುವುದರ ಸೂಚನೆ. ಸಂತೋಷ, ದುಃಖ, ಅಪಾಯ ಎಲ್ಲವನ್ನೂ ವಿವರಿಸಲು ಹಕ್ಕಿಗಳಲ್ಲಿ ಸ್ವರ ವ್ಯತ್ಯಾಸವಿದೆ. ನೀಲಿ ಮೈನಾ ಗಟ್ಟಿಯಾಗಿ ಕೂಗಿದರೆ ಅಳಿಲುಗಳು ಅರಚುತ್ತವೆ. ಆಗ ಅರಣ್ಯಕ್ಕೆ ಅಪಾಯ ಬಂದಿದೆಯೆಂದು ಇಡೀ ಕಾಡಿಗೇ ತಿಳಿಯುತ್ತದೆ. ಮನೆಯಲ್ಲಿ ಬಾತುಗಳಿದ್ದರೆ ರಾತ್ರಿ ಅಪರಿಚಿತರು ಯಾರಾದರೂ ಬಂದರೆ ಅರಚುತ್ತವೆ. ಮರಕುಟಿಗ ಹಕ್ಕಿ ಮರದ ತೊಗಟೆಯಲ್ಲಿ ಕೀಟಗಳಿದ್ದರೆ ಕೊಕ್ಕಿನಿಂದ ಬಡಿದು ನೀಡುವ ಸಂಕೇತ ಬಹು ದೂರದಲ್ಲಿರುವ ಅದರ ಬಳಗಕ್ಕೂ ತಲುಪುತ್ತದೆ.

ಪ್ರತಿ ಜಾತಿಯ ಕೋತಿಗೂ ತನ್ನದೇ ಆದ ಭಾಷೆಯಿದೆ ಎನ್ನುವುದು ಮಾಸ್ಕೊ ವಿಶ್ವವಿದ್ಯಾನಿಲಯದ ಪ್ರೊ. ಜೆಂಕನ್ಸ್‌ರ ಸಂಶೋಧನೆ. ಕೋತಿಗಳ ಕೂಗನ್ನು ಧ್ವನಿ ಮುದ್ರಿಸಿ ವಿಶ್ಲೇಷಿಸಿ, ಅವುಗಳ ಧ್ವನಿ ಭೇದವನ್ನು ಗುರುತಿಸಲಾಗಿದೆ. ಬೇಟೆಗಾರ ಬಂದರೆ ಆಹಾರ ಸಿಕ್ಕಿದರೆ, ಮರಿಗಳು ತಾಯಿಯ ಬೆನ್ನ ಮೇಲೇರಬೇಕಾದರೆ ಬೇರೆ ಬೇರೆ ಸ್ವರಗಳಿವೆ. ಚಿಂಪಾಂಜಿಗಳು ಪ್ರತಿ ಕೆಲಸಕ್ಕೂ ಶಬ್ದ, ಅಭಿನಯ, ಅಂಗ ವಿನ್ಯಾಸ, ಕಾಲನ ಹೆಜ್ಜೆಗಳನ್ನು ಬಳಸುತ್ತವೆ. 'ನ್ಯೂಡ್ರಿನ್' ಜಾತಿಯ ಕೋತಿಯ ಕೂಗಿನಲ್ಲಿ 80 ಸ್ವರ ವ್ಯತ್ಯಾಸಗಳಿವೆ.

ಆನೆಗಳು ಸೊಂಡಿಲು ಮತ್ತು ಕಿವಿಗಳನ್ನು ಅಲ್ಲಾಡಿಸುವುದರ ಮೂಲಕ ಮಾತನಾಡಿಕೊಳ್ಳಬಹುದು. ತೋಳವು ಅಧಿಕವಾಗಿ ಸಿಕ್ಕಿದ ಆಹಾರವನ್ನು ಮಣ್ಣಿನಲ್ಲಿ ಹೂಳಿ ಅದರ ಮೇಲೆ ಜೊಲ್ಲು ಸುರಿಸುತ್ತದೆ. ಬಳಿಕ ಸಂಗಾತಿಗಳ ಬಳಿಗೆ ಹೋಗಿ ತನ್ನ ಮೂತಿಯನ್ನು ಚಾಚಿ ತೋರಿಸುತ್ತದೆ.




ಚಿತ್ರ: ಶಶಿ ಸಾಲಿ

ಅದು ಇತರ ತೋಳಗಳಿಗೆ ಅದು ಆಹಾರ ಹೂತಿಟ್ಟಿರುವುದರ ಸೂಚನೆ. ನಾಯಿಗಳು ಬಾಲ, ಕಿವಿ, ತಲೆ ಅಲ್ಲಾಡಿಸಿ ಕಣ್ಣು ತಿರುಗಿಸುವುದರಲ್ಲಿ ನಾನಾ ಸಂಕೇತ ಅರ್ಥಗಳನ್ನು ತೋರಿಸಬಲ್ಲವು. ಸಿಟ್ಟು, ಸಂತೋಷ, ಹಸಿವು ಇವನ್ನೆಲ್ಲಾ ತೋರಿಸಲು ನಿಶ್ಚಿತವಾದ ಅಂಗವಿನ್ಯಾಸ ನಾಯಿಗಳಿಗಿದೆ.

ಜಿಂಕೆಯೊಂದು ಮೂಗನ್ನು ಅರಳಿಸಿ ಸೂಚನೆ ನೀಡಿದಾಗ ಶತ್ರು ಬಂದಿರುವುದರ ಅರಿವಾಗಿ ಎಲ್ಲವೂ ಒಮ್ಮೆಲೇ ಓಡುತ್ತವೆ. ಮೊಲಕ್ಕೆ ಸಿಟ್ಟು ಬಂದಾಗ ಹಿಂಗಾಲನ್ನು ನೆಲಕ್ಕೆ ಗುದ್ದುವುದು, ನೆಲ ಕೆರೆಯುವುದು. ಕೆನೆಯುವುದು ಕುದುರೆ ಹಾಗೂ ಕತ್ತೆಗಳ ಒಂದು ಭಾಷೆ. ಬೆಕ್ಕುಗಳ ಧ್ವನಿ ಹಾಗೂ ನಿಂತ ನಿಲುವಿನಲ್ಲೇ ಅವುಗಳ ಭಾಷೆ ವ್ಯಕ್ತ. ●

ನನ್ನೊಳಗಿನ ಕವಿತೆ



ನಸುಕಿನ ಹಕ್ಕಿಯ ಚಿಲಿಪಿಲಿಯೊಡನೆ
ನನ್ನೊಳಗಿನ ಕವಿತೆ ಕಣ್ಬಿಡುತ್ತಾಳೆ.
ಮುಸುರೆ ಶುಭ್ರಗೊಳಿಸಿ
ಚಹಾ ಕುದಿಸುವಾಗ
ಅವಳಿಗಿನ್ನೂ ಹೊಸ ಹುಮ್ಮಸ್ಸು
ಮಕ್ಕಳಿಗೆ ಟಿಫಿನ್ ಕಟ್ಟಿ
ಪತಿರಾಯನ ಆಫೀಸಿಗಟ್ಟಿ
ಕಟ್ಟೆಗೆ ನಿಂತು ಕೈ ಬೀಸುವಾಗ
ಎದೆಯೊಳಗಿನ ಕವಿತೆಗೆ ಬಿಡುಗಡೆಯ ಆಭಾಸ,
ಅನ್ನದಂತೆ ಕೊತಕೊತನೆ ಕುದಿದರೂ
ಸಾರಿನೊಡನೆ ಘಮಘಮಿಸುತ್ತಾಳೆ
ರೊಟ್ಟಿಯ ಹೊಟ್ಟೆಯಂತೆ ಬುರಬುರನೆ ಉಬ್ಬುತ್ತಾಳೆ
ಮೊಸರಿನ ತಂಪಿನಲಿ ಹೊಟ್ಟೆ ತುಂಬಿದಾಗ
ನನ್ನೊಳಗಿನ ಅವಳಿಗೆ ಹೊಸ ಹುರುಪು
ಪೆನ್ನು ಎತ್ತಬೇಕೆನ್ನುವಾಗ.... ಕಾಲೇಜಿನ ಸಮಯ ....!
ಹುರುಪಿಗೆ ಕುರುಕು ಮೂಡಿ
ಎತ್ತಿದ ಪೆನ್ನು ಹಾಳೆಯೊಡನೆ
ಹಾಗೇ ...... ಪರ್ಸು ಸೇರಿದಂತೆ
ಕವಿತೆ ಒಳಗೊಳಗೆ ಒದ್ದಾಡುತ್ತಾಳೆ.
ಮಕ್ಕಳ ಪಾಠದಲಿ ಮೌನಿಯಾಗುತ್ತಾಳೆ
ಮಾತಿನಲಿ ಮರೆಯಾಗುತ್ತಾಳೆ
ಬಸ್ಸಿನ ಕ್ಯೂನಲ್ಲಂತೂ
ಕವಿತೆ ಕಳೆದೇ ಹೋಗುತ್ತಾಳೆ.
ಮತ್ತೇ ....
ಮನೆ ಸೇರಿ ಟೀ, ಟಿಫಿನ್ ತೀರಿಸಿ
ಅಡಿಗೆ, ಊಟ, ಮುಸುರೆ ಮುಗಿಸಿ
ಕವಿತೆಗಾಗಿ ತಡಕಾಡುವಾಗ
ನಲ್ಲನ ಚೆಲ್ಲಾಟ .....!
ಮೆಲ್ಲನೆ ಮುತ್ತು ಕೊಟ್ಟು
ಮುಸುಕಿನಲ್ಲಿ ಮುಳುಮುಳು ಗುಟ್ಟಿದಾಗ
ಕವಿತೆ ಕಣ್ಣೀರಾಗುತ್ತಾಳೆ
ಬೇಸತ್ತು ಬೆತ್ತಲಾಗುತ್ತಾಳೆ
ಸೋತು ಸುಣ್ಣವಾಗಿ
ಕರ್ರಗಿನ ಕತ್ತಲಲ್ಲಿ ಸತ್ತುಹೋಗುತ್ತಾಳೆ.
ಕೊನೆಗೂ ಉಸುರದ 'ಕವಿತೆ'ಯ
ಬದುಕನ್ನು ಎಲ್ಲಿ ಯಾವಾಗ ಬರೆಯಲಿ?
ಎಲ್ಲಿ ಹೇಗೆ ಹಾಡಲಿ?


● [illegible]

ನಿಜವಾಗಿ ಹೋಗಿಬಿಟ್ಟೆಯಂತೆ,
ಹೌದಾ ನೂತನ್ ?

ಖಜಾನೆ ಕೃಷ್ಣಮೂರ್ತಿ

ನನ್ನ ಮಡದಿ
"ನೋಡ್ರೀ ಮರೆತುಹೋಗಿತ್ತು
ಹೇಳೋದು, ಈಗ ಪ್ರದೇಶ
ಸಮಾಚಾರದಲ್ಲಿ ಬಂತು.
ನೂತನ್ ಹೋಗಿ ಬಿಟ್ಟಂತೆ !"
ಎಂದು ಸುದ್ದಿ ಸಾರಿ ತನ್ ಮಟ್ಟಿಗೆ
ತಾನು ಇಸ್ತ್ರೀ ಮಾಡ್ತೇ ಇದ್ಲು.

ಆ ಹಾಟ್ ಐರನ್
ಆಡ್ತಾ ಇರೋದು
ನನ್ನ ಷರ್ಟ್ ಮೇಲಲ್ಲ;
ಎದೇ ಮೇಲೇ !
ಎಂಬಷ್ಟು
ಸಂಕಟವಾಯಿತು.
"ಓ ಜಾನೇವಾಲೇ
ಹೋ ಸಕೇ
ಫೀರ್ ಲೌಟಕೆ ಆನಾ"
ಎಂದು
ದುಃಖಿಸುತ್ತ ಮನ
ಕಣ್ಣೀರು
ಜಿನುಗಿಸುತ್ತಿದೆ.



ನೂತನ್ ಡಿಯರ್,

ನಿಂಗೆ ಲಂಗ್ ಕ್ಯಾನ್ಸರ್ ಆಗಿದ್ದಿದ್ದಾಗಲಿ ಅದಕ್ಕಾಗಿ ನೀನು ಬ್ರೀಚ್‌ಕ್ಯಾಂಡಿ ಆಸ್ಪತ್ರೆ ಸೇರಿದ್ದಾಗಲೀ ನಂಗೆ ಖಂಡಿತಾ ತಿಳೀದು. ಈ K.E.B.ನವರಿಗೋ ಹೊತ್ತಿಲ್ಲ-ಗೊತ್ತಿಲ್ಲ. ಯಾವಾಗಾಂದ್ರೆ ಆವಾಗ ಕರೆಂಟ್ ತೆಗೀತಾರೆ. ಫೆಬ್ರುವರಿ 21ನೇ ತಾರೀಖೂ ಹಾಗೇನೇ! ಮಧ್ಯಾಹ್ನ ಒಂದೂವರೆಗೆ ಹೋದ ಕರೆಂಟು ಸಂಜೆ ತನಕ ತುಂಬ ಕಡೆ ಬರ್‍ಲೇ ಇಲ್ಲ. ಅದೇನು ಪುಣ್ಯವೋ ವೆಸ್ಟ್‌ಕಾರ್ಡ್ ರೋಡಿನ ನಮ್ಮ ಭಾಗದಲ್ಲಿ ಮಾತ್ರ ಲೈಟಿತ್ತು. ಬಿ.ಟಿ.ಎಸ್. ಗ್ಯಾರೇಜಿನ ಎದುರಿಗಿರೋ ನಮ್ಮ ಕಿರಣನ ಹೋಟೆಲಿಗೆ ಕಾಫೀಗೇಂತ ಹೋಗಿದ್ದಾಗ ಅಲ್ಲಿದ್ದ 'ಪ್ರಜಾವಾಣೀ'ಲಿ ಒಳಗಡೆ ಒಂದ್ ಮೂಲೇಲಿ ನೂತನ್ ಅಸ್ವಸ್ಥ; ಬ್ರೀಚ್ ಕ್ಯಾಂಡಿ ಆಸ್ಪತ್ರೆ; ಕ್ಯಾನ್ಸರಿಗೆ ಟ್ರೀಟ್‌ಮೆಂಟು; ಪರಿಸ್ಥಿತಿ ಗಂಭೀರ. ಎಂಬರ್ಥ ಬರುವ ಸುದ್ದಿ ಪ್ರಕಟವಾಗಿತ್ತು. ಎದೆ ಜಗ್ ಎಂದಿತು. ಎದ್ದು ಮನೆ ಕಡೆ ಹೆಜ್ಜೆ ಹಾಕಿದೆ. ಹಾಳು ಮನಸ್ಸು ಬಿಟ್ಟೀತೆ! ಎಮ್ಮೆಯಂತೆ ನಿಧಾನವಾಗಿ ಹಳೆಯದನ್ನು ಮೆಲುಕು ಹಾಕಲಾರಂಭಿಸಿತು.

.... ಯಾಕೋ ಈ ವರ್ಷ ಸಿನಿಮಾದವರಿಗೆ ದರಿದ್ರ ವರ್ಷ. ಶಂಕರ್‌ನಾಗ್ ಹೋದ. ಹೇಮಂತ್‌ಕುಮಾರ್ ಹೋದ. ಶಾಂತಾರಾಂ ಹೋದ. ಒಂದೆರಡೇ ದಿನಗಳಲ್ಲಿ ವಿನೋದ್‌ಮೆಹರಾ. ಇವರನ್ನೆಲ್ಲ ಯಮರಾಯ ತನ್ನ ದೂತರನ್ನಟ್ಟಿ ಬೆನ್ನಟ್ಟಿ ಬೇಟೆಯಾಡಿಸಿದಂತಿತ್ತು. ಅವರು ಹೋದರಲ್ಲಾ ಎಂಬ ಕಣ್ಣೀರ ಕರೆ ಆರುವುದರೊಳಗೇ ಕನ್ನಡದ ಖ್ಯಾತ ನಿರ್ದೇಶಕ ಲಕ್ಷ್ಮೀನಾರಾಯಣ್ ಹೋಗಿ ಬಿಡಬೇಕೆ .....! ಈ ರೀತಿ 1990ರಲ್ಲಿ ಸಿಕ್ಕಾಪಟ್ಟೆ ಬೆಳೆ ಕೊಯ್ದುವನು ಈಗ ನಿಂಗೂ ಏನಾದರೂ ಗಾಳಾ ಹಾಕಿದ್ದಾನೆಯೆ .....?

ನಾವೆಲ್ಲ ನಿಮ್ಮಮ್ಮ ಶೋಭನಾ ಸಮರ್ಥಳನ್ನು ನೋಡಿದ್ದವರು. ಅವಳು ಆಗ ವಿಜಯಭಟ್‌ರವರ 'ಭರತ ಮಿಲಾಪ್' 'ರಾಮರಾಜ್ಯ'ಗಳ ಸಾಕ್ಷಾತ್ ಸೀತೆ. ಅಂತಹವಳ ಮಗಳು ನೀನು. ಅಭಿನಯ-ನಟನೆಗಳು ನಿಮ್ಮ ರಕ್ತಗತವಾದವುಗಳು. ಮೊದಲೆಲ್ಲೊ ನೀನು 'ಹಮಾರಿ ಬೇಟಿ'ಯಲ್ಲಿ ಪ್ರಥಮವಾಗಿ ಗೆಜ್ಜೆಪೂಜೆ ಮಾಡಿದೆಯಂತೆ. ಆದರೆ ನಾವು ನೋಡಿದ ನಿನ್ನ ಮೊದಲ ಚಿತ್ರ 'ನಗೀನಾ'. ನಿಂಗಾಗ 13 ವರ್ಷ ಎಂದಿದ್ದರು. ನಮ್ಮೂರ ಸುದರ್ಶನ್ ಟಾಕೀಸ್ (ಈಗಿನ ವಿಜಯಲಕ್ಷ್ಮಿ)ನಲ್ಲಿ ಅದು ದೇಖಾವೆಗೆ ಬಂದದ್ದು. ದಿಲೀಪ್‌ಕುಮಾರನ ಅಣ್ಣ ನಜೀರ್ ಖಾನ್ ಅದರ ನಾಯಕ, ನಿನ್ನ ಪ್ರೇಮಿ. ನಿನ್ನ ನಿಜವಾದ ತಂದೆ ಅದರಲ್ಲಿ ನೆಲಮಾಳಿಗೆಯೊಂದರಲ್ಲಿ ಭೂತ್ ಬಂಗಲೆಯೊಳಗಡೆ ಕೊಳೆಯುತ್ತ ಬಿದ್ದಿದ್ದರೆ ಬಿಪಿನ್‌ಗುಪ್ತ ಖಳನಾಯಕನಾಗಿ ಹೊರನೋಟಕ್ಕೆ ನಿನ್ನ ತಂದೆ ಎಂದು ಬೀಗಿ ಬೀಗುವ ಬ್ಲ್ಯಾಕ್ ಗಾರ್ಡ್! ನಾಯಕಿಯಾದ ನೀನು, ನಿನಗಾಗಿ ಕೋಕಿಲ ಕಂಠೆ ಲತಾ ಮಂಗೇಶ್‌ಕರ್ ಹಾಡಿದ ಹಾಡು.

''ತೂನೇ ...... ಹಾಯೆ ಮೇರೆ ಜಖ್‌ಮೀ ಜಿಗರ್ ಕೊ ಛೂ ಲಿಯಾ'' ಮತ್ತು ಗುಂಗು ಹಿಡಿಸಿದ ಗಾಯಕ ದಿ. ಕುಂದನ್ ಲಾಲ್ ಸೈಗಲ್‌ನಂತೆಯೇ ದನಿಯುಳ್ಳ ದಿ. ಸಿ.ಎಚ್.ಆತ್ಮ ಹಾಡಿರುವ ಎರಡು ಹಾಡುಗಳು:

''ರೋವು ಮೈ ಸಾಗರ್ ಕೆ ಕಿನಾರೆ ಗಾ ಕರ್ ಹಸೀ ಉಡಾಯೆ'' ಮತ್ತು 'ದಿಲ್ ಬೇಕರಾರ್ ಹೈ ಮೇರಾ ದಿಲ್ ಬೇಕರಾರ್ ಹೈ .....' ಈ ಎರಡೂ ಗೀತೆಗಳು: ಇವು ಇನ್ನೂ ನನ್ನ ಕಿವಿಯಲ್ಲಿ ಗುಂಯ್ಗುಡುತ್ತಲೇ ಇವೆ.

★

ಅಲ್ಲಿಂದ ನೀನು ಕ್ರಮೇಣ ಒಂದೊಂದೇ ಕ್ಲಾಸ್ ಚಿತ್ರಗಳಲ್ಲಿ ಅಭಿನಯಿಸಲಾರಂಭಿಸಿದಿ. ದೇವಾನಂದನೊಂದಿಗೆ 'ತೇರೆ ಘರ್ ಕೆ ಸಾಮನೆ', 'ಪೇಯಿಂಗ್ ಗೆಸ್ಟ್', ಕಿಶೋರ್ ಕುಮಾರನೊಂದಿಗೆ 'ದಿಲ್ಲೀ ಕ ಠಗ್', ಬಲರಾಜ್ ಸಹಾನಿಯೊಂದಿಗೆ 'ಸೀಮಾ', 'ಸೋನೆ ಕಿ ಚಿಡಿಯಾ'; ಬಿಮಲ್ ರಾಯರ 'ಬಂದಿನಿ'ಯಲ್ಲಿ ಅಶೋಕ್‌ಕುಮಾರನೊಂದಿಗೆ: ಸುನೀಲದತ್ತನೊಂದಿಗೆ ಹರಿಜನ ಕನ್ಯೆ 'ಸುಜಾತಾ' ಆಗಿ..... ಇನ್ನೂ ಏನೇನೋ .....

ಅಂದ ಹಾಗೆ ರಾಜಕಪೂರ್‌ನೊಂದಿಗೆ 'ಅನಾಡಿ' ಯಲ್ಲಿ!

ನನಗೀಗ ಈ 'ಸುಜಾತಾ', 'ಬಂದಿನಿ'ಗಳ ನೆನಪು ಕಾಡುತ್ತದೆ. ಈ ಚಿತ್ರಗಳಲ್ಲಿ ನೀನು ದಿ. ಮೀನಾಕುಮಾರಿಗೇ ಸೆಡ್ಡು ಹೊಡೆದಿರುವುದು ಕಾಣುತ್ತದೆ. ಅಂತಹ ಭಾವಪೂರ್ಣ ಅಭಿನಯ, ಆ ಮೌನ, ಬರಿ ನೋಟದಲ್ಲೇ ಕಣ್ಣುಗಳಲ್ಲೇ ಸೂಚಿಸುವ ಆ ಯಾತನಾಮಯ ಅಭಿವ್ಯಕ್ತಿ ಇವೆಲ್ಲ ಮೀನಾಕುಮಾರಿಯದೇ! ಅಷ್ಟಲ್ಲದೆ ಸುನೀಲ್‌ದತ್‌ನಿಂಗೆ ಟೆಲಿಫೋನಿನಲ್ಲೇ ಅಷ್ಟು ಉದ್ದದ ಹಾಡು

'ಜಲ್ ತೇ ಹೈ ಜಿಸ್‌ಕೇ ಲಿಯೇ .....
ತೇರಿ ಆಂಖೋಂಕೆ ದಿಯೇ'

ಸಂದೇಶದ ರೂಪದಲ್ಲಿ ಹೇಳ್ತಾ ಇದ್‌ನಾ?

'ಬಂದಿನೀ'ಲಂತೂ ನಾವೆಲ್ಲ ಉಸಿರು ಬಿಗಿ ಹಿಡಿದು ಅದನ್ನೆ ನೋಡ್ತಾ ಇದ್ವಾಗ: ಅಶೋಕ್ ಕುಮಾರ್ ಅದರಲ್ಲಿ ಹೀರೋ ...... ಧರ ಮೇಂದ್ರ ಉಪನಾಯಕ. ಅದರಲ್ಲಿ ಬರುವ ಸಮಯ ಸಂದರ್ಭಗಳ ದಾಸಿಯಾಗಿ ನೀನು ಅಶೋಕ್‌ಕುಮಾರನ್ನ ಬಿಟ್ಟು ಧರಮೇಂದ್ರನನ್ನ ಕೈ ಹಿಡಿಯುವ ಮಟ್ಟಕ್ಕೆ ಬರುತ್ತದೆ. ನಾವೆಲ್ಲ ಹಾಗೇ ತೀರ್ಮಾನಿಸಿ ಪರಿತಾಪ ಪಡುತ್ತಿರುವಾಗ ಕತೆ ಇದ್ದಕ್ಕಿದ್ದ ಹಾಗೆ ಒಂದು ವಿಚಿತ್ರ ತಿರುವು ಪಡೆದು ನೀನು ಹೋಗ್ತಿರೋ ರೈಲು ಗಾಡೀಲೇ ಪುನಃ ಕೆಮ್ಮುತ್ತ, ಕಾರುತ್ತ, ಕೊಳೆಯುತ್ತಿರುವ ಅಶೋಕ್‌ಕುಮಾರನೇ ಪುನಃ ಕಾಣಸಿಕೊಂಡು ನಿನ್ನ ನಿರ್ಧಾರ ಬದಲಾಗಿ ನೀನು ಅವನ ಕೈ ಹಿಡಿದೇ ದಾರಿ ತುಳಿವ ಹಾಗಾಗುವ ರೀತಿ ನಿಜಕ್ಕೂ ಅಚ್ಚರಿ ಹುಟ್ಟಿಸುವಂಥಾದ್ದು.

''ಓ ರೀ ಮಾಂಝೀ ತೇರೆ ಸಾಜನ್ ಹೈ ಉಸ್‌ಪಾರ್, ಲೇ ಚಲ್ ಪಾರ್, ಲೇ ಮನ್ ಮಾರ್ ...... ಸಬ್ ಕೀ ಪಾರ್ ..... ತೇರೆ ಸಾಜನ್ ಹೈ ಉಸ್ ಪಾರ್ ....''

ಈ ಸಾಲು ಈ ಹಾಡು ಎಷ್ಟು ಮಧುರ! ಎಷ್ಟು ನಿಜ! ಎಷ್ಟು ಸುಂದರ! ಎಂತಹ ಅರ್ಥಗರ್ಭಿತ?

ಇದರಂತೆ 'ಸೀಮಾ'ದಲ್ಲೂ ಅಷ್ಟೆ. ಬಾಲ್ಯ ಜೀವನದಲ್ಲಿ, ಯೌವನದ ಹೊಸ್ತಿಲಲ್ಲಿ ನೀನು ಪಟ್ಟ ಕಷ್ಟ ನಿನ್ನನ್ನು ಕಲ್ಲು ಮಾಡಿದೆ. ಅದಕ್ಕಾಗಿ ನೀನು ಹಠಮಾರಿಯಾಗಿ ತಂಟೆಕೋರಿಯಾಗಿ ಬಲರಾಜ್ ಸಹಾನಿಯ ಅನಾಥಾಶ್ರಮ ಸೇರಿ ದಾಗ; ಅಲ್ಲಿ ಮಾತಿಗೊಮ್ಮೆ ''ಕ್ಯಾಬ್ಬಾತ್ ಹೈ?'' ಎಂದು ವಿಶಿಷ್ಟ ರೀತಿಯಲ್ಲಿ ಉದ್ಗರಿಸುವ ಶುಭಾಖೋಟೆ ನಿನ್ನ ಸಂಗಾತಿ! ವಯಸ್ಸಾದ ಹೃದಯ ಬೇಸೆಯಿರುವ ಆ ಅನಾಥಾಶ್ರಮದ ಸೂಪರಿಂಟೆಂಡೆಂಟ್ ಬಲರಾಜ್ ಸಹಾನಿಯನ್ನೇ ಕೊನೆಗೆ ನೀನು ವರಿಸಿ ಹೋಗುವ ಸನ್ನಿವೇಶದಲ್ಲಿ ನೀನು ಅವನ ಕೈಲಿದ್ದ ವಾಕಿಂಗ್ ಸ್ಟಿಕ್ ಬಿದ್ದಲ್ಲಿಯೇ ಇರಗೊಟ್ಟು ಅವನ ಕೈ ಹಿಡಿದು ನಡೆಸಿಕೊಂಡು ಹೋಗುವಲ್ಲಿ ಒಂದು ಮನೋಜ್ಞವಾದ ಡೈರೆಕ್ಟೊರಿಯಲ್ ಟಚ್ ಇದೆ, ಅಲ್ಲ?

ಈ ನೆನಪುಗಳ ಸರಮಾಲೆಯಲ್ಲಿ ನೀನು ಕವಿಗಳ ಕವಿ, ಗಾಯಕರಲ್ಲಿ ಗಾಯನ ಸಾಮ್ರಾಟ್ ಆಗಿ ಅಭಿನಯಿಸುವುದರಲ್ಲಿ ಎತ್ತಿದ ಕೈ ಎನ್ನಿಸಿದ ಭರತ್ ಭೂಷಣ್‌ನೊಂದಿಗೆ ಅಭಿನಯಿಸಿದ 'ಷಬಾಬ್' ನೆನಪಿಗೆ ಬಾರದೇ ಹೋಗದು. ಮೀನಾಕುಮಾರಿ ಅವನೊಂದಿಗೆ ಬೈಜುಬಾವರಾದಲ್ಲಿ ಆಡಿ ದಣಿದು ಮಲಗಿದರೆ, ಹಿಂದೀ ಹಂಸಗೀತೆ 'ಬಸಂತ್ ಬಹಾರ್'ನಲ್ಲಿ ನಿಮ್ಮಿ ಅವನ ಪ್ರಣಯಿನಿ 'ಚಂದ್ರಾ' ಆಗಿ ನಲಿದಿದ್ದಾಳೆ. 'ಷಬಾಬ್'ನಲ್ಲಿ ನೀನು ಅವನು ಪ್ರೀತಿಸಿ ಕಳೆದುಕೊಂಡ ರಾಜಕುಮಾರಿಯಾಗಿ ಅಭಿನಯಿಸಿ ಅವರಿಬ್ಬರನ್ನೂ ಹಿಮ್ಮೆಟ್ಟಿಸಿದ್ದೀಯ! ಈ ಮೂರು ಸಾಗ, ಸಂಗೀತ ಚಿತ್ರಗಳು, ಎಂ.ಸಾದಿಕ್ ಆ ಚಿತ್ರದ ನಿರ್ಮಾಣ ನಿರ್ದೇಶನ ಮಾಡಿದ್ದರೆ, ಸಂಗೀತ ನೌಷಾದ್‌ನದು!

ಈ 'ಷಬಾಬ್'ನಲ್ಲಿ ನೀನೊಬ್ಬ ನಿದ್ರೆಯೇ ಇಲ್ಲದೆ ನರಳುತ್ತಿರುವ ರಾಜಕುಮಾರಿ. ನಿಮ್ಮ ತಂದೆ ಚಾಂದೀಪುರದ ಮಹಾರಾಜ. (ಎಸ್.ನಜೀರ್) ಅವನ ಮಂತ್ರಿ ಹಳದಿ ಕಣ್ಣಿನ ಕುತಂತ್ರಿ ಆರ್.ವಾಸ್ತಿ. ಇಡೀ ಪರಿವಾರವೇ ಪಡಬಾರದ ಕಷ್ಟಪಟ್ಟು ನಿನಗೆ ನಿದ್ರೆ ತರಿಸಲು, ಬರ ಮಾಡಿದ ಖ್ಯಾತ ಸಂಗೀತಗಾರರು ಅವರ ಹಾಡಿಕೆಗಿಂತ

ಮಾಡುವ ಕಸರತ್ತುಗಳು ಇವೆಲ್ಲ ನಿನ್ನ ನಿದ್ರಾಹೀನತೆಯನ್ನು ಹೆಚ್ಚಿಸುತ್ತಲೇ ಹೋಗುತ್ತವೆ. ಬಲು ದಿನಗಳ ನಂತರ ಸುಂದರ ಮನಮೋಹಕ ಗಾಯಕ ಭರತ್ ಭೂಷಣ್ ಬರುತ್ತಾನೆ. ಅವನ ಇನಿದನಿ, ಹಾಡಿಕೆ ವೀಣೆಯ ವಿನಿಕೆಗಳು 'ಹಂಸ ಗೀತೆ'ಯ ಕರ್ತೃ, ದಿ. ತ.ರಾ.ಸು ಬರೀತಾರಲ್ಲ, ಜೇನುತುಪ್ಪಾನ ಎಳೆ ಎಳೆಯಾಗಿ ನಾಲಗೆ ಮೇಲೆ ಬಿಟ್ಟ ಹಾಗೆ! ಇಲ್ಲೂ ಈ ಗಾಯಕ ನಿಶ್ಶಬ್ದ ವಾತಾವರಣದಲ್ಲಿ.

''ಚಂದನ್ ಕಾ ಪಲ್‌ನಾ, ರೇಷಂ ಕಿ
ಡೋರಿ
ಝೂಲಾ ಝುಲಾವೂಂ ನಿಂದಿಯಾ ಹೊ
ತೋರೀ ....

ಎಂದು ಹಾಡುತ್ತಿದ್ದಂತೆಲ್ಲ ನೀನು ನಿಧಾನವಾಗಿ ನಿದ್ರಾಲೋಕದ ಸ್ವರ್ಗಸೀಮೆಯನ್ನು ತಲುಪಿ ದೇವಲೋಕದ ಅಪ್ಸರೆಯರು ನಿನ್ನ ಎದುರುಗೊಂಡು ಕರೆದುಕೊಂಡು ಹೋದಂತಾಗಿ ನೀನು ನಿಧಾನವಾಗಿ ನಿದ್ದೆ ಹೋಗಿ ಬಿಡಬೇಕೆ?

ಇಂತಹ ಸುಖ ನಿದ್ದೆಯಿಂದ ಎದ್ದು ಮರುದಿನ ಲವಲವಿಕೆಯಾಗಿರುವ ನಿನ್ನನ್ನು ಕಾಣಲು ನಿನ್ನ ತಂದೆಯ ತವಕ-ತಹತಹ ಅಷ್ಟಿಷ್ಟಲ್ಲ. ಇಂತಹ ನಿದ್ರೆ ತಂದ ಗಾಯಕನಿಂದ ಅದೇ ಸ್ವರ್ಗ ಸೀಮೆಯ ಸಂಗೀತ-ವೀಣೆ ಕಲಿಯಲು ನೀನು ಅಪೇಕ್ಷಿಸುತ್ತಿ. ಆದರೆ ಆ ಸುಂದರ ಗಾಯಕ ಯಾರೋ, ಯಾವ ಕುಲವೊ, ಯಾರ ಮನೆಯೋ? ಸಂಗೀತ ಕಲಿಕೆ ಮುಗಿವುದರ ಮುನ್ನವೆ, ರಾಜಕುಮಾರಿಯೇ ಅವನ ಮೋಹ ಜಾಲದಲ್ಲಿ ಬಿದ್ದು ಬಿಟ್ಟರೆ? ಎಂದು ಆ ಚಾಣಾಕ್ಷ ಮಂತ್ರಿಯ ಗಾಬರಿ. ಅದಕ್ಕಾಗಿ ಅವನು ಹೂಡಿದ ಹೂಟ? ನಿನ್ನ ಬಳಿ ಬಂದು ''ಆ ಗಾಯಕ ಭಯಂಕರ ಕುಷ್ಠರೋಗಿ. ಅವನ ಅಂಗಾಂಗಳಿಂದೆಲ್ಲ ದುರ್ಗಂಧಮಯ ದ್ರವ ಹೊರಸೂಸುತ್ತದೆ. ನೀನೇನಾದರೂ ಅವನನ್ನು ನೋಡಿದೆಯೋ, ಮುಗೀತು'' ಎಂದು ಭಯಸೃಷ್ಟಿ ಮಾಡಿದರೆ; ಅವನ ಬಳಿ ಹೋಗಿ ' ಆ ರಾಜಕುಮಾರಿ ಕುರುಡಿ; ಗಾಂಧಾರಿ, ಜಕ್ಕಿ; ಮೈಯಿಂದ ಕೊತಕೊತ ಕೀವು ಸ್ರವಿಸುವ ಖೋಡಿ; ನೀನವಳನ್ನು ನೋಡಲೇ ಬಾರದು. ಅದಕ್ಕೆ ಹೀಗೆ ಮಾಡೋಣ. ಅವಳಿಗೆ ಪಾಠ ಹೇಳು: ಆದರೆ ನಿಮ್ಮಿಬ್ಬರ ನಡುವೆ ಸಾಕಷ್ಟು ಅಂತರದಲ್ಲಿ ಒಂದು ರೇಶಿಮೆಯ ತೆಳು ಜವನಿಕೆ ಇರಲಿ; ಬೆಳಕಿನ ಪ್ರಕಾಶ ಮಂದವಿರಲಿ; ಎಂದು ವ್ಯವಸ್ಥೆ ಮಾಡಿಸುತ್ತಾನೆ. ಇದೇ ವಾತಾವರಣದಲ್ಲಿ ನಿನ್ನ ಸಂಗೀತಪಾಠ ಆರಂಭವಾಗುತ್ತದೆ. ನಿರ್ದೇಶಕ ಸಾದಿಕ್ ಸಾಹೇಬರು ಸ್ವಯಂ ಕಲೋಪಾಸಕರು. ಒಂದೊಂದಾಗಿ ಸಪ್ತಸ್ವರಗಳು ಹೊರಹೊರಡುತ್ತಿದ್ದಂತೆ ಒಂದೊಂದು ನಂದಾದೀಪವನ್ನು ಉರಿಸಿ ತಂದಿರಿಸಲಾಗುತ್ತದೆ. ಏಳನೆಯ ದೀಪ ಅಲ್ಲಿ ಬಂದಿಳಿವುದರೊಳಗೇ ನಿನ್ನ ಅಭ್ಯಾಸ ಮುಗಿದು ನೀನು ಸಂಗೀತ-ವೀಣೆ ಅಭ್ಯಾಸಗಳಲ್ಲಿ ಪರಿಪೂರ್ಣಳಾಗಿ ಆ ರಾಗರತ್ನವನ್ನು ವೀಣೆಯ ಮೇಲೆ ನುಡಿಸಿಕೊಂಡು ಅವನೊಂದಿಗೇ ಹಾಡುವಷ್ಟು ಪ್ರಾವೀಣ್ಯತೆ ಪಡೆದಿರುತ್ತಿ. ಇದೇ ರಾಗದ ಗಾನ ಸುಧೆ

'ಮನ್‌ಕೆ ಬೀನ್ ಮತ್‌ವಾರೀ ಬಾಜೇ'

ಗೀತೆಯಾಗಿ ನಿಧಾನವಾಗಿ ಧರೆಗಿಳಿದು ಬರುತ್ತಿರುವಾಗ ಆ ಹಾಳು ರೇಷಿಮೆಯ ಜವನಿಕೆ ಮಂದ ಮಾರುತಕ್ಕೆ ತೂಗುತ್ತ ತೂರಾಡುತ್ತ ತೊನೆಯುತ್ತ ಬಂದು ಆ ಸಪ್ತ ನಂದಾದೀಪಗಳ ಕುಡಿಗಳನ್ನು ಮುದ್ದಿಸಿ ಬೆಂಕಿ ಹೊತ್ತಿ ಬಿಡಬೇಕೆ? ತೆರೆ ನಿಧಾನವಾಗಿ ಉರಿದು ಅಂತಃಪುರದ ನಾರೀ ಸಮೂಹವೆಲ್ಲ 'ಆಗ್ ಲಗ್‌ಗಯೀ ..... ಆಗ್ ಲಗ್‌ಗಯಿ ....., ಎಂದು ಅರ್ಥ ತಿಳಿಯದೆ ಕಿರಿಚಾಟ ಮಾಡಿದರೆ ಪ್ರೇಕ್ಷಕ ವರ್ಗದ ಸೀಟಿ, ಶಿಳ್ಳೆ, ಚಪ್ಪಾಳೆಗಳು ಗಗನ ಮುಟ್ಟಿ ಹೋಗುತ್ತವೆ. ನಿಮ್ಮಿಬ್ಬರಿಗೆ ಪರಸ್ಪರ ದರ್ಶನವಾಗಿ..... ನಿಮ್ಮ ಬಾಯಿಂದ ''ಅಂಧಿ .....? ಕೋಠಿ ......?'' ಶಬ್ದಗಳು! ಬರುಬರುತ್ತ ಬರಿಯ ತುಟಿಯ ಅಲುಗಾಟ. ಆಗ್ ಲಗ್‌ಗಯಿ ನಿಜವಾಗುತ್ತದೆ.

ಆದರೆ Did ever the path of love run smooth? ನಿಮ್ಮ ಈ ಕತೆಯೂ ದುರಂತದಲ್ಲೇ ಮುಕ್ತಾಯವಾಗುತ್ತದೆ. ನೀವಿಬ್ಬರೂ ಕಾಯುತ್ತೀರಿ. ಅವನು ಮುಂಚೆ, ಆಮೇಲೆ ನೀನು. ನಿನ್ನ

ಮದುವೆಯ ಮೆರವಣಿಗೆಯ ಗಾಡಿಯಡಿ ಸಿಕ್ಕು ಅವನು ಎರಡೂ ಕೈ ಕಳೆದುಕೊಂಡು ಕೊನೆಗೊಂಡರೆ, ನೀನು ಪತಿ (ಅಮರ್) ಗೃಹದಲ್ಲಿ ಭರತ ಭೂಷಣ್ ಹೇಳಿಕೊಟ್ಟ

''ಮರ್ ನಾ ತೇರಿ ಗಲೀಮೇ .....
ಜೀನಾ ತೇರೀ ಗಲೀಮೇ ....
ಮಿಟ್ ಜಾಯೇಗಿ ಹಮಾರೀ ದುನಿಯಾ
ತೇರೀಗಲೀಮೆ''

ಹಾಡುತ್ತಾ ಸಾಯುತ್ತೀಯ ..... ಹೌದಾ? ಇದೆಲ್ಲ ಕರೆಕ್ಟ್ ತಾನೆ?

ರಾಜ್‌ಕಪೂರನೊಂದಿಗೆ ನೀನು ಅಭಿನಯಿಸಿದ 'ಛಲಿಯಾ', 'ದಿಲ್ ಹೀ ತೋ ಹೈ' ಮತ್ತು 'ಅನಾಡಿ' ಅಷ್ಟೇ ಮನೋಜ್ಞ ಚಿತ್ರಗಳು.

'ಅನಾಡಿ'ಯಲ್ಲಿ ಕಾಕಾ ಮೋತಿಲಾಲ್ ನಿನ್ನ ತಂದೆ, ಅವನ ಹುಡುಗಾಟದ ಮಗಳು ನೀನು. ಸೈಕಲ್ ಸ್ಪೆಷಲಿಸ್ಟ್, 'ಸೀಮಾ'ದ ಕ್ಯಾ ಬ್ಯಾತ್ ಹೈ ಶುಭಾ ಖೋಟೆ ನಿನ್ನ ಸಾಥಿ. ನೀವಿಬ್ಬರು ಮಾಡುವ ಹುಡುಗಾಟ, ಬೊಗಳೆ ಬುರುಡೆಗಳನ್ನರಿಯದಂತಹ 'ಅನಾಡಿ' ಅವನೇ ರಾಜ್‌ಕಪೂರ್.

ಬೋರ್ಡಿಂಗ್ ಹೋಂ ಗೋಡೆ ಹಾರಿ ಹೋಗುವ ಹುನ್ನಾರು ಹೂಡಿದ ನಿನಗೆ ಈ ಅನಾಡಿ ಸಿಕ್ಕಬೇಕೆ? ನರಿ ಹೋತನ ಬೆನ್ನ ಮೇಲೆ ಕಾಲಿಟ್ಟು ಹಾರಿ ಹೋದಂತೆ ನೀನು ಬಾಗಿ ನಿಂತ ಅವನ ಬೆನ್ನ ಮೇಲೆ ಕಾಲಿರಿಸಿ, ಗೋಡೆಯಿಂದಿಳಿದು ನೆಲಕ್ಕೆ ಇಳಿದ ಸನ್ನಿವೇಶ. ನಿನಗೆ ತಿಳಿಯದೇ ಇರುತ್ತದೆಯೇ? ಅದನ್ನು ನೋಡಿದ ಅನೇಕರು ಅವನನ್ನೂ ನಿನ್ನನ್ನೂ ಬೈದರಂತೆ? ಅವರಪ್ಪ ಪೃಥ್ವಿರಾಜ್ ಕಪೂರ್ ಕೂಡ ಓರ್ವ ಸಾಮಾನ್ಯ ನಟಿಯನ್ನು ಬೆನ್ನ ಮೇಲಿಂದ ಇಳಿಸಿ ಬಿಟ್ಟಿದ್ದಾಗ ಅವನನ್ನೂ ಬೈದಿದ್ದರಂತೆ. ಈಗ ನಿನ್ನಿಂದಾಗಿ ಈ ಮಗನೂ ಬೈಸಿಕೊಂಡ. ''ನಿನಗೇನು ಬಂತೆ ಕೇಡೂ? ಅಂತಹವನ ಬೆನ್ನ ಮೇಲೆ ಕಾಲಿಡೋದೆ?'' ಎಂದು ನಿನಗೂ ಸಹಸ್ರನಾಮವಾಯಿತಂತೆ, ಹೌದೆ? ಅಷ್ಟು ಮಾಡಿದ ಅವನಿಗೆ ನೀನು ಇಳಿದು ಹೋಗುವಾಗ Thank you ಅಂತ ಕೂಡ ಹೇಳದೆ, ''ನೀವೆಲ್ಲೊ ಕೆಲಸಕ್ಕೆ ಹೊರಟಿದ್ರಿ ಅಲ್ವಾ?'' ಎನ್ನುತ್ತ ಓಡಿಹೋದಾಗ ಈಗಿನ ಹುಡುಗೀರೇ ಹೀಗೆ ಅಂತ ತುಂಬ ಜನ ನಿನ್ನ ಬೈಕೊಂಡರು ಗೊತ್ತಾ? ಅಷ್ಟು Thankless ಆಗಬಾರದಿತ್ತು ನೀನು! ನೋಡು, ಈ ಚಿತ್ರದಲ್ಲಿ ನೀನೂ ಶುಭಾಖೋಟೆ ಆಡಿದ ಹುಡುಗಾಟದಿಂದಾಗಿ ಅವನಿಗೆಷ್ಟು ಕಷ್ಟ, ಅಪಮಾನ!

'ಸಬ್ ಕುಛ್ ಸೀಖಾ ಹಮ್‌ನೆ ನ ಸೀಖೀ ಹೋಷಿಯಾರಿ' ಹೇಳುತ್ತ ಅವನು ನಿನ್ನಿಂದ ದೂರವಾದರೆ ಈಗ ನಿನಗೆ ಜ್ಞಾನೋದಯವಾಗಿ

''ತೇರಾ ಜಾನಾ ..... ದಿಲ್‌ಕಿ ಅರಮಾನೋಂಕಾ ಲುಟ್ ಜಾನಾ'' ಎಂದು ಕಣ್ಣೀರಿಡುತ್ತ ಪಶ್ಚಾತ್ತಾಪ ಪಡುವ ಹಾಗಾಗುತ್ತದೆ.

ನಿಮ್ಮನೇಲಿ ನಿನ್ನ ಎಲ್ರೂನೂ 'ತಾಯ್' ಅಂತ ಕರಿತಾರಂತೆ ಹೌದಾ? ರಾಜ್‌ಕಪೂರ್ ಕೂಡ ಅದೇ ಹೆಸರಿಂದ ಕರೀತಿದ್ನಂತೆ ನಿನ್ನ?

ಅದು ಹೋಗಲಿ. ಆ ರಷ್ಯನ್ ಡೆಲಿಗೇಷನ್ನಿನವರು ಅವನ ಸ್ಟುಡಿಯೋಕ್ಕೆ ಭೇಟಿ ಕೊಟ್ಟಾಗ ಏನು ಮಾಡಿದಿ ನೀನು? ಅಲ್ವೇ, ಡೆಲಿಗೇಷನ್‌ನವರು ಒಬ್ಬೊಬ್ಬರಾಗಿ ಒಳಗೆ ಬರ್ತಿದ್ ಹಾಗೆಲ್ಲ ಪಟಕ್ ಅಂತ ತಲೆ ಬಗ್ಗಿಸಿ (Nod) ''ದಸ್ ವೀಧಾನ್ಯಾ'' ಅಂತ ಹೇಳು, ನಿನ್ನ ಪಕ್ಕದಲ್ಲಿರೋರು ಅವರ ಕೊರಳಿಗೆ ಒಂದೊಂದು ಹೂವಿನ ಹಾರ ಹಾಕ್ತಾರೆ.'' ಅಂತ ಅವನು ನಿನಗೆ ಅಷ್ಟೊಂದು ಟ್ರೈನಿಂಗ್ ಕೊಟ್ಟು ಅಲ್ಲಿ ನಿಲ್ಲಿಸಿದ್ದರೆ, ನೀನು ಏನು ಮಾಡಿದಿ? ತೀರ ಹೀಗಾ? ಒಬ್ಬ ಬಂದಾ! 'ದಸ್ ವಿಧಾನ್ಯ' ಅಂದಿ. ಇನ್ನೊಬ್ಬ ಬಂದರೆ ಗ್ಯಾರಹವೀ ಧಾನ್ಯಾ ಅಂದು ಬಿಡೋದೆ. ಅದೇ ರೀತಿ ಬಾರಹ ವಿಧಾನ್ಯ ತೇರಹ್ ವಿಧಾನ್ಯ .... ಚೌಥ ವಿಧಾನ್ಯಾ .... ಇದು ಬೇಕಂತ್ಲೆ ಮಾಡಿದಿ ನೀನು ಅಂತ ನನ್ನ ಗುಮಾನಿ! ರಷ್ಯನ್‌ನಲ್ಲಿ ದಸ್ ವಿಧಾನ್ಯ ಮಾತ್ರ (equivalent to our WEL COME) ಇರೋದು. ಮುಂದಿನದೆಲ್ಲ ನಿನ್ನ ಸೃಷ್ಟಿ! ಫಂಕ್ಷನ್ ಎಲ್ಲ ಮುಗಿದ ಮೇಲೆ ಅವನು (ರಣಬೀರ್‌ರಾಜ್) ಬಂದು ನಿನಗೆ ಒದಿಲಿಲ್ಲ ತಾನೆ?

ಇಂತಹ ಸುಂದರ ಸನ್ನಿವೇಶಗಳು ನಾನು

ಕೇಳಿದ್ದು, ಓದಿದ್ದು, ಇನ್ನೂ ಏನೇನಿತ್ತೊ, ಎಷ್ಟೆಷ್ಟಿತ್ತೋ ತಿಳೀದು.

ಮುಂದೆ ನೀನು ನೇವಿ ಆಫೀಸರು ರಜನೀಶ್ ಬೆಹಲ್‌ರವರನ್ನು ಮದುವೆ ಆಗಿ ಮೊಹನೀಶನ ತಾಯಿಯೂ ಆದಿ. ಈ ಸಿನಿಮಾ ಮಂದಿಗೆ ಹೀರೋಯಿನ್‌ಗೇನಾದರೂ ನಿಜ ಜೀವನದಲ್ಲಿ ಮದುವೆ ಆಯಿತು ಅಂದರೆ ಅವರಿಗೆ ದೆವ್ವ ಬಡಿಯುತ್ತೆ. ದಿಲ್ಲಿ-ಕ-ಠಗ್‌ನಲ್ಲಿ ಅವರು, ನಿನಗೆ ಬಿಕಿನಿ ಹಾಕಿಸಿ ಸ್ವಿಮಿಂಗ್ ಪೂಲ್‌ನಲ್ಲಿ ಹಾರಿಸಿ ತಮ್ಮ ಕಲಾನೈಪುಣ್ಯ ಪ್ರದರ್ಶನ ಮಾಡಿದರು. ಅದೇ ಮೊದಲು ಅದೇ ಕೊನೆ. ಅಂತಹ ಡ್ರೆಸ್ ಡೈವಿಂಗು! ಅಲ್ಲಿಂದ ಮುಂದೆ ನಿನಗೆ ಅಕ್ಕ, ಅಜ್ಜ, ಅತ್ತಿಗೆ! ಒಂದು ಚಿತ್ರದಲ್ಲಿ ನೀನು ಸ್ವಯಂ ಹಾಡಿದ್ದೂ ಕೇಳಿದೀನಿ. 'ಸರಸ್ವತಿ ಚಂದ್ರ'ದಲ್ಲಿ ನೀನು ಪಾರ್ಟು ಮಾಡಿದ ಮೇಲೆ 'ಮೈ ತುಲಸಿ ತೇರಿ ಆಂಗನ್‌ಕಿ' ಹಾಡುವ ಸನ್ನಿವೇಶ ಕಂಡಾಗ 'ಭಾಭೀಕಿ ಚೂಡಿಯಾ'ದಲ್ಲಿ ಮೀನಾಕುಮಾರಿ ಭೂಪಾಲಿಯಲ್ಲಿ ಹಾಡಿದ ಜ್ಯೋತಿ ಕಲಶ್ ಝಲಕೆ ನೆನಪಾಗುತ್ತದೆ......

ಈಚಿನ ಟಿ.ವಿ. ಮಾಲಿಕೆಯಲ್ಲಿ ಪ್ರಕಟವಾದ ''ಮುಜರಿಂ ಹಾಜರ ಹೈ'ನಲ್ಲಿ ಕೂಡ; 'ಕಾಲೀ ಗಂಜ್ ಕಿ ಬಹು' ಆಗಿ ನೀನು ಅಭಿನಯಿಸಿರುವಾಗ ಅದು ನಿನ್ನ ಕಲಾ ಪ್ರೌಢಿಮೆಗೊಂದು ಸಾಕ್ಷಿ! ಜನವರಿ ತಿಂಗಳು ರಾತ್ರೀಲೆಲ್ಲೊ ಒಮ್ಮೆ ನಿನ್ನ 'ನಗೀನ' ಮತ್ತೆ ತೋರಿಸಿದರು.

1960ರಿಂದೀಚೆಗೆ ನನಗಂತೂ ಈ ಸಿನಿಮಾಗಳ ತಲೆ ಕಂಡರಾಗಲ್ಲ. ನೋಡೋದನ್ನೇ ಬಿಟ್‌ಬಿಟ್ಟಿದೀನಿ. ಟಿ.ವೀ.ಲಿ ಯಾವುದಾದರೂ ಅದಕ್ಕಿಂತ ಹಿಂದಿನ ಚಿತ್ರ ತೋರಿಸಿದರೆ ನೋಡ್ತೀನಿ. ಗೀತಾ ಬಾಲಿ, ಮೀನಾಕುಮಾರಿ, ನರ್ಗಿಸ್, ಮಧು ಬಾಲಾ, ಸುಮಿತ್ರಾ ಇವರಲ್ಲದೆ ಶಾಮ್, ಗೋಪ್, ಕಿಶೋರ್ ಸಾಹು, ಕರನ್‌ದಿವಾನ್, ಮೋತಿಲಾಲ್, ಪೃಥ್ವಿರಾಜ್, ಸೋಹ್ರಾಬ ಮೋದಿ, ಶಾಂತಾರಾಂ, ಮೆಹಬೂಬ, ಸರದಾರ ಅಖ್ತಾರ್, ಸುರೈಯ, ಶಂಕರ್ ಜೈಕಿಷನ್, ಮದನ್‌ಮೋಹನ್ ಇವರೆಲ್ಲರೂ ಹೋದ ಮೇಲೆ ನೋಡೋಕೆ ಇನ್ನೇನಿದೆ ಅಲ್ಲಿ? ದಾರಿಯ ದೀಪಗಳೆಲ್ಲ ಈ ರೀತಿ ಒಂದೊಂದಾಗಿ ಆರಿ ಕತ್ತಲಾಗಿ ಈಗ ಉಳಿದಿರೋದು ಬರಿ ಚುಂಕಿಪಾಂಡೆ, ಗೋವಿಂದ ....

★

ಈ ಯೋಚನಾ ಸರಣಿಗೆ, ಮನೆ ಬಂದಿದ್ದರಿಂದ ಭಂಗ! ರಾತ್ರಿ (21.2.91) ಏಳೂವರೆಗೋ, ಎಂಟಕ್ಕೊ ತೋರಿಸುವ ಕನ್ನಡ ಚಿತ್ರ ಮಂಜರಿ ನಡೀತಿತ್ತು. ಆಗ 'ಉಯ್ಯಾಲೆ'ಯ ನಾಯಕ 'ಅಳುತ ಹಾಡಲೆ..... ನಗುತ ಹಾಡಲೇ .....' ಎಂದು ಪ್ರೇಕ್ಷಕರನ್ನು ಕೇಳುತ್ತಿದ್ದ. ಅದನ್ನು ಕೇಳುತ್ತಲೇ ನನ್ನ ಷರಟು ಇಸ್ತ್ರೀ ಮಾಡುತ್ತಿದ್ದ ನನ್ನ ಮಡದಿ 'ನೋಡ್ರೀ ಮರೆತು ಹೋಗಿತ್ತು ಹೇಳೋದು, ಈಗ ಪ್ರದೇಶ ಸಮಾಚಾರದಲ್ಲಿ ಬಂತು. ನೂತನ್ ಹೋಗಿಬಿಟ್ಟಳಂತೆ!'' ಎಂದು ಸುದ್ದಿ ಸಾರಿಸಿ ತನ್ ಮಟ್ಟಿಗ್ ತಾನು ಇಸ್ತ್ರೀ ಮಾಡ್ತೀ ಇದ್‌ಲು.

ಆ ಹಾಟ್ ಐರನ್ ಆಡ್ತಾ ಇರೋದು ನನ್ನ ಷರ್ಟ್ ಮೇಲಲ್ಲ; ಎದೇ ಮೇಲೇ! ಎಂಬಷ್ಟು ಸಂಕಟವಾಯಿತು.

Et tu Nuthan? ನೀನೂ ಹೋಗಿ ಬಿಟ್ಟೆಯಂತೆ ಹೌದೆ ನೂತನ್!

ಮೂಕಿ ಚಿತ್ರಗಳ ಕಾಲದ ದುರ್ಗಾ ಖೋಟೆ, ಲಲಿತಾ ಪವಾರ್‌ರಂತಹವರೇ ಇನ್ನೂ ಬದುಕಿ ಆರೋಗ್ಯವಾಗಿರೋವಾಗ ನಿನಗೇನಂತಹ ಅವಸರವಾಗಿತ್ತು? ಕಳೆದ ತಿಂಗಳಿನ್ನೂ ನಿನಗೆ breast cancerಗೆ ಟ್ರೀಟ್‌ಮೆಂಟ್ ಕೊಟ್ಟಿದ್ರಂತಲ್ಲ! ಆಮೇಲೆ ಸ್ವಲ್ಪವೂ ಸುಳಿವಿಲ್ಲ ಸೂಚನೆಯಿಲ್ಲ! 'ಮರ್‌ನಾ ತೇರಿ ಗಲೀಮೆ' ವೀಣೆಯಲ್ಲಿ ನುಡಿಸಿ ಬಿಟ್ಟು ಹೋಗಿ ಬಿಡಬೇಕೆ ನೀನು? ಆಯಿತು ವಿಧಿಯೆಸೆದ ಟ್ರಂಪ್ ಕಾರ್ಡ್ ಮೇಲೆ ನಮ್ಮ ಆಟ ನಡೆಯದು. ನಮ್ಮ ಮನವೇನೋ

''ಓ ಜಾನೇವಾಲೇ ಹೋ ಸಕೇ ಫಿರ್ ಲೌಟಕೆ ಆನಾ'' ಎಂದು ದುಃಖಿಸುತ್ತ ಕಣ್ಣೀರು ಜಿನುಗುತ್ತಿದೆ.

ಬರ್ತೀಯಾ? Audieu! ಖುದಾ ಹಾಫೀಜ್
ನೇಯೋ ನಾರಾ ..... Aud Revoir!!!


ಪುಸ್ತಕ ವಿಭಾಗ
ಸಾಧ್ಯ-ಸಂಬಂಧ

ಊಟಕ್ಕಿಲ್ಲದವರು ಮೂಲಭೂತ ಅವಶ್ಯಕತೆಯನ್ನು ಕುರಿತು ಮಾತಾಡುತ್ತಾರೆ. ಊಟಕ್ಕಿದ್ದವರು ಮೂಲಭೂತ ಹಕ್ಕುಗಳನ್ನು ಕುರಿತು ಭಾಷಣ ಬಿಗಿಯುತ್ತಾರೆ. ನನಗೆ ಅನೇಕ ಅಸ್ಪಷ್ಟತೆಗಳಿವೆ; ಅನೇಕ ಆದರ್ಶಗಳೂ ಇರಬೇಕು. ಅನೇಕ ಊನಗಳೂ ಇರಬೇಕು. ನಾನು ಉಳಿದವರಂತೆ ಇದ್ದೇನೆಂಬ ನಂಬುಗೆ, ಕ್ರಾಂತಿಯ ಮಾತು ಕೇಳಿಯೇ ಕ್ರಾಂತಿ ಏಳುವ ಶಕ್ತಿ ಹ್ರಾಸವಾಗಿದೆ. ನನ್ನಲ್ಲೂ ಸಾಮಾನ್ಯರಲ್ಲಿದ್ದುದೇ ಇದೆ. ಅವರ ಹತ್ತಿರವೂ ಹೊಸದಿಲ್ಲ. ನನ್ನ ಹತ್ತಿರವೂ ಅಷ್ಟೇ!

ಮೂಲ : ಪಿ.ವಿ.ಶಾಸ್ತ್ರಿ ಕಿಬ್ಬಳ್ಳಿ
ಸಂಗ್ರಹ : 'ನಾಸು' ಭರತನಹಳ್ಳಿ

ಚೌಸ್ನಾಲಾ ಗಣಿ ದುರಂತ!
ಮಂಡ್ಯ ಬಳಿಯ ಬಸ್ ಅಪಘಾತ .....!

ಹೀಗೇ ಇನ್ನೆಷ್ಟೋ ಘಟನೆಗಳು. ಈ ಪತ್ರಿಕೆಗಳ ಸುದ್ದಿಗಳಿಗಾಗಿ ನಾನೇಕೆ ಇಷ್ಟು ಗಾಬರಿಯಾಗುತ್ತಿದ್ದೇನೆಂಬುದು ತಿಳಿಯುವುದಿಲ್ಲ. ಸಾವೇನೂ ನನಗೆ ಹೊಸದಲ್ಲ. ಆ ಬಗೆಗೆ ಯಾವ ವಿಶೇಷ ಅನಿಸಿಕೆಯೂ ಇಲ್ಲ. ನನ್ನ ಅಜ್ಜ, ಅಜ್ಜಿ, ಅಮ್ಮ, ಅಪ್ಪ ಮತ್ತು ನನ್ನ ಒಬ್ಬಳೇ ತಂಗಿಯ ಸಾವನ್ನೂ ಕಣ್ಣು ಮುಟ್ಟಾ ನೋಡಿದ್ದೇನೆ. ಸ್ವತಃ ನಾನೇ ಕೆಲವೊಮ್ಮೆ ಸಾವಿನ ಬಾಗಿಲವರೆಗೂ ಹೋಗಿ, ಬದುಕನ್ನೇ ಮೆಚ್ಚಿ ಮರಳಿ ಬಂದಿದ್ದೇನೆ. ಆಮೇಲೆ -

ಬದುಕನ್ನೂ ತಾತ್ವಿಕ ರಾಡಿಯಿಂದ ಬಿಡಿಸಿಕೊಂಡು ನಿವ್ವಳವಾಗಿ ಸ್ವೀಕರಿಸಿ ನಿರ್ಭಾವದಲ್ಲಿ ನಡೆಯಿಸಿಕೊಂಡು ಹೊರಟಿದ್ದೇನೆ. ನಿನ್ನೆ ತಡವಾಗಿ ಮಲಗಿದ್ದೆ. ಆದರೂ ಇಂದು ಬೇಗನೇ ಎಚ್ಚರವಾಗಿಹೋಯ್ತು.

ಮುಖ ತೊಳೆಯಲು ಬಚ್ಚಲಿಗೆ ಹೋದೆ. ಅಲ್ಲಿದ್ದ ಕನ್ನಡಿಯಲ್ಲಿ ಕಂಡ ಮುಖಕ್ಕಿಂತ ವಾಶ್ ಬೇಸಿನ್ನೇ ಹೊಲಸಾಗಿ ಕಂಡಿತು. ವಿಮ್ ಹಾಕಿ ಅದನ್ನು ತೊಳೆದೆ. ಸ್ಯಾಂಡಲ್ ಸೋಪ್‌ನಿಂದ ಮುಖವನ್ನೂ ತೊಳೆದುಕೊಂಡೆ. ಆಹ್ಲಾದಕರವೆನಿಸಿ ಮನಸ್ಸು ಹೆಚ್ಚು ಚೇತರಿಸಿಕೊಂಡಿತು.

ಹೊರಗೆ ಬಂದು ಸ್ಟೋವ್‌ಗೆ ಸ್ವಿಚ್ ಹಾಕಿದೆ. ಬ್ರೆಡ್ ಸ್ಲೈಸುಗಳಿಗೆ ಜಾಮ್ ಹಚ್ಚಿ ಇಟ್ಟುಕೊಂಡೆ. ಜಾಮ್ ಡಬ್ಬಿ ಅಂಟು ಅಂಟಾಗಿತ್ತು. ಅದನ್ನೂ ತೊಳೆದೆ. ಕುದಿವ ನೀರಿಗೆ ಚಹ ಸೊಪ್ಪು ಹಾಕಲು ಡಬ್ಬಿ ಮುಚ್ಚಳ ತೆಗೆಯುವಾಗ ಅದರ ಬಣ್ಣವೂ ಮಾಸಿದ್ದು ತೋರಿತು. ಅದಕ್ಕೂ ನನ್ನ ಸರಿಸಮಾನ ವಯಸ್ಸಾದಂತೆ ತೋರಿತು. ಅದನ್ನು ಬದಲಿಸಬೇಕು. ಮಾನವನಿಗೆ ವಸ್ತುಗಳ ವಿಷಯದಲ್ಲಿ ಇರುವ ಸಂತೋಷವೇ ಅದು. ಬೇಕಾದಾಗ ಬದಲಿಸಬಹುದು.

ಚಹವನ್ನು ಕಪ್ಪಿಗೆ ಹಾಕಿ, ಬ್ರೆಡ್ ಪ್ಲೇಟನ್ನು

ಎದುರಿಗಿಟ್ಟುಕೊಳ್ಳುವಷ್ಟರಲ್ಲಿ ಬೆಕ್ಕು ಕಾಲನ್ನು ಸುತ್ತತೊಡಗಿತು. ಒಬ್ಬನೇ ಕುಳಿತು ತಿನ್ನುವ ನನಗೆ ಅದರ ಸಾಮಿಪ್ಯ ಒಂದು ಆತ್ಮೀಯ ಅನಿಸಿಕೆ. ನಾನು ರೂಮಿಗೆ ಬಂದು ಮೂರು ವರುಷಗಳಾದವು. ಅಂದಿನಿಂದ ಇಂದಿನವರೆಗೆ ಅದು ನನ್ನ ಬಳಿಯೇ ಇದೆ. ನನ್ನ ಬದುಕಿನೊಂದಿಗೆ ಅದು ಐಡೆಂಟಿಟಿ ಮಾಡಿಕೊಂಡಿದೆ. ಅದು ಎಂದೂ ಅಸಾಧ್ಯವಾದ ಬೇಡಿಕೆಯನ್ನು ಮುಂದಿಟ್ಟಿರಲಿಲ್ಲ. ಆದುದರಿಂದ ನನಗೆ ತುಂಬಾ ಖುಷಿ. ಒಂದು ಬೆಳ್ಳಗಿನ ಪೆಟ್ ತರಬೇಕು. ಗುಬ್ಬಿಯಂತೆ ಒದರುತ್ತದೆ. ನಾಯಿಯಂತೆ ಕಾಣುತ್ತದೆ. ಒಂದು ಗಿಳಿಯನ್ನೂ ಸಾಕಬೇಕು. ಬೆಕ್ಕು, ನಾಯಿ, ಗಿಳಿ ಮತ್ತು ನಾನು - ಒಂದು ಭರ್ಜರಿ ಸಂಸಾರವೇ ಆಗುತ್ತದೆ.

ಗೀಸರಿಗೆ ಸ್ವಿಚ್ ಹಾಕಿ ಹೊರಗಡೆ ಬಂದು ಕುಳಿತೆ. ಸಿಗರೇಟ್ ಹಚ್ಚಿದೆ. ತೃಪ್ತಿಯಾಗಲಿಲ್ಲ. ಎರಡನೆಯದನ್ನೂ ಹಚ್ಚಿದೆ. ಇನ್ನೂ ಪತ್ರಿಕೆ ಬರಲಿಲ್ಲ. ದಿನವಾದರೆ ಪತ್ರಿಕೆ ದೊಪ್ಪೆಂದು ಬಂದು ಬೀಳುತ್ತಿತ್ತು. ಸಿಗರೇಟು ಸೇದುತ್ತ ಓದಿ ಮುಗಿಸುವುದರೊಳಗೆ ನೀರು ಕಾಯುತ್ತಿತ್ತು. ಗಡ್ಡ ಕೆತ್ತಿಕೊಂಡು ಸ್ನಾನ ಮುಗಿಸುವುದರೊಳಗೆ ಒಂಬತ್ತು ಹೊಡೆಯುತ್ತಿತ್ತು. ಪ್ಯಾಂಟ್ ಏರಿಸಿ ಇನ್ನೊಂದು

ಲೇಖಕರ ಪರಿಚಯ

ಕನ್ನಡ ಕಾದಂಬರಿ ಲೋಕದೊಳಗೆ ತಮ್ಮ ವೈಶಿಷ್ಟ್ಯಪೂರ್ಣ ಛಾಪಿನ ಕೃತಿಗಳ ಮೂಲಕ ಪಿ.ವಿ. ಶಾಸ್ತ್ರಿಯವರು ತೆರೆದು ತೋರುವ ಬದುಕಿನ ಪದರುಗಳು ಓದುಗನನ್ನು ತಮ್ಮ ಆಪ್ತತೆಕ್ಕೆಯಲ್ಲಿ ಹುದುಗಿಸಿಕೊಂಡು ಬಿಡುತ್ತವೆ. ಯಾವುದೇ ಸಾಹಿತ್ಯಿಕ ಪಂಥ ಲೇಖಕರ ಸೃಜನಶೀಲಕ್ರಿಯೆಯನ್ನು ನಿಯಂತ್ರಿಸುವುದಿಲ್ಲ. ಆ ಕ್ಷಣದ ಸತ್ಯಗಳನ್ನು ತಮ್ಮದೇ ಆದ ತಂತ್ರ, ಶೈಲಿ, ಪ್ರಬುದ್ಧ ಚಿಂತನೆ ಮೂಲಕ ಅನನ್ಯವಾಗಿ ದಾಖಲಿಸುವ ಶಾಸ್ತ್ರಿಯವರು ವಿಶಿಷ್ಟ ಬರಹಗಾರರಾಗಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ. ಚುರುಕು ಭಾಷೆಯ ಕವಚ ತೊಟ್ಟು ಚುಟುಕು ವಾಕ್ಯಗಳ ಚಿಪ್ಪೊಳಗಿಂದ ಹೊರ ಬರುವ ಅವರ ತರ್ಕದ ಕೊಂಡಿಗಳು ಮನುಷ್ಯ ವ್ಯಾಪಾರದ ಬಹುಪಾಲು ಅಸಂಗತ ಭಾಗಗಳನ್ನು ಮುಟ್ಟಿ, ತಟ್ಟಿ, ಪರಿಶೀಲಿಸುತ್ತವೆ.

ಪಿ.ವಿ. ಶಾಸ್ತ್ರಿಯವರ ಲೇಖನಿ ಅಸ್ತಿತ್ವವಾದಿ ನೆಲೆಯಿಂದ ನಡಿಗೆಯನ್ನು ಆರಂಭಿಸಿದರೂ, ಯಾವ ಸಿದ್ಧ ಚೌಕಟ್ಟಿಗೂ ಸಿಲುಕಿ ಒದ್ದಾಡುವುದಿಲ್ಲ. ಅಂತೆಯೇ ಅವರ ಚಿಂತನೆ, ಕಾಳಜಿ, ತರ್ಕ, ದರ್ಶನ ಎಲ್ಲವೂ ಅವರವೇ.

ಶಿರಸಿ ತಾಲೂಕಿನ ಕಿಬ್ಬಳ್ಳಿ, ಐವತ್ತೇಳರ ಹಿರಿಯ ಸಾಹಿತಿ ಪಿ.ವಿ. ಶಾಸ್ತ್ರಿಯವರ ಸ್ವಂತ ಊರು. ಪ್ರಸ್ತುತ ರಾಯಚೂರು ಜಿಲ್ಲೆಯ ಹಟ್ಟಿಯಲ್ಲಿ ಸ್ವತಂತ್ರ ವೃತ್ತಿಯೊಂದರಲ್ಲಿ ತೊಡಗಿಸಿಕೊಂಡಿದ್ದಾರೆ. 'ಸಮುದ್ರದಂಚಿನ ಸಂಜೆ', 'ಪ್ರಥಮ ಸಾಮ್ರಾಟ', 'ಸಾವು-ಸಂಬಂಧ' ಹಾಗೂ ಈಚೆಗಷ್ಟೇ ಹೊರಬಂದಿರುವ 'ಎನಗೆ ಎನ್ನದೇ ಚಿಂತೆ' ಮುಂತಾದ ಕಾದಂಬರಿಗಳನ್ನು ಶಾಸ್ತ್ರಿಯವರು ಸೃಜಿಸಿದ್ದಾರೆ. 'ದೇವರು', 'ದಯಾಮಯನಾದ ತಂದೆಯ ಊರಿನಲ್ಲಿ' ಇವೆರಡೂ ಅವರ ಕಥಾ ಸಂಕಲನಗಳು. 'ಸಾಹಿತ್ಯದಲ್ಲಿ ಅಸ್ತಿತ್ವವಾದ', 'ಕಾದಂಬರಿ' ಎಂಬ ಪ್ರೌಢ ಪ್ರಬಂಧಗ್ರಂಥಗಳೂ ಅವರ ಕೃತಿಗಳ ಪಟ್ಟಿಗೆ ಸೇರುತ್ತವೆ.

''ಈ ಶತಮಾನದ ಶ್ರೇಷ್ಠ ಸಾಹಿತ್ಯ ಕೃತಿಯೆಂದರೆ ಗೇಲಿ ಸಾಹಿತ್ಯ ಮಾತ್ರ!'' ಎಂದು ನಿಲುವು ತಾಳುವ ಅವರು ತಮ್ಮ ಕೃತಿಗಳಲ್ಲೂ ಇದನ್ನೇ ಬಿಂಬಿಸುತ್ತಾರೆ.

ಕಪ್ಪು ಚಹ ಕುಡಿದು ಆಫೀಸಿಗೆ ಮುಟ್ಟುವಷ್ಟರಲ್ಲಿ ಹತ್ತೂ ಕಾಲಾಗುತ್ತಿತ್ತು. ಇಂದು ಬೇಗ ಎದ್ದುದರಿಂದ ಕಾರ್ಯಕ್ರಮ ಹೊಂದಿಕೊಳ್ಳುತ್ತಿಲ್ಲ. ಬಾತ್‌ರೂಮಿಗೆ ಹೋಗಿ ಗಡ್ಡ ಕೆರೆದುಕೊಳ್ಳಲು ಕನ್ನಡಿಯಲ್ಲಿ ಮುಖ ನೋಡಿದರೆ ಎರಡು ಮೂರು ಬಿಳಿ ಕೂದಲು ಕಾಣಿಸಿತು.

ನನಗೆ ವಯಸ್ಸಾಯಿತು.

ಇಷ್ಟು ತಿಳಿದುಕೊಂಡಾಗ ಸಮಾಧಾನವಾಯಿತು.

ಇಪ್ಪತ್ತೈದರ ನಂತರ ಈ ಇಪ್ಪತ್ತು ವರುಷಗಳು ಹೆಚ್ಚು ಸಂತೋಷವನ್ನೇ ತಂದಿವೆ. ರಾಶಿರಾಶಿಯಾಗಿ ಬಿದ್ದ ಆದರ್ಶಗಳು ಕರಗಿ, ಕನಸುಗಳು ತೊಳೆದುಹೋಗಿ ಮನಸ್ಸು ಸ್ವಚ್ಛವಾಗಿದೆ. ಇಪ್ಪತ್ತೈದರ ಗಡಿಯ ಮೇಲೆ ಬದುಕು, ವರ್ಣಮಯ ಸುಗಂಧ ಸಾಗರವಾಗಿ ಕಂಡಿತ್ತು. ಅದು ಇಂದಿಲ್ಲ. ಮುಪ್ಪಿನ ನೆರಳಿಲ್ಲದ ರೋಗದ ಕನಸಿಲ್ಲದ ಆ ಬದುಕು; ಅಸಾಧ್ಯ, ಅಸಂಭವಗಳನ್ನು ಕಂಡೇ ಇರಲಿಲ್ಲ. ಇಂದು ಮುಪ್ಪು ಬಾಗಿಲಲ್ಲಿ ನೆರಳು ಚೆಲ್ಲಿ ನಿಂತಿದೆ. ಅದು ನನ್ನನ್ನು ಭಯಪಡಿಸಬೇಕಾದುದಿಲ್ಲ. ವಾಸ್ತವದ ಕೆರಗನ್ನೇ ಹಿಡಿದು ನಡೆಯುವದನ್ನು ಕಲಿತಿದ್ದೇನೆ.

ಇಂದು ನಾನು ಹೆಚ್ಚಾಗಿ ವಸ್ತುಗಳ ಮಧ್ಯೆ ಬದುಕಿದ್ದೇನೆ. ವಸ್ತುಗಳು ಭಾವನೆಗಳಾದ ಕಾಲದಿಂದ, ಭಾವನೆಗಳು ವಸ್ತುಗಳಾಗಿ ಮಾರ್ಪಡುತ್ತಾ ಹೊರಟಷ್ಟು ದೂರ ನಾನು ನಡೆದು ಬಂದಿದ್ದೇನೆ. ಸಂತೆಯ ಗದ್ದಲದಲ್ಲಿ ಕೈ ತಟ್ಟುವ ಹಂಬಲವಿಲ್ಲ ಈಗ ನನಗೆ.

ಮುಖ ಇನ್ನೂ ಕನ್ನಡಿಯಲ್ಲಿ ಕಾಣುತ್ತಲಿದೆ. ಅರಳಿ ಅಳಿದು ಹೋದ ಬಲವಂತರ ಸ್ಮಶಾನದಂತೆ ಮುಖ ಕಾಣುತ್ತಿದೆ. ಮಧ್ಯ ಒಂದು ಕಾಲ, ಆಗ ಕನ್ನಡಿಯೇ ಒಂದು ದುಃಸ್ವಪ್ನ. ಮುಖವರಿದು ಘೋರವಾಗಿ, ಭೀಭತ್ಸವಾಗಿ ಮನಸ್ಸನ್ನೂ ಕನ್ನಡಿಯನ್ನೂ ತುಂಬಿಕೊಳ್ಳುತ್ತಿತ್ತು.

ಈಗ ಪರವಾಯಿಲ್ಲ. ಕಲಬುರ್ಗಿಯ ಬೈಲಿನಂತೆ ನಿರ್ಭಾವ ಸ್ವಚ್ಛತೆ. ಕನ್ನಡಿಯನ್ನು ಜಿಟ್ಟು ಹೊರಬರುತ್ತೇನೆ.

ಹುಡುಗ ಪತ್ರಿಕೆಯನ್ನು ಒಗೆದು ಹೋದ.

ಪೇಪರನ್ನೇನೋ ಓದತೊಡಗುತ್ತೇನೆ. ಮೈ ಅಸ್ವಸ್ಥ, ಆಫೀಸಿಗೆ ಹೋಗುವುದು ಸರಿಯಾಗಲಾರದು. ರಜೆಯನ್ನು ಹಾಕಬೇಕು. ಇಲ್ಲವೆ ರಾಜೀನಾಮೆ ಕಳಿಸಬೇಕು. ಈಗೀಗ ಮನಸ್ಸು ನಿಶ್ಶಬ್ದತೆಯಲ್ಲಿ ಮುರುಟಿಕೊಳ್ಳುತ್ತಲೇ ಹೋಗುತ್ತದೆ. ಅದನ್ನು ಅರಳಿಸುವ ಪ್ರಯತ್ನ ಬೇಸರ ಬಂದಿದೆ. ಬೇಸರದಿಂದ ಸರಳಿದರೂ ಅದೇ ಅಭ್ಯಾಸವಾಗಿ, ಹಗುರಾಗಿ ತೋರುತ್ತಿದೆ.

ಆಚೆಯ ಮನೆಯ ಹುಡುಗನನ್ನು ಕರೆದು ರಜೆಯ ಚೀಟಿ ಕೊಟ್ಟು ಕಳಿಸುತ್ತೇನೆ. ಮತ್ತೊಮ್ಮೆ ಚಹಾ ಮಾಡಿಕೊಂಡು ಕುಡಿಯುತ್ತೇನೆ. ಬಾಲನಿಗರಿಸಿ ಸುತ್ತು ಹಾಕುವ ಬೆಕ್ಕನ್ನು

> *ಕಲ್ಲಿನೆದುರು ಕೈ ಮುಗಿದು ಕಣ್ಮುಚ್ಚಿ ಪ್ರಸಾದ ಕೇಳುವವರಿಗೂ, ವಿಶ್ವದ ನಿಗೂಢತೆಯನ್ನು ಗ್ರಾಫಿನಲ್ಲಿ ಹಿಡಿದಿಡುವ ಜಾಣರಿಗೂ ಅಂಥ ವ್ಯತ್ಯಾಸ ಇದ್ದಂತಿಲ್ಲ.*

ನೋಡುತ್ತೇನೆ. ನನಗಿಂತಲೂ ಅದು ಗಟ್ಟಿ ಆಸಾಮಿ ಎಂದುಕೊಂಡು, ಬೆಡ್ ರೂಮಿಗೆ ಹೋಗಿ ಕುತ್ತಿಗೆವರೆಗೆ ಚಾದರ ಹೊದ್ದು ಪೇಪರ ಓದತೊಡಗುತ್ತೇನೆ.

ಫ್ಯೂಚರಿಸ್ಟ ಕ್ಲಬ್ಬಿನ ವಿಷಯ ಜೋರಾಗಿ ಪ್ರಕಟವಾಗಿತ್ತು. ಎರಡು ನೂರು ವರ್ಷಗಳ ನಂತರ ಜಗತ್ತಿನ ಸ್ಥಿತಿಯೇನು ಎಂಬುದನ್ನು ಅದರಲ್ಲಿ ಚರ್ಚಿಸಲಾಗಿತ್ತು. ಚಿಕ್ಕವನಿದ್ದಾಗ ಓದಿದ್ದು ಜ್ಞಾಪಕಕ್ಕೆ ಬಂತು. ಕೆಲವೇ ದಿನಗಳಲ್ಲಿ ಜಗತ್ಪ್ರಳಯ ಎಂದು ಭವಿಷ್ಯ ಬರೆದಿದ್ದರು. ಭೌತಿಕವಾದಿ ಪಶ್ಚಿಮದ ಕೆಲ ಜನ ಆ ದಿನ ಗುಡ್ಡಗಳನ್ನು, ಮತ್ತೆ ಕೆಲವರು ಗುಡ್ಡದ ಮೇಲಿನ ಮರಗಳನ್ನು ಹತ್ತಿ ಕುಳಿತರಂತೆ. ಅವರ ನಂಬಿಕೆಗೆ ನಗೆ ಬಂದಿರಲಿಲ್ಲ. ಸಾವಿನ ಭಯದ ಅವರ ಮನಸ್ಥಿತಿಗಾಗಿ ದುಃಖ

ವಾಗಿತ್ತು. ಕಾಲೇಜು ದಿನಗಳಲ್ಲಿ ನೋಡಿದ್ದ ಒಂದು ಇಂಗ್ಲೀಷ ಚಿತ್ರ ಈಗ ಸ್ಪಷ್ಟವಾಗಿ ಅರ್ಥವಾಗುತ್ತಿದೆ. ಸಮುದ್ರದ ಮಧ್ಯೆ ಒಂದು ಹಡಗು ಅಪಘಾತಕ್ಕೆ ಸಿಕ್ಕು ಅರ್ಧ ಮುಳುಗಿದೆ. ಜನ ಮುಳುಗದ ಭಾಗದ ಮೇಲೆ ಕಂಗಾಲಾಗಿ ಓಡಾಡುತ್ತಾರೆ. ಸಾಯುವುದೇ ಖಂಡಿತವಾದಾಗ ಮಾನವನ ವ್ಯವಹಾರ ಹೇಗಿರುತ್ತದೆ ಎಂಬುದನ್ನು ತೋರಿಸುವ ಉದ್ದೇಶ ಆ ಚಿತ್ರದ್ದು. ಮಾನವನ ಎಲ್ಲ ವ್ಯವಹಾರ ಹಾಸ್ಯಾಸ್ಪದವಾಗುವ ಆ ಸಾವಿನ ಸನ್ನಿವೇಶ ನನ್ನ ಮನಸ್ಸಿನ ಮೇಲೆ ಎಂದೆಂದೂ ಅಳಿಸಲಾಗದ ಪ್ರಭಾವವಾಗಿ ಉಳಿದುಬಿಟ್ಟಿದೆ.

ಪ್ಯೂಚರಿಸ್ಟ ಕ್ಲಬ್ಬಿನ ವಿಷಯವೂ ಅಷ್ಟೇ. ಮನುಷ್ಯ ನಿಜವಾಗಿಯೂ ಬುದ್ಧಿಜೀವಿಯೇ? ಎಂಬ ಸಂಶಯ ಬರುವಂತಾಯಿತು. ಕಲ್ಲಿನೆದುರು ಕೈ ಮುಗಿದು ಕಣ್ಮುಚ್ಚಿ ಪ್ರಸಾದ ಕೇಳುವವರಿಗೂ, ವಿಶ್ವದ ನಿಗೂಢತೆಯನ್ನು ಗ್ರಾಫಿನಲ್ಲಿ ಹಿಡಿದಿಡುವ ಜಾಣರಿಗೂ ಅಂಥ ವ್ಯತ್ಯಾಸ ಇದ್ದಂತಿಲ್ಲ. ವಾಸ್ತವ ಸತ್ಯ ಎಂಥ ವಿಚಾರದಿಂದಲೂ ವಿಚಲಿತವಾಗದೇ ಇರುವುದು ಸತ್ಯವಾದಾಗ, ವೈಚಾರಿಕತೆಯೆನ್ನುವುದು ಬದುಕನ್ನು ಕೆಲಕಾಲ ಗೊಂದಲಮಯ ಮಾತ್ರ ಮಾಡಬಹುದು. ನೂರು ನೆನಪುಗಳು ಸಿಡಿಯತೊಡಗಿದಾಗ - ಚಾದರ ಒದ್ದು, ಎದ್ದು ಸಿಗರೇಟು ಹಚ್ಚಿ ಕುಳಿತೆ.

ಹನ್ನೊಂದು ಹೊಡೆಯಿತು. ಎದ್ದು ಕುಕ್ಕರಿನಲ್ಲಿಷ್ಟು ಬಟಾಟೆ, ಅಕ್ಕಿ ಬೇಳೆ ಎಲ್ಲಾ ತುರುಕಿ ಒಂದು ಕಿಚಡಿ ತಯಾರಿಸಿಕೊಳ್ಳುವ ತಯಾರಿಯಲ್ಲಿದ್ದಾಗ ಬೆಕ್ಕು ಸನಿಯ ಸುಳಿಯತೊಡಗಿತು. ಆಗಲೇ ಅಡಿಗೆ ಆಯಿತು ಎಂಬ ವಿಶ್ವಾಸ ಅದಕ್ಕೆ. ಕುಕ್ಕರು ಇಟ್ಟು ಈಚೆ ಬರುವುದಕ್ಕೂ, ಕಾಲಿಂಗ್ ಬೆಲ್ ಬಾರಿಸುವುದಕ್ಕೂ ಸರಿಹೋಯಿತು. ಬಾಗಿಲು ತೆಗೆದೆ. ರಮಾನಂದ.

''ನಮಸ್ಕಾರ ಸಾರ್'' ಎಂದ.

''ಬಾರಯ್ಯ ಕೂತ್ಕೊ ....'' ಎನ್ನುತ್ತ ಬಂದ ಕಾರಣವನ್ನು ವಿಚಾರಿಸಿದೆ.

''ಏನಿಲ್ಲ; ಏನಿಲ್ಲ ನೀವು ಆಫೀಸಿಗೆ ರಜಾ ಹಾಕಿದ್ದಿರಿ, ಏನಾಯ್ತು ನೋಡ್ಕಂಡು ಹೋಗುವಾ ಎಂದು ಬಂದೆ .....'' ಎಂದನಾದರೂ ಮಾತನ್ನು ಮುಗಿಸಿದ ಅನ್ನಿಸಲಿಲ್ಲ.

''ತಗೋ ಪೇಪರು. ಒಂದು ಕಪ್ಪು ಚಹ .....?''

''ಬೇಡ ಸಾರ್. ನಾನು ಚಹ ಕುಡಿಯುವುದಿಲ್ಲ .... ಒಂದು ....''

- ಒಂದು ಇಪ್ಪತ್ತೇ ರೂಪಾಯಿ ಕೇಳಿದ. ಕೊಟ್ಟೆ. ತೆಗೆದುಕೊಂಡ ಮೇಲೆ ಆತನಿಗೆ ಕೂಡ್ರುವ ವ್ಯವಧಾನವಿರಲಿಲ್ಲ.

ಹೆಂಡ ಕುಡಿಯುವ ರಮಾನಂದನಿಗೆ ಚಹಾ ಕುಡಿಯುವ ಚಟವಿಲ್ಲ! ಆತ ನಮ್ಮ ಆಫೀಸಿನ ಸುಪರಿಂಟೆಂಡೆಂಟ್. ಕುಡಿಯುವ ಅವಸ್ಥೆಯಲ್ಲಿ ಆತ ನರ ಸತ್ತವನಂತಿರುತ್ತಾನೆ. ಕುಡಿಯುವುದಕ್ಕೆ ದುಡ್ಡು ಕೇಳುವ ಪ್ರಸಂಗದಲ್ಲಿ ಆತ ಜಗತ್ತಿನ ಎಲ್ಲ ದೈನ್ಯವನ್ನೂ ತಾನೇ ಗುತ್ತಿಗೆ ಹಿಡಿದಂತಿರುತ್ತಾನೆ. ಕುಡಿದಾ ಎಂದರೆ ಆತ ಪ್ರಪಂಚದಲ್ಲಿಯೇ ಧೈರ್ಯಶಾಲಿ, ಮಹಾಬುದ್ಧಿವಂತ, ಪ್ರಭಾವೀ ಮನುಷ್ಯ. ಆ ಅವಸ್ಥೆಯಲ್ಲಿ ಆತ ಎಲ್ಲರಿಗೂ ದಾನ ಮಾಡುತ್ತಾನೆ, ಸಹಾಯಕ್ಕೂ ಧಾವಿಸುತ್ತಾನೆ. ಪಗಾರ ಸಿಕ್ಕ ದಿನ ಎಲ್ಲಾ ಸಾಲವನ್ನೂ ಚುಕ್ತಾ ಮಾಡುತ್ತಿದ್ದ. ಮತ್ತೆ ಮರುದಿನ ಸಾಲ ಕೇಳಲು ಪ್ರಾರಂಭಿಸುತ್ತಿದ್ದ. ಅವನ ಹೆಂಡತಿ ಮೂರೂ ಮಕ್ಕಳೊಂದಿಗೆ ಎಷ್ಟೋ ಸಾರೆ ಆಫೀಸಿಗೇ ಬಂದು ಜಗಳ ಕಾದಿದ್ದಳು.

ನಮ್ಮ ಪ್ಯೂನನ ವಿಷಯ ಬೇರೆ. ಆತ ಇಂದು ಬಂದೇ ಬರ್ತಾನೆ. ಅವನಿಗೆ ಹತ್ತೆಂಟು ಮಕ್ಕಳು; ಹೆಂಡ ಕುಡಿಯುವ ಚಟವೂ ಉಂಟು. ಆತ ಸಾಲ ಕೇಳುವುದೂ ನನ್ನ ಹತ್ತಿರವೇ. ನನಗೆ, ಆತ ಕೇಳಿದಾಗೆಲ್ಲ ಇಲ್ಲ ಎನ್ನುವುದಾಗುವುದಿಲ್ಲ. ''ನಿಮ್ಮಂತಹವರು ಸಾಲ ಕೊಟ್ಟು ಪ್ರೋತ್ಸಾಹ ಕೊಡ್ತೀರಿ'' ಎಂದು ಸಹೋದ್ಯೋಗಿಗಳು ಚಾರ್ಜ್ ಮಾಡಿದ್ದುಂಟು. ಹಣವಿರುವಾಗ ಕೇಳಿದವರಿಗೆ ಇಲ್ಲ ಎನ್ನುವುದು ಸಾಧ್ಯವಿಲ್ಲ. ಅದೂ ಒಂದು ಚಟವೇ. ನಮ್ಮ ಸದ್ಗುಣಗಳೆಲ್ಲ ಸಾತ್ವಿಕ

ಭಾವಗಳಾಗಿ ಉಳಿಯದೇ ಚಟವಾಗಿ ಹೋಗಿರುವ ವಿಷಯ ನನಗೂ ಗೊತ್ತು! ನಾನು ಕ್ಯಾಜುಅಲ್ ಆಗಿ ಅವನನ್ನು ಕೇಳಿದ್ದೇನೆ.

''ಮಕ್ಕಳು ಸಾಕು. ಅಲ್ಲವೇನೋ!'' ಎಂದೆ.

''ಸಾಹೇಬ್ರ. ಖರೆ ಹೇಳ್ಬೇಕೆಂದ್ರೆ, ನಾನು ರಾತ್ರಿ ಹೊರಗೇ ಮಲಗ್ತೇನೆ'' ಎಂದಿದ್ದ. ಆತ ಸುಳ್ಳು ಹೇಳಿರಲಿಕ್ಕಿಲ್ಲ. ಆದರೆ ಮಕ್ಕಳಾಗುತ್ತಿದ್ದುದೂ ಸುಳ್ಳಲ್ಲ!'' ಅವನಿಗಿರುವ ನೂರು ಕಷ್ಟಗಳಲ್ಲಿ ಇದೂ ಒಂದಿರಬಹುದು.

ನನ್ನ ಈ ಸ್ವಭಾವವನ್ನು ನೋಡಿ, ನನ್ನ ಜನ ಕ್ಯಾಥೋಲಿಕ್ ಅಪ್ರೋಚ್ ಎಂದು ವರ್ಣಿಸಿದ್ದಾರೆ. ನಿಜ ಹೇಳುವುದಾದರೆ ಈ ಸ್ವಭಾವದಲ್ಲಿ ನನ್ನದೆನ್ನುವುದೇನೂ ಇಲ್ಲ. ನಮ್ಮ ಬಗೆಗಿನ ನಮಗೊದಗಿದ ಸರಿಯಾದ ತಿಳುವಳಿಕೆ ಖಂಡಿತಕ್ಕೂ ಸುಖ ಕೊಡಲಾರದು. ಆಗ ಸುಖ ಉದ್ದೇಶವಲ್ಲವೆನ್ನುತ್ತೇವೆ. ಹಾಗಾದರೆ ಮಣ್ಣು ತಿನ್ನಲಿಕ್ಕೆ ಇಷ್ಟೆಲ್ಲ ಜ್ಞಾನದ ಅವಶ್ಯಕತೆಯೇನು? ಕುಡಿದು ಬದುಕಿನಲ್ಲಿ ತನ್ನನ್ನು ಎಂಗೇಜ ಮಾಡಿಕೊಂಡ ರಮಾನಂದ ಕನಿಷ್ಠ ಹೇಗಾಗುತ್ತಾನೆ! ಡೇಸಿ ಅವನ ಕಥೆ ಹೇಳಿದ್ದಳು; ಅವನ ತಾಯಿ ವ್ಯಭಿಚಾರಿ ಆದುದರಿಂದ ಅವನು ಹಾಗೆ ಆದ ಎಂದು ಆಕೆಯ ವಿವರಣೆ. ಹಾಗೇ ಅವನ ತಾಯಿಗೂ ವ್ಯಭಿಚಾರಿಣಿಯಾಗಲು ಕಾರಣಗಳಿದ್ದಿರಬಹುದಲ್ಲ! ಕಾರಣಗಳನ್ನು ಹುಡುಕಿದರೆ ಏನು ಹುಡುಕಿದಂತಾಯಿತೆನ್ನುವುದೇ ತಿಳಿಯುವುದಿಲ್ಲ.

ಅಣ್ಣನನ್ನು ಕೊಂದು ಅತ್ತಿಗೆಯನ್ನು ಇಟ್ಟುಕೊಂಡ ಲಕ್ಷ್ಮಣರಿದ್ದಾರೆ; ಮಗಳಿಗೇ ವಿಷ ಹಾಕಿ ಅಳಿಯನನ್ನು ಇಟ್ಟುಕೊಂಡ ಅತ್ತೆಯಂದಿರಿದ್ದಾರೆ; ಸೊಸೆಯೊಂದಿಗೆ ಮಲಗುವ ಮಾವಂದಿರಿದ್ದಾರೆ. ಸಂಬಂಧಗಳಿಗೆ ರೋಗ ಅಂಟುತ್ತಲೇ ಇರುತ್ತವೆ.

ಡೇಸಿಯ ಪ್ರಕಾರ ಗಂಡಸರೆಲ್ಲ ಒಳ್ಳೆಯವರೇ. ಒಂದು ದಿನ ಆಕಸ್ಮಿಕವಾಗಿ ರಮಾನಂದ ಡೇಸಿಯ ರೂಮಿಗೆ ನುಗ್ಗಿದನಂತೆ. ಬಾಗಿಲು ತೆಗೆ [illegible]ತ್ತಲೆಯಲ್ಲಿ ಎಂತಹದೋ ಯೋಚಿಸುತ್ತಿದ್ದ ಆತ ಅವಳನ್ನು ಬಂದವನೇ ಬಿಗಿಯಾಗಿ ಅಪ್ಪಿಕೊಂಡನಂತೆ; ತಾನು ಕೂಗಿ ಕೊಳ್ಳಲಿಲ್ಲವಂತೆ! ಅಷ್ಟರ ಮುಂದೆ ಆತ ಏನನ್ನೂ ಮಾಡಲಿಲ್ಲವಂತೆ! ಗೋಳೋ ಎಂದು ಅಳತೊಡಗಿದನಂತೆ! ಸಣ್ಣ ಮಗುವಾಗಿದ್ದರೆ ಅಮ್ಮಿ ಕೊಟ್ಟು ಸುಮ್ಮನಿರಿಸಿಬಿಡುತ್ತಿದ್ದೆ ಎಂದು ಆಕೆ ನಕ್ಕು ಹೇಳಿದ್ದಳು.

''ಯಾಕೆ ಅಳ್ತಿ ರಮಾನಂದ?'' ಎಂದು ಎಷ್ಟೋ ಸಾರಿ ಕೇಳಿದ ಮೇಲೆ -

''ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡು ಹೊಟ್ಟೆಯಲ್ಲಿ ತುಂಬಿಕೋ?'' ಎಂದು ಮತ್ತೆ ಅಳತೊಡಗಿದನಂತೆ. ತನ್ನ ಕಥೆ ಹೇಳಿಕೊಂಡನಂತೆ. ಡೇಸಿ ಹೇಳುವಂತೆ, ಆತ ಸಂಬಂಧಗಳ ಮೂಲಭೂತ ಘಟಕವನ್ನೇ ಅಲುಗಾಡಿಸಿದ್ದ.

ಅವನು ಚಿಕ್ಕವನಿರುವಾಗಿನ ಕಥೆ. ಅವನನ್ನು ಹಾಸಿಗೆಯಲ್ಲಿ ಮಲಗಿಸಿ, ಹೊರಗಿನಿಂದ ಬಾಗಿಲು ಮುಚ್ಚಿ ಚಿಲಕ ಹಾಕಿ ಆತನ ತಾಯಿ ಎಲ್ಲಿಗೋ ಹೋಗುತ್ತಿದ್ದಳಂತೆ. ಹೆದರಿಕೆಯಾಗಿ ಆತ ಕೂಗಿ, ಕೂಗಿ ಉಚ್ಚೆ ಹೊಯ್ದುಕೊಂಡು ಎಚ್ಚರದಪ್ಪಿ ಎಷ್ಟೋ ಸಾರಿ ಬಿದ್ದಿರುತ್ತಿದ್ದನಂತೆ. ಆಮೇಲೆ ಕೆಲವು ದಿನ ತಾಯಿಯನ್ನು ಗಟ್ಟಿಯಾಗಿ ಹಿಡಿದುಕೊಂಡು ಮಲಗಿಕೊಂಡನಂತೆ. ಆದರೆ ಆಕೆ ಯಾವುದೋ ಗುಳಿಗೆ ತಿನಿಸಿ, ಮೂರ್ಛೆ ತರಿಸಿ ತನ್ನ ಆ ಸಂಬಂಧಗಳನ್ನು ಮುಂದುವರಿಸಿದ್ದಳಂತೆ. ಅವನ ಮನಸ್ಸಿನಲ್ಲಿ ಕ್ರಮೇಣ ಅಪನಂಬಿಕೆ, ತಾನು ಯಾರಿಗೂ ಬೇಡಾದವನೆಂಬ ಹತಾಶೆ ಬೆಳೆಯಿತಂತೆ. ಈಗ ತಾನು ಅದರಿಂದ ವಿಮೋಚನೆ ಪಡೆದು ಬದುಕಬಯಸಿದ್ದಾಗಿಯೂ, ತನಗೊಂದು ನಿಜವಾದ ತಾಯಿಯನ್ನು ತಂದು ಕೊಡು ಎಂದೂ ಚಿಕ್ಕ ಮಗುವಿನಂತೆ ಹಠ ಹಿಡಿದನೆಂದು ಡೇಸಿ ಹೇಳಿದಳು. ಮತ್ತು ಅದು ಸಾಧ್ಯವೇ? ಎಂದು ಕೇಳಿದ್ದಳು.

''ನೀನೇ ಆಗಬಹುದಲ್ಲ!'' ಎಂದಿದ್ದೆ.

''ನನಗೀಗ ಇಪ್ಪತ್ತೆಂಟು ವರುಷ'' ಒಂದು ಕ್ಷಣ ತಾಯಿ ಆದೇನು. ಸದಾ ಕಾಲ ಅವನಷ್ಟು ವಯಸ್ಸಿನ ಗಂಡಸಿನೊಂದಿಗೆ ತಾಯಿಯಾಗಿರುವ ತಾಕತ್ತು ನನ್ನದಲ್ಲ'' ಎಂದಿದ್ದಳು.

ರಮಾನಂದನ ಕಥೆ ವಿಶಾಲ ಅರ್ಥದಲ್ಲಿ ಎಲ್ಲರ ಕಥೆಯೂ ಹೌದು. ಸಂಬಂಧಗಳು ತತ್ತರಿಸುತ್ತಲೇ ಇರುತ್ತವೆ. ಜೀವನ ನಡುಗುತ್ತಲೇ ಇರುತ್ತದೆ. ಸಂಬಂಧ ಅಲುಗಿದಾಗ ಎಷ್ಟೋ ಬಾರಿ ನಾವು ಸಾವಿಗೆ ತೆಕ್ಕೆ ಬೀಳುತ್ತೇವೆ. ಸಾವಿಗಿಂತಲೂ ಸಂಬಂಧ ಭಯಾನಕವಾಗುವುದುಂಟು. ಹಾಗಾಗಿ ಆತ್ಮಹತ್ಯೆಯ ಆಚರಣೆ ನಡೆಯುತ್ತಲೇ ಇದೆ.

ಅಣ್ಣನನ್ನು ಕೊಂದು ಅತ್ತಿಗೆಯನ್ನೂ ಇಟ್ಟುಕೊಂಡ ಲಕ್ಷ್ಮಣರಿದ್ದಾರೆ; ಮಗಳಿಗೇ ವಿಷ ಹಾಕಿ ಅಳಿಯನನ್ನು ಇಟ್ಟುಕೊಂಡ ಅತ್ತೆಯಂದಿರಿದ್ದಾರೆ; ಸೊಸೆಯೊಂದಿಗೆ ಮಲಗುವ ಮಾವಂದಿರಿದ್ದಾರೆ. ಸಂಬಂಧಗಳಿಗೆ ರೋಗ ಅಂಟುತ್ತಲೇ ಇರುತ್ತವೆ. ಅದರ ನಿವಾರಣೆಯ ದಂಧೆಯಲ್ಲಿ ಎಷ್ಟೋ ಜನ ಜೀವ ಸವೆಸುತ್ತಾರೆ. ಇನ್ನೆಷ್ಟೋ ಜನ ಸಹಿಸಿಕೊಳ್ಳುತ್ತಾರೆ. ಮತ್ತೆಷ್ಟೋ ಜನ ಸಾವಿನ ಸಂಬಂಧ ಬೆಸೆಯುತ್ತಾರೆ. ಇಪ್ಪತ್ತು ವರುಷಗಳೂ ಒಂದೇ ಕೋಣೆಯಲ್ಲಿ ಒಂದೇ ಹಾಸಿಗೆಯಲ್ಲಿ ಮಲಗಿ, ಹೊರಗೆದ್ದು ಬಂದಾಗ ಅಪರಿಚಿತರಂತೆ ನಡೆದುಕೊಳ್ಳುವುದನ್ನು ನೋಡಿ, ಸಂಬಂಧದ ಕಲ್ಪನೆಯೇ ಮಾನವ ಜೀವನದ ಮಹಾ ದುರಂತ ಅನಿಸಿಕೆಯಾಗಿ ಜಿಡುತ್ತದೆ. ರಮಾನಂದ ಬಂದು ವಿಚಾರದ ಹೊಳೆಯನ್ನೇ ಹರಿಸಿ ಬಿಟ್ಟು ಹೋದ.

ಸಂಜೆ ಮಬ್ಬು ಮೆಲ್ಲಗೆ ಆವರಿಸುತ್ತಿದೆ.

''ಹಲೋ ಸರ್, ಗುಡ್ ಇವನಿಂಗ್'' ಎನ್ನುತ್ತ ಡೇಸಿ ಬಂದಳು.

''ಬನ್ನಿ ಆಫೀಸ್ ಬಿಡ್ತಾ?'' ಎಂದೆ.

''ಏನೋ ಆರಾಂ ಇಲ್ಲವಂತೆ ....''

''ಬಹಳ ಆರಾಂ ಇದ್ದಾಗ ಹಾಗೆ ಅನಿಸುತ್ತದೆ'' ಎನ್ನುತ್ತ ಚಹಕ್ಕೆ ನೀರು ಇಡಲು ಹೋದ.

''ನಾನೇ ಮಾಡ್ತೇನೆ. ನಿಮ್ಮ ಚಹ ನಿಮಗೆ ಬೇಸರ ಬಂದಿರಬಹುದು'' ಎಂದು ತಾನೇ ಮುಂದಾದಳು.

''ಆಫೀಸಿನಲ್ಲಿ ಏನೇನೋ ಸುದ್ದಿ .....'' ಪ್ರಶ್ನಾರ್ಥಕವಾಗಿ ನೋಡಿದಳು.

''ಏನು ಅಂಥದು .....'' ಎಂದೆ.

''ವಾಲಂಟರಿ ರಿಟಾಯರ್‌ಮೆಂಟಿಗೆ ಅರ್ಜಿ ಕೊಟ್ಟಿದ್ದೀರಂತೆ''

''ಹೌದು. ಇಪ್ಪತ್ತು ವರ್ಷಗಳಿಂದ ಮಾಡಿದ್ದೇ ಮಾಡಿ ಬೇಸರ ಬಂದಿದೆ. ನೌಕರಿ ಮಾಡಲು ಉದ್ದೇಶವಿರುತ್ತದೆ. ನನಗೆ ಅಂಥದ್ದೇನೂ ಇಲ್ಲ. ಬ್ಯಾಂಕಿನಲ್ಲಷ್ಟು ಹಣ ಇದೆ. ಆರಾಂ ಆಗಿ ಕುಳಿತು ತುಂಬಾ ಓದಬೇಕೆಂದುಕೊಂಡಿದ್ದೇನೆ ಡೇಸಿ''

ಚಹಾ ಮಾಡಿ ತಂದು ಇಟ್ಟಳು.

''ಆರಾಂ ಅಂತೂ ಇದ್ದೀರಲ್ಲ ಸರಿ'' ಎಂದು ಚಹಾ ಕುಡಿದಾದ ಕಪ್ಪುಗಳನ್ನು ತೊಳೆದಿಟ್ಟು, ''ಟೇಕ ರೆಸ್ಟ್. ಹೋಪ ಟು ಮೀಟ ಯು'' ಎಂದು ಹೊರಟಳು.

ಡೇಸಿಯನ್ನು ನಮ್ಮ ಬಾಸ್ ಇಟ್ಟುಕೊಂಡ ವಿಷಯ ಇಡೀ ಆಫೀಸಿಗೇ ಗೊತ್ತು. ಅವನು ಸದ್ಯ ನಿವೃತ್ತಿಯಾಗುವವನು. ಸಂಬಂಧಕ್ಕೆ ವಯಸ್ಸಿನ ಗಡಿ ಇಲ್ಲ. ಡೇಸಿಯನ್ನು-ನಾನೂ ಕೇಳಬಹುದಿತ್ತು. ಆಕೆ ಎಷ್ಟೋ ಸಾರೆ ನನ್ನ ಕೋಣೆಗೆ ಬಂದಿದ್ದಾಳೆ. ಅವಳು ದಪ್ಪ ಬಿಳಿ ತೊಡೆ ಕಾಣುವ ಹಾಗೆ ಫ್ರಾಕ್ ತೊಡುತ್ತಿದ್ದಳು. ಎದೆಯ ಮಾಟ ಸುಸ್ಪಷ್ಟ ತೋರುವಂತೆ ಅವಳ ಉಡುಗೆ. ಯಾರೂ ಅವಳೊಂದಿಗೆ ಸಂಬಂಧದ ಮಾತು ಎತ್ತುವಷ್ಟು ಎಲ್ಲರೊಂದಿಗೂ ಸಲುಗೆಯಿಂದಿದ್ದಳು.

ಡೇಸಿಯನ್ನು ನೋಡಿದಾಗ ಒಂದು ತರಹದ ಸ್ವಾಭಾವಿಕ ಗಂಡಸಿನ ಭಾವನೆ ನನ್ನಲ್ಲಿ ಆಗೀಗ ತುಂಬಿದ್ದರೂ ಸ್ವಲ್ಪೇ ಹೊತ್ತಿನಲ್ಲಿ ಆಕೆಯ ಬಗ್ಗೆ ಕರುಣೆ ಮಾರ್ದವತೆ ಅನಿಸತೊಡಗುತ್ತದೆ.

ಹೆಣ್ಣು ಎಷ್ಟೇ ಜೋರಾಗಿ ನಡೆದುಕೊಂಡರೂ ಒಂದಷ್ಟು ಮಗುತನ ತುಂಬಿಕೊಂಡಿರುತ್ತದೆ ಎಂದು ನನ್ನ ಭಾವನೆಯಾಗಿತ್ತು.

ಒಮ್ಮೆ ಹೀಗೆಯೇ ಕತ್ತಲಾದ ಮೇಲೆ ಡೇಸಿ ನನ್ನ ರೂಮಿಗೆ ಬಂದಿದ್ದಳು. ನಾನು ರೂಮಿನ ಲೈಟು ಹಾಕಲು ಎದ್ದಾಗ, ಬೇಡವೆಂದು ನನ್ನ ಬಳಿ ನನಗೆ ತಾಗಿಯೇ ಸೋಫಾದ ಮೇಲೆ ಕುಳಿತು -

''ನೀವು ನನಗೆ ಅಣ್ಣನ ಹಾಗೆ ....'' ಅಂದಿದ್ದಳು.

ಹೆಣ್ಣಿಗೆ ಗಂಡನ, ಅಣ್ಣನ ಸ್ಥಾನ ಸುಖದ ಸ್ಥಾನ. ಅಣ್ಣನೆಂದು ನನ್ನನ್ನೂ ಎಚ್ಚರಿಸಿದ್ದಳು. ಅವಳಿಗೇನೋ ದುಃಖವಾಗಿರಬೇಕೆಂದು ಆಗಲೇ ಅನಿಸಿತ್ತು. ದುಃಖದ ಅವಸ್ಥೆ ದಣಿದ ಅವಸ್ಥೆ. ಆಗ ಅವನಿಗಾಗಲೀ, ಅವಳಿಗಾಗಲೀ, ಆತುಕೊಳ್ಳಲು ಒಂದು ಎದೆ ಬೇಕು, ಮಲಗಿಕೊಳ್ಳಲು ಒಂದು ತೊಡೆ ಬೇಕು.

ಅವಳೂ ನನ್ನ ಎದೆಗೆ ಆತುಕೊಂಡಿದ್ದಳು. ಆಗ ಎದೆಯ ಮೇಲೆ ಗುಂಡಿಗಳೆರಡು ಬಿಚ್ಚಿದ್ದವು; ಬಾಬ್ ಹರಡಿತ್ತು. ಆವೇಶ ಆತುರಗಳ ಮನಸ್ಥಿತಿಯಿಂದಾಗಿ ಮುಖ ಸುಡುವಷ್ಟು ಬಿಸಿ



ಕಲ್ಪನಾ

''ಯಾವುದಾದರೂ ಹಳೆಯ ವಿಡಿಯೋ ಕ್ಯಾಸೆಟ್ ಇದ್ರೆ ಕೊಡಿ ಅಮ್ಮಾವ್ರೆ, ... ಹಬ್ಬಕ್ಕೆ ಅಳಿಯ ಬಂದಿದ್ದಾನೆ ....''

ಯಾಗಿತ್ತು. ನನಗೆ ಎಚ್ಚರವಿತ್ತು. ಅವಳಿಗೆ ತಪ್ಪಿತ್ತು. ನನಗೂ ತಪ್ಪಬಾರದೆಂದು ಸ್ವಲ್ಪ ಸರಿಯುವುದರಲ್ಲಿ ''ಚಹಾ ಮಾಡುತ್ತೇನೆ'' ಎಂದೆ.

'ಬೇಡ' ಎಂದು ಏಳುವ ನನ್ನ ಕೈ ಹಿಡಿದು ಕೂಡ್ರಿಸಿದಳು. ನನ್ನನ್ನು ಹಿಡಿದುಕೊಂಡೇ ಒಮ್ಮಿಂದೊಮ್ಮೆಲೇ ''ಏಕೆ ಬಂದೆ ಎಂದು ನನ್ನನ್ನೇಕೆ ಕೇಳುವುದಿಲ್ಲ?'' ಎಂದು ಕೇಳಿದಳು.

ನಾನು ಉತ್ತರಿಸಲಿಲ್ಲ. ನನ್ನ ಕೈಗಳನ್ನು ಗಟ್ಟಿಯಾಗಿ ಹಿಡಿದು, ತನ್ನ ಕಣ್ಣಿಗೆ ಒತ್ತಿಕೊಂಡು ''ನೀನು ಏಕೆ ಅಳುತ್ತಿರುವಿ ಎಂದು ಏಕೆ ಕೇಳುವುದಿಲ್ಲ?'' ಎನ್ನುವಾಗ ಅವಳ ಧ್ವನಿ ಒಣಗಿತ್ತು.

ಆದರೆ ಅಲ್ಲಿ ಕಣ್ಣೀರು ಕಾಣುತ್ತಿರಲಿಲ್ಲ. ಅವಳು ಅಳುತ್ತಿರಲೂಬಹುದು. ನನ್ನ ಕೈಗಳನ್ನು ಬಿಡಿಸಿಕೊಂಡು, ಅವಳ ಕೈ ಹಿಡಿದುಕೊಂಡೆ. ಇನ್ನೊಂದು ಕೈಯಿಂದ ಬೆನ್ನು ಸವರಿದೆ. ಈಗ ನಿಜವಾಗಿಯೂ ಅಳತೊಡಗಿದಳು.

''ಇಂದು ಬಾಸ್ ನನ್ನನ್ನು ಕೊಂದರು .....! ನನಗೆ ಸಾಯುವುದು ಸುಖ ಕೊಟ್ಟಿತು ...... ನನ್ನನ್ನು ಕೆಡಿಸಿದರು. ನನಗೆ ಕೆಡಬೇಕೆನಿಸಿತು'' ಎನ್ನುತ್ತ ಕಣ್ಣೀರನ್ನು ಒರೆಸಿಕೊಂಡಳು.

''...... ಫೈಲು ತರಲು ಹೋಗಿದ್ದೆ ..... ಬೆಳಗಿನವರೆಗೂ ನಿದ್ದೆಗೆಟ್ಟು ಅವರೊಂದಿಗೆ ಮಲಗಿ ಎದ್ದು ಬಂದೆ ..... ಏಕೆ ಮಾತಾಡುವುದಿಲ್ಲ ...'' ಎಂದು ನನ್ನ ಗದ್ದ ಹಿಡಿದು ಅಲುಗಾಡಿಸಿದ್ದಳು. ''ನಾನು ಎಂಟು ವರುಷಗಳ ಹಿಂದೆ ಬಸಿರಾಗಿದ್ದೆ. ಭಯುವಾಗಿತ್ತು. ಹೊಟ್ಟೆ ತೆಗೆಯಿಸಿ ಪುನೀತಳಾದೆ. ಭಯ ಹೋಯಿತು. ಗಂಡಸಿನ ಸಂಬಂಧವೇ ಒಂದು ಭಯವಾಗಿ ಉಳಿದಿತ್ತು. ಈಗ ಹೋಯಿತು. ಯಾಕೆ ನಾನು ಕೆಟ್ಟವಳೇ?'' ನನ್ನ ಭುಜ ಹಿಡಿದು ಅಲುಗಾಡಿಸಿದಳು. ನಾನು ಇನ್ನೂ ಮಾತಾಡುವ ಸ್ಥಿತಿಗೆ ಬಂದಿಲ್ಲ ಅನಿಸುತ್ತಿತ್ತು. ಅಂದಿನ ಅವಳ ಅವಸ್ಥೆ - ನೋವು ಮಾಡಿಕೊಂಡು ಬಂದ ಒಂದು ಮಗುವಿನ ಚಿತ್ರದಂತೆ ತೋರಿತ್ತು. ಅಷ್ಟು ಹೇಳಿ ಅವಳು ಎದ್ದು ಹೋಗಿಬಿಟ್ಟಿದ್ದಳು.

ಆಮೇಲೆ ಅವಳು ಎಷ್ಟೋ ಸಾರೆ ಬಂದಿದ್ದಳು; ಬರುತ್ತಲೇ ಇದ್ದಾಳೆ. ಆ ವಿಷಯ ಮತ್ತೆ ಎತ್ತಲಿಲ್ಲ. ತನಗೆ ಅನಿಸಿದಾಗ ಬರುತ್ತಾಳೆ. ಕೂಡ್ರಬೇಕೆಂದು ಕಂಡಲ್ಲಿ ಕೂಡ್ರುತ್ತಾಳೆ. ಮನಸ್ಸು ಬಂದರೆ ಮಾತು, ಇಲ್ಲವಾದರೆ ಅಲ್ಲಿಯೆ ಬಿದ್ದ ಪುಸ್ತಕ ಎತ್ತಿ ಓದುತ್ತಾಳೆ. ಇದು ತ್ತಾಳೆ. ಕತ್ತಲೆಯಾದರೂ ಹೋಗಬೇಕೆಂಬ ಯೋಚನೆ ಇಲ್ಲದೆ ಕುಳಿತುಬಿಡುತ್ತಾಳೆ.

''ರಾತ್ರಿ ಆಯಿತು ಕಳಿಸಿಕೊಡಬೇಕೇ?'' ಎಂದರೆ 'ಬೇಡ' ಎಂದು ಸಮಾಧಾನದಿಂದ ಹೊರಟುಬಿಡುತ್ತಾಳೆ. ಒಂದು ರೂಮು ಮಾಡಿಕೊಂಡು ಅಸ್ತವ್ಯಸ್ತವಾಗಿ ಇರುತ್ತಾಳೆ. ಹಾಗಿದ್ದ ಬಗ್ಗೆ ಅವಳ ಮನಸ್ಸಿಗೆ ಸಂಕೋಚ, ಕಿರಿಕಿರಿ ಇಲ್ಲ. ನಾನು ನಾಲ್ಕಾರು ಸಾರೆ ಅವಳ ರೂಮಿಗೆ ಹೋಗಿದ್ದೆ. ಒಮ್ಮೆಯೂ ಚಹಾ ಮಾಡಿ ಕೊಡಲಿಲ್ಲ. ಏನೇನೋ ಹೇಳಿ ನಕ್ಕು ಗೇಟಿನವರೆಗೂ ಕಳಿಸಿ ಹೋಗಿದ್ದಾಳೆ.

ಬಹುತೇಕ ಅವಳಿಗೆ ತನ್ನ ಬದುಕಿನ ವ್ಯವಹಾರದ ಬಗ್ಗೆ ಮುಂದಿಯ ಆಸಕ್ತಿ ಬೇಕಿರಲಿಕ್ಕಿಲ್ಲ. ತೃಪ್ತಿಗೂ ಬದುಕಿಗೂ ಸಂಬಂಧ ಕಳಚಿ ಹೋಗಿರಬೇಕು. ಅಥವಾ ಸಮುದ್ರದ ಕಡೆಗೇ ಹೊರಟ ನದಿಗೆ ಸಾವಿನಲ್ಲಿಯೇ ಸೇರುವ ಬದುಕಿನ ಗತಿಗೆ ಅನವಶ್ಯಕ ತೊಡುಗೆಗಳ ಬಂಧನ ಅವಶ್ಯವಿಲ್ಲವೆಂದು ಕೊಂಡಿರಬಹುದು.

ವಿಚಾರದಿಂದ ಹೊರಬಂದು ಲೈಟು ಹಾಕಿದೆ. ಎದುರಿನ ಟೇಬಲ್ಲಿನ ಮೇಲೆ ಬೆಳಗಿನಿಂದ ಬಿದ್ದುಕೊಂಡ ಪತ್ರಗಳನ್ನು ಕೈಗೆತ್ತಿಕೊಂಡೆ.

ಒಂದು: ಎ.ಜಿ. ಆಫೀಸಿನ ಪಿ.ಎಫ್. ಅಕೌಂಟು.

ಎರಡು: 'ಚಿಂತನೆ' ಎಂಬ ಮಾಸಪತ್ರಿಕೆ. ಕನ್ನಡ ರಮ್ಯಪರಂಪರೆಯನ್ನು ಸುಟ್ಟು ಬೂದಿ ಮಾಡಿ, ಪ್ರಗತಿಶೀಲರನ್ನು ಲೇವಡಿ ಮಾಡಿ, ಅಸ್ಮಿತಾವಾದಿಗಳನ್ನು ಷಂಡ ಬುದ್ಧಿಜೀವಿಗಳೆಂದು ಬೈದು ದಲಿತ ಸಾಹಿತ್ಯದ ದೀಕ್ಷೆ ತೊಟ್ಟ ಲೇಖಕರ ಸಾಲಿಗೆ ಸಾಲೇ ಅಲ್ಲಿತ್ತು. ಶೂದ್ರ ಬ್ರಾಹ್ಮಣ್ಯದ ಕಲ್ಪನೆ ಎಂಬ ಲೇಖನವಿತ್ತು. ಸಾಹಿತ್ಯದಿಂದ ಸಾಮಾಜಿಕ ಕ್ರಾಂತಿ ಸಾಧ್ಯವಿಲ್ಲ. ಕೆಲ ದಿನ ಸಾಹಿತಿಗಳು ಸಾಹಿತ್ಯರಚನೆ ಬಿಟ್ಟು ರಾಜಕೀಯಕ್ಕಿಳಿದು ಪೂರ್ಣ ಕ್ರಾಂತಿಯ ನೇತಾರರಾಗಲು ಕರೆಕೊಡಲಾಗಿತ್ತು. ಮುದುಕ ಸಾಹಿತಿಗಳು ಕಾವ್ಯಮಂಚದ ಮೇಲೆ ರತಿಕ್ರೀಡೆಯನ್ನು ತೊರೆದು ಕೆಳಗಿಳಿಯಬೇಕೆಂದು ಸೂಚನೆ ಕೊಡಲಾಗಿತ್ತು. ಚಿಂತನೆಯನ್ನು ಓದುತ್ತ ಸಾಹಿತ್ಯದಲ್ಲಿ ಎಂಥ ರಾಜಕಾರಣ ತುಂಬಿಕೊಂಡಿದೆಯೆಂಬುದು ತಿಳಿಯಿತು. ಯಾವ ಧ್ವನಿಯಲ್ಲೇ ಒದರಿದರೂ ತಮ್ಮ ಅಭಿವ್ಯಕ್ತಿಗೆ ಯೋಗ್ಯ ಉದ್ದೇಶವನ್ನು ಕಂಡುಕೊಳ್ಳಲಾಗದೆ ಒದ್ದಾಡುತ್ತಿರುವ ಚಿತ್ರ ಸ್ಪಷ್ಟವಾಯಿತು.

ತೀರಾ ಭಿನ್ನವಾದ ಅಭಿರುಚಿಗಳ ಸಂಗ್ರಹವೆಂದು ಅದನ್ನು ಜೋಪಾನವಾಗಿ ಬದಿಗಿಟ್ಟೆ.

ಮೂರು: ಅನಂತನ ಮದುವೆ ಆಮಂತ್ರಣ.

''ನಾನು ಅನಂತನೆಂಬ ಹುಡುಗನು ನಾಗಿಯೆಂಬ ಹುಡುಗಿಯನ್ನು ಸ್ವಇಚ್ಛೆಯಿಂದ ಮದುವೆಯಾಗಬೇಕೆಂದಿದ್ದೇನೆ. ಹುಡುಗಿಯ ಒಪ್ಪಿಗೆಯೂ ಇದೆ. ಹುಡುಗಿ ಮೇಜರ್ ಇದ್ದು, ಸ್ವಂತ ನಿರ್ಣಯವನ್ನು ಕಾಯ್ದೆಶೀರ ತೆಗೆದುಕೊಳ್ಳಲು ಬಾಧ್ಯಸ್ಥಳು. ಇದನ್ನು ಮನಸಾ ಪುರಸ್ಕರಿಸುವವರು ಬರಬೇಕು. ಒಪ್ಪಿಗೆ ಇಲ್ಲದವರೂ ಅನುಮಾನವಿದ್ದವರೂ ಬರಬಾರದು. ಮದುವೆಯ ಸ್ಥಳ ಮೇದರಗಲ್ಲಿ. ದಿನಾಂಕ: ಅಗಸ್ಟ 15 ರಾತ್ರಿ ಹನ್ನೆರಡು ಘಂಟೆ.


- ಅನಂತ ಮತ್ತು ನಾಗಿ''

ಅನಂತ ಮೂರು ವರ್ಷಗಳಿಂದ ಪರಿಚಿತ. ಅವನು ಮೊದಲು ಲೋಹಿಯಾ ಶಿಷ್ಯ ಅನ್ನುತ್ತಿದ್ದ. ಈಗ ಜಯಪ್ರಕಾಶರ ಅನುಯಾಯಿ. ಮೂಢನಂಬಿಕೆಗಳ ಬೇರು ಸಹಿತ ಕಿತ್ತು ಹಾಕಬೇಕೆಂದು ಭಾಷಣ ಬಿಗಿಯುತ್ತಿದ್ದ ಅವನ ತಂದೆ ಕಟ್ಟಾ ಮಾಧ್ವ. ಆ ಸಂಪ್ರದಾಯದ ಉಸಿರು ಕಟ್ಟುವ ಪರಿಸರದಿಂದ ಪಾರಾಗಿ ಬಂದು ಕ್ರಾಂತಿಯ ಮಾರ್ಗ ಹಿಡಿಯಬೇಕಾಯಿತು ಎಂದು ಹೇಳಿದ್ದ. ತನ್ನ ಬಗ್ಗೇ ನಿರ್ದಿಷ್ಟತೆ ಇದ್ದ ಹಾಗಿರಲಿಲ್ಲ.

ನನ್ನ ಕಂಡರೆ ಆತನಿಗೆ ಮಾತನಾಡುವ ಲವಲ ವಿಕೆ. ನನಗೆ ಅವನನ್ನು ಕಂಡರೆ ಚೇತನವನ್ನು ಕಂಡಂತಾಗುತ್ತದೆ. ಬದುಕನ್ನು ತೀರಾ ಕ್ಷುಲ್ಲಕ ವೆಂದೂ, ಅದರಾಚೆಯ ಆದರ್ಶವನ್ನು ಹೆಚ್ಚಿಸಿ ಕೊಂಡ ವಿಚಿತ್ರ ಜನ, ಇಂಥವರು ಅಪರೂಪ.

ಚಹ ಬೇಸರ ಬಂದಿತ್ತು. ಒಂದಿಷ್ಟು ಹಾಲು ಕಾಸಿಕೊಂಡು, ಎರಡು ಸ್ಲೈಸ್ ಬ್ರೆಡ್ ಪ್ಲೇಟಿಗೆ ಹಾಕಿಕೊಂಡು ಫಲಾಹಾರ ಮುಗಿಸಿದೆ. ಘಂಟೆ ಹನ್ನೆರಡು ಹೊಡೆದದ್ದು ಕೇಳಿಸಿತು. ಹಾಸಿಗೆಯ ಮೇಲೆ ಬಿದ್ದೆ. ನಿದ್ರೆ ಬಂದದ್ದೇ ಗೊತ್ತಾಗಲಿಲ್ಲ.

ಇಂದು ನಿನ್ನೆಗಿಂತ ಮನಸ್ಸು ಹಗುರಾಗಿತ್ತು. ಕೋಣೆಯ ಸುತ್ತ ನೋಡಿದೆ. ಕಮಲಾದಾಸರ My story ಮತ್ತು ಶಪ್ಪಿ ಬ್ರ್ಯಾಟರ My God died young ಎರಡು ಪುಸ್ತಕಗಳು ಕಂಡವು. ಸೋಫಾದ ಮೇಲೆ ಕುಳಿತು ಓದತೊಡಗಿದೆ. ಸಂಜೆಯ ವೇಳೆಗೆ ಆ ಎರಡೂ– ಪುಸ್ತಕಗಳೂ ಮುಗಿದಿದ್ದವು. ಕಮಲಾದಾಸರಂಥ ನಯ್ಯರ ಹುಡುಗಿ ತನ್ನ ವಿವಾಹ ಬಾಹಿರ ಸಂಬಂಧಗಳನ್ನು ಒಂದಿಷ್ಟೂ ಅಳುಕಿಲ್ಲದೇ ಬರೆದಿದ್ದಳು. ಆದರೆ ಈ ಅನುಭವ ಎಲ್ಲರಲ್ಲಿಯೂ ಪ್ರಭಾವಶಾಲೀ ಘನಿಷ್ಠ ಅನಿಸಿಕೆ ಯಾಗಲಾರದೆಂದು ಭಾವಿಸಿ ಮನಸ್ಸು ನಿಶ್ಚಿಂತವಾಯಿತು.



"ನೀವು ಹೇಳಿದ ಹಲ್ಲು ಕಿತ್ತೋದಕ್ಕೆ ಐವತ್ತು ರೂಪಾಯಿ. ನನಗೆ ಇಷ್ಟವಾದ ಹಲ್ಲು ಕಿತ್ತೋದಕ್ಕೆ ಫೀಜು ತಕ್ಕೊಳ್ಳೋದಿಲ್ಲ ...... ಯಾವುದು ಕೀಳಬೇಕು ಬೇಗ ಹೇಳಿ ....!"

ಚಹ ಕುಡಿಯಬೇಕು. ಎದ್ದು ಸ್ವಿಚ್ ಹಾಕಿ ನೀರಿಟ್ಟು; ಇದ್ದಬಿದ್ದ ಚಹ ಸೊಪ್ಪನ್ನು ನೀರಿಗೆ ಹಾಕಿದೆ. ಹದಮಾಡಿಕೊಂಡು ಒಂದು ಗುಟುಕು ಕುಡಿದ ಮೇಲೆ ನೆತ್ತಿಯ ನರಗಳು ಹೊಸ ಚಟುವಟಿಕೆ ಪ್ರಾರಂಭಿಸಿದವು. ಕಾಲಿಂಗ್ ಬೆಲ್ ಬಾರಿತು. ಬಾಗಿಲು ತೆರೆದೆ. ಬಂದ ವ್ಯಕ್ತಿ ಕೈ ಜೋಡಿಸಿ ನಮಸ್ಕಾರ ಹಾಕಿ "ಗುರುತು ಹತ್ತಲಿಲ್ಲವೇ?" ಎಂದು ನಕ್ಕ.

ಖಾಕಿಯ ಅರ್ಧ ಚಡ್ಡಿ, ಅರ್ಧಾ ತೋಳಿನ ಬಿಳಿ ಅಂಗಿ ಹಾಕಿ, ಚಡ್ಡಿಯೊಳಗೆ ಟೈಟಾಗಿ ಇನ್‌ಶರ್ಟ ಮಾಡಿದ್ದ. ತಲೆಯ ಮೇಲೊಂದು ಕರಿ ಟೋಪಿ. ಆರ್.ಎಸ್.ಎಸ್.ದ ಕಾರ್ಯಕರ್ತನೇ ಎಂಬುದು ಸ್ಪಷ್ಟ ತಿಳಿಯಿತು.

ಮತ್ತೆ ಆತ 'ಗುರುತು ಹತ್ತಲಿಲ್ಲವೇ ನಾನು ಶ್ರೀಕಾಂತ' ಎಂದ

"ಓಹ್ಹೋ! ಶ್ರೀಕಾಂತನೇ, ಬಾರಯ್ಯ ಕುಳ್ತುಕೋ, ಸುಮಾರಾಗಿ ನಾವು ಭೆಟ್ಟಿಯಾಗದೇ ಇಪ್ಪತ್ತು ವರುಷಗಳಾಗಿರಬೇಕು" ಎಂದು ಬೆನ್ನು ಚಪ್ಪರಿಸಿ ಸೋಫಾದ ಮೇಲೆ ಕೂಡ್ರಿಸಿಕೊಂಡೆ.

"ದೀಕ್ಷಾ ಬಂಧನ ಸಮಾರಂಭವಿತ್ತು. ನೆನಪಾಯಿತು. ಈ ಊರಲ್ಲಿ ಇದ್ಧಿ ಎಂದು ಯಾರೋ ಹೇಳಿದ್ದರು."

"ಸಂತೋಷ..... ಇಪ್ಪತ್ತು ವರ್ಷಗಳ ನಂತರವೂ ನಾನು ಬದುಕಿದ್ದೇನೆ ಎಂಬ ನಿನ್ನ ವಿಶ್ವಾಸ ಅಗಾಧವಾದದ್ದು ..... ತಡಿ ಒಂದು ಕಪ್ಪು ಹಾಲು ಕುಡಿ" ಎಂದು ಹಾಲು ತಂದುಕೊಟ್ಟೆ. ಒಂದೇ ಕ್ಷಣದಲ್ಲಿ ತೀರ್ಥ ಕುಡಿದಂತೆ ಕುಡಿದು ಬಿಟ್ಟ.

"ನಿನ್ನನ್ನು ಎಮರ್ಜನ್ಸಿಯಲ್ಲಿ ಹಿಡಿದಿರಬೇಕಲ್ಲ?"

"ಬಿಟ್ಟಾಳೇನಯ್ಯಾ ಆಕೆ. ಹತ್ತು ತಿಂಗಳು

ಒಳಗೇ ಇದ್ದೆ. ನಮಗೆ ಜೈಲಿನಲ್ಲಿದ್ದರೂ ಅಷ್ಟೇ. ಹೊರಗಿದ್ದರೂ ಅಷ್ಟೆ'' ಅಂದ.

''ನೀವು ವರುಷಕ್ಕೆ ಎರಡು ಜತೆ ಚಡ್ಡಿ ಹೊಲಸ್ತೀರೋ, ಅಥವಾ ಒಂದೇ ಜತೆಯೋ?''

''ಆರ್.ಎಸ್.ಎಸ್.ದವರು ಎಂದರೆ ನಿಮಗೆಲ್ಲ ಲಾಠಿ, ಕರಿಟೊಪ್ಪಿ ಅರ್ಧಾ ಚಡ್ಡಿ ಇಷ್ಟೇ ಗೊತ್ತು''

''ಇಲ್ಲಪ್ಪಾ ಇನ್ನೂ ಗೊತ್ತು ..... ರಾಣಾಪ್ರತಾಪ, ಭಗತಸಿಂಗ, ಶಿವಾಜಿ ....''

''ಅದಿರಲಪ್ಪ ಮದುವೆ ಗಿದ್ವೆ ಆಗಿಲ್ಲೇನು? ಯಾರೂ ಇದ್ದಾಂಗೆ ಕಾಣೋದಿಲ್ಲ''

''ಇಲ್ಲ. ಇಲ್ಲ. ಅಪ್ಪನ ಮನೆಗೆ ಹೋಗಿದ್ದಾರೆ'' ಇಪ್ಪತ್ತು ವರುಷದ ನಂತರ ಬಂದ ಸ್ನೇಹಿತನ ಕಾಳಜಿಗೆ ಹಾಸ್ಯ ಮಾಡಬೇಕೆನಿಸಿ ಹೇಳಿದೆ. ನಾನು ರಾತ್ರಿ ನನ್ನ ಖೋಲಿಯಲ್ಲೇ ಉಳಿಯಲು ಆಮಂತ್ರಣವಿತ್ತೆ. ಆದರೆ ತನ್ನ ಶಿಬಿರದಲ್ಲೇ ಉಳಿಯುವುದಾಗಿ ಹೇಳಿದ. ಎಮರ್ಜನ್ಸಿಯಲ್ಲಿ ತಾನು ಗುಲಬರ್ಗಾ ಜೈಲಿನಲ್ಲಿದ್ದೆ ಎಂದು ಅಲ್ಲಿ ಪೊಲೀಸರು ಕೊಡುತ್ತಿದ್ದ ಕಿರುಕುಳ ವಿವರಿಸಿದ. ಆತನಿಗೆ ನಾಲ್ಕು ಗಂಡುಮಕ್ಕಳು ಹೆಂಡತಿ, ಬಾಡಿಗೆ ಮನೆಯಲ್ಲಿರುವುದು ವಗೈರೆ ತಿಳಿಸಿದ. ಜಾತಿ, ಧರ್ಮ, ಪಾಕಿಸ್ತಾನ, ಬಂಗ್ಲಾದೇಶ, ಮನೆ, ತಾಯಿ, ಭಾವ ಇತ್ಯಾದಿ ಸಂಬಂಧ ಏನೇನೋ ಹೇಳಿದ. ಅವನು ಮಾತಾಡುತ್ತಲೇ ಇರುವಾಗ ನೆರೆಮನೆ ಹುಡುಗನಿಂದ ಚಹಾ ಸೊಪ್ಪು ತರಿಸಿದ್ದೆ. ಸಿಗರೇಟು, ಚಹಾದ ಸೇವನೆಯನ್ನು ನಿರಂತರವಾಗಿ ನಡೆಯಿಸಿದ್ದೆ.

''ನೀನು ಜೈಲಿನಲ್ಲಿರುವಾಗ ಮನೆಯವರ ಗತಿ?'' ಎಂದು ಕೇಳಿದ್ದೆ. ''ನೌಕರಿ ಹೋಯಿತು. ಬಾಡಿಗೆ ಮನೆಯವರೂ ಬಿಡಿಸಿದರು. ಸಂಘದ ಸಹಾನುಭೂತಿಯವರು ಅಕ್ಕಿ, ಬೇಳೆ ಎಲ್ಲಾ ಒದಗಿಸಿದರು ..... ನೋಡು ಆ ಕಾಲದಲ್ಲಿ ಹೊರಗಿರುವ ನಾಚಿಕೆಗೇಡಿಗೂ, ಒಳಗಿರುವುದು ಮರ್ಯಾದೆಯ ವಿಷಯವಾಗಿತ್ತು'' ಎಂದ ಆತ. ಆತನ ಎಲ್ಲ ಮಾತಿನಲ್ಲಿಯೂ ಅವನ ನಂಬಿಕೆಯೇ ಸ್ಪಷ್ಟವಾಗಿ ತೋರುತ್ತಿತ್ತು. ಬಹುತೇಕ ಎಂಥ ಸನ್ನಿವೇಶವೂ ಅವರನ್ನು ಬದಲಿಸಲಿಕ್ಕಿಲ್ಲ. ಇತಿಹಾಸ ಮಾಡುವ ಕನಸು ಕಾಣುತ್ತಿದ್ದ. ಸಂಬಂಧಗಳಾವುವೂ ಆತನಿಗೆ ವೈಯಕ್ತಿಕ ಅನಿಸಿಕೆಯಾಗಿ ತೋರಿದ್ದಿಲ್ಲ. ಅವನಂಥವರ ಸಹವಾಸ ಕೆಲವರಿಗೆ ತೀರಾ ಬೋರು. ಕೆಲವರಿಗೆ ಅದೇ ಪರಮ ಸುಖ. ಅವನೊಂದು ಬದುಕಿನ ಸದೃಢ ಟೈಪು ಎಂಬುದು ಖಾತ್ರಿಯಾಗುತ್ತ ಹೋಗಿತ್ತು. ಅನಂತ ಒಂದು ವಿಧವಾದರೆ ಈತ ಇನ್ನೊಂದು ವಿಧ. ಸಾಮಾನ್ಯ ಜನರೆಂದು ಕೊಂಡವರು ಸಾಮೂಹಿಕವಾಗಿ ಹಿಮಾಲಯ ಏರಬಲ್ಲರು. ಸಾವಿರ ಸಾಮಾನ್ಯರ ಬಲಿದಾನದ ರಕ್ತದಲ್ಲಿ ಒಬ್ಬ ಹೀರೋ ಜನ್ಮ ತಾಳುತ್ತಾನೆ. ಇತಿಹಾಸ ಸೃಷ್ಟಿಸಿದ ಒಬ್ಬೊಬ್ಬ ಮಹಾಪುರುಷನ ಹಿಂದೆ ಲಕ್ಷಾನುಲಕ್ಷ ಸಾಮಾನ್ಯರ ರಕ್ತ ಸರೋವರ ಹೊಳೆಯುತ್ತಿರುತ್ತದೆ. ಸಾಮಾನ್ಯರು ಕುಬ್ಜರೇ. ಅವರ ಹೆಗಲು ಹತ್ತಿದವರು ಮಹಾತ್ಮರು.

ಸ್ನೇಹಿತರ, ಆಗದವರ, ಸಂಬಂಧವಿಲ್ಲದವರ ನೂರಾರು ಅಭಿಪ್ರಾಯಗಳು ನನ್ನ ಬಳಿ ಇವೆ. ಆದರೆ ಓರ್ವ ಮಾನವನನ್ನು ಕುರಿತು ಪ್ರಾಣಿಗಳು, ಪಕ್ಷಿಗಳು, ಇರುವೆಗಳು, ಹುಳುಗಳು ಏನು ಹೇಳಿಕೊಳ್ಳುತ್ತವೆ .....!

ಅವನು ಹೊರಡುವ ಹೊತ್ತಾಯಿತು. ಅವನ ಕೈಯಲ್ಲಿ ನೂರು ರೂಪಾಯಿ ಕೊಟ್ಟು ಇದು ಶಿಬಿರಕ್ಕೆ ಕಾಣಿಕೆಯೆಂದೆ. ಅಂಥ ಅಭಿಮಾನವನ್ನೇನೂ ವ್ಯಕ್ತಪಡಿಸಲಿಲ್ಲ. ಹೋಗುವ ಮೊದಲು ಕೈ ಜೋಡಿಸಿದ. ನಾನೂ ಅಷ್ಟೆ ಮಾಡಿದೆ. ನಾಲ್ಕೈದು ದಿನಗಳು ಕಳೆದಿದ್ದವು. 'ಲೆ ಮಿಸರೆಬಲ್'; 'ಜರ್ಮಿನಾಲ್', 'ಮೂಕಜ್ಜಿಯ ಕನಸುಗಳು' ಓದಿ ಮುಗಿಯಿತು. ಆಗೀಗ ಆಫೀಸಿನಿಂದ

ಯೋಗಕ್ಷೇಮ ವಿಚಾರಿಸಲು ಬರುತ್ತಿದ್ದರು. ಬೆಕ್ಕು ಡೈನಿಂಗ್ ಟೇಬಲ್, ಸೋಫಾದ ಬಳಿ ಸುಳಿಯುತ್ತಿತ್ತು. ಅದಕ್ಕೆ ನನ್ನ ಅಡಿಗೆ ಬೇಸರ ಬಂದಿರಬೇಕು. ಅಷ್ಟೇನೂ ಉತ್ಸಾಹದಿಂದ ತಿನ್ನುತ್ತಿರಲಿಲ್ಲ. ಸ್ನೇಹಿತರ, ಆಗದವರ, ಸಂಬಂಧವಿಲ್ಲದವರ ನೂರಾರು ಅಭಿಪ್ರಾಯಗಳು ನನ್ನ ಬಳಿ ಇವೆ. ಆದರೆ ಓರ್ವ ಮಾನವನನ್ನು ಕುರಿತು ಪ್ರಾಣಿಗಳು, ಪಕ್ಷಿಗಳು, ಇರುವೆಗಳು, ಹುಳುಗಳು ಏನು ಹೇಳಿಕೊಳ್ಳುತ್ತವೆ ....! ಈ ಬೆಕ್ಕಿಗೆ ನನ್ನ ಬಗ್ಗೆ ಯಾವ ಅಭಿಪ್ರಾಯವಿದ್ದೀತು? ಎನ್ನುವುದನ್ನು ತಿಳಿಯುವ ಆಸೆ ಈಗೀಗ ಆಗುತ್ತಿದೆ. ಬೆಕ್ಕನ್ನು ಕೈಗೆತ್ತಿಕೊಂಡು ಮುಖದ ಹತ್ತಿರ ಹಿಡಿದುಕೊಂಡಿದ್ದೆ. ಅದರ ಕಣ್ಣಲ್ಲಿ ಗುರುತಿಸುವ ಯಾವ ಲಕ್ಷಣವೂ ಇರಲಿಲ್ಲ.

ಮಧ್ಯೆ ಒಂದು ದಿನ ಫ್ರ್ಯಾನ್ ಬಂದಿದ್ದ. ಕಸ ಗೂಡಿಸಿ, ಅಡಿಗೆ ಮಾಡಿಟ್ಟು ತಾನೂ ಉಂಡಿದ್ದ. ರಮಾನಂದನ ಕಥೆಯನ್ನೂ ಹೇಳಿದ್ದ. ಸರಕಾರ ನೂರು ರೂಪಾಯಿ ಕೊಡುತ್ತದೆ. ಕುಡಿಯಲಿಕ್ಕಾಗುತ್ತದೆಂದು ತನ್ನ ಹದಿನೆಂಟು ವರುಷದ ಮದುವೆ ಆಗಿರದ ಮಗಳಿಗೆ ಆಪರೇಶನ್ ಮಾಡಿಸಿದ ಆತ ತಂದೆಯೇ ಅಲ್ಲ; ವೈರಿ ಎಂದು ಮನಸಾ ಬೈದಿದ್ದ. ಡೇಸಿ ಮತ್ತು ಬಾಸ್‌ನ ವ್ಯವಹಾರ ವಿಪರೀತಕ್ಕಿಳಿದಿದೆಯೆಂದೂ, ಅವರಿಂದ ಸಾಹೇಬರಿಗೂ, ಅಮ್ಮಾವ್ರಿಗೂ ನಿತ್ಯ ಜಗಳ ಎಂಬ ವಿಷಯವನ್ನು ತಿಳಿಸಿದ್ದ. ಹೋಗುವಾಗ ಇಪ್ಪತ್ತು ರೂಪಾಯಿ ತೆಗೆದುಕೊಂಡು ಹೋಗಿದ್ದ.

ಆತ ಹೇಳಿದ್ದೆಲ್ಲ ಸತ್ಯವಾಗಿದ್ದರೆ ಕಳಕಳಿಯ ವ್ಯಕ್ತಿಗೆ ಕೋಪ ಬರಲೇಬೇಕು. ಆದರೆ ನನಗೆ ಹೀಗೆ ಅನಿಸುವುದೇ ಇಲ್ಲ. ಪ್ರತಿಭಟಿಸುವ ಲಕ್ಷಣವೇ ಕಾಣೆಯಾಗಿದೆ. ಉಪಕಾರ, ಸೇವೆ, ಪ್ರತಿಭಟನೆಗಳೆಂದರೇನು ಎನ್ನುವುದೇ ನನಗೆ ಸರಿಯಾಗಿ ತಿಳಿದಿಲ್ಲ. ಕೇಳಿದವರನ್ನು ಕನಿಷ್ಠವಾಗಿ ನೋಡುತ್ತೇವೆ. ಕೇಳದವರಿಗೆ ಕೊಡುವ ಪ್ರಶ್ನೆಯೇ ಬರುವುದಿಲ್ಲ. ನಾವು ಕೊಟ್ಟರೆ ನಾಲ್ಕು ಕಾಸು ಕೊಟ್ಟೇವು, ನನಗಂತೂ ಇದಕ್ಕಿಂತ ದೊಡ್ಡ ಕೆಲಸ ಮಾಡಲು ಬರುವುದಿಲ್ಲ. ಮಹಾತ್ಮರ ಮಹಾತ್ಮ್ಯೆಯೋ, ಅವರಿಗೇ ಸೀಮಿತವಾಗಿ ಉಳಿಯುತ್ತದೆ.

ಅನೇಕ ಪತ್ರಗಳು ಬಂದಿದ್ದವು. ಅವುಗಳಲ್ಲಿ ಒಂದು ನನ್ನ ಸ್ನೇಹಿತನದು. ಅವನ ಮಗಳ ಮದುವೆ ನಿಶ್ಚಯವಾಗಿದ್ದು ನನ್ನ ಸಹಾಯ ಬೇಕೆಂದು ಬರೆದಿದ್ದ. ಮದುವೆ ಖರ್ಚು ಇಪ್ಪತ್ತೈದು ಸಾವಿರವೆಂದು; ನನ್ನ ಹತ್ತಿರ ಏಳು ಸಾವಿರ ಕೇಳಿದ್ದ. ವರದಕ್ಷಿಣೆ ವಿಷಯವಾಗಿ ಬರೆದಿದ್ದ. ತಾನು ಸ್ವತಃ ಅದಕ್ಕೆ ವಿರೋಧಿಯಾಗಿದ್ದರೂ, ಮಗಳಿಗೆ ವಯಸ್ಸಾಗಿದ್ದರಿಂದಲೂ, ಸ್ಥಿತಿವಂತನ ಸಂಬಂಧ ಸಿಕ್ಕಿದ್ದರಿಂದಲೂ ಒಪ್ಪಿದೆ ಎಂದು ಬರೆದಿದ್ದ. ಮಗಳ ಮದುವೆ ವಿಷಯದಲ್ಲಿ ಈ ಪ್ರತಿಭಾವಂತ ವಿಕ್ಷಿಪ್ತನಾಗಲು ಸಿದ್ಧನಿಲ್ಲವೆಂದು ತೋರುತ್ತದೆ.

ಕಪಾಟನ್ನು ತೆರೆದು ಪಾಸ್ ಬುಕ್ ನೋಡಿ ಐದು ಸಾವಿರದ ಒಂದು ಡಿಮಾಂಡ ಡ್ರಾಫ್ಟ್‌ಗೆ ಬರೆದಿಟ್ಟೆ. ಎರಡೇ ಸಾಲಿನ ಒಂದು ಪತ್ರವನ್ನೂ ಬರೆದೆ. ಬಿಸಿಲು ಏರುತ್ತಿತ್ತು. ಯಾವ ವಿಚಾರವೂ ಹೊಟ್ಟೆಯ ಹಸಿವನ್ನು ಹಿಂಗಿಸಲಿಲ್ಲ. ವಿಶೇಷ ಕೆಲಸವೇನಿಲ್ಲ. ಚೆನ್ನಾಗಿ ಅಡಿಗೆ ಮಾಡಿಕೊಂಡು ಕತ್ತರಿಸಿ ಹೊಡೆಯಬೇಕು. ನಮ್ಮ ದೊಡ್ಡ ಕೆಲಸವೇ ಇದು. .... ಅಕ್ಕಿ, ಬೇಳೆ, ಬಟಾಟೆ ಎಲ್ಲಾ ಒಟ್ಟಾಗಿ ಹಾಕಿಟ್ಟಿದ್ದೆ. ಕುದಿಯುತ್ತಿದ್ದವು. ಅಂದರೆ ಎಸರು ಬಂದಿತ್ತು. ಐದು-ಹತ್ತು ನಿಮಿಷದಲ್ಲಿ ಅನ್ನ, ಹುಳಿ, ಪಲ್ಯ ಎಲ್ಲಾ ಆಗುತ್ತದೆ..... ಬೆಕ್ಕು ಎಲ್ಲಿಯೂ ಕಾಣಲಿಲ್ಲ. ಸ್ನೇಹಿತ, ರಮಾನಂದ, ಬಾಸ್, ಫ್ರ್ಯಾನ್ ಎಲ್ಲಾ ತಲೆಯ ಒಳಗಡೆ ಗಡಬಡೆ ಎಬ್ಬಿಸಿ ತೆರಳಿದ್ದರು. ದೋಷವಿರುವುದು ಅವರಲ್ಲಲ್ಲ, ಸಮಾಜದಲ್ಲಲ್ಲ. ಇಬ್ಬರಲ್ಲಿಯೂ ಕಂಟೆಂಟ್ ಸರಿಯಾಗಿ ಇದೆ. ಯೋಗ್ಯ ಕಾಲದಲ್ಲಿ ಸ್ಪರ್ ಆಗುವುದು ಗೊತ್ತಿಲ್ಲ. ಅದಕ್ಕೆ ವರ್ತಮಾನಕ್ಕಿಂತಲೂ ಇತಿಹಾಸ ಬಹು ಮುಖ್ಯ. ಅರ್ಧ ಚಡ್ಡಿಯ ಆತ ಎಮರ್ಜನ್ಸಿಯಲ್ಲಿ ಭೂಗತ ಚಟುವಟಿಕೆಗಳಲ್ಲಿ ತೊಡಗಿದ್ದ. ಅಂಥ


ಐತಿಹಾಸಿಕ ಕಾಲಾವಧಿಗೆ ನನ್ನಂಥವರು ಏನೇನೋ ಮಾಡುತ್ತ ಉಳಿದವು.

ಊಟಕ್ಕಿಲ್ಲದವರು ಮೂಲಭೂತ ಅವಶ್ಯಕತೆಯನ್ನು ಕುರಿತು ಮಾತಾಡುತ್ತಾರೆ. ಊಟಕ್ಕಿದ್ದವರು ಮೂಲಭೂತ ಹಕ್ಕುಗಳನ್ನು ಕುರಿತು ಭಾಷಣ ಬಿಗಿಯುತ್ತಾರೆ. ನನಗೆ ಅನೇಕ ಅಸ್ಪಷ್ಟತೆಗಳಿವೆ; ಅನೇಕ ಆದರ್ಶಗಳೂ ಇರಬೇಕು. ಅನೇಕ ಊನಗಳೂ ಇರಬೇಕು. ನಾನು ಉಳಿದವರಂತೆ ಇದ್ದೇನೆಂಬ ನಂಬುಗೆ, ಕ್ರಾಂತಿಯ ಮಾತು ಕೇಳಿಯೇ ಕ್ರಾಂತಿ ಏಳುವ ಶಕ್ತಿ ಹ್ರಾಸವಾಗಿದೆ. ನನ್ನಲ್ಲೂ ಸಾಮಾನ್ಯರಲ್ಲಿದ್ದುದೇ ಇದೆ. ಅವರ ಹತ್ತಿರವೂ ಹೊಸದಿಲ್ಲ. ನನ್ನ ಹತ್ತಿರವೂ ಅಷ್ಟೆ! ಸುಖ, ದುಃಖದ ಲೆಕ್ಕದಲ್ಲಿದ್ದವರು;

ಉದ್ಧಾರ ಉಪಕಾರದ ಮಬ್ಬಿನಲ್ಲಿದ್ದವರು, ಇಲ್ಲಿ ಏನೂ ಮಾಡಲಿಲ್ಲ.

ಊಟ ಮಾಡಿದ್ದಾರೆ ಅಷ್ಟೇ.

ಅಕ್ಕಿ ಬೇಯ್ದು ಅನ್ನವಾದ ವಾಸನೆ. ಸ್ವಿಚ್ ಆರಿಸುತ್ತೇನೆ. ಅನ್ನ ಮಲ್ಲಿಗೆಯಂತೆ ಅರಳಿದೆ. ಹೆಸರು ಅದರ ಬಣ್ಣ ಕೆಡಿಸಿದೆ. ಬೆಕ್ಕು ಬರಲಿಲ್ಲ.



ಪ್ಲೇಟಿಗೆ ಹಾಕಿಕೊಂಡೆ. ಮನಸ್ಸು, ಬುದ್ಧಿಯೆಲ್ಲಾ ವೇಸ್ಟ್. ಹೊಟ್ಟೆಯೊಂದೇ ಸತ್ಯ; ಅದು ತುಂಬಿದರೆ ಮಾತ್ರ ಕ್ರಾಂತಿ ಮಾಡಬಲ್ಲರು. ಸತ್ಯಕ್ಕೆ, ಪ್ರೇಮಕ್ಕೆ ಉದ್ದೇಶಗಳಿಲ್ಲ. ಅದರಂತೆ ಕ್ರಾಂತಿಗೂ. ಇವೆಲ್ಲ ನಿರುದ್ದೇಶ ಕ್ರಿಯೆಗಳು. ನನ್ನ ಬದುಕು ನಿರುದ್ದೇಶವಾಗುತ್ತಿರುವುದು ನನ್ನಲ್ಲಿ ತೃಪ್ತಿಯನ್ನು ಕೊಡುತ್ತಿದೆ. ಒಂದೇ ಭಯ. ಇದರ ನಿರಂತರತೆ ಉಳಿಯುತ್ತದೆಯೋ ಇಲ್ಲವೋ ಎನ್ನುವುದು. ಉಳಿದವರ ವಿಷಯದಲ್ಲಿ ನನ್ನ ನಿರೀಕ್ಷೆಗಳೇನೂ ಇಲ್ಲ. ಹಾಗಾಗಿ ಯಾವ ಸನ್ನಿವೇಶಗಳೂ ವ್ಯಕ್ತಿಗಳೂ ನನಗೆ ಸವಾಲನ್ನು ಒಡ್ಡುತ್ತಿಲ್ಲ. ಇದು ನನ್ನ ನಿಷ್ಕ್ರಿಯ ಮನೋಭಾವವೇ ಎಂಬ ಸಂಶಯವೂ ಬರುತ್ತದೆ. ಇರಲೂಬಹುದು; ಇರಲಿಕ್ಕಿಲ್ಲ. ಯಾಕೆಂದರೆ ಕ್ರಿಯೆಯೆಂದರೆ ವೈಯಕ್ತಿಕ ಆಸಕ್ತಿಗಳನ್ನು ಪೂರೈಸಿಕೊಳ್ಳುವ ಚಟುವಟಿಕೆಯಲ್ಲ. ಬಯಲಿನಂತಿದ್ದರೆ, ಕಾಡಿನಂತಿದ್ದರೆ, ಸಮುದ್ರದಂತಿದ್ದರೆ, ಆಕಾಶದಂತಿದ್ದರೆ, ಗಾಳಿ-ಬೆಳಕು ಕತ್ತಲೆಯಂತಿದ್ದರೆ, ಬದುಕಿದಂತಾಯಿತು.

ಹಸಿವಾಗಿತ್ತು, ಕಿಚಡಿ ರುಚಿಯಾಗಿತ್ತು. ತೃಪ್ತಿ ಆಯಿತು. ಹೊಟ್ಟೆಯಲ್ಲಿ ಅಂಥ ದಾಹವೇನಿಲ್ಲ. ಬೆಕ್ಕು ಬರಲಿಲ್ಲ.

ಹೊಟ್ಟೆಯಲ್ಲಿ ತಲೆ ಜಾಗಾ ಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಕೇವಲ ಸ್ವಭಾವದ ಬೇಡಿಕೆಗಳನ್ನು ಗಣನೆಗೆ ತೆಗೆದುಕೊಂಡರೆ ಬದುಕು ಸಂತೆಪೇಟೆಯಾಗಲಿಕ್ಕಿಲ್ಲ.

★ ★ ★

ರಜೆ ತೆಗೆದುಕೊಂಡು ಇಂದಿಗೆ ಹತ್ತು ದಿನಗಳಾದವು. ನನ್ನತನದ ವೃತ್ತಿ ಮಿಡಿಯಲಿಕ್ಕೆ ಈ ರಜೆ ತುಂಬಾ ಅನುಕೂಲವಾಗಿದೆ. ಆಫೀಸಿಗೆ ಹೋದರೆ ಅಲ್ಲಿಯ ಕೆಲಸದಲ್ಲಿ ಒಂದು ತರದ ಡಿಸ್‌ಕಂಟ್ಯೂನಿಟಿ ಬಂದು ಬಿಡುತ್ತದೆ. ಸಂಜೆಗೆ ಖೋಲಿಗೆ ಬಂದಾಗ ಮತ್ತೆ ನನ್ನನ್ನು ನಾನು ಕೂಡಿ ಹಾಕಿಕೊಳ್ಳಬೇಕಾಗುತ್ತದೆ. ಪ್ರತಿದಿನ ಇದೇ ದಂಧೆ ಮಾಡಿ ಸಾಕಾಗಿತ್ತು. ಒಂದು ರಾಗ

ಒಂದು ತಾಳದಲ್ಲಿ ಬದುಕು ಸಾಕಾಗುತ್ತದೆ. ನನ್ನ ಬದುಕಿನಲ್ಲಿ ಸುಧಾರಣೆಯ ಮಾತಿಲ್ಲ. ಅದೊಂದು ವಿಲಂಬಿತ ಏಕ ತಾಳದಲ್ಲಿ ಸಾಗುವ ತೋಡಿಯಂತೆ. ಎಷ್ಟೊಂದು ಜನ, ಎಷ್ಟೊಂದು ರೀತಿಯಲ್ಲಿ ಬದುಕಿನಲ್ಲಿ ತೊಡಗಿಕೊಂಡಿದ್ದಾರೆ. ಹಲವು ಬದುಕಿಗೆ ಕೇವಲ ಸಾಕ್ಷಿಯಾಗಿ ನಾನು ಕುಳಿತಿದ್ದೇನೆ. ಪೋಸ್ಟಮನ್ ಒಗೆದ ಪತ್ರವನ್ನು ಕೈಗೆತ್ತಿಕೊಂಡೆ. On All India Service ಎಂದು ಆ ಕವರಿನ ಮೇಲೆಯೇ ಇತ್ತು. ನನ್ನ ಸ್ವಇಚ್ಛಾ ನಿವೃತ್ತಿಯ ಅರ್ಜಿಯನ್ನು ಪುನಃ ಪರಿಶೀಲಿಸಬೇಕೆಂದು ಅದರಲ್ಲಿ ತಿಳಿಸಲಾಗಿತ್ತು. ನನ್ನ ಬಾಸ್ ತಮ್ಮ ಟಿಪ್ಪಣಿಯನ್ನೂ ಅದರ ಸಂಗಡ ಇಟ್ಟಿದ್ದರು. ನನ್ನ ಸೇವಾ ಅವಧಿ ತೃಪ್ತಿಕರವಾಗಿದ್ದು, ಇನ್ನು ಒಂದೆರಡು ವರುಷದಲ್ಲಿ ಮುಂಬಡತಿಗೆ ನಾನು ಅರ್ಹನಾಗುತ್ತೇನೆಂದು ಅದರಲ್ಲಿ ಅರುಹಲಾಗಿತ್ತು. ವಿಚಾರ ಮಾಡುವುದು, ಸರಿಯಾಗಿ ವಿಚಾರ ಮಾಡುವುದು, ಪುನಃ ಪರಿಶೀಲಿಸುವುದು ಇತ್ಯಾದಿ ಪದಗಳ ಯಾವ ಆತ್ಮೀಯ ವ್ಯಕ್ತಿಯೂ ಕಾಣಿಸುತ್ತಿರಲಿಲ್ಲ. ಸರಕಾರೀ ಯಂತ್ರಕ್ಕೂ ಭಾವನೆಗಳಿರಬಹುದೇ ಎಂಬ ಸಂಶಯ ಬರುವಂತಿತ್ತು ಆ ಒಕ್ಕಣಿಕೆ.

ನನಗೆ ನಾಲ್ವತ್ತೈದು ವಯಸ್ಸು. ಸಂಸಾರವಿರಲಿಲ್ಲ. ಮತ್ತೆ ವಿಚಾರ ಮಾಡುವಂಥ ಅವಶ್ಯಕತೆ ಇರಲಿಲ್ಲ. ನನಗೆ ಅತೃಪ್ತಿಯ ಯಾವ ಪ್ರಸಂಗವೂ ಆಫೀಸಿನಲ್ಲಿ ಬಂದಿರಲಿಲ್ಲ. ಅದೊಂದು ಸ್ವಯಂ ನಿರ್ಧಾರ. ಒಂದು ಕ್ಷಣದ ಹುಡುಗಾಟಿಕೆಯ ಪ್ರತಿಕ್ರಿಯೆಯಾಗಿರಲಿಲ್ಲ. ಒಂದು ದೃಷ್ಟಿಯಿಂದ ನಾನು ನೌಕರಿಯಲ್ಲಿ ಉಳಿದದ್ದಕ್ಕೆ ಕಾರಣ ತಲೆ ಕೆಡಿಸಿಕೊಂಡು ಹುಚ್ಚುಚ್ಚಾಗಿ ಬದುಕಬಾರದೆಂಬುದಕ್ಕೆ ಮಾತ್ರ. ಅದರಲ್ಲಿ ಯಾವ ಸೇವಾ ಭಾವನೆಯೂ ಇರಲಿಲ್ಲ. ಊಟದ ಮಾತು ಅದರಲ್ಲಿತ್ತು. ಸರಕಾರೀ ಉದ್ಯೋಗದಲ್ಲಿರುವ ನನ್ನ ಸ್ನೇಹಿತರು ಸ್ಕೇಲು, ಪೇಟೇಜು ಇತ್ಯಾದಿಗಳೆಂದು ಬಡಿದಾಡಿದವರೇ ವಿನಾ, ಪ್ರಾಮಾಣಿಕತೆ, ಅರ್ಹತೆ ಕುರಿತು ಎಂದೂ ಹೆಚ್ಚು ಯೋಚಿಸಿದವರಲ್ಲ. ಟೇಬಲ್ ಕೆಳಗೆ ಕೈ ಚಾಚುವ, ಬೇಕೆಂದಲೇ ಮೋಸ ಮಾಡುವ ಈ ಎರಡು ಪರಿಣತಿಯನ್ನು ಬಿಟ್ಟು ನಾವು ಇನ್ನೇನನ್ನೂ ಸಂಧಿಸಲಿಲ್ಲ. 'ರೆವಿನ್ಯೂ, ಫಾರೆಸ್ಟ್, ಪೊಲೀಸ್ ಈ ಮೂರೂ ಲಂಚದ ಜೇನುಗೂಡು ಕಟ್ಟುವ ಸ್ಥಳಗಳು'' ಎಂದು ನನ್ನ ಸಹೋದ್ಯೋಗಿ ಹೇಳಿದ್ದು ನೆನಪಿಗೆ ಬರುತ್ತದೆ.

ಪತ್ರ ಬದಿಯಲ್ಲಿಯೇ ಬಿದ್ದಿತು. ಅದು ತಾನು ತಿಳಿಸುವುದನ್ನೆಲ್ಲ ತಿಳಿಸಿ ತಟಸ್ಥ ಉಳಿದಿತ್ತು.

ನಾನು ಒಂದು ಕಪ್ಪು ಚಹಾ ಮಾಡಿ ಕುಡಿದು ಕೋಣೆಯಲ್ಲಿ ಶತ-ಪಥ ಹಾಕತೊಡಗಿದೆ. ಶತ-ಪಥ ಹಾಕುವುದೆಂದರೆ ಸಮಸ್ಯೆಯಲ್ಲಿ ಸಿಕ್ಕು ಬಿದ್ದ ಪರಿಸ್ಥಿತಿಯ ಸ್ಪಷ್ಟ ಚಿನ್ಹೆ. ತಲೆಯಲ್ಲಿ ತುಂಬಿದ್ದನ್ನು ದೇಹದ ತುಂಬ ಹರಿಬಿಡುವ ವಿಧಾನ. ನನ್ನ ಮಟ್ಟಿಗೆ ಹೇಳುವುದಾದರೆ ಸಮಸ್ಯೆ, ವಿಚಾರ, ಪರಿಹಾರ ಯಾವುದೂ ತಟ್ಟದಂತೆ ತಿರುಗಾಡುವ ವಿಧಾನ.


ಬಿಸಿಲು ಏರುತ್ತಿತ್ತು.

ಖುರ್ಚಿಯನ್ನು ಬಾಗಿಲ ಹತ್ತಿರ ಎಳೆದುಕೊಂಡು ಕುಳಿತೆ. ಜನ ಬಿಸಿಲಿನ ಹೊಡೆತಕ್ಕೆ ದಣಿದವರಂತೆ ಮಾತನಾಡದೇ ಅಡ್ಡಾಡುತ್ತಿದ್ದರು. ಇದನ್ನೇ ನಾವು Busy ಎನ್ನುತ್ತೇವೆ. At the hour of Death ಎಂಬ ಪುಸ್ತಕವನ್ನು ಹೊಸದಾಗಿ ಪೋಸ್ಟಿನಿಂದ ತರಿಸಿದ್ದೆ. ಓದಬೇಕು. ಈ ಓದುವ ಕೆಲಸ ನಾವೇ ಮಾಡಿಕೊಳ್ಳಬೇಕಾದುದು. ನನ್ನ ನೌಕರಿಯ ಪುನಃ ಪರಿಶೀಲನೆ ಬಗ್ಗೆ ಹಿಂದಿನಿಂದ ನಿರ್ಧಾರ ತೆಗೆದುಕೊಂಡರಾಯಿತು. ಪುಸ್ತಕದ ಮೇಲೆ ಯಥಾಪ್ರಕಾರ ಕೋಣನ ಚಿತ್ರವಿತ್ತು. ಅದರ ಮೇಲೊಬ್ಬ 'ಪಾಶ'ವನ್ನು ಹಿಡಿದುಕೊಂಡು ಕುಳಿತಿದ್ದ. ಕೋಣನಂತೆ ಈ ಯಮನನ್ನೂ ಎಲ್ಲೋ ನೋಡಿರುವ ನೆನಪು. ಈ ಲೋಕದವನೇ. ಜೀವನ ಅನಿಸಿಕೊಳ್ಳಬೇಕಾದರೆ ಪ್ರತಿಕ್ಷಣವೂ ಸಾವಿನ ಎಚ್ಚರವಿರಬೇಕಂತೆ. ಇದು ವಿಚಾರಕ್ಕೆ ಸೇರಿದ ವಿಷಯವಲ್ಲ. ಭಾವನೆಗೆ ಸೇರಿದ್ದು. ಈ ಲೋಕ; ಈ ಲೋಕದ ಮಾತೂ

ಅಷ್ಟೇ. ಸಿದ್ಧಾಂತಕ್ಕೆ ಸೇರಿದ್ದಲ್ಲ; ಮನಸ್ಸಿಗೆ ಸಂದಿದ್ದು. ಒಂದು ಸತ್ಯ. ಅದು ಮನಸ್ಸು ಸುಂದರ, ಅಸುಂದರ ಇದೆ. ಇಲ್ಲಿ ಎಲ್ಲವೂ ಸತ್ಯವೇ. ಹಾಗಾಗಿ ಭೂತ, ಪಿಶಾಚಿ, ಸ್ವರ್ಗ-ನರಕ ಎಲ್ಲಾ ನಾನು, ನೀನು ಎಂದಷ್ಟೇ ಸತ್ಯ. ಈ ಲೋಕದಲ್ಲಿ ಇದ್ದದ್ದು ಎಷ್ಟೋ ಕಾಣುವುದಿಲ್ಲ. ಕಂಡದ್ದು ಕಂಡಂತೆ ಇರುವುದಿಲ್ಲ. ಕಾಣದ್ದೂ ಇರುತ್ತದೆ ಎಂದರೆ ಒಂದು ತತ್ವಜ್ಞಾನ ಹೇಳಿದಂತೆ ಕಂಡೀತು. ನನ್ನ ಮಟ್ಟಿಗೆ ಇದು ಫಿಲಾಸಫಿಯಲ್ಲ; ಲೈಫು. ಪ್ರಮೀಳಾ ಒಬ್ಬಳೇ ಸಾಕು; ಎಲ್ಲವನ್ನೂ ಒಂದೇ ಮಾಡಲು, ಬದುಕನ್ನು ತಿಳಿಸುವ ತಿಳಿಯಲಾಗದಂತೆ ಮಾಡುವ ಅತ್ಯಂತ ಸಮರ್ಥ ಮಾಧ್ಯಮ ಅವಳು. ನನ್ನದೆಂದು ನಾನು ನಂಜಿಕೊಂಡಿದ್ದೂ ಅವನದೆಂದು ಅವನು ತಿಳಿದುಕೊಂಡಿದ್ದೂ ಕೊನೆಯಲ್ಲಿ ಒಂದೇ. ಆ ಲೋಕದ ವಿಷಯವೂ ಅಷ್ಟೆ. ಬಹುತೇಕ ಅಲ್ಲಿಯೂ ಈ ಲೋಕದ ಮಾನಸಿಕ ಅಸ್ತಿತ್ವಗಳೇ ತುಂಬಿಕೊಂಡಿರಬೇಕು.

ಸುಮ್ಮನೇ ಎದ್ದು ಬಂದು ಸೋಫಾದ ಮೇಲೆ ಒರಗಿ ಬಿಡುತ್ತೇನೆ. ಬಾಗಿಲು ತೆರೆದೇ ಇತ್ತು.

ಎದ್ದಾಗ ಕೋಣೆಯ ಒಳಗೆ ಬೆಳಕು ಕಡಿಮೆಯಾಗುತ್ತ ಹೊರಟಿತ್ತು. ಕತ್ತಲೆಯಿರುವುದಿಲ್ಲ; ಬೆಳಕಿಲ್ಲದಾಗ ಕತ್ತಲೆ ಎನ್ನುತ್ತೇವೆ. ಮಲಗುವುದಕ್ಕಿಂತ ಮೊದಲಿದ್ದ ಮನಸ್ಸೇ ಎದ್ದ ಮೇಲೂ ಇತ್ತು. ಈ ಮಾತು ಸತ್ಯವಾದರೆ ಸುಳ್ಳು ಇರುವುದಿಲ್ಲ; ಸತ್ಯವಲ್ಲದ್ದನ್ನು ಸುಳ್ಳು ಎಂದು ಹೇಳುತ್ತೇವೆ. ಪಾಪವಿರುವುದಿಲ್ಲ; ಪುಣ್ಯವಲ್ಲದ್ದನ್ನು ಪಾಪವೆನ್ನುತ್ತೇವೆ. ಯಾವುದನ್ನು ಈ ಲೋಕ ಬಹಳ ದೊಡ್ಡದು ಮಾಡಿ ಮಾನವನ ಬದುಕನ್ನು ಮುಳುಗಿಸಿ ಬಿಡುತ್ತಿದೆಯೋ ಅದು ಇರುವುದಿಲ್ಲ. ಇರುವುದು ಒಂದು. ಅದಿಲ್ಲದಾಗ ನೂರೂ ಆಗುತ್ತದೆ; ಸಾವಿರವೂ ಆಗುತ್ತದೆ. ನಮ್ಮನ್ನು ನಿರಾಶಗೊಳಿಸುವ, ಹತಾಶೆಗೊಳಿಸುವ ಎಲ್ಲವೂ ನಿಷೇಧಾತ್ಮಕವಾದುದು. ಕತ್ತಲೆಯಲ್ಲಿಯೂ ಕಸ ಕಾಣಿಸುವಷ್ಟು ಕೋಣೆ ಹೊಲಸಾಗಿದೆ. ಆ ಪ್ಯೂನ್ ಬಂದಿರಲಿಲ್ಲ. ನಾನೂ ಕಸ ಗೂಡಿಸಿರಲಿಲ್ಲ. ಕಸಗೂಡಿಸಿ ಸ್ವಚ್ಛ ಮಾಡಿಕೊಳ್ಳಬೇಕು. ಊದಿನ ಕಡ್ಡಿಯನ್ನು ಹಚ್ಚಬೇಕು. ಕೋಣೆಯ ವಾತಾವರಣ ಸಿಗರೇಟಿನ ವಾಸನೆಯಿಂದ ಮೊನಾಟನಸ್ ಆಗಿದೆ. ಇನ್ನೊಂದು ವಾಸನೆ ಇನ್ನೊಂದು ಸಂವೇದನೆ. ಬದಲಾಗದಿದ್ದರೂ ಬದಲಾದ ಭಾವನೆ. ಇಷ್ಟು ಚಿಕ್ಕದರಿಂದ ಇಷ್ಟು ಸ್ಥಿತ್ಯಂತರವಾಗುವುದಾದರೆ ಆಗಲಿ ಎಂದು ರೂಮನ್ನು ಸ್ವಚ್ಛ ಮಾಡುತ್ತೇನೆ. ನೆಲ ಉಜ್ಜು



ತ್ತೇನೆ. ಮುಖ ತೊಳೆದು ಬಂದು ಊದಿನ ಕಡ್ಡಿ ಹಚ್ಚುತ್ತೇನೆ. ಲೈಟು ಆರಿಸುತ್ತೇನೆ. ಹೊರಗೆ ತೋಟದಲ್ಲಿ ಬಂದು ಕೂಡ್ರುತ್ತೇನೆ. ಗಿಡಗಳೆಲ್ಲ ದಣಿದು ನಿಂತಿವೆ. ಅವು ನಿಂತಲ್ಲೇ ದಣಿಯುತ್ತವೆ; ಒಣಗುತ್ತವೆ; ಸಾಯುತ್ತವೆ; ಚಿಗುರುತ್ತವೆ. ಕತ್ತಲೆ ದಟ್ಟವಾಗುತ್ತಿದೆ. ರಸ್ತೆ ಲೈಟು ಸರಿಯಾಗಿಲ್ಲ. ಯಾರೋ ಕತ್ತಲೆಯಲ್ಲಿ ಹಾಯ್ದು ಬರುತ್ತಾರೆ. ನೇರವಾಗಿ ನನ್ನ ಖೋಲಿಯೊಳಗೇ ನುಗ್ಗುತ್ತಾನೆ. ಅದೇ ಫ್ರ್ಯಾನ್. ಒಂದೈದು ನಿಮಿಷದ ಹಿಂದೆ ಆತನ ನೆನಪಾಗಿತ್ತು. ನನಗೆ ನಾಚಿಕೆಯಾಗುತ್ತದೆ. ಕಸವನ್ನು ಕಂಡರೆ ಅವನ ನೆನಪು; ಚಂದ್ರನನ್ನು ಕಂಡರೆ ಅವಳ ನೆನಪು; ಬಿರುಗಾಳಿ ಬಂದರೆ ಮತ್ತೊಬ್ಬರ ನೆನಪು; ಸಮುದ್ರವನ್ನು ನೋಡಿದರೆ ಮತ್ತೇನೋ ನೆನಪು. ನಾವು ಎಲ್ಲರನ್ನೂ ಒಂದೇ ಬಗೆಯಿಂದ ನೋಡುತ್ತೇವೆನ್ನುವುದು ಮೋಸ. ನಾವು ಎಲ್ಲ ಹೊತ್ತಿನಲ್ಲೂ ಒಂದೇ ಆಗಿರುವುದಿಲ್ಲವೆನ್ನುವುದು ಸತ್ಯ. ನಾವು ಬದುಕನ್ನು ತುಂಡು ತುಂಡಾಗಿ ಹಿಡಿದುಕೊಂಡವರು. ಆತ ದುಃಖಪಡುತ್ತಿದ್ದ. ನಾನು ನೌಕರಿಗೆ ಹಾಜರಾಗದಿದ್ದಲ್ಲಿ ತಾನೂ ರಾಜೀನಾಮೆ ಕೊಟ್ಟು ಇಲ್ಲೇ ಉಳಿಯುತ್ತೇನೆಂದು ಕಣ್ಣೀರು ಹಾಕಿದ. ಒಳಗೆ ಹೋಗಿ ಚಹಾ ಮಾಡಿ ತಂದು ಕೊಟ್ಟು, ಮರದ ಕತ್ತಲೆಯಲ್ಲಿ ಕುಳಿತುಬಿಟ್ಟ. ನನಗೆ ಮಾತಾಡುವ ಮನಸ್ಸಿರಲಿಲ್ಲ. ಮಾತನ್ನು ಕಂಡರೆ ಅಷ್ಟಾಗಿ ನನಗೆ ಸೇರುವುದೂ ಇಲ್ಲ. ಅವನ ಅಳು, ಧ್ವನಿಗಳೆಲ್ಲ ಆ ಕ್ಷಣದ ಪ್ರಾಮಾಣಿಕತೆಗಳೇ ಆಗಿದ್ದವು. ಈ ಭಾಷೆಯೇ ಹುಟ್ಟದಿದ್ದರೆ ಈ ಜಗತ್ತು ನಿಶ್ಚಿಂತವಾಗಿರುತ್ತಿತ್ತೇ! ಹೆಚ್ಚು ಸರಳ, ಗಂಭೀರವಾಗಿರುತ್ತಿತ್ತೇ. ಅವರವರಿಗೆ ತಿಳಿದಷ್ಟನ್ನು ನಂಬಿಕೊಳ್ಳುತ್ತಿದ್ದರು. ಹೆಚ್ಚು ತಾಳ್ಮೆ ವ್ಯವಧಾನವಿರುತ್ತಿತ್ತು. ತೀವ್ರ ಸಂವೇದನಾಶೀಲನಾದ ವ್ಯಕ್ತಿಗೆ ಬಹಳ ಅನಿಸುತ್ತದೆಯಂತೆ; ಕಡಿಮೆ ತಿಳಿಯುತ್ತದೆಯಂತೆ; ಅದಕ್ಕಿಂತಲೂ ಹೆಚ್ಚಾಗಿ ಆತ ಕಡಿಮೆ ತಿಳಿಸುತ್ತಾನಂತೆ. ಅವನ ದುಃಖ ಬದುಕನ್ನು ಕುದಿವ ಅನಿಸಿಕೆಯಲ್ಲಿ ಚೆಲ್ಲಿಕೊಂಡು ಆತ ಚಡಪಡಿಸುತ್ತಿರುತ್ತಾನಂತೆ. ಹಾಗಾಗಿ ತಿರುತಿರುಗಿ ಅಭಿವ್ಯಕ್ತಿಗಾಗಿ ಪ್ರಯತ್ನಿಸುತ್ತಾನಂತೆ. ಫ್ರ್ಯಾನ್ ಏನೂ ಮಾತಾಡದೇ ಕೈ ಮುಗಿದು ಹೊರಟು ಬಿಟ್ಟ. ನಾನು ಕರೆದೆ. ಕುಡಿಯದೇ ಎಷ್ಟು ದಿನಗಳಾದವೆಂದು ವಿಚಾರಿಸಿದೆ. ಹತ್ತು ರೂಪಾಯಿ ಕೊಟ್ಟು ಚೆನ್ನಾಗಿ ಕುಡಿದು ಬಿಡು ಎಂದು ಹೇಳಿ ಕಳಿಸಿದೆ. ಈ ಲೋಕಕ್ಕೆ ಹಣದ ಅವಶ್ಯಕತೆ ಬಹಳ ಉಂಟು. ಆದುದರಿಂದಲೇ ಹಣವುಳ್ಳವರು ಒಳ್ಳೆಯವರು. ಅವರು ಕೊಡಲಿಲ್ಲವಾದರೂ, ಅವರಿಂದ ನಿರೀಕ್ಷಿಸುವ ಅವಕಾಶ ಜನಕ್ಕೆ ಸದಾ ಇರುತ್ತದೆ.

ಇನ್ನು ಅಡಿಗೆ ಮಾಡಿಕೊಳ್ಳಬೇಕು.

ಒಂದು ಫ್ರಿಜ್ ತೆಗೆದುಕೊಳ್ಳಬೇಕು. ಹೊಟೇಲಿನಿಂದ ಅಡಿಗೆ ತರಿಸಿಟ್ಟರೂ ನಡೆಯುತ್ತದೆ. ಆದರೆ ನನಗಿರುವ ವೇಳೆಯೇ ಹೆಚ್ಚು. ಅಡಿಗೆ, ಚಹಾ ಮಾಡಿಕೊಳ್ಳುವುದು ನನ್ನ ಇಷ್ಟ ಅನ್ನುವುದಕ್ಕಿಂತ ಹೊತ್ತು ಕಳೆಯುವ ರೀತಿ ಎನ್ನಬಹುದು. ಬಟ್ಟೆಯನ್ನು ತೊಳೆದು ಇಸ್ತ್ರಿ ಮಾಡಿಕೊಂಡರೆ ಜೀವನದಲ್ಲಿ ಇನ್ನೂ ಹೆಚ್ಚು ತೊಡಗಿಕೊಂಡಂತಾಗುತ್ತದೆ. ಜೀವನವೆಂದರೂ ಅಷ್ಟೇ; ಅದರಲ್ಲಿ ತೊಡಗಿಕೊಳ್ಳುವುದು ಎಂದರೂ ಅಷ್ಟೇ. ಮನುಷ್ಯನ ಜೀವನವೇ ಒಂದು ಆಲ್ಬಂ. ಒಂದು ಮದುವೆಯದು, ಇನ್ನೊಂದು ಮಸಣದ್ದು.

ಊಟ ಮಾಡಿ ನಾನು ಮಲಗುತ್ತೇನೆ. ನಾನು ಮಲಗಿದೆನೆಂದು ಜಗತ್ತು ತಣ್ಣಗಾಗುವುದಿಲ್ಲ. ನಾಯಿ ಬೊಗಳುತ್ತದೆ. ಎರಡು ಬೆಕ್ಕುಗಳು ಪ್ರಣಯದ ಕರ್ಕಶ ಸ್ವರ ಮಾಡುತ್ತಿವೆ. ನಮ್ಮ ಬೆಕ್ಕು ಇರಬಹುದು. ಅದು ಗಂಡೋ ಹೆಣ್ಣೋ ಗೊತ್ತಿಲ್ಲ. ಹೆಣ್ಣಾದುದರಿಂದ ಮನೆಯಲ್ಲಿದ್ದಿರಬೇಕು; ಗಂಡಾಗಿದರೆ ಊರೆಲ್ಲ ವ್ಯವಹಾರ. ಈಗೀಗ ಅದು ತಿನ್ನುವುದನ್ನು ಬಿಟ್ಟಿದೆ. ಅದರ ಲಕ್ಷ್ಯ ಮತ್ತೆಲ್ಲೋ ಹೋಗಿರಬೇಕು. ಕತ್ತೆಗಳು ರಸ್ತೆಯಲ್ಲಿ ಓಡುತ್ತಿರುವುದು ಕೇಳಿಸುತ್ತದೆ. ಅವು ಓಡುವಾಗ ಸುಮ್ಮನೆ ಓಡುವುದಿಲ್ಲ. ಮಹಾಧ್ವನಿ ಮಾಡುತ್ತವೆ. ಯಾರೋ ಈ ಮಧ್ಯದಲ್ಲಿಯೇ

ಸಿಳ್ಳು ಹೊಡೆಯುತ್ತಿದ್ದಾರೆ. ಸಿನಿಮಾ ಬಿಟ್ಟಿರ ಬೇಕು. ರಸ್ತೆಯಲ್ಲಿ ಗುಜುಗುಜು ಸಪ್ಪಳ. ಸರ್ಕಾರದ ಪತ್ರ ನೆನಪಾಗುತ್ತದೆ. ನಾನು ಸ್ವಇಚ್ಛೆಯ ನಿವೃತ್ತಿ ಬಯಸಿದ್ದು ಸ್ವಾರ್ಥವಿರಬಹುದು. ನನಗೆ ಜವಾಬ್ದಾರಿ ಇಲ್ಲ ನಿಜ. ಆದರೆ ಕೆಲಸದಿಂದ ತಪ್ಪಿಸಿಕೊಂಡಿದ್ದು ಸರಿಯಲ್ಲವೇನೋ. ಒಮ್ಮೆ ಸುಮ್ಮನಿದ್ದುಬಿಡಬೇಕು ಎನಿಸುತ್ತದೆ. ಈ ಪ್ಯೂನ್, ರಮಾನಂದ, ಶ್ರೀಕಾಂತ ಮತ್ತು ನನ್ನ ಸ್ನೇಹಿತರು ಹೀಗೇ ಎಷ್ಟೋ ಜನರಿದ್ದಾರೆ. ಯಾವುದೇ ಭಾವನೆಯಿಲ್ಲದೇ ಇವರಿಗೆ ನಾನು ಹಣ ಕೊಟ್ಟುಬಿಡಬಹುದು. ನನಗೆ ಸಾಕಾಗಿರ ಬಹುದು. ಆದರೆ ತಮ್ಮ ಅತಿ ಅವಶ್ಯಕತೆಗೂ ಹಣವಿಲ್ಲದವರಿದ್ದಾರೆ. ಹೀಗೆ ವಿಚಾರ ಮಾಡು ವುದು ಸರಿಯಲ್ಲವೇನೋ? ನನ್ನ ವಿಚಾರದಲ್ಲಿ ದೊಡ್ಡ ಅಜ್ಞಾನಿ. ನಮ್ಮ ಕಥೆಯನ್ನು ಹೇಳುವು ದಕ್ಕೆ ನೂರು ಜನ ಇದ್ದಾರೆ. ಆದುದರಿಂದ ನಾವು ದೊಡ್ಡವರೂ ಸಣ್ಣವರೂ ಆಗಿದ್ದೇವೆ. ಪಾಪಿಷ್ಠರೂ, ಪುಣ್ಯಾತ್ಮರೂ ಎಂದು ಪ್ರಸಿದ್ಧರಾಗಿದ್ದೇವೆ.

★ ★ ★

ಸ್ನಾನ ಮಾಡಿದರೂ ಮನಸ್ಸಿನ ಮೇಲಿನ ಧೂಳು ತೊಳೆದು ಹೋಗಿರಲಿಲ್ಲ. ಬೆಳಗಿನ ಒಂಬತ್ತು ಹೊಡೆದರೂ ಬಿದ್ದುಕೊಂಡಿದ್ದೆ. ನನ್ನನ್ನು ಕೂಗಿ ಎಚ್ಚರಿಸುವವರು ಯಾರೂ ಇದ್ದಿಲ್ಲ. ಯಾರಿಗಾಗಿಯೂ ನಾನು ಗಡಬಡಿಸಿ ಏಳಬೇಕಾದದ್ದಿರಲಿಲ್ಲ. ಕಣ್ಣು ತೆರೆದರೆ ಎಚ್ಚರವಲ್ಲ. ಕಿಟಕಿಯಿಂದ ಪೇಪರನ್ನು ಒಳ ನುಗ್ಗಿಸಿ ಹೋದ. ಅದು ನೆಲದ ಮೇಲೆ ತಟಸ್ಥವಾಗಿ

> *ನಾನು ಒಂದು ಕಪ್ಪು ಚಹಾ ಮಾಡಿ ಕುಡಿದು ಕೋಣೆಯಲ್ಲಿ ಶತ-ಪಥ ಹಾಕತೊಡಗಿದೆ. ಶತಪಥ ಹಾಕುವುದೆಂದರೆ ಸಮಸ್ಯೆಯಲ್ಲಿ ಸಿಕ್ಕು ಬಿದ್ದ ಪರಿಸ್ಥಿತಿಯ ಸ್ಪಷ್ಟ ಚಿಹ್ನೆ. ತಲೆಯಲ್ಲಿ ತುಂಬಿದ್ದನ್ನು ದೇಹದ ತುಂಬ ಹರಿಬಿಡುವ ವಿಧಾನ.*

ಕೊರತೆಯಿರುವುದು ಸಾಧ್ಯವಿದೆ. ಸೂಪರ್ ಸೃಷ್ಟಿ ನನ್ನ ಉದ್ದೇಶವೇ ಅಲ್ಲ.

ಎದ್ದು ಕೂಡುತ್ತೇನೆ. ಸಿಗರೇಟು ಹಚ್ಚುತ್ತೇನೆ. ಕಿಟಕಿಯ ಸರಳ ಮೇಲೆ ಬೆಳಕು ಬಿದ್ದಿತ್ತು. ಅದೇ ಸರಳಿನ ಮೇಲೆ ಒಂದು ದೊಡ್ಡ ತೋಳಂ ಭಟ್ಟ ಮೀಸೆ ಅಲುಗಾಡಿಸುತ್ತ ಕುಳಿತಿತ್ತು. ಮೀಸೆಗಿಂತ ಅದರ ನೆರಳು ನೆಲದ ಮೇಲೆ ಬಹು ದೊಡ್ಡದಾಗಿ ಬಿದ್ದಿತ್ತು. ಅದು ನನ್ನೊಡನೆ ವ್ಯವಹರಿಸುವುದಿಲ್ಲ. ಅದರ ನೋವು ಸುಖ ವೈಚಾರಿಕತೆಗಳು ನನಗೆ ಗೊತ್ತಿಲ್ಲ. ಒಂದು ಹೆಣ್ಣು ಅದಕ್ಕೂ ದ್ರೋಹ ಬಗೆದಿರಬಹುದು. ದಕ್ಷ-ಸ್ನೇಹಿತ ಅದನ್ನೂ ಹೊತ್ತುಕೊಂಡು ಹೋಗಿರಬಹುದು. ಮೀಸೆ ದಾಡಿ ಅಲುಗಾಡಿಸುತ್ತಿದೆಯಷ್ಟೆ. ಒಂದು ಹುಳು ಬಾಯಲ್ಲಿ ಸಿಕ್ಕು ಆಮೇಲೆ ತಪ್ಪಿಸಿಕೊಂಡಿರ ಬಹುದು. ಅದರ ಜಗತ್ತಿನ ವಿಷಯದಲ್ಲಿ ನಾನು ಬಿದ್ದಿತ್ತು. ಮತ್ತೆ ಒಂದು ತಾಸಿನ ಮೇಲೆ ಪೋಸ್ಟ ಮನ್ ಕಾಗದಗಳನ್ನು ಅದೇ ಸಂದಿಯಿಂದ ತುರುಕಿದ. ಅದು ಅಲ್ಲಿಯೇ ಬಿದ್ದಿತು. ಹೇಗೂ ಅವು ಅಲ್ಲಿಯೇ ಬಿದ್ದಿರುತ್ತವೆ. ನಾನು ಓದಿದರೂ ಅವುಗಳಲ್ಲಿಯ ವಿಷಯ ಹಾಗೆಯೇ ಉಳಿಯುತ್ತದೆ.

ಬದಲಿಸುವ ಮನಸ್ಸು ನನಗಿಲ್ಲ; ಬದುಕುವ ಇಷ್ಟವೂ ಇಲ್ಲ. ನನ್ನ ಬದುಕು ಒಂದು ಮುಗಿದ ಪ್ರಕರಣದಂತೇ ತೋರುತ್ತಿದೆ. ದಿನದಿಂದ ದಿನಕ್ಕೆ ನನ್ನ ಹೃದಯ ಸ್ಪಂದಿಸುವುದನ್ನೇ ನಿಲ್ಲಿಸುತ್ತಾ ಹೋಗಿದೆ. ಒಂದು ದಿನ ಖಾಲೀ ಡಬ್ಬದಂತಾದೀತು. ಒಣ ಮರವೊಂದು ಬೈಲಿನಲ್ಲಿ ನಿಂತಂತೆ ನಾನು ಬದುಕಿದ್ದೇನೆ. ಸೋತಾಗ ಹಕ್ಕಿಗಳು ಅಲ್ಲಿ ಕೂಡುತ್ತವೆಯಷ್ಟೇ. ಬೆಳಕನ್ನು ಕಳೆದುಕೊಂಡು ಕಣ್ಣಿನ ಹರಳಿನಿಂದ ನಾನು ಜಗತ್ತನ್ನು ನೋಡುತ್ತಿರುವಂತಿದೆ - ಇದೊಂದು ಅರ್ಥಹೀನ ನಿರಂತರ

ಚಟುವಟಿಕೆಯಾಗುತ್ತಾ ನಡೆದಿದೆ. ಉಳಿದವರೊಂದಿಗೆ ಭಾವನೆಯನ್ನಷ್ಟೇ ಅಲ್ಲ; ವಿಚಾರವನ್ನೂ ವಿನಿಮಯ ಮಾಡಿಕೊಳ್ಳಲಾಗದ ಘಟ್ಟದ ಹತ್ತಿರ ಹತ್ತಿರ ಬರುತ್ತಿದ್ದೇನೆ. ಅನೇಕ ಘಟನೆಗಳ ಮಧ್ಯೆ ಮುಖ ಎಬ್ಬಿಸಿಕೊಂಡು ಕುಳಿತ ಗೂಗೆಯಂತೆ ನಾನು ದಿನಗಳನ್ನು ಕಳೆಯುತ್ತಿದ್ದೇನೆ.

ಇಂದು ಬೆಳಗಿನಿಂದ ಇಲ್ಲಿಯವರೆಗೆ ನಾನು ಮಾಡಿದ ದಂಧೆ ಒಂದೇ: ಅದು ನಿನ್ನೆ ಸ್ವಚ್ಛ ಮಾಡಿಟ್ಟ ರೂಮನ್ನು ಹೊಲಸು ಮಾಡುವುದು. ಸಿಗರೇಟಿನ ಹೆಣಗಳು ರಾಶಿರಾಶಿಯಾಗಿ ಬಿದ್ದಿವೆ. ಕೋಣೆಯ ಹೊರಗೆ ಕಿರಣಗಳು ಬಾಡಿವೆ. ಕ್ರಮೇಣ ನೆರಳುಗಳು ಉದ್ದವಾಗುತ್ತ ಹೊರಟವು. ಮರಗಳು ಆಗೊಮ್ಮೆ ಈಗೊಮ್ಮೆ ಹೌದೋ ಅಲ್ಲವೋ ಅನ್ನುವ ಹಾಗೆ ತಲೆ ಹಾಕುತ್ತಿವೆ. ಹೂವಿನ ಗಿಡಗಳು ಹೂವಿನ ಆಸೆಯನ್ನು ಸಂಪೂರ್ಣ ತೊರೆದು, ಹೊಸ ಹರೆಗೆಯ ತಪಸ್ಸಿನಲ್ಲಿ ನಿಂತಿವೆ. ಕೇವಲ ಸಿಗರೇಟು ಸೇದಿದ್ದೆ. ಬೆಳಗಿನಿಂದ ಮತ್ತೆ ಚಹಾ ತೆಗೆದುಕೊಂಡಿರಲಿಲ್ಲ. ಕೋಣೆ ಲೈಟು ಹಾಕಿದೆ. ಮತ್ತೆ ನಂದಿಸಿದೆ. ಕತ್ತಲೆ ವೇಗವಾಗಿ ಮುಸುಕುತ್ತಿತ್ತು. ಬಾಗಿಲು ತೆರೆದೇ ಇತ್ತು. ದೂರದ ರಸ್ತೆಯಲ್ಲಿ ಅಪರಿಚಿತರ ಅಪರಿಚಿತ ಧ್ವನಿಗಳು ಕೇಳಿ ಬರುತ್ತಿದ್ದವು. ಸಂಬಂಧವಿಲ್ಲದವರೂ ಆಕಸ್ಮಿಕ ಭೇಟಿಗಳಲ್ಲಿ ನೂರು ಮಾತನಾಡಿರುತ್ತಾರೆ; ಸಂಬಂಧವಿದ್ದವರು ಮಾತು ಬಿಟ್ಟಿರುತ್ತಾರೆ. ನಾವು ಬಿಟ್ಟೆವಾದರೆ ಯಾವ ಸಂಬಂಧವೂ ನಮ್ಮನ್ನು ತಳ ಹಿಡಿದು ಅಲುಗಿಸುವುದಿಲ್ಲ. ಅಂಥ ಒಂದು ಸಂಬಂಧ ಬಹುತೇಕ ಸಾವೇ ಇರಬೇಕು. ಸಂಬಂಧವಿಲ್ಲದಾಗಲೂ ಅಳುಯಿಸುವ ಅಲುಗಾಡಿಸುವ ತಾಕತ್ತೇ ಅದರದು. ನನಗೆ 'ಸಾವು-ಸಂಬಂಧ'ದ ವಿಷಯ ಒಟ್ಟಾಗಿಯೇ ಬರುತ್ತದೆ. ಅದಕ್ಕೆ ಪ್ರಮೇಳ ಕಾರಣಳಿರಬೇಕು. ನಾನು ಎರಡರಿಂದಲೂ ತಪ್ಪಿಸಿಕೊಂಡು ಬದುಕಿದ್ದೇನೆ. ಅದರಿಂದ ಹೀಗೆ ಬದುಕುತ್ತಿರಬೇಕು. ಬಿಟ್ಟರೆ ಬಿಟ್ಟು ಬಿಡುವ ಈ ಜನಸಮೂಹ ಸಂಬಂಧಿಸಿದ್ದಲ್ಲ. ಹಾಗಾಗಿ ಅವರ ಕಥೆಯನ್ನು ನಾನು ಕೇಳುತ್ತೇನೆ. ತೀರ್ಮಾನಕ್ಕೆ ಬೇಕಾಗುವಷ್ಟು ಸಂಬಂಧ ಅಲ್ಲಿಲ್ಲ. ಪ್ರೇಮಕ್ಕಾಗಿ ಸಾಯುವುದು ಬದುಕುವುದಕ್ಕಿಂತ ಹಿಡಿಸುತ್ತಿರಬೇಕು. ಪ್ರೇಮವನ್ನು ಕಳಚಿಕೊಂಡು ಬದುಕು ನಮಗೆ ಅಂಟುವುದಿಲ್ಲ. ನಾವು ಅಂಟಿಕೊಳ್ಳಬೇಕು. ಬಿಡುವುದನ್ನು ಚಟ ಮಾಡಿಕೊಂಡ ನನಗೆ ಹಿಡಿಯುವುದು ತಪಸ್ಸಾಗಿದೆ; ಸಣ್ಣ ಹುಡುಗನೊಬ್ಬ ಅಡವಿಯಲ್ಲಿ ಅಡ್ಡಾಡಿದಂತಾಗಿದೆ.

ಕೋಣೆಯಲ್ಲಿ ಕತ್ತಲೆಯಿದ್ದರೂ ಅದರ ಹೊರಗೆ ಬೆಳಕಿತ್ತು. ಯಾರೋ ಕಂಪೌಂಡಿನ ಗೇಟು ತೆಗೆದು ಒಳಗೆ ಬಂದು ನಿಂತರು. ಅವಳು ಡೇಸಿ ಎನ್ನುವುದು ನನಗೆ ಗುರುತಾಯಿತು. ಅವಳು ಬಟ್ಟೆ ಹಾಕಿಕೊಳ್ಳುವುದಕ್ಕೆ ಅರ್ಥವಿರಲಿಲ್ಲ. ಅವಳು ದುಂಡಗೆ ಬಂದಿದ್ದರೂ ಅಷ್ಟೇ ಭೀಕರ ಕಾಣುತ್ತಿದ್ದಳು!

''ಎಲ್ಲಿ ಕುಳಿತಿದ್ದೀರಿ?'' ಮೆಲ್ಲಗೆ ಕಾಲಿಟ್ಟಳು.

''ಇಲ್ಲಿ.'' ಎಂದೆ.

''ಲೈಟು ಹಾಕಲೇ?''

''ಬೇಡ!''

''ಜನ, ಕತ್ತಲೆಯಲ್ಲಿ ಕುಳಿತರೆ ಸಂಶಯಪಡುತ್ತಾರೆ.''

''ಪಡಲಿ''

''ಬೇಡ. ನಾನು ಲೈಟು ಹಾಕುತ್ತೇನೆ.''

''ನಾನು ನಿನ್ನನ್ನು ನೋಡಿಯಾಗಿದೆ!''

ನನಗೆ ನನ್ನ ಮಾತನ್ನು ಒಂದು ಕಡೆ ನಿಲ್ಲಿಸಬೇಕಿತ್ತು. ಎದ್ದು.ಲೈಟು ಹಾಕಿದೆ. ನನ್ನ ಆ ಮನಸ್ಥಿತಿಯಲ್ಲಿ ಡೇಸಿಗೆ ಎಳ್ಳಷ್ಟೂ ಕರುಣೆಯಿರಲಿಲ್ಲ. ನಾನು ಅವಳೊಂದಿಗೆ ಆಕಸ್ಮಿಕಕ್ಕೆ ಬಲಿಯಾಗಲು ಸಿದ್ಧನಿರಲಿಲ್ಲ. ಅಂಥ ವಾತಾವರಣ ಸೃಷ್ಟಿಗೆ ಎಂದೂ ಕೈ ಹಾಕಿರಲಿಲ್ಲ. ಈ ಹೊತ್ತೇ ತಲೆ ವಿಚಿತ್ರವಾಗಿ ವರ್ತಿಸಿತು. ಲೈಟು ಹಾಕಿದ ಮೇಲೆ ನನಗೆ ನಾನು ಕಾಣಿಸಿದೆ. ಡೇಸಿ ಸೋಫಾದ ಮೇಲೆ ಕುಳಿತಳು.

''ನಾನು ಕಾಲೇಜಿನಲ್ಲಿ ಕಲಿಯುವಾಗ

ಶಕೀಲಾ ಎಂಬ ಗೆಳತಿಯಿದ್ದಳು. ಅವಳು ಹಾಸ್ಟೆಲಿನಲ್ಲಿ ಯಾವಾಗಲೂ ಕತ್ತಲೆಯಲ್ಲಿ ಕುಳಿತಿರುತ್ತಿದ್ದಳು. ತನ್ನ ಪ್ರೊಫೆಸರನನ್ನು ಪ್ರೀತಿಸಿ, ನಂಬಿ ನಿರಾಶೆ ಹೊಂದಿ ತುಂಬಾ ಮೂಡಿ ಆಗಿಬಿಟ್ಟಿದ್ದಳು! ಪ್ರೀತಿಸಿ ತಪ್ಪಿಹೋಗುವುದು ಹೃದ್ರಾವಕ .....!'' ಎಂದು ಆಕೆ ನನ್ನ ಮುಖ ನೋಡಿದಳು.

''ಎಲ್ಲರಿಗೂ ಅಲ್ಲ. ಪ್ರೀತಿ ಮಾಡುವಾಗ ಆಯ್ಕೆ ಮಾಡುತ್ತಾರೆ; ಪ್ರೀತಿಸಿದ ಮೇಲೂ ವಿಚಾರ ಮಾಡುತ್ತಾರೆ. ..... ಅಂಥವರಿಗೆ ಪ್ರೀತಿಸುವುದು, ಮತ್ತು ಬಿಡುವುದು ಒಂದೊಂದು ಹಂತವಷ್ಟೇ .....!''

''ಬಹಳ ದಣಿದವರ ಹಾಗೆ ಕಾಣುತ್ತೀರಿ. ರೂಮಿನ ಬಾಗಿಲು ಹಾಕಿಕೊಂಡೇ ಇತ್ತು ಎಂದು ಕೇಳಿದೆ .....''

''ಮುಖ್ಯವಾಗಿ ಬಹಳ ಹೊತ್ತಿನಿಂದ ಚಹಾ ಕುಡಿಯಲಿಲ್ಲ ಅದಕ್ಕೆ ಹೀಗೆಲ್ಲ'' ಎಂದು ಸ್ಟೋವಿನ ಬಳಿ ಹೋದೆ. ಆಕೆಯೂ ಸೋಫಾ ಬಿಟ್ಟು ನನ್ನ ಹಿಂದೇ ಬಂದಳು.

''ನಿಮಗೆ ಗೊತ್ತಿದ್ದಂತೆ ಕಾಣುವುದಿಲ್ಲ.'' ಎಂದು ಸ್ವಲ್ಪ ತಡೆದು ..... ''ಬಾಸನ ಹೆಂಡತಿ ನಿನ್ನೆ ರಾತ್ರಿ ಬಾವಿ ಹಾರಿಕೊಂಡಳಂತೆ..... ಆದುದರಿಂದ ನಾನು ಬೆಳಗಿನಿಂದ ಏನೂ ತೆಗೆದುಕೊಳ್ಳಲಿಲ್ಲ. ಸತ್ತವರ ಬಗ್ಗೆ ದುಃಖವಾಗುತ್ತದೆ. ನನಗೆ ಸಂಬಂಧವಿರಲಿ ಬಿಡಲಿ .....'' ನಾನು ಸ್ವಿಚ್ ಒತ್ತುತ್ತಿದ್ದವ ''ಹಾಂ!'' ಎಂದೆ.

''ಆಕೆಗೆ ನಲವತ್ತೈದು ವರುಷವಾಗಿರಬಹುದು. ಬಾಸನ ಜೀವನದಲ್ಲಿ ನಾನೊಬ್ಬಳೇ ಹೆಣ್ಣಿರಲಿಕ್ಕಿಲ್ಲ ......! ಬೆಳಗಿನ ಜಾವ ಹೋಗಿದ್ದೆ. ಜನ ಬಹಳ ಸೇರಿದ್ದರು. ಪೊಲೀಸ್ ಜೀಪೂ ಇತ್ತು! ಅದಾವುದೋ ಡೇಸಿ ಎಂಬ ರಂಡೆಯ ದೆಸೆಯಿಂದ...... ಎಂಬ ಪಿಸು ಮಾತು ನನ್ನ ಕಿವಿಗೂ ಬಿದ್ದಿತು. ನಾನು ಸುಮ್ಮನೇ ತಿರುಗಿ ಬಂದೆ .....'' ಆಕೆಯ ಧ್ವನಿಯಲ್ಲಿ ಸಿಟ್ಟು ಸೇರಿಕೊಳ್ಳುತ್ತ ಹೊರಟಿತ್ತು. ಮೊದಲು ದುಃಖವಿತ್ತು. ಅದು ಸಿಟ್ಟಾಯಿತು. ಆಕೆ ಸೋಫಾಕ್ಕೆ ಬಂದು ಕುಳಿತಳು.

''ಅಲ್ಲಿ ಸೇರಿರುವ ಜನಕ್ಕೆ ನಮ್ಮ ಬಾಸನನ್ನು ಕಂಡರೆ ಪ್ರೀತಿ ಇರುವುದೂ ಸುಳ್ಳು; ಅಲ್ಲಿ ಸೇರಿದ ಜನಕ್ಕೆ ಆಕೆಯನ್ನು ಕಂಡರೆ ಪ್ರೀತಿ ಇರುವುದೂ ಸುಳ್ಳು; ಅಲ್ಲಿ ಸೇರಿದ ಜನಕ್ಕೆ ನನ್ನನ್ನು ಕಂಡರೆ ಕೋಪವಿರುವುದೂ ಸುಳ್ಳು.... ಆದರೆ ಅವರೇಕೆ ಹಾಗೆ ನಡೆದುಕೊಳ್ಳುತ್ತಾರೆ ......? ಅವಳ ಸಾವು ನೋವಿನ ಪ್ರಸಂಗವಾಗುವುದಕ್ಕೆ ಬದಲಾಗಿ ಕುತೂಹಲದ ವಿಷಯವಾದದ್ದು ಹೇಗೆ .....? ನನ್ನನ್ನು ರಂಡೆಯೆಂದ ಆ ಜನ ಸಂಭಾವಿತರೇ .....?!!'' ಆಕೆ ಹೀಗೆ ಪ್ರಶ್ನೆ ಕೇಳುತ್ತಲೇ ಇದ್ದಳು. ಆಕೆಗೆ ಮಾತನಾಡಿಕೊಳ್ಳುವುದು ಬೇಕಿತ್ತು. ನಾನು ಸುಮ್ಮನೆ ಕೇಳಿದರೆ ಸಾಕಿತ್ತು. ಬಾಸನ ಹೆಂಡತಿಯ ಬಗ್ಗೆ ಆಕೆಗೆ ಯಾವ ಸ್ಪಷ್ಟ ಭಾವನೆಯೂ ಇದ್ದಿರಲಿಕ್ಕಿಲ್ಲ. ಆದುದರಿಂದ ಆಕೆಯ ಸಾವನ್ನು ಅವಳು ನಿರೀಕ್ಷಿಸಿದ್ದಲ್ಲ. ಅವಳು ಬದುಕಬೇಕೆಂದು ಪ್ರತ್ಯೇಕವಾಗಿ ಆಕೆ ಯೋಚಿಸಿರಲಿಕ್ಕಿಲ್ಲ.

''ಗಂಡನೊಂದಿಗೆ ಅಷ್ಟು ವರ್ಷ ಸಂಸಾರ ಮಾಡಿ, ಆತ ನನ್ನೊಂದಿಗೆ ಮಲಗಿದನೆಂದು ಆಕೆ ಹೀಗೆ ಮಾಡಿದ್ದು ಸರಿಯೇ?! ಈ ಜೀವನದಲ್ಲಿ ಒಬ್ಬರನ್ನೊಬ್ಬರು ಗುತ್ತಿಗೆ ಹಿಡಿಯಲು ಸಾಧ್ಯವೇ? ನಿಮ್ಮ ಪ್ರಾಮಾಣಿಕ ಅನಿಸಿಕೆಗೆ ಯೋಗ್ಯ ಫಲ ಯಾವಾಗಲೂ ದೊರಕಿದೆಯೇ? ಸರಿಗೆ ಸದಾಕಾಲ ಸರಿಯನ್ನೇ ಮಾಡುವುದು ಈ ಲೋಕದ ವ್ಯವಹಾರವೇ? ಇಂಥ ಒಂದು ವ್ಯವಹಾರದಲ್ಲಿ ತಪ್ಪು, ಸರಿ, ಪಾಪ, ಪುಣ್ಯ ಎನ್ನು ಬಿಟ್ಟರೆ ಇನ್ನೇನೂ ಇರುವುದಿಲ್ಲವೇ.... ನೀವು ಉತ್ತರಿಸುವುದರ ಆಧಾರದ ಮೇಲೆ ಖಂಡಿತ ನನ್ನ ಬದುಕಿಲ್ಲ! ಆದರೆ ನಿಮಗೆ, ಉತ್ತರಿಸುವುದರಲ್ಲಿ ಯಾವ ಅಡ್ಡಿಯೂ ಇಲ್ಲ.''

''ಖಂಡಿತ ಇಲ್ಲ. ಸಂಬಂಧವಿಲ್ಲದಲ್ಲಿ ನಾವು ಧಾರಾಳವಾಗಿ ಉತ್ತರಿಸಬಹುದು!''

''ನಾನು ಯಾಕೆ ಹೀಗೆ ಹೇಳಿದೆ ಗೊತ್ತೇ? ತಪ್ಪು ಮಾಡುವ ನಮ್ಮಂಥವರು ಪ್ರಾಮಾಣಿಕ

ವಾಗಿ ಹೇಳಿಕೊಂಡರೆ, ದೇವರಿಗೊಪ್ಪುವ ನಾಲ್ಕು ಮಾತುಗಳನ್ನು ಸುರಿದುಬಿಡುತ್ತೀರಿ ....! ಆಕೆ ಸಾಯಬಾರದಿತ್ತು. ಅವನನ್ನು ತಿರಸ್ಕರಿಸಬಹುದಿತ್ತು; ದ್ವೇಷಿಸಬಹುದಿತ್ತು. ಒಂದು ವೇಳೆ ಅವನನ್ನೇ ಕೊಂದರೂ ಸರಿಯಾಗಬಹುದಿತ್ತು! ತಪ್ಪು ಮಾಡದ ಆಕೆ ಏಕೆ ಸಾಯಬೇಕು? ಎಷ್ಟೋ ವರುಷಗಳಿಂದ ಅವನ ಮಗ್ಗುಲಲ್ಲಿ ಮಲಗಿ ಆರೇಳು ಮಕ್ಕಳನ್ನು ಮಾಡಿಸಿಕೊಂಡ ಆಕೆಗೆ ಅವನು ನನ್ನನ್ನು ಪ್ರೀತಿಸುತ್ತಿದ್ದಾನೆ ಎಂಬ ಸಂದೇಹ ಬಂದದ್ದಾದರೂ ಹೇಗೆ?''

''ದೇಸಿ! ಯೋಚನೆ ಬೇರೆ ಬದುಕು ಬೇರೆ. ನಮ್ಮಲ್ಲಿ ಸಂಬಂಧಗಳೆಲ್ಲ ಚಟಗಳು. ಅವು ಸತ್ತಿರುತ್ತವೆ. ಹೆಣ ಅಲುಗಾಡಿದರೆ ನಿನಗೆ ಭಯವಾಗುವುದಿಲ್ಲವೇ?'' ಎಂದು ಅವಳ ಮುಖ ನೋಡಿದೆ.

''ಮನಸ್ಸು ಖಾಲಿಯಿರಬೇಕು. ಹಿಂದಿನದೂ ಮುಂದಿನದೂ ಯಾವುದೂ ಇರಬಾರದು ..... ಬದಲಾವಣೆಯನ್ನು ಕಂಡು ನೋಯದ, ಮುರುಟದ ಮನ ಮಾತ್ರ ಸಂಬಂಧವನ್ನು ಕಾಯ್ದುಕೊಂಡು ಹೋಗುತ್ತದೆ .....''

''ನೋಯದ ಮನಕ್ಕೆ ಸಂಬಂಧದ ಅರಿವು ಇರಲಾರದು''

''ಮನಸ್ಸು ನೋಯುವುದು ಸುಖ-ದುಃಖಗಳಲ್ಲಿ ಅನುಭವವನ್ನು ವಿಂಗಡಿಸಿದಾಗ ಮಾತ್ರ ......''

''ನಿಮಗೆ ಹೆಂಡತಿಯಿಲ್ಲ. ಮಕ್ಕಳಿಲ್ಲ ಮನೆಯಿಲ್ಲ. ಹಾಗಾಗಿ ನಿಮ್ಮ ಮಾತುಗಳಿಗೆ ಅರ್ಥವೇ ಇಲ್ಲ .....''

''ನೀನು ಹೇಳುವುದು ಸರಿ ..... ಇಲ್ಲವಷ್ಟೇ ಅಲ್ಲ; ನನಗೆ ಇರಲೂ ಕೂಡದು.'' ಎಂದು ನಾನು ನಕ್ಕೆ.

''ಈಗ ನಾನು ಹೋಗಬೇಕು. ಅವರ ಮನೆಗೆ ಹೋಗಬೇಕು. ಹೆಂಡತಿಯನ್ನು ಕಳೆದುಕೊಂಡ ದುಃಖ ಅವರಿಗೆ ಎಳ್ಳಷ್ಟೂ ಆಗದಂತೆ ನೋಡಿಕೊಳ್ಳಬೇಕು. ಆಕೆ ಸತ್ತು ತುಂಬಾ ನಿರರ್ಥಕ ಕೆಲಸ ಮಾಡಿದ್ದು ಎಲ್ಲರಿಗೂ ಗೊತ್ತಾಗಬೇಕು''.

ನಮ್ಮ ಹತ್ತಿರವಿದ್ದ ಚಹಾ ಆರಿ ತಣ್ಣಗಾಗಿತ್ತು. ಅವಳು ಕುಡಿಯಲಿಲ್ಲ. ಹೊರಟು ನಿಂತಳು.

''ಬರ್ತೇನೆ, ನಿಮ್ಮನ್ನು ವಿಚಾರಿಸಿಕೊಳ್ಳಲೇ ಆಗಲಿಲ್ಲ'' ಗೇಟಿನವರೆಗೂ ಹೋದೆ. ರಸ್ತೆ ನಿರ್ಜೀವವಾಗಿತ್ತು. ಹತ್ತು ಘಂಟೆ ಹೊಡೆಯಿತು.

''ಕಳಿಸಿಕೊಡಬೇಕಾ'' ಕೇಳಿದೆ.

''ಬೇಡ'' ಎಂದಳು.

ರೂಮಿಗೆ ತಿರುಗಿ ಬಂದೆ. ಹಸಿವು ಚೆನ್ನಾಗಿ ಆಗಿತ್ತು. ಬ್ರೆಡ್ಡು ತಿಂದೆ. ಚಹಾ ಕುಡಿದೆ. ಮಾಡಿದ್ದೇ ಕೆಲಸ ಮಾಡುವುದು. ಮದುವೆ ಬೇಕೆಂದು ಮಾಡಿಕೊಳ್ಳುವುದು. ಹೆಂಡತಿಯ ಜವಾಬುದಾರಿ ಎನ್ನುವುದು. ಮಕ್ಕಳು ಬೇಕೆಂದು ಮಾಡಿಕೊಳ್ಳುವುದು. ಮಕ್ಕಳ ಜವಾಬುದಾರಿಯೆನ್ನುವುದು. ತಿನ್ನುವುದು. ಅದರಿಂದ ಟಾಯಲೆಟ್ಟಿಗೆ ಹೋಗುವುದು, ಮಲಗುವುದು, ಹಾಗೇ ಏಳುವುದು, ಮಾಡಿದ್ದೇ ಕೆಲಸ ಮಾಡುವುದು. ಈ ಕೆಲಸಗಳು ಹುಟ್ಟಿನಿಂದ ಸಾಯುವವರೆಗೆ ಬೇಸರ ತರದ ದಂಧೆಗಳು. ಇಷ್ಟನ್ನು ಬೇಸರ ಬರದೇ ಮಾಡಬೇಕು. ಉಳಿದ ವೇಳೆಯಲ್ಲಿ ನಿದ್ರೆ ಮಾಡಿದರೆ ಇಡೀ ಜೀವನವೇ ಆಯಿತು. ನಿದ್ರೆ ಅವಶ್ಯವೆನಿಸಿತ್ತು ಎಂದು ಕಾಣುತ್ತದೆ. ಮಲಗಿದೆ. ಆ ದಿಟ್ಟ ನಿದ್ದೆ ಪಡೆದ ಮೇಲೆಯೇ At the hour of deathನ ವಿಷಯಗಳು ಹಾಯ್ದು ಹೋಗುತ್ತಿದ್ದವು.

ಸಂಬಂಧವಿಲ್ಲದವರೂ ಆಕಸ್ಮಿಕ ಭೇಟಿಗಳಲ್ಲಿ ನೂರು ಮಾತನಾಡಿರುತ್ತಾರೆ; ಸಂಬಂಧವಿದ್ದವರು ಮಾತು ಬಿಟ್ಟಿರುತ್ತಾರೆ. ನಾವು ಬಿಟ್ಟವಾದರೆ ಯಾವ ಸಂಬಂಧವೂ ನಮ್ಮನ್ನು ತಳಹಿಡಿದು ಅಲುಗಿಸುವುದಿಲ್ಲ. ಅಂಥ ಒಂದು ಸಂಬಂಧ ಬಹುತೇಕ ಸಾವೇ ಇರಬೇಕು.

★ ★ ★

ಇಷ್ಟು ಹೊತ್ತು ಮಾಡಿ ನಾನು ಎಂದೂ ಎದ್ದಿ

ರಲಿಲ್ಲ. ಬಹುತೇಕ ರಾತ್ರಿ ಐದರವರೆಗೂ ಕುಡಿದ ವರೂ ಇಷ್ಟು ಹೊತ್ತು ಎಚ್ಚರ ತಪ್ಪಿದವರಂತೆ ಮಲಗಲಿಕ್ಕಿಲ್ಲ. ಬಿಸಿಲು ಧಾರಾಳವಾಗಿ ಕೋಣೆ ಯಲ್ಲಿ ಬಿದ್ದಿತ್ತು. ಗಡಬಡಿಸಿ ಘಂಟೆ ನೋಡಿದರ ಹನ್ನೆರಡರ ಹತ್ತಿರ ಬಂದಿತ್ತು. ಹಾಸಿಗೆಯಿಂದ ಜಿಗಿದು ಬಾತ್ ರೂಮಿಗೆ ಹೋದೆ. ಒಂದು ತರ ಹದ ಗಾಬರಿ ಆಗಿತ್ತು. .....

ಬಾತ್‌ರೂಮಿನ ಬಾಗಿಲಲ್ಲಿ ಬೆಕ್ಕು ಸತ್ತು ಬಿದ್ದಿತ್ತು.

ದುಃಖಕ್ಕಿಂತ ಭಯ ತುಂಬಿತು.

ಮೂರು ವರುಷಗಳಿಂದಲೂ ನಾನು ಅದನ್ನು ನೋಡುತ್ತಿದ್ದೆ. ತಿನ್ನಲಿಕ್ಕೆ ಅಷ್ಟು ಹಾಕುತ್ತಿದ್ದೆ. ಈಗ ಗೊತ್ತಾಯಿತು. ಅದು ನನ್ನನ್ನು ಹಚ್ಚಿಕೊಂಡಿತ್ತು. ಮುಖ ತೊಳೆಯುವುದಕ್ಕಿಂತ ಮುಂಚಿತವಾಗಿ ಎತ್ತಿಕೊಂಡು ಹೋಗಿ ಮುನಿಸಿಪಾಲಿಟಿ ಡಬ್ಬಕ್ಕೆ ಹಾಕಿ ಬಂದೆ. ಕೈಗೆ ಸೋಪು ಹಾಕಿ ತೊಳೆದೆ. ಪ್ರೀತಿ ಇದ್ದವರು ಸೋಪು ಹಾಕಿ ಕೈ ತೊಳೆಯುವುದಿಲ್ಲ. ಕೈಗೆ ಹತ್ತಿದ ಆ ಹೆಣದ ವಾಸನೆಯನ್ನು ಸ್ಮರಣೆಗಾಗಿ ಇಟ್ಟುಕೊಳ್ಳುತ್ತಾರೆ. ಮೈ ಉಬ್ಬಿಸಿಕೊಂಡು ಬಿದ್ದಿದ್ದ ಅದರ ಕಟುಬಾಯಿಯಿಂದ ಜೊಲ್ಲು ನೆಲದ ಮೇಲೆಲ್ಲ ಸುರಿದಿತ್ತು. ಹಳೆ ಬನಿಯನ್ನು ತಂದು ಒರೆಸಿ ತೆಗೆದೆ. ನೆಲಕ್ಕಷ್ಟು ಡೆಟಾಲ್ ಹಾಕಿ ತೊಳೆದು ಮತ್ತ ಸೋಪು ಹಾಕಿ ತೊಳೆದುಕೊಂಡೆ. ಮುಖ ತೊಳೆಯಬೇಕೆಂದು ಬಾಯಿಗೆ ನೀರು ಹಾಕಿದೆ. ವಾಂತಿ ಬರುವಂತಾಯಿತು. ಬಿಟ್ಟೆ. ಸೋಫಾಕ್ಕೆ ಬಂದು ಸಿಗರೇಟು ಹಚ್ಚಿದೆ. ಅದೂ ಹೆಣದ ವಾಸನೆಗೆ ಹತ್ತಿರವಾಗಿತ್ತು. ಒಗೆದೆ. ಎದ್ದು ಹೊರಗೆ ಹೋದೆ. ಪ್ರಖರವಾದ ಬಿಸಿಲು ಉರಿಯುತ್ತಿತ್ತು. ಮರದ ನೆರಳಲ್ಲಿರುವ ಕಾವು ಕೇಂದ್ರೀಕೃತವಾಗಿತ್ತು. ಬರಿ ಬಿಸಿಲು ಪ್ರಕೃತಿಯ ಕುತ್ತಿಗೆ ಹಿಡಿದಿತ್ತು. ನನ್ನ ಮನಸ್ಸಿನಲ್ಲಿ ಉಗ್ರ ಪ್ರತಿಕ್ರಿಯೆಗಳು ಉದ್ದೀಪನಗೊಂಡವು. ಬುಡದಲ್ಲಿದ್ದ ಕಲ್ಲನ್ನು ಎತ್ತಿ ಮರಕ್ಕೆ ಜಪ್ಪಿ ಒಳಗೆ ಬಂದೆ. ಮನೆ ತುಂಬ ಬೆಕ್ಕಿನ ಹೆಣ ತುಂಬಿತ್ತು. ನಾನು ಅದನ್ನು ಪ್ರೀತಿಸಬೇಕಿತ್ತು. ಈಗ ಈ ಮನೆ ಹೀಗೆ ನಾರುತ್ತಿರಲಿಲ್ಲ. ನಾನು ತಪ್ಪು ಮಾಡಿದೆ. ಈಗ ಸಹಿಸಿಕೊಳ್ಳಬೇಕು. ಈ ಹೆಣವನ್ನಾದರೂ ಪ್ರೀತಿಸಬೇಕು. ಇಲ್ಲವಾದರೆ ನನಗೆ ಉಳಿವಿಲ್ಲ. ಎದ್ದೆ. ಬಾತ್ ರೂಮಿಗೆ ಹೋದೆ. ಅದು ಸತ್ತುಬಿದ್ದ ನೆಲವನ್ನು ಮುಟ್ಟಿ ಮೂಸಿದೆ; ಮೂಸುತ್ತಲೇ ಇದ್ದೆ! ಏನೇನೋ ಆಗುತ್ತಿತ್ತು.

ಆಗಕೂಡದು, ನನಗೆ ಪ್ರೀತಿಯಾಗಬೇಕು. ಹೊರಬಿದ್ದೆ. ಮುನಸಿಪಾಲಿಟಿ ಡಬ್ಬದ ಹತ್ತಿರ ಸುಳಿದೆ, ಯಾರಿಗೂ ಕಾಣದಂತೆ. ಆ ಹೆಣವನ್ನು ನೋಡಿದೆ. ಯಾರೋ ಒಂದಿಷ್ಟು ಬೂದಿಯನ್ನು ಚೆಲ್ಲಿದ್ದರು. ಅದರ ಮುಖದ ಮೇಲೆ ಕಸ ಚೆಲ್ಲಿದ್ದರು. ಮುಖ ಕಾಣಲಿಲ್ಲ. ಹಾಗಾಗಿ ಆ ಹೆಣವನ್ನು ಪ್ರೀತಿಸುವುದು ಕಷ್ಟವಾಗಲಿಲ್ಲ. ಒಳಗೆ ಬಂದೆ -

ಪ್ರೀತಿಸುವ ನನ್ನ ಪ್ರಯತ್ನ ಅಷ್ಟು ಯಶಸ್ವಿಯಾಗಲಿಲ್ಲ. ಆದರೆ ನನಗೆ ಗತಿಯಿಲ್ಲ. ನಾನು ಬದುಕಬೇಕು. ವಾಂತಿ ಮಾಡುತ್ತ ಬದುಕಬಾರದು, ಸುಖವಾಗಿ ಅಲ್ಲ, ದುಃಖದಲ್ಲಲ್ಲ, ಸುಮ್ಮನೆಯಾದರೂ ಬದುಕಬೇಕು. ಹೇಸಿಗೆಯಿಲ್ಲದೇ ಬದುಕಬೇಕು.

ಬೆಕ್ಕು, ಸತ್ತು ನನಗೆ ಆಹ್ವಾನವಿತ್ತಿದೆ. ಅದು ಬದುಕಿದ್ದಾಗ ಪ್ರೀತಿಸುವುದು ಇಷ್ಟು ಕಷ್ಟವಾಗುತ್ತಿರಲಿಲ್ಲ. ಕನಿಷ್ಟ ಅದು ಮ್ಯಾಂ ಅನ್ನುತ್ತಿತ್ತು.

ಕಿಟಕಿಯಿಂದ ಒಂದು ಪತ್ರ ಬಂದು ಬಿದ್ದಿತ್ತು. ಒಳಗೆ ಬಂದು ಬಾಗಿಲು ಹಾಕಿದೆ. ಈಗ ನನಗೆ ಯಾರೂ ಬೇಕಿರಲಿಲ್ಲ. ನನಗೂ ಮಾತಾಡಲು ಬರುತ್ತಿರಲಿಲ್ಲ. ಬಾಗಿಲಿಗೆ ಚಿಲಕವನ್ನು ಹಾಕಿದೆ. ಪತ್ರ ಕೈಗೆತ್ತಿಕೊಂಡು ಒಡೆದೆ - ಒಮ್ಮೆಲೇ ಮೈಮನಸ್ಸುಗಳು ಕಾವುಗೊಂಡವು. ಚಿದಾನಂದನ ಪತ್ರ!

ನನ್ನ ಹಾಗೆ, ಕನಸು-ಆಮಿಷ; ಸಾವು ಸಂಬಂಧಗಳ ಮಧ್ಯೆ ಏಲಿ-ಏಲಿ ಒದ್ದಾಡಿ ಕೊನೆಗೂ ಗೆದ್ದುಕೊಂಡವನು.

''ತುಂಬಾ ತ್ರಾಸಾಗ್ತಿದೆ ಬಾ ಬೇಗ ಬಾ!''

ಎಂದೆಂದೂ ಕಾಣದ ಶಬ್ದಗಳು. ಅವನಿಗೆ ತ್ರಾಸಿಲ್ಲ. ಅವನಿಗೆ ನಾನು ಬೇಕಿಲ್ಲ. ಪ್ರಮೀಳ ಇದ್ದಾಳೆ. ಮಕ್ಕಳಿದ್ದಾವೆ. ನನ್ನ ಸಂಬಂಧವನ್ನೇ ಕತ್ತರಿಸಿಕೊಂಡು ಹೋದ ಆತ ಸಾಯುತ್ತಿಲ್ಲ; ಸಾಯಲಾರ! ನನ್ನನ್ನು ಕೊಲ್ಲಲಾರ. ನಾನು ಬದುಕಿದ್ದೇನೆ. ಪ್ರಮೀಳ ಹೋದಳು. ಪ್ರೇಮವನ್ನು ಹೊತ್ತೊಯ್ದಳು; ಬದುಕು ಇದೆ. ಕಚ್ಚಿಕೊಂಡಿದ್ದೇನೆ. ಬಿಡುವುದಿಲ್ಲ. ಅವನಿಗೆ ಪ್ರಮೀಳಳ ಹೆದರಿಕೆ. ತನ್ನ ಬಿಟ್ಟು ನನ್ನ ಬೆನ್ನು ಹತ್ತಿಯಾಳೆಂಬ ಭಯ. ಈ ಇಪ್ಪತ್ತು ವರ್ಷಗಳಲ್ಲಿ ನೂರಾರು ಸಲ ಸಿಕ್ಕಿದ್ದ. ಚಹಾ ಕುಡಿಸಿದ್ದ. ಸಿಗರೇಟಿಗೆ ಬೆಂಕಿ ಹಚ್ಚಿದ್ದ. ಒಮ್ಮೆಯೂ ಮನೆಗೆ ಬಾ ಎಂದು ಕರೆದಿರಲಿಲ್ಲ. ಅವನಿಗೆ ಗೊತ್ತು. ನಾನು ಪ್ರಮೀಳನ್ನು ಪ್ರೀತಿಸುತ್ತೇನೆ. ಪ್ರಮೀಳ ನನ್ನನ್ನು ಪ್ರೀತಿಸಿದ್ದಳು. ಈಗ ಹಾಸ್ಯ ಮಾಡುತ್ತಿದ್ದಾನೆ. ನನ್ನನ್ನು ಕೊಲ್ಲಬೇಕಾಗಿದೆ. ಆದರೆ ನಾನು ಹೋಗುವುದಿಲ್ಲ. ನಾನು ಸಾಯುವುದಿಲ್ಲ. ಅವನಿಗಿಂತಲೂ ನಾನು ಅವಳನ್ನು ಹೆಚ್ಚು ಪ್ರೀತಿಸಿದ್ದೆ. ಅವಳು ಅವನನ್ನೇ ಆಯ್ದುಕೊಂಡಳು. ನನಗಿಂತ ಅವನನ್ನು ಅವಳು ಹೆಚ್ಚು ಪ್ರೀತಿಸಿರಬಹುದು. ಆದರೆ ಆತ ಹಾಗೆ ಮಾಡುವುದಿಲ್ಲ. ಅವನ ಪ್ರೀತಿ, ಅವನ ಅಳತೆ ಅದು ಪ್ರೀತಿಯಲ್ಲ. ಅವಳು ನನ್ನ ವರ್ಗದಲ್ಲಿದ್ದಳು. ನನ್ನೊಂದಿಗೆ ಸಲಿಗೆ ಬೆಳೆಸಿದಳು. ನನ್ನೊಂದಿಗೆ ಕ್ಯಾಂಟೀನು, ಗಾರ್ಡನ್ನು ಅಲೆದಾಡಿದಳು. ತನ್ನ ತುಟಿಯ ಮೇಲೆ ಮೊದಲು ಬೆರಳಿಟ್ಟವಳು; ಆಮೇಲೆ ತುಟಿ ಇಟ್ಟಳು. ಅಮರ ಪ್ರೇಮದ ಪ್ರತಿಜ್ಞೆ ಮಾಡಿದವಳು. ಮುಂದಿನ ಜನ್ಮದ ಭರವಸೆ ಕೊಟ್ಟವಳು. ಭುಜದ ಮೇಲೆ ತಲೆ ಇಟ್ಟು ಕಣ್ಣಲ್ಲಿ ಇಳಿದು ಎದೆಯಲ್ಲಿ ಹುದುಗಿಕೊಂಡಿದ್ದಳು. ನನಗೆ ಅವಳು ಮಂಜು; ಗುಲಾಬಿ. ಕನಸಿನಲ್ಲಿ ಉಳಿದ ಅಪ್ಸರೆ. ಗಾಳಿಯಲ್ಲಿ ಗಂಧವಾಗಿ ತೇಲಿದವಳು.

ಮುಂದೆ ಇಬ್ಬರ ಮಧ್ಯೆ ಮೋಡವಾಗಿ ತೇಲಿದವಳು; ಗಾಳಿಯಾಗಿ ಬೀಸಿದವಳು. ಅವನಿಗೆ ತುಟಿಯಿಟ್ಟು ನನ್ನನ್ನು ಅಪ್ಪಿಕೊಂಡವಳು. ಮುಂದೆ ನನಗೆ ಕೈಕೊಟ್ಟು ಅವನಿಗೆ ತೊಡೆ ಒಪ್ಪಿಸಿದವಳು. ಅವಳು ಈಗ ನನಗೆ ಮಾಯೆ.

ಕೊನೆಗೊಂದು ದಿನ ಆಕೆ ಅವನನ್ನು ಮದುವೆಯಾದಳು. ಆತ ಐ.ಎ.ಎಸ್. ಪಾಸು ಮಾಡಿದ್ದ. ಡಿ.ಸಿ. ಆಗಿದ್ದ. ನಾನು ಫೇಲಾಗಿದ್ದೆ. ಎಲ್ಲದರಲ್ಲಿಯೂ ಫೇಲಾಗಿದ್ದೆ. ಅವನಿಗೆ ಎಲ್ಲಿಗೋ ವರ್ಗವಾಗಿತ್ತು. ಪತ್ರ ಬರೆಯುತ್ತಿದ್ದ. ನನ್ನ ಯೋಗ ಕ್ಷೇಮ ವಿಚಾರಿಸುತ್ತಿದ್ದ. ಆದರೆ ಎಂದೂ ಪ್ರಮೀಳಾಳ ಹೆಸರೂ ಪತ್ರದಲ್ಲಿರುತ್ತಿರಲಿಲ್ಲ.

ಆ ಜೀವನ ಸುಳ್ಳಾಗಿತ್ತು. ಆ ಭಾಷೆ ಎರಡಾಗಿತ್ತು. ಆ ಮುತ್ತು ಒಣಗಿಹೋಗಿತ್ತು. ಆ ಆಲಿಂಗನ ಸಟೆದು ಹೋಗಿತ್ತು. ನನ್ನ ಬದುಕಿನ ಪ್ರೇಮದ ಹೊಳೆ ಬತ್ತಿ ಹೋಗಿತ್ತು.

> *ಅವನು ಪ್ರೀತಿಸಿದ್ದ. ನಾನು ಪ್ರೀತಿಸಿದ್ದೆ. ನಮಗಿಂತಲೂ ಹೆಚ್ಚಾಗಿ ಅವಳ ಪ್ರೀತಿಯಿತ್ತು. ಅವಳು ಇಬ್ಬರನ್ನೂ ಪ್ರೀತಿಸಿದ್ದಳು! ವಿಚಾರ ಮಾಡಬಾರದು. ಸಮಸ್ಯೆ ಏಳುತ್ತದೆ. ಲೆಕ್ಕ ಹಾಕಬಾರದು, ಪ್ರೀತಿ ಸಾಯುತ್ತದೆ.*

ಅಂದು ಎದೆ ತುಯ್ದ ಗತಿಯನ್ನು ನೆನಸಿದರೆ ಇಂದು ನಾನು ಬದುಕಿದ್ದುದು ಆಶ್ಚರ್ಯವಾಗುತ್ತದೆ. ಮನಸ್ಸಿನ ತುಮುಲವನ್ನು ಮರೆಯಲು ಬೂದಿ ಚಲ್ಲಿಕೊಂಡಿದ್ದೆ. ಮಣ್ಣು ಹೊಯ್ದುಕೊಂಡಿದ್ದೆ. ಬೆಂಕಿ ಹಚ್ಚಿಕೊಂಡಿದ್ದೆ. ಸೂಳೆಯ ಮನೆಗೂ ಹೋಗಿದ್ದೆ. ಗರತಿಯ ಮನೆಗೂ ಹೋಗಿದ್ದೆ. ದೇಹಕ್ಕೆ ಕಾವಿರಲಿಲ್ಲ. ಇದ್ದದ್ದು ಮನಸ್ಸಿನ ಕುದಿತ. ಹುಳು ಹತ್ತಿದ ಬದುಕನ್ನು ಹಚ್ಚಿಕೊಂಡಿದ್ದೆ, ಅದನ್ನು ಹಿಡಿದು ಎಲ್ಲಾ ಮೋಡಗಳ ಕೆಳಗೂ ಹಾರಿದ್ದೆ. ಎಲ್ಲ ಗುಡ್ಡ ಗಣಿವೆಗಳನ್ನೂ ತುಳಿದಿದ್ದೆ. ಎಲ್ಲ ಹೊಳೆಯಲ್ಲಿಯೂ ಈಸಿದ್ದೆ. ಮರುಭೂಮಿಗೂ ಹೋಗಿದ್ದೆ. ಪ್ರಮೀಳಾ ಪ್ರೇಮ ಪ್ರೇತವಾಗಿತ್ತು.

ಆದರ ಬೆನ್ನು ಹತ್ತಿ ನಾನು ಓಡಿದ್ದೆ. ಅದು ನನ್ನ ಬೆನ್ನು ಹತ್ತಿ ಬೆದರಿಸಿತ್ತು. ಅವಳನ್ನು ಬಿಟ್ಟು ಬರೀ ಪ್ರೇಮವನ್ನು ಹಿಡಿದುಕೊಂಡೆ. ಪ್ರೇಮದೊಂದಿಗೆ ಮಮತೆ, ಸ್ನೇಹ, ದಯೆ, ತ್ಯಾಗಗಳನ್ನು ತಬ್ಬಿಕೊಂಡೆ. ಬದುಕೇನೋ ಸಹ್ಯವಾಯಿತು. ಆದರೆ ಬದುಕಿದ್ದು ವ್ಯರ್ಥವಾಯಿತು. ನಾವು ಮೆಚ್ಚಿದ ವಸ್ತುಗಳಿರುತ್ತವೆ; ವ್ಯಕ್ತಿಗಳಿರುತ್ತಾರೆ. ನಾವು ದ್ವೇಷಿಸುವ ವಸ್ತುಗಳಿರುತ್ತವೆ. ಅವರ ನುಧ್ಯೆ ಬದುಕುತ್ತಿರುತ್ತೇವೆ; ದುಃಖಿಸುತ್ತೇವೆ, ಸಂತೋಷಪಡುತ್ತೇವೆ. ವಿಚಾರಿಸುತ್ತೇವೆ. ಮರೆಯುತ್ತೇವೆ. ಆಯ್ದುಕೊಳ್ಳುತ್ತೇವೆ, ಬಿಡುತ್ತೇವೆ, ಕುಡಿಯುತ್ತೇವೆ, ಬಯ್ಯುತ್ತೇವೆ, ಹೊಗಳುತ್ತೇವೆ. ಆರಿಸಿಕೊಂಡರೂ, ಆರಿಸಿಕೊಳ್ಳದಿದ್ದರೂ ಬದುಕು ಒಂದೇ ಉಳಿಯುತ್ತದೆ. ಅವರ ಕಥೆಯನ್ನು ಮೊದಲೇ ಬರೆದಾಗಿದೆ. ಎಲ್ಲಾ ಟೆಕ್ನಿಕಲ್ ಗದ್ದಲ. ಬದುಕೂ ಸಾವಿನಷ್ಟೇ ಖಚಿತ. ಅಷ್ಟೇ ಪ್ರಯೋಜನ. ನನ್ನ ಬದುಕಿನ ಕೆಲ ಪ್ರಕರಣ ನೀಚತನದ ಮೇಲಿದೆ. ಇನ್ನು ಕೆಲವು ಸಾಚಾತನದ ಮೇಲೆ, ನಾನು ಎರಡಕ್ಕೂ ಸಂಬಂಧಿಸಿದಂತೆ ಬದುಕಿದ್ದೇನೆ. ಆದುದರಿಂದಲೇ ರುಚಿಯಿಲ್ಲ; ಶಕ್ತಿಯಿಲ್ಲ; ಆವೇಶವಿಲ್ಲ; ಏನೂ ಇಲ್ಲ.

ಬಿಸಿಲು ಬಾಡುತ್ತಾ ಹೊರಟಿತ್ತು. ಹೊಟ್ಟೆಯಲ್ಲಿ ಹಸಿವಿಲ್ಲ; ತಲೆಯಲ್ಲಿ ವಿಚಾರವಿರಲಿಲ್ಲ; ಹೃದಯದಲ್ಲಿ ಭಾವವಿರಲಿಲ್ಲ. ಬೆಳಗಿನಿಂದ ಚಹ ಕುಡಿದಿರಲಿಲ್ಲ. ಸಿಗರೇಟು ಸೇದಿರಲಿಲ್ಲ. ನಾನು ಚಹಾ ಕುಡಿಯುವುದನ್ನು, ಸಿಗರೇಟು ಸೇದುವುದನ್ನು ನೋಡಿ 'ಕಡಿಮೆ ಮಾಡಿ' ಎಂದಿದ್ದರು. ಈಗ ಅವೇ ಬಿಡತೊಡಗಿವೆ.

ಇವಿಷ್ಟು ಅನಿಸಿಕೆ ಆಯಿತು; ವ್ಯವಹಾರ ಬೇರೆ ಉಳಿಯಿತು. ಪತ್ರ ನೋಡಿದೆ. ಮೂರು ದಿನಗಳ ಹಿಂದಿನ ದಿನಾಂಕವಿತ್ತು ..... ನಿಜವಾಗಿಯೂ ಚಿದಾನಂದನಿಗೆ ಏನಾಗಿರಬಹುದು? ಏನೇ ಆದರೂ ಅವನಿಗೆ ನನ್ನ ಅವಶ್ಯಕತೆ ಬೀಳಲಾರದು. ಕಂಪನಿ ಸ್ಥಾನ ಯೋಗ್ಯತೆಗಳಿಗಾಗಿ ಬೇಕಾದಷ್ಟು ಜನರಿದ್ದಾರೆ. ನನಗೆ ಹಾಸ್ಯಕ್ಕೆ ಹೀಗೆ ಬರೆದಿರಬಹುದೇ? ಅಥವಾ ಪ್ರಮೀಳ ಅವನ ಹೆಸರಿನಲ್ಲಿ ಹೀಗೆ ಬರೆದಿರಬಹುದೇ? ಅವಳಿಗೆ ನನ್ನನ್ನು ನೋಡಬೇಕೆಂದಾಗಿರಬಹುದೇ? ಇಪ್ಪತ್ತು ವರುಷಗಳ ಗರಿಷ್ಠ ಸಂಸಾರ ಮಾಡಿದ ಆಕೆಗೆ ನನ್ನನ್ನು ಮಗುವೆಂದು ಯೋಗಕ್ಷೇಮ ನೋಡುವ ಶಕ್ತಿ ಬಂದಿರಬಹುದೇ? ಆಕೆ ಈಗ ದೊಡ್ಡ ಹೆಂಗಸು. ತಾಯ್ತನದ ಪಕ್ವತೆ ಬಂದಿದೆ. ಏಂದೋ ನಾನು ಪ್ರೀತಿಸಿರಬಹುದು. ಮದುವೆ ಆತನೊಡನೆ ಆಕಸ್ಮಿಕವಾಗಿ ಆಗಿರಬಹುದು. ಅಂದರೆ ನನ್ನನ್ನು ಪೂರ್ಣ ಮರೆತು ಬಿಡಬೇಕೆಂದಿಲ್ಲ. ಅವಳಿಗೆ ನನ್ನ ಒಂಟಿ ಜೀವನ ಕೇಳಿ ದುಃಖವಾಗಿರಬಹುದು. ಆಕೆ ಈಗ ಗಂಡನೆದುರಿಗೇ ನನ್ನ ತಲೆಗೆ ಎಣ್ಣೆ ಹಾಕಬಹುದು. ತಲೆ ಒಡೆತವೆಂದರೆ ಹಣೆ ತಿಕ್ಕಬಹುದು. ಈಗ ಆಕೆ ತಾಯಿ. ನಾನು ಇನ್ನೂ ಹುಡುಗ.

ರಾತ್ರಿ ಆಗಿತ್ತು, ಮನಸ್ಸು ದಣಿದಿತ್ತು, ನಿದ್ರೆ ಬಂದಿತ್ತು.

ನಾನು ಬೆಳಿಗ್ಗೆ ಅಷ್ಟು ನಸುಕಿನಲ್ಲಿ ಏಳುವುದಕ್ಕೆ ಕಾರಣ ಪೋಸ್ಟಮನ್ ಟೆಲಿಗ್ರಾಂ ಎಂದು ಒದರಿದ್ದು. 'Dying start, Chidananda' ಎಂದಿತ್ತು. ಹೋಗಲೇಬೇಕು ಸುಳ್ಳೇ ಇದ್ದರೂ ಹೋಗಬೇಕು.

ಬೆಕ್ಕು ಸತ್ತಿದೆ.

ಆಗ ಪ್ರೀತಿ ಮಾಡಲಿಲ್ಲ. ಈಗ ಮಾಡುವಂತಿಲ್ಲ. ದ್ವೇಷ ಪ್ರೀತಿಗಳೆರಡಕ್ಕೂ ಮರಣವೇ ಗಡಿ. ಗಡಿದಾಟಿದವರನ್ನೂ ಹಿಂಬಾಲಿಸುವಂತಿಲ್ಲ. ಕರೆದು ಬರಮಾಡಿಕೊಳ್ಳುವಂತಿಲ್ಲ. ಅತ್ತು ಪ್ರಾಯಶ್ಚಿತ್ತ ಮಾಡಿಕೊಳ್ಳುವಂತಿಲ್ಲ. ಹಾಗಾಗಿ ಈಗಲೇ ಹೋಗಬೇಕು. ಆತನಿಗೆ ನನ್ನೊಡನೆ ಹೇಳುವುದು ಏನಾದರೂ ಇರಬೇಕು. ಆದರೆ ನನಗೆ ಭಯ. ನಾನು ಯಾರ ಗುಟ್ಟನ್ನೂ ಕೇಳಲು ಸಿದ್ಧನಿಲ್ಲ. ಆತ್ಮೀಯತೆ ಭಯಂಕರ. ಜವಾಬ್ದಾರಿ. ಅವರು ಸಿಲುಕಿದ ಗಂಟಿನಲಿ ನಾವೂ ತೊಡಗಿಕೊಳ್ಳಬೇಕಷ್ಟೇ. ಸ್ನೇಹದ ಪರಿಣಾಮವೇ ಅಸಹಾಯಕತೆಯಲ್ಲಿ ಸಿಕ್ಕು ಬೀಳುವುದು.

ಕೆಲವರಿಗೆ ಹೆಮ್ಮೆ. ಈ ವಿಷಯದಲ್ಲಿ ನನಗೆ ಭಯ. ನನಗೆ ಅಳಲು ಬರುತ್ತದೆಯೆಂಬ ಖಾತರಿಯಿಲ್ಲ; ನನಗೆ ದುಃಖವಾದೀತೆಂದು ಭರವಸೆಯಿಲ್ಲ. ಅಳುವವನ ಎದುರಿಗೆ ಅನಿಸದೆ ಕೂತುಕೊಳ್ಳುವುದು ನಾಚಿಗೆಗೇಡಿತನ. ಅತ್ತರೆ ಮೋಸ; ನಕ್ಕರೆ ದ್ರೋಹ; ಸುಮ್ಮನಿದ್ದರೆ ರಾಕ್ಷಸತನ. ನಾನು ಹೋಗುವುದು ಅವನು ಹುಶಾರಿಲ್ಲದ್ದಕ್ಕೆ ಎಂದು ಖಂಡಿತ ಹೇಳಲಾರೆ. ಅವನ ಮನೆಗೆ ಹೋಗುವುದು ಪ್ರಮೀಳಾಳನ್ನು ನೋಡಲಾಗುತ್ತದೆಯೆಂಬ ಆಸೆಯೆಂದು ನಿರ್ಧಾರವಾಗಿ ಹೇಳಲಾರೆ. ಅವಳ ನೋಡಿದರೆ ದುಃಖವೂ ಆದೀತು. ತಲೆ ಕೆಟ್ಟೀತು. ನನ್ನ ಯೋಗ್ಯತೆ ಇಳಿದೀತು. ಅವರ ಕಿಮ್ಮತ್ತು ಕೆಟ್ಟೀತು. ಆದರೂ ಹೋಗಲೇ ಬೇಕೆಂದು ಕಾಣುತ್ತದೆ.

ದೇಹವೆಲ್ಲ ಗಾರು ಆಗಿತ್ತು. ಮನಸ್ಸು ಹುಚ್ಚು ಹಲುಬುತ್ತಿತ್ತು. ಹೊರಡಬೇಕು. ಪ್ಯಾಂಟು ಆರಿಸಲು ಕಪಾಟು ತೆಗೆದೆ. ಕೈಗೆ ಸಿಕ್ಕ ಒಂದು ಪ್ಯಾಂಟು ಹಾಕಿಕೊಂಡೆ. ಬಸ್ ಸ್ಟ್ಯಾಂಡಿಗೆ ಓಡಿದೆ. ಬಸ್ಸು ಈಗಂತೂ ತಯಾರಾಗಿ ನಿಂತಿದೆ. ನನ್ನನ್ನು ಒಳಗೆ ಹಾಕಿಕೊಂಡ ಆತ ಬಸ್ಸು ಅಲುಗಾಡುವಂತೆ ಬಾಗಿಲು ಹಾಕಿಕೊಂಡ. ಬಸ್ಸು ಹೊರಟಿತು. ಇನ್ನೂ ಜನ ಬಸ್ಸಿನ ಹಿಂದೆ ಓಡಿ ಬರುತ್ತಿದ್ದರು. ಆದರೆ ಬಸ್ಸು ನಿಲ್ಲಲಿಲ್ಲ. ಅದು ನಿಲ್ಲುವುದೂ ಇಲ್ಲ. ಬಸ್ಸಿನಲ್ಲಿ ಉರಿ; ಹೊರಗಡೆ ಬಿಸಿಲು, ಒಳಗಡೆ ಬಿಸಿಯುಸಿರು, ಬೆವರಿನನಾತ, ಅದರಲ್ಲಿಯೂ ಜನಕ್ಕೆ ಮಾತನಾಡಬೇಕು, ಕೆಮ್ಮಬೇಕು, ಬೀಡಿ ಹಚ್ಚಬೇಕು, ಕವಳ ಹಾಕಬೇಕು, ನಗಬೇಕು, ಕೂಗಬೇಕು, ಜಗಳವಾಡಬೇಕು.

ಎಷ್ಟೆಲ್ಲ ಜನ ಇಳಿದು ಹೋದರು. ಈಗ ಖಾಲಿ. ಡ್ರೈವರ್ ಏಕದಮ್ ಬ್ರೇಕ್ ಹಾಕಿದ್ದ. ಇರುವ ಹತ್ತೆಂಟು ಜನ ಮುಂದಿನ ಸೀಟಿಗೆ ಹೋಗಿಬಿದ್ದೆವು. ಮೊಣಕೈ ಸ್ವಲ್ಪ ಉಳುಕಿತು. ಬಸ್ಸು ಮತ್ತೆ ಹೊರಟಿತು. ಬಿಸಿಲು ಸುಡುತ್ತಿತ್ತು. ರಸ್ತೆ ಡಾಂಬರು ನೀರಾಗಿತ್ತು. ಗಾಲಿ ಪಂಕ್ಚರ್ ಆಯಿತು. ಪ್ರವಾಸ ಸಗಾಗವಾಗಿಲ್ಲ. ನಾನು ಎಲ್ಲ ಅವಘಡಗಳನ್ನು ಅಟೆಂಡ್ ಮಾಡಲು ಹೊರಟಿದ್ದೆ. ನಾನು ಬಸ್ಸಿನಲ್ಲಿ ನಿದ್ರಿಸಬಹುದಿತ್ತು. ಸುಮ್ಮನೆ ತಲೆ ಕೆಡಿಸಿಕೊಂಡಿದ್ದೆ. ನಿದ್ರೆ ಬರಲಿಲ್ಲ. ತಲೆ ಬಡೆಯುತ್ತಿತ್ತು. ಆದರೆ ಬಸ್ಸು ಹೋಗುತ್ತಿತ್ತು. ಚಿದಾನಂದನ ಊರಿಗೆ ಮುಟ್ಟಿದಾಗ ಮಧ್ಯರಾತ್ರಿಯಾಗಿತ್ತು. ಇಷ್ಟು ರಾತ್ರಿಯಲ್ಲಿ ಅವನ ಮನೆಗೆ ಹೋಗುವುದೇ, ಬಿಡುವುದೇ ಎಂದು ವಿಚಾರ ಮಾಡಲು ವೇಳೆಯಿರಲಿಲ್ಲ. ಅಷ್ಟು ಹಟದಿಂದ ಬಂದಾಗಿದೆ. ನನಗಾಗಿಯೇ ಕಾಯುತ್ತಿದ್ದರೆ ಈಗ ಹೋಗುವುದು ಅನೌಚಿತ್ಯವಲ್ಲ; ಅಡ್ರೆಸ್ ಹೇಳಿದೆ; ಗೊತ್ತಿದೆಯೆಂದ ಅಲ್ಲಿದ್ದ ರಿಕ್ಷಾವಾಲ. ವಿಚಾರಕ್ಕೆಡೆಗೊಡದಷ್ಟು ರಿಕ್ಷಾ ಗದ್ದಲ ಮಾಡುತ್ತ ಹೋಗಿತ್ತು. ಮನೆ ಮುಂದೆ ಆತ ನಿಲ್ಲಿಸಿದ. ಗೇಟಿನ ಬಳಿ, ಬೋರ್ಡು ಇತ್ತು. ಕಂಪೌಂಡಿನಲ್ಲಿ ಒಂದು ಲೈಟು ಇತ್ತು. ದೈತ್ಯನಂತಹ ಅಲ್ಸೇಶಿಯನ್ ನಾಯಿ ಮೈಮೇಲೆ ಹಾರಿ ಬಂತು. ವಾಚಮನ್ ಓಡಿ ಬಂದು ಹಿಡಿದುಕೊಂಡ, ನನ್ನ ವಿಚಾರಿಸಿದ. ಒಳಗೆ ಹೋದ. ಮತ್ತೆ ಬಂದ. ಬರಲು ಹೇಳಿದ. ಹಾಲಿಗೆ ಮ್ಯಾಟು ಹಾಸಿತ್ತು. ನಾಲ್ಕು ಸೋಫಾಗಳು ಖಾಲೀಯಿದ್ದವು. ಕುಳಿತೆ. ಎದುರಿನ ಖೋಲಿಯಲ್ಲಿ ಗಂಡಸಿನ ಧ್ವನಿ. ಹೆಂಗಸರು ಇದ್ದ ಸುಳಿವಿಲ್ಲ. ಮಕ್ಕಳು ಕಾಣಲಿಲ್ಲ. ಸರ್ವಂಟ್ ಒಂದು ಗ್ಲಾಸು ನೀರು ತಂದ. ಹಾಗೆಯೇ ಹೊರಟಿದ್ದ, ತಡೆದೆ. ಚಿದಾನಂದರನ್ನು ವಿಚಾರಿಸಿದೆ. ಅವನು ಬಾಯಿ ಮೇಲೆ ಬೆರಳಿಟ್ಟುಕೊಂಡ. ಮತ್ತೆ ಹೊರಟ. ಮತ್ತೆ ನಿಲ್ಲಿಸಿ ಕೈ ಹಿಡಿದೆ. ಆ ಮನೆ ಭಯ ತರುತ್ತಿತ್ತು. ಚಿದಾನಂದನನ್ನು ಕರೆ ಎಂದೆ. ಆತ ನನ್ನನ್ನು ಕರೆದುಕೊಂಡು ಔಟ್‌ಹೌಸಿನತ್ತ ಹೋದ. ಬಾಗಿಲು ತೆರೆದ ಸಣ್ಣ ಲೈಟು ಇತ್ತು. ಮಂಚದ ಮೇಲೆ ಮಲಗಿದ್ದ. ದೊಡ್ಡ ದಿಂಬಿಗೆ ಆನಿಸಿ ಹೆಣದಂತೆ ಕೂಡಿಸಿದ್ದರು. ತಲೆಯ ಬಳಿ ಬಾಬಾರ ದೊಡ್ಡ ಫೋಟೋವಿತ್ತು. ಬಳಿಯ ಟೇಬಲ್ ಮೇಲೆ ಕೇಸ್‌ಶೀಟ್ ಇತ್ತು. ಮಯೋಕಾರ್ಡಿಅಲ್ ಇನ್‌ಫಾರನೇಶನ್ ಎಂದು ಬರೆಯಲಾ

ಗಿತ್ತು.

ಅವನು ಕಣ್ಣು ಮುಚ್ಚಿದ್ದ.

ಆದರೂ ಉಸಿರಾಡುತ್ತಿದ್ದ; ತೇಕುತ್ತಿದ್ದ.

ಇಡೀ ದೇಹ ಮೇಲೆದ್ದು ಕೆಳಗೆ ಬೀಳುತ್ತಿತ್ತು. ಉಸಿರಾಡುವುದು ಆತನಿಗೆ ಸುಲಭವಾಗಿರಲಿಲ್ಲ. ಬಟ್ಟೆಗಳೆಲ್ಲ ಅಸ್ತವ್ಯಸ್ತವಾಗಿದ್ದವು. ಅವನ ಸಾಮಾನೂ ಬೆಳಕಿಗೆ ಬಿದ್ದಿತ್ತು. ನಾನು ಅವನ ಮುಖದ ಮೇಲೆ ಬಾಗಿದೆ. ಕಿವಿಯಲ್ಲಿ ನನ್ನ ಹೆಸರು ಹೇಳಿದೆ. ಚಾದರನ್ನು ಸರಿಯಾಗಿ ಹೊದಿಸಿದೆ. ಮಂಚದ ಕೆಳಗೆ ಜೋಲುವ ಆತನ ಕೈಗಳನ್ನು ಹಿಡಿದು ಅವುಕಿ 'ಚಿದಾನಂದ' ಎಂದು ಕರೆದೆ. ಆತ ಗಮನಿಸಲಿಲ್ಲ.

''ಟೆಲಿಗ್ರಾಂ ಮುಟ್ಟಿತಾ .....?'' ಎಂದು ಕೇಳಿದ ಫ್ರ್ಯಾನ್.

''ಯಾರು ಕೊಟ್ಟರು .....?''

''ನನಗೇ ಕೊಡಲು ಹೇಳಿದರು. ಅದು ಕೊನೆಯ ಮಾತಾಯಿತು.''

ಅವನು ಬಿಕ್ಕುತ್ತಿದ್ದ.

''ಅಮ್ಮಾವ್ರು ಎಲ್ಲಿ?'' ಎಂದೆ. ಆತ ಉತ್ತರಿಸಲಿಲ್ಲ. ಅವನಿಗೆ ಕೇಳಿತ್ತು. ಚಿದಾನಂದನನ್ನು ಮತ್ತೊಮ್ಮೆ ನೋಡಿದೆ. ಅವನಿಗೆ ನನ್ನ ಪರಿಚಯ ಹತ್ತಲಿಲ್ಲ. ಅವನಿಗೆ ಯಾರ ಪರಿಚಯವೂ ಹತ್ತಲಿಕ್ಕಿಲ್ಲ. ಅವನು ಇಲ್ಲಿ ಮಲಗಿದ್ದ; ಅಲ್ಲಿ ಜಾಗೃತವಾಗಿದ್ದ. ನೋಡುತ್ತಿದ್ದಂತೇ ಆತ ತೀರ ಅಪರಿಚಿತವಾಗುತ್ತ ಹೊರಟ. ನನ್ನ ಅವನ ನಡುವಿನ ಸಂಬಂಧ ಕಡಿದು ಬೀಳುತ್ತ ಹೋಯಿತು. ನಾನು ಆ ಕೋಣೆಯಿಂದ ಹೊರಬಿದ್ದೆ. ಒಳಗೆ ಹೋಗಲಿಲ್ಲ. ಒಳಗಿನಿಂದ ಗಂಡಸಿನ ಧ್ವನಿ ಕೇಳಿಸುತ್ತಿತ್ತು. ಮಕ್ಕಳು ಮಲಗಿರಬೇಕು. ಅಮ್ಮಾ ಆ ಗಂಡಸಿನ ಬಳಿ ಇರಬೇಕು. ಗುರುತಿಲ್ಲದ ಆ ಮನೆಯಲ್ಲಿ ಕೂಡ್ರುವುದು ಹೇಗೆ ಎಂದು ನನಗೆ ತಿಳಿಯಲಿಲ್ಲ.

ನಾನು ಗೇಟು ದಾಟಿದೆ. ಸೇವಕ ಅಲ್ಲಿವರೆಗೆ ಬಂದ. ನಾನು ದಾಟಿದ ಮೇಲೆ ಆತ ಗೇಟು ಬಂದು ಮಾಡಿದ. ತಿರುಗಿ ನೋಡಿದೆ. ಕಂಪೌಂಡು ತುಂಬಾ ಬೆಳಕು ಚೆಲ್ಲುತ್ತ ಲೈಟು ಉರಿಯುತ್ತಿತ್ತು. ಮನೆ ಸಮಾಧಿಯಂತೆ ನಿಂತಿತ್ತು. ಒಳಗೆ ಜನರಿದ್ದಾರೆ. ಮಾತನಾಡುತ್ತಿದ್ದಾರೆ. ಬದುಕಿಲ್ಲ; ಸತ್ತಿಲ್ಲ.

ರಸ್ತೆಯಲ್ಲಿ ಜನವಿರಲಿಲ್ಲ. ಅದು ಎಕ್ಸಟೆನ್‌ಶನ್ ಪ್ರದೇಶ. ಬೀದಿಗಳು ಅಗಲವಾಗಿದ್ದವು. ಲೈಟುಗಳೂ ಬೆಳಗುತ್ತಿದ್ದವು. ನಾಯಿಗಳೂ ಇರಲಿಲ್ಲ. ಕತ್ತೆಗಳೂ ಇರಲಿಲ್ಲ. ಅವು ಸುಖವಾಗಿ ಮಲಗಿರಬಹುದು. ನಾನು ನಡೆಯುತ್ತಿದ್ದೆ. ನನಗೆ ರಸ್ತೆಯ ನೆನಪಿತ್ತು. ಬಸ್‌ಸ್ಟಾಂಡಿಗೆ ಹೋಗುವ ಗುರಿಯಿತ್ತು. ಆದರೆ ಚಿದಾನಂದ ನನಗೇಕೆ ಪತ್ರ ಬರೆದ? ವಾಯರ್ ಏಕೆ ಕೊಟ್ಟ? ನನ್ನ ಹತ್ತಿರ ಏನು ಹೇಳಬೇಕಾದ್ದಿತ್ತು; ಒಂದೂ ತಿಳಿಯಲಿಲ್ಲ. ಅವನ ಕಣ್ಣು ಬಾಯಿ ಎಲ್ಲಾ ಸತ್ತಿದ್ದವು. ಅವನು ಮಾತ್ರ ಸತ್ತಿರಲಿಲ್ಲ. ಪ್ರಮೀಳಾ ಮೋಸ ಮಾಡಿದಳು; ಅವಳು ಮತ್ತೊಬ್ಬನೊಂದಿಗೆ ಫ್ಲರ್ಟ್ ಮಾಡಿದಳು. ಮಕ್ಕಳು ಅಮ್ಮನ ಹಾದಿ ಹಿಡಿದವು. ನೀನು ಬೇಸರ ಪಡಬೇಡ. ಪ್ರಮೀಳಾ ತಪ್ಪಿದ್ದೇ ನಿನಗೆ ಒಳ್ಳೆಯದಾಯಿತು. ನನ್ನ ಬೈಯಬೇಡ ...... ಹೀಗೆ ಅಂತ ಹೇಳುತ್ತಿದ್ದನೇ? ಇದು ನನ್ನ ಊಹೆ. ಅವನು ಹೀಗೆ ಹೇಳುತ್ತಿರಲಿಕ್ಕಿಲ್ಲ. ಊಹಿಸಿ ನಾವು ನಗುತ್ತೇವೆ. ಊಹಿಸಿ ನಾವು ಅಳುತ್ತೇವೆ. ಪ್ರೀತಿಸುತ್ತೇವೆ. ನಾನು ಏನೂ ಊಹೆ ಮಾಡಬಹುದು. ಮತ್ತೆ ಅವೆಲ್ಲ ಸರಿಯಿರಬಹುದು.

ರಸ್ತೆಯಲ್ಲಿ ಯಾರೂ ಕಾಣುತ್ತಿರಲಿಲ್ಲ. ಕಿಸೆಯಲ್ಲಿ ಕೈ ಹಾಕಿದೆ. ಸಿಗರೇಟೂ ಇರಲಿಲ್ಲ. ಸುಮಾರಾಗಿ ಎರಡು ದಿನವಾಯಿತು. ಇನ್ನು ತಪ್ಪದೇ ಸೇದಬೇಕು. ಅವನನ್ನು ಔಟಹೌಸಿಗೆ ಹಾಕಿದರು. ದೊಡ್ಡ ಮನೆ ಖಾಲೀ ಇತ್ತು. ಅವರು ಅವನನ್ನು ಸತ್ತಾ ಎಂದೇ ಊಹಿಸಿದ್ದರು. ಅದೂ ಸತ್ಯ. ಸಾಯುವವನಿಗೆ ನಾನು ಬೇಕಾಗಿದ್ದೆ. ಇದ್ದವರಿಗೆ ಬೇಕಾಗಿಲ್ಲ. ನಾನು ಒಳಗೆ ಹೋಗದ್ದೇ ಸರಿ ಆಯಿತು. ಅವಳು ತಾನೇ ಪ್ರೀತಿಸಿ ಮದುವೆಯಾಗಿದ್ದಳು. ಹೀಗೆ ಮಾಡಬಾರದಿತ್ತು. ಅವ

ನನ್ನು ಕೇಳಿದರೆ ಇನ್ನೆಷ್ಟಿತ್ತೋ ಅವಳಿಗೂ ಕಾರಣವಿರುತ್ತದೆ. ಅವನಿಗೂ ಇರುತ್ತದೆ. ಸಂಬಂಧವಿಲ್ಲವಾದರೆ ನಾನು ಸರಿಯನ್ನು ನಿರ್ಧರಿಸಿಯೇನು. ನೀತಿಯನ್ನು ಶಾಸ್ತ್ರದ ಕಾರ್ಖಾನೆಯಲ್ಲಿ ಉತ್ಪಾದಿಸಲಾಗುವುದಿಲ್ಲ. ಅವನು ಅನುಭವಿಸಿದ್ದು ಅವನ ನೀತಿ. ಅವಳು ಅನಿಸಿಕೊಂಡದ್ದು ಅವಳ ನೀತಿ. ನಿರ್ಧಾರಕ್ಕಷ್ಟೇ ನಾವು, ಸರಿಯಲ್ಲ.

ಸ್ಟ್ಯಾಂಡಿಗೆ ರಸ್ತೆ ಸ್ವಲ್ಪ ಉಳಿದಿತ್ತು. ಎತ್ತರದ ಸಾಲು ಮರಗಳ ಮೇಲೆ ಇಬ್ಬನಿ ಬಿದ್ದಿರಬೇಕು. ತಣ್ಣನೆ ಗಾಳಿ ಮೆಲ್ಲಗೆ ಬೀಸುತ್ತಿದೆ. ಮನುಷ್ಯನ ಹಾವಳಿ ಇಲ್ಲ. ಎಲ್ಲೆಲ್ಲೂ ಮೌನ. ಮತ್ತು ಕತ್ತಲೆ. ಅವನೂ ಪ್ರೀತಿಸಿದ್ದ. ನಾನೂ ಪ್ರೀತಿಸಿದ್ದೆ. ನಮಗಿಂತಲೂ ಹೆಚ್ಚಾಗಿ ಅವಳ ಪ್ರೀತಿಯಿತ್ತು. ಅವಳು ಇಬ್ಬರನ್ನೂ ಪ್ರೀತಿಸಿದ್ದಳು! ವಿಚಾರ ಮಾಡಬಾರದು. ಸಮಸ್ಯೆ ಏಳುತ್ತವೆ. ಲೆಕ್ಕ ಹಾಕಬಾರದು. ಪ್ರೀತಿ ಸಾಯುತ್ತದೆ. ನಾವು ಅನಿಸಿಕೊಳ್ಳಬೇಕು. ಅನಿಸಿಕೆಯ ಮಾಲೆ ನೇಯಬೇಕು. ಅದಕ್ಕೆ ಪ್ರೀತಿಯೆಂಬ ಹೆಸರು ಕೊಡಬೇಕು. ತುಲನೆ ಸಾಯಬೇಕು. ಆಯ್ಕೆ ಮುಗಿಯಬೇಕು. ನೆನವು ಉಲಿಯಬೇಕು. ಉದ್ದೇಶವಿಲ್ಲದ ಒಂದು ಮೈಮರೆವ ಅನಿಸಿಕೆ ನಾವಾಗಬೇಕು. ಆಗ ಪ್ರೀತಿ ಅನ್ನಬೇಕು. ಸಾಧ್ಯವಿಲ್ಲ. ಪ್ರಮೀಳ ಸಂಭಾವಿತಳೆನ್ನುತ್ತೇನೆ. ಚಿದಾನಂದ ಸಂಭಾವಿತನೆನ್ನುತ್ತೇನೆ. ಮದುವೆಯಾಗದ ಮಗಳಿಗೆ ಆಪರೇಶನ್ ಮಾಡಿಸಿದ ರಮಾನಂದ ಸಂಭಾವಿತನೆನ್ನುತ್ತೇನೆ. ಹೆಂಡತಿ ಸತ್ತ ದುಃಖ ಆಗದಂತೆ ನೋಡಿಕೊಳ್ಳಲು ಹೋದ ಡೇಸಿ ಸಂಭಾವಿತಳೆನ್ನುತ್ತೇನೆ. ಎನ್ನಬಹುದು.

ಬಸ್‌ಸ್ಟ್ಯಾಂಡು ಹತ್ತಿರ ಬಂದಿತ್ತು. ನಿಶ್ಯಬ್ದದಲ್ಲಿ ಲೈಟುಗಳು ಉರಿಯುತ್ತಿದ್ದವು. ಅವರವರು ನೋಡಿಕೊಳ್ಳಬೇಕು. ಕನ್ನಡಿ ಸ್ವಚ್ಛವಿರಬೇಕು. ಎಲ್ಲ ಸಂಬಂಧಗಳೂ ಬದಲಾಗುತ್ತವೆ.

ಚಿದಾನಂದ ಟೈಪಿಸ್ಟಳನ್ನು ಹಿಡಿದುಕೊಂಡಿರಬಹುದು. ಅವನ ಸಹದ್ಯೋಗಿಯನ್ನು ಮೆಚ್ಚಿಕೊಂಡಿರಬಹುದು. ಪ್ರೀತಿಯೂ ಬದುಕಿನಂತೆ. ಪ್ರೀತಿಯನ್ನು ಬದುಕಬೇಕು. ಹಿಡಿದುಕೊಳ್ಳಬಾರದು. ಹಿಡಿದುಕೊಳ್ಳದೇ ನಿಲ್ಲಲು ಬರುವುದಿಲ್ಲ. ಹಾಗಾಗಿ ಬೀಳುತ್ತೇವೆ. ಅಳುತ್ತೇವೆ. ಬಸ್‌ಸ್ಟ್ಯಾಂಡಿಗೆ ಬಂದೆ. ಎಲ್ಲ ಸಿಮೆಂಟ ಕಟ್ಟೆಯ ಮೇಲೂ ಜನ ಮಲಗಿದ್ದರು. ಬುಡದಲ್ಲಿಯೂ ಮಲಗಿದ್ದರು. ಬದಿಯಲ್ಲಿಯೂ ಮಲಗಿದ್ದರು.

ಕೂಡಲು ಸ್ಥಳ ಹುಡುಕುತ್ತ ನಾನು ಅಡ್ಡಾಡುತ್ತಿದ್ದೆ.

●



Printed and Published by **B.S.SAVANOOR** on behalf of Loka Shikshana Trust at 'Samyukta Karnataka Press', Koppikar Road, Hubli - 580 020. (Phone: 64303); No. 2, Residency Road, Bangalore - 560 025 (Phone: 213265).

Managing Editor: K.SHAMARAO

Representatives: Bombay: V.Satyamurthy (Phone: 5510592)
Madras: S.K.Murthi (Phone: 414870)
New Delhi: V.K.Chopra (Phone: 7114785)

Registered with the Registrar of Newspapers for India under No. 3633/57.

KASTURI, Kannada Digest Reg.No. KRNG-43, Licence No.L 2120/WPP No.55 Price: Rs.5.00

